ಸಂಪುಟ : ೨೫

ಸಂಚಿಕೆ : ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಫೆಬ್ರುವರಿ–೧೯೯೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು :

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು ವಿಮರ್ಶೆಗಾಗಿ ಪುಸ್ತಕಗಳನ್ನು ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ   ೨. ರಾಜ್ಯೋತ್ಸವ ಸಂಚಿಕೆ

೩. ಸಂಕ್ರಮಣ ಸಂಚಿಕೆ   ೪. ಅಕ್ಷಯಾ ತೃತೀಯಾ ಸಂಚಿಕೆ

ಬಿಡಿ ಸಂಚಿಕೆಯ ಬೆಲೆ : ರೂ. ೨೦–೦೦

ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೧೦–೦೦ ಮಾತ್ರ ಹಣವನ್ನು ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ್ ಮೂಲಕ ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ಹೆಸರಿನಲ್ಲಿ ತೆಗೆಯಿಸಿ, ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರ ವಿಳಾಸಕ್ಕೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ: ೨೫ ಸಂಚಿಕೆ : ೩

ಗೌರವ ಸಂಪಾದಕರು
ಡಾ. ಎಸ್. ರಾಮೇಗೌಡ
ಕುಲಪತಿಗಳು

ಸಂಪಾದಕರು
ಡಾ. ವೀರಣ್ಣ ರಾಜೂರ
ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ.

ಸಂಪುಟ : ೨೫ ಸಂಚಿಕೆ : ೩

ಫೆಬ್ರುವರಿ ೧೯೯೩

ಸಂಕ್ರಮಣ ಸಂಚಿಕೆ

ಪ್ರಕಾಶಕರು :
ಶ್ರೀ ಸದಾನಂದ ಕನವಳ್ಳಿ
ನಿರ್ದೇಶಕರು
ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
ಮುದ್ರಕರು :
ಜೆ. ಎ. ಪೆರೇರಾ,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ . ಧಾರವಾಡ.

ಪರಿವಿಡಿ

ಕರುನಾಡ ಗೀತೆ

— ಚಿ. ರಾಮಸ್ವಾಮಿ

ನೀರಸೀರೆಯ ಧರಿಸಿ ಮೆರೆಯುವ
ಭೂಮಿತಾಯಿಗೆ ನಮಿಸುವೆ.
ಅವಳ ತನುವಿನ ಸಿರಿಯ ಮೊಗವಹ
ನಾಡತಾಯಿಗೆ ನಮಿಸುವೆ.

ಭರತಮಾತೆಯ ಸಿರಿಯ ವದನದ
ತಿಲಕಪ್ರಾಯದ ಕನ್ನಡ
ಮೂರು ಕೋಟಿಗೂ ಮಿಗುವ ಮಕ್ಕಳ
ಉಸಿರ ಮಾತೆಯು ಕನ್ನಡ

ಜಗವನೆಲ್ಲವ ಹರಡಿನಿಲ್ಲುವ
ಗಂಧ ಪರಿಮಳ ಕನ್ನಡ
ದಿಕ್ಕು ದಿಕ್ಕಿಗೂ ಮೊಗೆದು ನೀಡುವ
ಚಂದನದ ಗುಡಿ ಕನ್ನಡ

ಹಿರಿಯ ಸಕ್ಕದ ಪೀಠ ಭೂಷಿತ
ಸಾರಸರಸ್ವತಿ ಕನ್ನಡ
ಪಂಚದ್ರಾವಿಡ ತೌರ ಹಿರಿಮೆಯ
ಜ್ಞಾನದೇವಿಯು ಕನ್ನಡ

ಇನಿಯ ಕನ್ನಡವೆಮ್ಮ ಕನ್ನಡ
ನಮ್ಮ ಕನ್ನಡ ಬಾಳಲಿ!
ಇಲ್ಲಿ ಕನ್ನಡ ಅಲ್ಲಿ ಕನ್ನಡ
ಎಲ್ಲೂ ಕನ್ನಡ ಬಾಳಲಿ!

ಸಿದ್ಧರಾಮೇಶ್ವರನನ್ನು ಕುರಿತ ಎರಡು ಪ್ರಸಂಗಗಳು

- ಎಸ್. ಉಮಾಪತಿ

ಕರ್ನಾಟಕದ ಧಾರ್ಮಿಕ ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳು ಹನ್ನೆರಡನೆಯ ಶತಕದ ಉತ್ತರಾರ್ಧದಲ್ಲಿ ಪರಂಜ್ಯೋತಿ ಸ್ವರೂಪವಾಗಿ ಬೆಳಗಿರುವುದು ಕಂಡು ಬರುತ್ತದೆ. ವಿಶ್ವಧಾರ್ಮಿಕಕ್ಷೇತ್ರದಲ್ಲಿ ಇಂತಹ ಇನ್ನೊಂದು ಉದಾಹರಣೆ ನಮಗೆ ದೊರಕುವುದು ದುರ್ಲಭ. ಯಾವುದೇ ದೇಶದ ಧಾರ್ಮಿಕ ಕ್ಷೇತ್ರದಲ್ಲಿ ಒಂದೊಂದು ಕಾಲಕ್ಕೆ ಒಬ್ಬರೋ ಅಥವಾ ಇಬ್ಬರೋ ಮಹಾಪುರುಷರು ಹುಟ್ಟಿ ಧರ್ಮ ಜಾಗೃತಿ ಉಂಟು ಮಾಡಿರುವ ಪ್ರಸಂಗಗಳೇ ಹೆಚ್ಚು. ಕರ್ನಾಟಕದ ಧಾರ್ಮಿಕ ಕ್ಷೇತ್ರದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಹುಟ್ಟಿಬಂದಿರುವ ಶಿವಶರಣರು ಅನೇಕರು ಸಾಧನೆಯ ದೃಷ್ಟಿಯಲ್ಲಿ, ಸಿದ್ಧಿಯ ದೃಷ್ಟಿಯಲ್ಲಿ, ಸಾಮಾಜಿಕ ಕಳಕಳಿಯ ದೃಷ್ಟಿಯಲ್ಲಿ ಎಲ್ಲರೂ ಸಮಾನರೆ. ಆದರೆ ಒಬ್ಬೊಬ್ಬರೂ ಒಂದೊಂದು ವ್ಯಕ್ತಿಯಾಗಿ, ಶಕ್ತಿಯಾಗಿ ಬೆಳೆಯದೆ ಸಮದೃಷ್ಟಿಯಾಗಿ ಬೆಳೆದು ನಾಡಿನ ಜನರಿಗೆ ಬೆಳಕನ್ನು ನೀಡಿರುವುದು ಗಮನಾರ್ಹ.

ಅದರಲ್ಲಿ ಸಿದ್ಧರಾಮಯ್ಯನು ಒಬ್ಬ ಶಿವಶರಣ. ಸಿದ್ಧರಾಮಯ್ಯನ ಕಾರ್ಯಕ್ಷೇತ್ರ ಸೊನ್ನಲಿಗೆಯಾಗಿತ್ತು. ತಂದೆ ಮೊರಡಿಯ ಮುದ್ದಗೌಡ, ತಾಯಿ ಸುಗ್ಗಲೆ. ಮಗು ಬಾಲ್ಯದಿಂದಲೇ ಮುಗ್ಧನಾಗಿಯೆ ಇದ್ದನು. ಹೆಚ್ಚು ಮಾತನಾಡ. ಹೆಚ್ಚು ಲವಲವಿಕೆಯಿಂದ ಓಡಾಡ. ಅಂತರ್ಮುಖಿಯಾಗಿಯೆ ಇದ್ದ. ಎಲ್ಲವನ್ನು ತೆರೆದ ಕಣ್ಣುಗಳಿಂದ ಈಕ್ಷಿಸಿ ತನ್ನ ಸುತ್ತಮುತ್ತಿನ ವಾತಾವರಣವನ್ನು, ಜನಜೀವನವನ್ನು ಈಕ್ಷಿಸುತ್ತಿದ್ದನು. ಸಂಸಾರದ ಕಷ್ಟನಷ್ಟಗಳಿಗೆ ತನ್ನಲ್ಲಿಯೇ ಮರಗುತ್ತಿದ್ದನು. ಜನರ ಬಗೆಗೆ ಅನುಕಂಪ ಕರುಣೆ ಉಳ್ಳವನಾಗಿದ್ದನು. ಬಾಲ್ಯದಲ್ಲಿಯೇ ಅವನು ಕನ್ನಡ-ಸಂಸ್ಕೃತ ಭಾಷೆಗಳನ್ನು ಅಭ್ಯಾಸ ಮಾಡಿ ಪರಿಣತಿಯನ್ನು ಪಡೆದಂತೆ ಊಹಿಸಬಹುದು. ಬದಲಾವಣೆಯನ್ನು ಗ್ರಹಿಸುವ ಸೂಕ್ಷ್ಮಮತಿಯಾಗಿಯೂ ನಮ್ಮೆದುರು ಸಿದ್ಧರಾಮಯ್ಯ ನಿಲ್ಲುತ್ತಾನೆ. ಮೇಲುನೋಟಕ್ಕೆ ಅವನು ಅರಳು ಮರಳುನಾಗಿ ಕಂಡರೂ ಅವನ ಅಂತರಂಗದಲ್ಲಿ ಭಾವನೆಗಳ ತುಮುಲ ಯುದ್ಧವೇ ನಡೆದಿತ್ತು. ಅವನ ಭಕ್ತಿ ಹೃದಯ, ಮಾನವೀಯತೆಯ ಮಹಾಸತ್ವ ಅರಳಲು ಬೇಕಾಗುವ ಸಿದ್ಧತೆಯನ್ನು ತನ್ನಷ್ಟಕ್ಕೆ ತಾನೇ ಗುಪ್ತಗಾಮಿನಿಯಾಗಿ ಮಾಡಿಕೊಳ್ಳುತ್ತಿತ್ತು.

ತನ್ನ ಬಾಲ್ಯಾವಸ್ಥೆಯನ್ನು ದಾಟಿ ತಾರುಣ್ಯವನ್ನು ತಲುಪಿದಾಗ ತನ್ನ ಸಿದ್ಧಿ ಸಾಧನೆಯ ಆರಂಭ ದೆಸೆಯಲ್ಲಿ, ಆಗ ತನ್ನ ಸುತ್ತಮುತ್ತಿನ ಆವರಣದಲ್ಲಿ ಪ್ರಚಲಿತವಿದ್ದ ಶೈವಧರ್ಮವನ್ನು ತಾನು ಅನುಸರಿಸುತ್ತ, ಅದಕ್ಕೆ ಅನುಗುಣವಾಗಿ ದೇವಾಲಯ, ಕೆರೆ, ಕಟ್ಟೆ, ಬಾವಿ, ಚೌಕಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದುದು ಕಂಡುಬರುತ್ತದೆ. ಇದು ಸಹಜ ವ್ಯಾಪಾರ. ಆ ಅವಸರದಲ್ಲಿ ಸಿದ್ಧರಾಮನ ಕೀರ್ತಿ ಅವನ ಸುತ್ತಮುತ್ತಿನ ಜಗತ್ತನ್ನು ದಾಟಿ ಕಲ್ಯಾಣದವರೆಗೂ ಪಸರಿಸುತ್ತದೆ.

ಸಮಾನ ವಯಸ್ಕರೂ ಸಮಕಾಲೀನರೂ ಆದ ಬಸವಣ್ಣನವರು ಬಹುಶಃ ಅದೇ ತಾನೇ, ಅಂದರೆ ತಾವು ಕಲ್ಯಾಣಕ್ಕೆ ಬಂದು ನೆಲಸಿದ ಹೊಸದರಲ್ಲಿ, ತಮ್ಮ ಕಾರ್ಯಕ್ಷೇತ್ರದಲ್ಲಿ ತಾವು ಎಲೆಮರೆ ಕಾಯಿಯಂತೆ ಕಾರ್ಯ ನಿರ್ವಹಿಸತೊಡಗಿದಾಗ, ಸಿದ್ಧರಾಮಯ್ಯನು ನಿರ್ಮಲ ಮನಸ್ಸಿನಿಂದ ಮಾಡಲು ತೊಡಗಿದ ಕಾರ್ಯಕ್ರಮಗಳ ಪರಿಚಯ ಕಿವಿಯಿಂದ ಕಿವಿಗೆ ಹರಿದು ಬಂದು ಬಸವಣ್ಣನವರನ್ನು ತಲುಪಿ, ಸಿದ್ಧರಾಮಯ್ಯಗಳ ಭೇಟಿಗೆ ಪ್ರೇರೇಪಿಸಿರಬೇಕು. ಆಗ ಯಾವುದಾದರೊಂದು ರಾಜಕಾರಣ ಕಾರ್ಯದ ಜೊತೆಗೆ ತಮ್ಮ ಸ್ವಂತ ಕಾರ್ಯವನ್ನು ಹಮ್ಮಿಕೊಂಡು ಸೊನ್ನಲಿಗೆಗೆ ಧಾವಿಸಿ ಆ ಮಹಾಭಕ್ತನನ್ನು ಇನ್ನೊಬ್ಬ ಮಹಾಭಕ್ತಶಿರೋಮಣಿಯಾದ ಬಸವಣ್ಣನವರು ಸಂದರ್ಶಿಸಿಬಂದಿರಬೇಕು. ಇದಕ್ಕೆ ಸಿದ್ಧರಾಮಯ್ಯಗಳ ಈ ಮುಂದಿನ ವಚನಗಳನ್ನು ಉದಾಹರಿಸಬಹುದಾಗಿದೆ.

"ಅಂದು ಬಸವಣ್ಣ ಬಂದು ಜಱಿದು ಹೋದುದ
ಮಱೆದೆನೆ ಆ ನೋವ !
ಜಱಿದುದ ಎನಗೆ ದೀಕ್ಷೆಯಾಯಿತ್ತು.
ಆ ದೀಕ್ಷೆಯ ಗುಣದಿಂದ ಫಲಪದಕೆ ದೂರನಾದೆ.
ಆ ಬಸವಣ್ಣನೆ ಎನ್ನ ಪರಮಾರಾಧ್ಯನಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ."

(ಸಿದ್ಧರಾಮಯ್ಯನ ಶಿವಯೋಗ ಷಟ್‌ಸ್ಥಲಾನುಭಾವದ ವಚನಗಳು. ವ. ಸಂಖ್ಯೆ = ೧೭೮)

"ಹಸುಳೆಯಾಗಿಯು ನಾನು ಕೆಱೆ ಬಾವಿ ದೇವಾಲ್ಯವ
ರಚಿಸಿ ಭವಕ್ಕೆ ಬಂದು ಫಲವನುಂಡು
ನರಕಕ್ಕೆ ಬೀಳುವನ ಶಿರವ ಹಿಡಿದೆತ್ತಿ
ನಿನ್ನವರ ಹೊರೆಯೊಳಗಿರಿಸಿದ ಗುರು ಬಸವಣ್ಣನೈ
ಕಪಿಲಸಿದ್ಧ ಮಲ್ಲಿಕಾರ್ಜುನ."

(ಅದೇ, ವ.ಸಂ. ೧೩೦)

ಸೊನ್ನಲಿಗೆಗೆ ಬಂದ ಬಸವಣ್ಣನವರು ಸಿದ್ಧರಾಮಯ್ಯನ ಸುಪ್ತ ಭಾವನೆಗಳನ್ನು ಕೆಣಕುತ್ತಾರೆ. ಸಂಸಾರದ ಅನಿತ್ಯತೆಯನ್ನು ಸಾರಿ ಹೇಳುತ್ತಾರೆ. ಸಿದ್ಧರಾಮಯ್ಯಗಳ ಕಾರ್ಯಕಲಾಪದ ನಶ್ವರತೆಯನ್ನು ಬಿಡಿಸಿ ಹೇಳಿ ಮನದಟ್ಟು ಮಾಡುವುದರಲ್ಲಿ ಯಶಸ್ವಿಯಾಗುತ್ತಾರೆ. ಅವನ ವ್ಯಕ್ತಿತ್ವದ ಅಸ್ತಿಭಾರವನ್ನೆ ಜರಿದು ಝುಂಕಿಸಿ ಮಾತಾಡಿ ತಿಳಿಯ ಹೇಳುತ್ತಾರೆ. ಆ ಸಂದರ್ಭದಲ್ಲಿ ಅವರು ಪ್ರಸಿದ್ಧ ವಚನವನ್ನು ಹಾಡಿರಬೇಕು.

೧-೧ ದೆ (ಗಿರಿರಾಜ ಪ್ರತಿ)

"ಉಳ್ಳವರು ಶಿವಾಲಯವ ಮಾಡುವರು.
ನಾನೇನ ಮಾಡುವೆ? ಬಡವನಯ್ಯ!
ಎನ್ನ ಕಾಲೇ ಕಂಭ ದೇಹವೇ ದೇಗುಲ,
ಸಿರ ಹೊನ್ನ ಕಳಿಸವಯ್ಯ!
ಕೂಡಲ ಸಂಗಮದೇವ ಕೇಳಯ್ಯ!
ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲಾ

(ಬಸವಣ್ಣನವರ ಷಟ್‌ಸ್ಥಲದ ವಚನಗಳು, ಮೈಸೂರು ಸರಕಾರ ಪ್ರಕಟಣೆ, ೧೯೬೮.)

"ಕಾಗುದುರೆಗತ್ಯಂತ ಶಿಕ್ಷೆಗ
ಳಾಗಬೇಕಲ್ಲದೆ ವಿಚಾರಿಸ
ಲಾಗರುವ ಜಾತ್ಯಶ್ವಕೊಂದೇ ರಾಯ ರಾವುತನ
ರಾಘೆ ವಾಘೆಯೆ ಸಾಲದೇ . .
. . . . ||

(ಗತಿ. ೧೦– ಪದ್ಯ ೩|| ಪ್ರಭುಲಿಂಗಲೀಲೆಯ ಸಂಗ್ರಹ – ಮೈಸೂರು ವಿಶ್ವವಿದ್ಯಾಲಯ ೧೯೬೫.)

ಎಂಬ ಚಾಮರಸನ ಮಾತನ್ನು ಈ ಸನ್ನಿವೇಶಕ್ಕೂ ಅನ್ವಯಿಸಬಹುದು.

ಬಸವಣ್ಣನವರ ಪರುಷದೃಷ್ಟಿ ಇಲ್ಲಿಯೂ ತನ್ನ ಕೆಲಸವನ್ನು ಸಮರ್ಪಕವಾಗಿ ನೆರವೇರಿಸುತ್ತದೆ. ಎಂಥಹವರನ್ನಾದರೂ ಅದು ಪರಿವರ್ತಿಸುತ್ತಿತ್ತು ಎಂಬುದಕ್ಕೆ ಸಿದ್ಧರಾಮಯ್ಯಗಳ ಮನದಲ್ಲಿ ಆದ ಚಿಂತನೆ, ಒಂದು ಉತ್ತಮ ನಿದರ್ಶನ.

ಮೇಲಿನ ವಚನದ ಆದಿ 'ಅಂದು ಬಸವಣ್ಣ ಬಂದು ಜಜಿದು, ಹೋದುದ ಮಜಿದನೆ – ಆ ನೋವ!" – ಎಂಬ ಮಾತು ತುಂಬಾ ಗಮನಾರ್ಹವಾದುದಾಗಿದೆ. ಚಿಂತನೆ, ಮರು ಚಿಂತನೆ ಪ್ರಾರಂಭವಾಗುತ್ತದೆ. ತನ್ನ ಅಜ್ಞಾನದಿಂದ ಎಂತಹ ವಿಸ್ಮಯವಾಯಿತು ಎಂದು ತನ್ನಲ್ಲಿಯೇ ತಾನು ಮರಗುತ್ತಾನೆ. ಬಸವಣ್ಣನವರ ಉಪದೇಶ ಮೊದಮೊದಲು ಕಹಿಯಾಗಿ ಕಂಡರೂ ನಂತರ ಚಿಂತಿಸಿದಂತೆಲ್ಲ ವ್ಯಥೆಗೆ ಕಾರಣವಾಗುತ್ತದೆ. ನೋವನ್ನುಂಟು ಮಾಡುತ್ತದೆ. ಆಗ "ಜಜಿದುದೆ ಎನಗೆ ದೀಕ್ಷೆಯಾಯಿತ್ತು" – ಎಂದು ಉದ್ಗರಿಸುತ್ತಾನೆ. ಇದರಿಂದ ಮನಸ್ಸು ತಿಳಿಗೊಂಡು ತನ್ನ ಕಾರ್ಯಕ್ಷೇತ್ರವನ್ನು ಮಾರ್ಪಡಿಸಿಕೊಳ್ಳಲು ನಿರ್ಧರಿಸುತ್ತಾನೆ. ಅಂತೆಯೇ ನಿಜವಾದ ಭಕ್ತನಾಗಿ ಪರಿವರ್ತಿತನಾಗುತ್ತಾನೆ. ಅಂದಿನಿಂದ ಬಸವಣ್ಣನವರನ್ನು ತನ್ನ ಆರಾಧ್ಯ ಗುರುವನ್ನಾಗಿ ಮನಸ್ಸಿನಲ್ಲಿಯೇ ಸ್ವೀಕರಿಸುತ್ತಾನೆ. ಅವನ ಮುಂದಿನ ವಚನಗಳಲ್ಲಿ ಈ ಭಾವನೆ ಯಥೇಚ್ಛವಾಗಿ ವ್ಯಕ್ತವಾಗಿದೆ.

ಹೀಗೆ ಬಸವಣ್ಣನವರಿಂದ ತನ್ನ ಜೀವನ ವಿಧಾನವನ್ನೆ ಬದಲಿಸಿಕೊಂಡ. ತನ್ನ ಸಾಧನೆಯ ಹಾದಿಯನ್ನೆ ತಿದ್ದಿಕೊಂಡ. ಮುಂದೆ ಬಸವಣ್ಣನವರು ಸಿದ್ಧರಾಮಯ್ಯಗಳಿಗೆ ಸರ್ವಸ್ವವಾಗುತ್ತಾರೆ. ಬಸವಣ್ಣನವರನ್ನು ತನ್ನ ತಲೆಯ ಮೇಲೆ ಹೊತ್ತು ಆನಂದದಿಂದ

ಕುಣಿದಾಡಿರುವದು. ಮುಕ್ತಕಂಠದಿಂದ ಹಾಡಿರುವುದು ಅವನ ಮುಂದಿನ ಅನೇಕ ವಚನಗಳಲ್ಲಿ ಕಂಡುಬರುತ್ತದೆ. ತನ್ನ ಅಂತರಂಗ ಬಹಿರಂಗದಲ್ಲಿ ಬಸವಣ್ಣನವರಿಗೆ ಮಾರುಹೋದ ಮಹಿಮಾಪುರುಷನಾಗಿ ಸಿದ್ಧರಾಮಯ್ಯ ಕಂಗೊಳಿಸುತ್ತಾನೆ. ಹೀಗೆ ಸಿದ್ಧರಾಮಯ್ಯಗಳ ಜೀವನದಲ್ಲಿ ಮುಂದೆ ಎಂದೂ ಮರೆಯುವಂತಹ ಒಂದು ಅಪೂರ್ವ ಅನುಭಾವ ಬಸವಣ್ಣನವರಿಂದ ದೊರಕುತ್ತದೆ. ಬಸವಣ್ಣನವರ ವ್ಯಕ್ತಿತ್ವ ಬಹು ಸ್ವಚಿತ್ತಾಗಿ ಭಕ್ತನಿದ್ದಲ್ಲಿಗೆ ತಾವು ಹೋಗಿ, ಭೇಟಿಯಾಗಿ ಆತನ ಮನದಲ್ಲಿದ್ದ ತಿಳುವಾದ ಅಜ್ಞಾನದ ಪೊರೆಯನ್ನು ತಮ್ಮ ಜ್ಞಾನ ಸಲಾಕೆಯಿಂದ ಹೋಗಲಾಡಿಸಿದ ಒಂದು ಉದಾತ್ತ ವ್ಯಕ್ತಿತ್ವವಾಗಿ ಈ ಸನ್ನಿವೇಶದಲ್ಲಿ ಕಂಗೊಳಿಸುತ್ತದೆ.

ಬಸವಣ್ಣನವರ ವ್ಯಕ್ತಿತ್ವ ಸಾಮಾನ್ಯವಾಗಿ ಕೋಮಲ ಹಾಗೂ ಮೃದು. ಅದು ಯಾರ ಮೇಲೂ ಯಾವುದೆ ತರಹದ ಒತ್ತಡವನ್ನು ಹೇರದೆ ತನ್ನ ಕೆಲಸವನ್ನು ಸಾಧಿಸುವ ಧೀಮಂತ ವ್ಯಕ್ತಿತ್ವ. ಅವರ ಜೀವನದುದ್ದಕ್ಕೂ ನಡೆದು ಬಂದ ವಾಸ್ತವಾಂಶ. ಅವುಗಳಲ್ಲಿ ಕೆಲವನ್ನು ಮುಂದೆ ಪವಾಡಗಳೆಂದು ತಪ್ಪಾಗಿ ವಿಶ್ಲೇಷಿಸಿದ್ದಾರೆ.

ಹೀಗೆ ಬಸವಣ್ಣನವರು ಬಂದು ಹೋದ ಮೇಲೆ ಸಿದ್ಧರಾಮಯ್ಯಗಳ ಚಿಂತನೆ ಬೇರೆ ಸ್ವರೂಪದ್ದಾಗುತ್ತದೆ. ಬೇರೆ ದಿಕ್ಕನ್ನೇ ಹಿಡಿದು ಸಾಗುತ್ತದೆ. ಬಸವಣ್ಣನವರಿಂದಲೆ ಸಿದ್ಧರಾಮಯ್ಯಗಳ ವೀರಶೈವ ದೀಕ್ಷೆ ಕಾರ್ಯ ಆರಂಭವಾಗುತ್ತದೆ ಎಂದು ಹೇಳಬಹುದು.

ಅಮುಗಿದೇವಯ್ಯಗಳ ಪ್ರಸಂಗ :

ಬಸವಣ್ಣನವರು ಸೊನ್ನಲಿಗೆಗೆ ಬಂದು ಹೋದ ಮೇಲೆ ಸಿದ್ಧರಾಮನ ಜೀವನದಲ್ಲಿ ಒಂದು ಬಿರುಗಾಳಿ ಎದ್ದಿತು. ಶಾಂತ ಮನಸ್ಕನಾಗಿ ತನ್ನ ಕಾರ್ಯದಲ್ಲಿ ತಾನು ತೊಡಗಿದ ಸಿದ್ಧರಾಮಯ್ಯನಿಗೆ ತಾನು ಮಾಡುವುದೆಲ್ಲ ನಶ್ವರ ಫಲಪದಕ್ಕಾಗಿ ಎಂಬ ಭಾವನೆ ಹೊಳೆದು, ಅವನ ಅಂತರಂಗದಲ್ಲಿ ತುಮುಲವುಂಟಾಯಿತು. ಆಗ ಸಂಸಾರದ ಬಗೆಗೆ ನಿರಸನವುಂಟಾಗಿ ಕಾಮನ ದೆಸೆಯಿಂದ ತಲ್ಲಣಿಸಿ ಆ ಪರಮಾತ್ಮನಲ್ಲಿ, ಸಾಕ್ಷಾತ್ ಗುರುವಿನಲ್ಲಿ ಮೊರೆಯಿಡಲು ಪ್ರಾರಂಭಿಸುತ್ತಾನೆ. ಆಗ ಸದ್ಗುರುವಿನ ಹಂಬಲ ತಾನೆ ತಾನಾಗಿ ಉಂಟಾಗುತ್ತದೆ.

'ಅಯ್ಯ! ಸಂಸಾರವೆಂಬ ರಾಹುವಿನ ಅಣಲೊಳಗಿದ್ದೆನಯ್ಯಾ.'' ವ.ಸಂ. ೩೧
''ಅಯ್ಯ! ಸಂಸಾರದುಪಟಳವು ಕಾಡಿತ್ತು ಇನ್ನೇವೆನಿನ್ನೇವೆ'' ವ.ಸಂ. – ೩೫
'ಸಂಸಾರವಾಗಿ ಎನ್ನನೇ ಕಾಡಿದವು' ವ.ಸಂ. – ೫೬
'ಸಂಸಾರವೆಂಬ ವಿಪರೀತ ರೂಪು ಕಾಡಿತ್ತಯ್ಯ' ವ.ಸಂ. – ೬೦
'ಅಯ್ಯ!ಅಯ್ಯ! ಎಂದು ಅಳುವ ಅಕ್ಕೆ ಇದಾರದಯ್ಯ!' ವ.ಸಂ. – ೧೦೨

ಎಂಬ ಆರ್ತನಾದ ಸಿದ್ಧರಾಮಯ್ಯಗಳಲ್ಲಿ ಉಂಟಾಗುತ್ತದೆ. ಮನಸ್ಸು ನೆಮ್ಮದಿಗೆ ಕಾತರಿಸುತ್ತದೆ.

'ಕಾಮವಿಕಾರಕ್ಕೆ ಕಳವಳಿಸಿ ಮನವು ವ.ಸಂ. – ೬೬
'ಕಾಮ ಕಾದಿತ್ತು ಕ್ರೋಧ ಕೊಂದಿತ್ತು' ವ.ಸಂ. – ೪೨.೬
'ನಾರಿಯರುರದ ಗಾಳಿ ಸೋಂಕದಂತೆ
ಎನ್ನು ಮಂತ್ರಿಸಿ ರಕ್ಷಿಸಬೇಕಯ್ಯ!' ವ.ಸಂ. – ೫೧
'ಕಾಯವುಳ್ಳನ್ನಕ್ಕರ ಕಾಮದ ಮೂಲ ವ.ಸಂ. – ೫೧
'ಕಾಮಾರಿಯಯ್ಯ ನೀನು ಕಾಮಂಗೆ ಒಪ್ಪಿಸದಿರು' ವ.ಸಂ. – ೫೨
'ಅಯ್ಯ ಕಾಮನ ಕರದು ಎನ್ನವನೆನ್ನವನೆನ್ನಯ್ಯ! ವ.ಸಂ. – ೩೪

ಹೀಗೆ ಸಂಸಾರದ ಬಗೆಗೆ ಜೀವಿಗಳನ್ನು ಕಾಡುತ್ತಿರುವ ಕಾಮ ಹಾಗೂ ಅರಿಷಡ್ವರ್ಗಗಳ ಬಗೆಗೆ ಜಿಗುಪ್ಸೆ ಹೊಂದಿ. ಗುರುಕಾರುಣ್ಯ ಪಡೆಯಲು ಅವನ ಮನಸ್ಸು ಪರಿಪಕ್ವವಾಗುತ್ತದೆ.

ಆಗ ಪ್ರಭುದೇವರ ಆಗಮನ ಸೊನ್ನಲಿಗೆಗೆ ಆಗುತ್ತದೆ. ಈ ಭೇಟಿ ಎರಡನೆಯ ಹಂತವೆನ್ನಬಹುದು. ಬಸವಣ್ಣನವರ ಭೇಟಿ ಸಿದ್ಧರಾಮಯ್ಯಗಳಿಗೆ ಅವಶ್ಯಕವಾಗಿ ಗುರು ಕಾರುಣ್ಯಕ್ಕೆ ಬೇಕಾಗಿದ್ದ ಪೂರ್ವಸಿದ್ಧತೆಯನ್ನು ಪೂರೈಸುತ್ತದೆ. ಪ್ರಭುದೇವರ ಭೇಟಿ ಆ ಸಿದ್ಧತೆಯನ್ನು ಇನ್ನೂ ಮುಂದುವರಿಸಿಕೊಂಡು ಹೋಗುತ್ತದೆ. ಗುರಿ ಮುಟ್ಟುವ ತನಕ.

"ಅಯ್ಯಾ ನಿಮ್ಮ ಸತ್ಕೃಪೆಯೆನ್ನ ಸುಕೃತಾಂಗಿಯ ಮಾಡಿ ಮರ್ತ್ಯಕ್ಕೆ ತಂದಿರಯ್ಯ!
ಅಯ್ಯಾ ನಿಮ್ಮ ಕೃಪೆಯಿಂದ. ನಿಷ್ಠಾ ಮಹೇಶ್ವರನೆನಿಪ
ಅಮುಗಿ ದೇವಯ್ಯಗಳಿಂದ ಪ್ರಭುದೇವರ ಕಂಡೆನಯ್ಯ!
ಆ ಪ್ರಭುದೇವರೆಂಬ ಅನಾದಿ ಜಂಗಮದಿಂದ
ಪರಮಗುರುವಪ್ಪ ಬಸವೇಶ್ವರನ ಕಂಡೆನಯ್ಯ!
ಆ ಬಸವಣ್ಣನಿಂದ ಅಸಂಖ್ಯಾತ ಪ್ರಮಥ ಗಣಂಗಳ ಕಂಡೆನಯ್ಯ!
ಆ ಗಣಂಗಳ ಕೃಪೆಯಿಂದ
ಚೆನ್ನಬಸವಣ್ಣನ ಕರುಣವುಂ ಪಡೆದು,
ನಿಮ್ಮನಂಗದ ಮೇಲೆ ಸಾಹಿತ್ಯವ ಮಾಡಿಕೊಂಡೆನಯ್ಯ!
. . . .
ಕಪಿಲಸಿದ್ಧಮಲ್ಲಿಕಾರ್ಜುನ. – ವ.ಸಂ. ೩೩೧

ಸಿದ್ಧರಾಮಯ್ಯಗಳು ಈ ಒಂದು ವಚನವಲ್ಲಿ ತಮ್ಮ ಬಾಳಿನಲ್ಲಿ ಸಂಭವಿಸಿರಬಹುದಾದ ಪ್ರಮುಖ ಘಟನೆಗಳನ್ನೆಲ್ಲಾ ನಿರೂಪಿಸಿದ್ದಾರೆ. ಅಮುಗಿದೇವಯ್ಯಗಳ ಬಗೆಗೆ ಸಿದ್ಧರಾಮಯ್ಯಗಳು ಬಹು ಅಭಿಮಾನದಿಂದ ಸಾಕಷ್ಟು ಗೌರವದಿಂದ ಮಾತಾಡಿದ್ದಾರೆ.

ಇದುವರೆವಿಗೆ ನಮಗೆ ತಿಳಿದಿರುವಂತೆ ಕೊಟ್ಟಣದ ಪ್ರಸಂಗದಿಂದ ಸೊನ್ನಲಿಗೆಯನ್ನು ಬಿಟ್ಟು ಪುಳಜೆಗೆ ಬಂದು ಸೇರುವ ಅಮುಗಿದೇವಯ್ಯಗಳೆಲ್ಲಿ ! ಪ್ರಭುದೇವರ ಬರವಿಗೆ ಪ್ರೇರಕಶಕ್ತಿಯಾಗಿ ಕೆಲಸ ಮಾಡಿದ ಅಮುಗಿದೇವಯ್ಯಗಳೆಲ್ಲಿ !

ಆದುದರಿಂದ ಕೊಟ್ಟಣದ ಪ್ರಸಂಗ ಬಹುಮಟ್ಟಿಗೆ ನಿಜವಿದ್ದಿರಲಾರದು. ಸತ್ಯದಿಂದ ದೂರವಿರಬೇಕು.*

ಪ್ರಭುದೇವರು ಮೊದಲು ಪುಳಜೆಗೆ ಬಂದು ನಂತರ ಸೊನ್ನಲಿಗೆಗೆ ಬಂದಂತೆ ನಮಗೆ ಈ ವಾಕ್ಯದಿಂದ ಅರ್ಥಸ್ಫುರಿಸುತ್ತದೆ. ಮತ್ತು ಅಮುಗಿದೇವಯ್ಯಗಳು ನಿಜವಾದ ಅರ್ಥದಲ್ಲಿ ಶರಣರಾದುದರಿಂದ ನಿಷ್ಠಾ ಮಹೇಶ್ವರರಾದುದರಿಂದ ಅವರು ಪುಳಜೆಗೆ ಬಂದು ನೆಲೆಸಿದ ಮೇಲೆ ಕೆಲವು ಕಾಲಾನಂತರದಲ್ಲಿ ಸಿದ್ಧರಾಮಯ್ಯಗಳ ಬಗೆಗೆ ತಮಗಿದ್ದಿರಬಹುದಾದ ಕಿಂಚಿತ್ತು ಬೇಸರವನ್ನು ಮರೆತು ಪ್ರಸನ್ನರಾಗಿ ಸಿದ್ಧರಾಮಯ್ಯಗಳ ಬಗೆಗೆ ಮನಸ್ಸು ತಿಳಿಗೊಂಡು. ಅವರ ವಯಸ್ಸು ಕಳೆದಂತೆ, ಅನುಭಾವವೃದ್ಧಿಯಾದಂತೆ ಮನಸ್ಸು ಪರಿಪಕ್ವಗೊಂಡು ಇರುವ ಸಮಯದಲ್ಲಿ ಪ್ರಭುದೇವರ ಆಗಮನ ಆಗಿರಬಹುದು. ಆಗ ಪ್ರಭುದೇವರಿಗೆ ಅಮುಗಿದೇವಯ್ಯಗಳು ಸೊನ್ನಲಿಗೆಗೆ ಹೋಗಿ ಸಿದ್ಧರಾಮಯ್ಯಗಳನ್ನು ಭೇಟಿ ಮಾಡಲು ಸ್ವತಃ ತಾವಾಗಿಯೇ ಪ್ರೇರಣೆ ಇತ್ತಿರಬಹುದೆಂದು ಸಿದ್ಧರಾಮಯ್ಯಗಳ ಮೇಲಿವ ವಚನ ಭಾಗದಿಂದ ಊಹಿಸಬಹುದಾಗಿದೆ. ಮತ್ತು

"ಅಂಗಲಿಂಗವೆಂದಂದ ಬಳಿಕ ಅಂಗಕೆಟ್ಟು
ಲಿಂಗ ಉಳಿಯಿತ್ತು ನೋಡಾ!
ಅಂಗ ನಿರ್ವಾಯಲಾದಲ್ಲಿ ಲಿಂಗ ಭವಿಯಾದುದು ನೋಡಾ!
ಅಂಗ ಲಿಂಗ ನಿರ್ವಾಯಲಲ್ಲಡಗಿಸಬಲ್ಲಡೆ
ಭಕ್ತನೆಂಬೆ ಮಹೇಶನೆಂಬೆ
ಕಪಿಲ ಸಿದ್ಧಮಲ್ಲಿಕಾರ್ಜುನನೆಂಬೆ ನೋಡಾ! ಅಮುಗಿದೇವಾ!"

ಸಿದ್ಧರಾಮೇಶ್ವರ ವಚನಗಳು ಫ.ಗು.ಹ. ೩೭೫

ಮೇಲಿನ ವಚನದಲ್ಲಿ ಬರುವ ಆಧ್ಯಾತ್ಮ ವಿಚಾರಧಾರೆಯನ್ನು. ಅನುಭಾವದ ಆಳ ಹಾಗೂ ವಿಸ್ತಾರವನ್ನು ವಿವೇಚಿಸಿದಾಗ ವೀರಶೈವಧರ್ಮದ ಬಗೆಗೆ ಸಿದ್ಧರಾಮಯ್ಯಗಳಿಗೆ ಇದ್ದಿರಬಹುದಾದ ಅನುಭಾವದ ವಿಸ್ತಾರವನ್ನು ಯಾರಾದರೂ ಕಾಣಬಹುದಾಗಿದೆ.

ಆದುದರಿಂದ ಸಿದ್ಧರಾಮಯ್ಯಗಳಿಗೆ ಇಷ್ಟಲಿಂಗ ಉಪದೇಶ ಮಾತ್ರ ಆಗಲಿಲ್ಲ. ಆತನಿಗೆ ಪರಿಪೂರ್ಣ ವೀರಶೈವ ದೀಕ್ಷೆ ಕೂಡ ಕಲ್ಯಾಣದಲ್ಲಿ ಬಸವಾದಿ ಪ್ರಮಥರ ಸಮ್ಮುಖದಲ್ಲಿ, ಅವರ ಸಹಕಾರದಿಂದ ಲಭಿಸಿತು ಎಂದು ಹೇಳಬಹುದು. ಮತ್ತು ಸಿದ್ಧರಾಮಯ್ಯಗಳು ಕಲ್ಯಾಣದಲ್ಲಿ ಅನುಭವ ಮಂಟಪದ ಕಾರ್ಯ ಕಲಾಪದಲ್ಲಿ ಭಾಗಿಗಳಾಗುತ್ತ ಇದ್ದ ಅವಧಿ ತೀರ ಕಡಿಮೆ ಎಂದೇನೂ ಅನ್ನಿಸುವುದಿಲ್ಲ. ಬಹುಶಃ

* ಬಹುಶಃ ಕಲ್ಯಾಣದಲ್ಲಿ ಎರಡನೆಯ ಬಾರಿಗೆ. ಅಮುಗಿದೇವ ಐತಿಹಾಸಿಕ ಪುರುಷನಾಗಿದ್ದರೂ. ಸಿದ್ಧರಾಮನ ಸಮಕಾಲೀನನಾಗಿದ್ದ ವಚನಕಾರನಾಗಿದ್ದರೂ ಮೇಲಿನ ಪ್ರಸಂಗ (ಕೊಟ್ಟಣದ ಪ್ರಸಂಗ) ಬಹುಮಟ್ಟಿಗೆ ಕಲ್ಪಿತವೇ. (ಪುಟ–೭೭) ಶೂನ್ಯ ಸಂಪಾದನೆಯನ್ನು ಕುರಿತು ಡಾ॥ ಎಂ. ಚಿದಾನಂದ ಮೂರ್ತಿ. ೧೯೬೨

ಪ್ರಭುದೇವರ ಪುನರಾಗಮನದವರೆಗಾದರೂ ಸಿದ್ಧರಾಮಯ್ಯ ಕಲ್ಯಾಣದಲ್ಲಿ ಇದ್ದಿರಬೇಕು ಅನ್ನಿಸುತ್ತದೆ. ಆತನ ಅನೇಕ ವಚನಗಳಲ್ಲಿ ಕಂಡುಬರುವ ವೀರಶೈವ ಪ್ರಕ್ರಿಯೆಗಳನ್ನು ಮತ್ತು ಷಟ್‌ಸ್ಥಲದ ಬಗೆಗಿನ ಆತನ ಅಪಾರ ಜ್ಞಾನವನ್ನು ನೋಡಿದರೆ ಆತನು ಶಿವಶರಣರೊಡನೆ ಕಲ್ಯಾಣದಲ್ಲಿ ಅನೇಕ ಕಾಲ ಇದ್ದುಕೊಂಡು ವೀರಶೈವ ಧರ್ಮದ ಅಭ್ಯಾಸ ಮಾಡಿ ಮನನ ಮಾಡಿಕೊಂಡಂತೆ ತೋರುತ್ತದೆ. ತನ್ನ ನಿತ್ಯ ಜೀವನಮಾರ್ಗದಲ್ಲಿ ಅದರ ಅಂತಃಸತ್ವವನ್ನು ಅಳವಡಿಸಿಕೊಂಡಂತೆ ಕಂಡುಬರುತ್ತದೆ. ಆತ ತನಗೆ ಇಷ್ಟಲಿಂಗೋಪದೇಶವಾದ ನಂತರ ತಾನು ತೆಪ್ಪಗೆ ಕೂಡಲಿಲ್ಲ. ಧರ್ಮದ ಅಧ್ಯಯನ, ಅನುಷ್ಠಾನದಲ್ಲಿ ನಿರತನಾಗಿ ಆ ಧರ್ಮವನ್ನು ಕರತಲಾಮಲಕವನ್ನಾಗಿಸಿ ಕೊಂಡಂತೆ ಅವನ ವಚನಗಳಿಂದ ತಿಳಿದುಬರುತ್ತದೆ. ಇದಕ್ಕೆ ಅವನ ಮೇಲಿನ ವಚನ ಒಂದು ಸಾಕ್ಷಿಯಂತಿದೆ.

ಬಹುಶಃ ಕಲ್ಯಾಣದಿಂದ ಸೊನ್ನಲಿಗೆಗೆ ಸಿದ್ಧರಾಮಯ್ಯಗಳು ಮತ್ತು ಪುಳಜೆಗೆ ಅಮುಗಿದೇವಯ್ಯಗಳು ಬಂದನಂತರ 'ಅಂಗಲಿಂಗವೆಂದೆಂಬ ಬಳಿಕ . . . .'ಎಂಬ ವಚನದಲ್ಲಿ ಕಂಡುಬರುವ ಜಿಜ್ಞಾಸೆ ಅಥವಾ ವಿಷಯ ಮಂಥನ ಕಲ್ಯಾಣದ ಅನುಭವ ಮಂಟಪದ ಮಾದರಿಯಲ್ಲಿ ಈ ಇಬ್ಬರು ಶಿವಶರಣರ ಮಧ್ಯೆ ನಡೆಯುತ್ತಿದ್ದಿರಬಹುದಾದ ಅಂಶವನ್ನು ನಾವು ಗುರುತಿಸಬಹುದಾಗಿದೆ. ಕಲ್ಯಾಣದ ಕ್ರಾಂತಿಯನ್ನು ಸ್ವತಃ ತಮ್ಮ ಕಣ್ಣುಗಳಿಂದ ನೋಡಿದ ಈ ಇಬ್ಬರು ಮಹಾಶರಣರು ಮುಂದೆ ಅನೇಕ ಕಾಲದವರೆಗೆ ವೀರಶೈವ ಧರ್ಮ ಪ್ರಸಾರ ಹಾಗೂ ಪ್ರಚಾರದಲ್ಲಿ ತೊಡಗಿದ್ದರೆಂಬುದು ಎಲ್ಲರಿಗೂ ತಿಳಿದಿರುವ ವಿಷಯ.

ಆದರೆ ದುರದೃಷ್ಟವಶಾತ್ – ಈ ಇಬ್ಬರೂ ಒಂದೇ ಊರಿನವರಾಗಿದ್ದರೂ ಅನ್ಯೋನ್ಯವಾಗಿದ್ದರೂ ಅವರಿಬ್ಬರ ಮಧ್ಯೆ ಕೊಟ್ಟಣದ ಪ್ರಸಂಗವನ್ನು ಯಾರೋ ಆರೋಪಿಸಿ ಕತೆ ಕಟ್ಟಿದ್ದಾರೆ ಎಂದು ಈಗಿನ ಮಟ್ಟಿಗೆ ಹೇಳಬಹುದು.

ಅಮೇರಿಕೆಯ ವಿದ್ವಾಂಸರ ಕನ್ನಡ ಸೇವೆ

– ಕೆಳದಿ ಗುಂಡಾ ಜೋಯಿಸ

ಕಳೆದ ಇಪ್ಪತ್ತು ವರ್ಷಗಳ ಹಿಂದೆ ಒಂದು ದಿನ ಅಮೇರಿಕಾ ವಿಶ್ವವಿದ್ಯಾಲಯದ ವಿದ್ವಾಂಸರೊಬ್ಬರು ಬೆಂಗಳೂರಿನ ದಿ. ಗಿರಿಮಾಜಿಯವರೊಂದಿಗೆ ಇದ್ದಕ್ಕಿದ್ದಂತೆ ನಮ್ಮ ಮನೆಗೆ ಆಗಮಿಸಿದರು. ವಿದೇಶೀಯರಾದರೂ ಆ ಕಾಲದಲ್ಲಿ ಹಳ್ಳಿಗೆ ಭೇಟಿಯಿತ್ತಲ್ಲಿ, ಅದು ಒಂದು ದೊಡ್ಡ ಸಂಭ್ರಮವೇ ಆಗಿತ್ತು. ಈಗಿನಂತೆ ಕೆಳದಿಯ ಸುತ್ತಮುತ್ತಲೂ ಆಗ ಸುಗಮ ಮಾರ್ಗಗಳಿರಲಿಲ್ಲ. ಹೀಗಿರುವಾಗ ದೂರದ ವಿದೇಶೀಯರೊಬ್ಬರು ಹಳ್ಳಿಗೆ ಭೇಟಿಯಿತ್ತದ್ದು ಅಪೂರ್ವ ಸಂಗತಿಗಳಲ್ಲೊಂದಾಗಿತ್ತು. ಮಲೆನಾಡಿನ ಸಂಪ್ರದಾಯದಂತೆ ಅವರಿಗೆ ಆದರಾತಿಥ್ಯಗಳು ಜರುಗಿದುವು. ಮಿ. ಗಿರಿಮಾಜಿಯವರು ಅಮೇರಿಕಾದ ವಿದ್ವಾಂಸರಾದ ಮಿ. ಎಡ್ವರ್ಡ್. ಬಿ. ಹಾರ್ಪರ್‌ರವರನ್ನು ನನಗೆ ಪರಿಚಯ ಮಾಡಿಕೊಡುತ್ತಾ, ಅವರು ಇಲ್ಲಿಗೆ ಭೇಟಿ ನೀಡಿದ ಉದ್ದೇಶವನ್ನು ಸ್ಥೂಲವಾಗಿ ವಿವರಿಸಿ, ಕನ್ನಡದಲ್ಲಿ ಕೈಗೊಳ್ಳಲಿರುವ ಅವರ ಸಂಶೋಧನೆಗೆ ನನ್ನ ಸಹಾಯವನ್ನು ನೀಡಬೇಕಾಗಿ ಕೇಳಿಕೊಂಡರು. ಕೈಲಾದಷ್ಟು ನಡೆಸಿಕೊಡುವುದಾಗಿ ಸಂತೋಷದಿಂದ ಒಪ್ಪಿಕೊಂಡೆನು.

೧೯೬೧ರಲ್ಲಿ ಬರ್ಕ್ಲಿಯಲ್ಲಿರುವ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಮಿ. ಮಕ್ಕಿಂ ಮಾರಿಯಾಟ್. (Mr. McKim Marriot) ಮಿ. ರಿಚರ್ಡ್ ಎಲ್.ಪಾರ್ಕ್. (Mr. Richard L. park) ಮಿ.ಮಿಚಾಯೆಲ್ ಆಮ್ಸ್ (Mr. Michael Ames) ಮಿ. ಅಲನ್ ಆರ್. ಬೀಲ್ಸ್ (Mr. Alan R Beals), ಮಿ. ಎಡ್ವರ್ಡ್ ಜೇ.ಜೇ. (Mr. Edward JJ). ಮಿ. ಪಾಲಿನ್ ಮಹರ್ ಕೊಲೆಂದ (Mr. Paulin Mahar Kolenda). ಮಿ. ವಿದ್ಯಾನಿವಾಸ್ ಮಿಶ್ರ (Mr. Vidyanivas Misra) ಮಿ. ನೂರ್ ಯಾಲ್ಮನ್ (Mr. Noor Yalman) ಹಾಗೂ ಮಿ. ಈ ಬಿ. ಹಾರ್ಪರ್. (Mr. E B. Harpar) ಮುಂತಾದ ಐರೋಪ್ಯ ವಿದ್ವಾಂಸರುಗಳು ಅಮೇರಿಕದಲ್ಲಿ ಸಮಾವೇಶಗೊಂಡಿದ್ದರು. ದಕ್ಷಿಣಪೂರ್ವ ಏಷ್ಯಾದಲ್ಲಿರುವ ಹಲವು ಪ್ರದೇಶಗಳನ್ನು ಆರಿಸಿಕೊಂಡು ಅತಿಮುಖ್ಯ ಹಿಂದುಳಿದ ಹಳ್ಳಿಯೊಂದನ್ನು ಕೇಂದ್ರಬಿಂದುವನ್ನಾಗಿ ಆಧರಿಸಿ, ಅದರ ಸುತ್ತಮುತ್ತಲೂ ಇರುವ ನಿವಾಸಿಗಳ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವೈಶಿಷ್ಟ್ಯತೆಗಳನ್ನು ಸಮೀಕ್ಷಾ ಮುಖಾಂತರ ಅಧ್ಯಯನ ಕೈಗೊಂಡು, ಮಹಾಪ್ರಬಂಧವೊಂದನ್ನು ಸಿದ್ಧಪಡಿಸುವ ಯೋಜನೆಯೊಂದು ರೂಪಿತಗೊಂಡಿತ್ತು. ಇದರ ಅಂಗವಾಗಿ ವಿಶೇಷ ಅಧ್ಯಯನ ನಡೆಸಲು ಹಾಗೂ ಭಾಷಾ ತೊಡಕುಗಳನ್ನು

ಎದುರಿಸಲು ಹಲವಾರು ಪರಿಹಾರೋಪಾಯಗಳನ್ನು ಕಂಡುಕೊಂಡು, ಒಂದು ನಿರ್ಧಾರಕ್ಕೆ ಬರಲಾಯಿತು. ಈ ಅಧ್ಯಯನ ಹಾಗೂ ಸಮೀಕ್ಷೆಯಲ್ಲಿ ಸ್ಥಳೀಯರ ಸಹಕಾರಗಳನ್ನು ಪಡೆದುಕೊಂಡು ಭಾಷಾ ಸಮನ್ವಯತೆಯನ್ನು ಸಾಧಿಸತಕ್ಕುದೆಂದೂ ಗೊತ್ತುಪಡಿಸಲಾಯಿತು. ಪರಿವೀಕ್ಷಣೆಯಲ್ಲಿ ಉಂಟಾಗಬಹುದಾದ ಹಲವಾರು ತೊಡಕುಗಳನ್ನು ನಿವಾರಿಸಲು ವಿದ್ವಾಂಸರು ಆಗಾಗ್ಗೆ ಸಭೆ ಸೇರತಕ್ಕುದೆಂದೂ ಹಾಗೂ ಅಲ್ಲಿ ಕೈಗೊಳ್ಳಲಾಗುವ ತೀರ್ಮಾನಗಳನ್ನು ಕಾರ್ಯಗತ ಮಾಡತಕ್ಕುದೆಂದೂ ನಿರ್ಧರಿಸಲಾಯಿತು.

ಇದರ ಅಂಗವಾಗಿ, ಕರ್ನಾಟಕದಲ್ಲಿ ಶಿವಮೊಗ್ಗ ಜಿಲ್ಲೆಯ ಕೆಳದಿ ಸಮೀಪವಿರುವ ಬೇಳೂರು ಗ್ರಾಮವನ್ನು ವಾಶಿಂಗಟನ್ ವಿಶ್ವವಿದ್ಯಾನಿಲಯದ ಸಹ ಪ್ರಾಧ್ಯಾಪಕ ಮಿ.ಎಡ್ವರ್ಡ್ ಬಿ. ಹಾರ್ಪರ್‌ರವರು ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡಿದ್ದರು. ಹಲವಾರು ವರ್ಷಗಳು ಕೈಗೊಳ್ಳುವ ಇವರ ಕನ್ನಡ ಭಾಷೆಯ ವ್ಯಾಸಂಗ ಹಾಗೂ ಚಾರಿತ್ರಿಕ ಹಿನ್ನೆಲೆಗಳಿಗೆ ಬೇಕಾಗುವ ಸಾಮಗ್ರಿಗಳನ್ನು ಒದಗಿಸಲು ಸಹಕರಿಸಲಾಯಿತು.

ಪರಿವೀಕ್ಷಣೆಯಲ್ಲಿ ಬೆಳಕುಕಂಡ ಕೆಳದಿಯ ಬೇಳೂರು ಗ್ರಾಮ:

ಅಮೇರಿಕಾದಿಂದ ಕರ್ನಾಟಕದ ಮೂಲೆಯಲ್ಲಿರುವ ಹಳ್ಳಿಯೊಂದರಲ್ಲಿ ಹಲವು ವರ್ಷಗಳವರೆಗೆ ದೀರ್ಘಕಾಲ ನೆಲೆಸಿ, ಕನ್ನಡ ಭಾಷೆಯನ್ನು ಕರಗತ ಮಾಡಿಕೊಂಡು ಮಹಾಪ್ರಬಂಧವನ್ನು ಸಿದ್ಧಪಡಿಸುವ ಕಾರ್ಯವು ಸಮರ್ಥಪೂರ್ಣವಾದುದು. ಅಂತರರಾಷ್ಟ್ರೀಯ ಅಧ್ಯಯನ ಸಂಸ್ಥೆಯ ಅಂಗವಾಗಿ ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದ ಆರ್ಥಿಕ ಸಹಕಾರದೊಂದಿಗೆ ಕೈಗೊಂಡ ಪರಿವೀಕ್ಷಣಾ ಕೇಂದ್ರ ಪ್ರದೇಶವು ಮಲೆನಾಡಿನ ಮೂಲೆಯಲ್ಲಿರುವ ಚಿಕ್ಕ ಹಳ್ಳಿ ಬೇಳೂರು * ಗ್ರಾಮವೆಂದರೆ ನಿಜಕ್ಕೂ ಕನ್ನಡಿಗರು ಅಚ್ಚರಿಪಡುವಂತಾಗಿದೆ. ಇತಿಹಾಸದ ಪ್ರಸಿದ್ಧ ಕೆಳದಿಯ ಸಮೀಪವಿರುವ ಈ ಚಿಕ್ಕ ಗ್ರಾಮವು ಅಮೇರಿಕಾ ವಿಶ್ವವಿದ್ಯಾನಿಲಯದ ಡಾ. ಎಡ್ವರ್ಡ್ ಬಿ. ಹಾರ್ಪರ್, ಶ್ರೀಮತಿ ಲೂಯಿಸ ಜಿ. ಹಾರ್ಪರ್, ಶ್ರೀಮತಿ ಹೆಲೆನ್ ಎಲಿಜಬೆತ್ ಉಲ್ರೀಚ್ (Smt. Helen Elizabeth Uilrich)[1] ಮುಂತಾದ ವಿದ್ವಾಂಸರಿಗೆ ಕನ್ನಡ ಭಾಷೆ ಹಾಗೂ ಸಂಸ್ಕೃತಿಗಳನ್ನು ವಿದೇಶಗಳಿಗೆ ನೀಡುವಲ್ಲಿ ಮಹೋಪಕಾರ ಮಾಡಿವೆ.

---

* ಇದಕ್ಕೆ ತೋಟ ಗದ್ದೆ ಎಂದು ಸಂಬೋಧಿಸಲಾಗಿದೆ. ಪಕ್ಕೆ ನೋಡಿರಿ. ಕನ್ನಡ ಭಾಷಾಧ್ಯಯನದ ಸಂಶೋಧನೆಯಲ್ಲಿ ಡಾ.ಚಿದಾನಂದಮೂರ್ತಿಗಳು ದಿ. ವರದರಾಜರಾಯರೊಂದಿಗೆ ನಮ್ಮ ಮನೆಗೆ ಭೇಟಿಯಿತ್ತಾಗ ಇದೇ ಗ್ರಾಮವನ್ನು ಆರಿಸಿದ್ದರು.

1. ಡಾ. ಎಡ್ವರ್ಡ್ ಬಿ. ಹಾರ್ಪರ್‌ರವರು ಹಲವು ವರ್ಷಗಳ ಹಿಂದೆ ಕ್ಯಾನ್ಸರ್ ರೋಗದಿಂದ ಕಾಲವಾದರು. ಕಾಲವಾಗುವ ಮುನ್ನ ನನ್ನೊಂದಿಗೆ ಪತ್ರವ್ಯವಹಾರವನ್ನು ನಡೆಸಿ, ತಮ್ಮ ಕನ್ನಡದ ಈ ಸಂಶೋಧನೆಯನ್ನು ಸಿಂಹಳದ ವಿದ್ವಾಂಸರು ಮುಂದುವರಿಸುವುದಾಗಿ ತಿಳಿಸಿದ್ದರು.
   ಶ್ರೀಮತಿ ಲೂಯಿಸ್ ಹಾರ್ಪರ್‌ರವರು ಈಗ ವಾಷಿಂಗಟನ್‌ನಲ್ಲಿದ್ದಾರೆ. ಈಕೆಯು ೧೯.೧.೧೯೫೬ರಲ್ಲಿ ಫೋರ್ಡ್ ಫೌಂಡೇಶನ್ ಸಹಾಯದಿಂದ ಹಲವು ವಿದ್ವಾಂಸರೊಂದಿಗೆ ಸಮೀಕ್ಷೆ ಕೈಗೊಂಡು 'Hoylu' A brief relating justice and supernatural ಎಂಬ ವಿದ್ವತ್ಪೂರ್ಣ ಪ್ರಬಂಧವನ್ನು ಸಾಂತಾ ಮೋನಿಕಾ (Santa Monica) ದಲ್ಲಿ ಸಾದರಪಡಿಸಿದ್ದಾರೆ.

ವಿದೇಶೀಯ ಉಲ್ಲೇಖನದಲ್ಲಿ ಕನ್ನಡದ ಸಂಗತಿಗಳು:

ಭಾರತದ ಇತಿಹಾಸದಲ್ಲಿ ಕಂಡುಬರುವ ವಿದೇಶೀಯ ಪ್ರವಾಸಿಕರು ಇಲ್ಲಿನ ವೈವಿಧ್ಯತೆಗಳನ್ನು ವೀಕ್ಷಿಸಿ, ಕಂಡು ಪ್ರವಾಸಿ ಕಥನದಲ್ಲಿ ವಿಶದೀಕರಿಸಿದ್ದಾರೆ. ಹಾಕಿನ್ಸ್, ಮನ್ರೋ, ಲೊಡೋವಿಕೋ ದಿ ವರ್ತೆಮಾ, ಟವರ್ನಿಯರ್, ಹ್ಯಾಮಿಲ್ಟನ್, ಡೆಲ್ಲಾವಾಲ್ಲೆ, ಜಾಕೋಬಸ್ ಕ್ಯಾಂಟರ್ ವಿಶ್ಚರ್ (Jacobus Canter Vischer) ಮುಂತಾದವರು ಉಲ್ಲೇಖಿಸಿದ ಪ್ರವಾಸಿ ಕಥನಗಳು, ಕನ್ನಡ ನಾಡಿನ ಸಾಂಸ್ಕೃತಿಕ ಸಂಪತ್ತನ್ನು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಪರಿಚಯ ಮಾಡಿಕೊಟ್ಟಿವೆ. ಇತಿಹಾಸದ ಆರಂಭದಿಂದ ತೀರ ಇತ್ತೀಚಿನವರೆಗೂ ಕನ್ನಡ ನಾಡು ವಿವಿಧ ರೀತಿಗಳಲ್ಲಿ ವಿದೇಶೀಯರನ್ನು ಆಕರ್ಷಿಸುತ್ತಿದೆ. ಪ್ರವಾಸೋದ್ಯಮ ಇಲಾಖೆಯು ಈ ದಿಶೆಯಲ್ಲಿ ಹೆಚ್ಚಿನ ಗಮನ ಹರಿಸಿದಲ್ಲಿ, ಇನ್ನೂ ಹೆಚ್ಚಾಗಿ ವಿದೇಶೀಯ ಸಂಪತ್ತನ್ನೇ ಕನ್ನಡ ನಾಡು ಗಳಿಸುವ ಸಾಮರ್ಥ್ಯತೆಯನ್ನು ಹೊಂದಿದೆ. ಇದಕ್ಕೆ ಅವರ ಸಾಹಿತ್ಯಗಳೇ ವಿಪುಲ ಸಾಕ್ಷಿಯಾಗಿವೆ. ನಮ್ಮದನ್ನು ನಾವು ವರ್ಣಿಸುವುದಕ್ಕಿಂತ ವಿದೇಶೀಯರು ವಸ್ತುನಿಷ್ಠವಾಗಿ ಪೂರ್ವಾಗ್ರಹ ಪೀಡಿತರಾಗದೇ ಕನ್ನಡ ನಾಡಿನ ಸ್ವರೂಪವನ್ನು ಚಿತ್ರಿಸುವುದು ಕನ್ನಡದ ಹೆಮ್ಮೆಯ ಕುರುಹಾಗಿದೆ. ಫ್ರಾನ್ಸ್‌ನ ಡಾ. ಮಹೇಶ್ ಈಚೆಗೆ ಡಾ. ಕಲ್ಬುರ್ಗಿ ಡಾ. ಚಿದಾನಂದಮೂರ್ತಿ ಡಾ. ಶಿವರಾಮಮೂರ್ತಿ (ರಾಷ್ಟ್ರೀಯ ಸಂಗ್ರಹಾಲಯದ ಮಾಜಿ ನಿರ್ದೇಶಕರು) ಮುಂತಾದ ದೇಶೀಯ ವಿದ್ವಾಂಸರು ಕನ್ನಡದ ಹಿರಿಮೆಯನ್ನು ವಿಶ್ವಸಾಹಿತ್ಯದ ಬೃಹತ್ ಸಂಪುಟದಲ್ಲಿ ಅಳವಡಿಸಲು ಪ್ರಯತ್ನಿಸಿದ್ದಾರೆ. ೨೦ನೇ ಶತಮಾನದಲ್ಲಿ ಹಲವಾರು ರಾಷ್ಟ್ರಗಳ ಸಾಂಸ್ಕೃತಿಕ ಒಪ್ಪಂದಗಳಿಗನುಗುಣವಾಗಿ ಕನ್ನಡದ ಚಟುವಟಿಕೆಗಳು ಗಮನಾರ್ಹವಾಗಿ ಬೆಳೆಯುತ್ತಿವೆ. ಉದಾ: ಸೋವಿಯತ್ ದೇಶ(ಪ್ರಕಟಣೆ ಕನ್ನಡದಲ್ಲಿ), ವಿಶ್ವಕನ್ನಡ ಸಮ್ಮೇಳನ, ನ್ಯೂಯಾರ್ಕ್ ಕನ್ನಡ ಕೂಟ, ಮ್ಯಾಂಚೆಸ್ಟರ್‌ನಲ್ಲಿ ಜರುಗಿದ ಕನ್ನಡ ಸಮ್ಮೇಳನ ಇತ್ಯಾದಿ.

ಡಾ. ಎಡ್ವರ್ಡ್ ಬಿ. ಹಾರ್ಪರ್‌ರವರ ಸಂಶೋಧನೆ :

ಡಾ. ಈ.ಬಿ. ಹಾರ್ಪರ್‌ರವರು ಕೈಗೊಂಡ ಸಮೀಕ್ಷಾ ಸಂಶೋಧನೆಯಲ್ಲಿ ಭಾರತದ ಅದರಲ್ಲೂ ಕನ್ನಡನಾಡಿನ ತೀರ ಹಿಂದುಳಿದ ಗ್ರಾಮದಲ್ಲಿ ಕಂಡುಬಂದ ಸಂಗತಿಗಳು ಗಮನಾರ್ಹವಾಗಿವೆ. ಈ ವಿದ್ವಾಂಸರು ಬೇಳೂರು ಗ್ರಾಮದಲ್ಲಿ ಸಾಮಾನ್ಯ ಹಳ್ಳಿಗಳಲ್ಲಿ ಹಳ್ಳಿಗರಂತೆ ಹಲವು ವರ್ಷಗಳ ಕಾಲ ನೆಲೆಸಿ, ಜನಜೀವನದಲ್ಲಿ ಬೆರೆತು ಸಂಗ್ರಹಿಸಿ ಕ್ರೋಢೀಕರಿಸಿದ ಸಂಗತಿಗಳು ಕುತೂಹಲಕಾರಿಗಳಾಗಿವೆ. ಕರ್ನಾಟಕ ಮಾನವಿಕ ಹಾಗೂ ಭಾಷಾ ಶಾಸ್ತ್ರಾಧ್ಯಯನಕ್ಕೆ ಇವು ಅಮೂಲ್ಯ ಕೊಡುಗೆಗಳಾಗಿವೆ. ಲೇಖನ ವಿಸ್ತಾರಭಯದಿಂದ ಕೇವಲ ಹಲವಾರು ಅಂಶಗಳನ್ನು ಯಥಾರೀತಿ ಪಠ್ಯಕ್ರಮದಲ್ಲಿಯೇ ನಿರೂಪಿಸಲಾಗಿದೆ.

ಆರ್ಥಿಕ:

(a) Havik Maler, who belong to a relatively wealthy caste and who have a fair amount of leisure time during certain seasons, neverthelessly do a great deal of the work required

to run their arecanut estates. Every attempt is made to finish work that is considered dirty or ritually defiling – for example, carrying manure to the garden or working with an untouchable servant – before the daily bath that precedes the main meal. If for any reason this work has to be done in the afternoon, another bath should be taken when the man returns home.[2]

(b) Both male and female *Divarus* work in their paddy fields from which they derive the main part of their income. *Divarus* may supplement their income by working as hired labourers for *Haviks* and *Divaru* males also hire out the services of their ox carts, like all other non Brahmin castes in Totagadde. *Divarus* some times betroth their women before they reach puberty, some times after; and, again like all other non Brahmin castes, Divaru widows may remarry in Kudike marriage, which is regrded as inferior to a regular marriage.[3]

In Keladi temple Jatre (religious fair), the images of the major temple Gods and their priest are drawn around the vilalge in an immense wooden cart[4] pulled by several hundred men. In about 1950, a *Sudra* who was helping to pull the cart was caught under a wheel and crushed to death.[5] The gods and priest inside the cart were consequently in an extreme state of *muthuchettu*[6] and immediately underwent an elaborate purificatory ceremony in which the gods were cleaned by *mantras* and *panchamritha* and the Brahmin priest with *mantras* and *pachagavya*.[7]

---

2. E.B. Harper: Ritual Pollution, Caste and Religion P.153.
3. Economic Structure of a South Indian Village MSS P.15 (E.B.Harper)
4. ಇ.ಬಿ.ಹಾರ್ಪರ್‌ರವರು ಉಲ್ಲೇಖಿಸಿದ ಕೆಳದಿ ದೇವಾಲಯದ ಈ ಪ್ರಾಚೀನ ರಥವು ಅಗ್ನಿಗಾಹುತಿಯಾಗಿದೆ. ಇದರ ಉಳಿದಿರುವ ಕೆಲವು ಅಂಶಗಳನ್ನು ಕೆಳದಿ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು. [illegible] ವಿವರಿಸಿದ್ದಾನೆ.
5. ಈತನ ಹೆಸರು ಬಿಳುಕೊಪ್ಪದ ಹಾವಳಪ್ಪ.
6. Muthuchettu : Op. Cit. p.152 and 153.
7. Ibid., p.184.

Occasionally a Havik will earn extra merit(Punya) or fulfill vow(harake) by holding in his house a *puja* to the god *Satyanarayana*. For this ceremony, which may last two days, the *Satyanarayana Devaru* is installed in an image to which a puja is done by especially hired priests who also read the *Satyanarayana Story.* The house is purificated before the Ceremony by being sprinkled with a mixture of water and cowdung.[8]

whole the god is in residence, strict madi must be maintained by all attendees. Those involved in doing *Puja* must again bathe if they leave the ceremony to relieve themselves. Male and female guests who spend the night are seperated to insure that the sexual acts takes place in the house that as this would cause ritual pollution to befall *Satyanarayana.* These observances, however, are viewed in the light of customary ways of showing respect, and no Brahmin with whom I have talked has indicated any fear that if the god were inadvertently defiled malevolent consequences would necessarily follow. Fear of severe supernatural retribution for defiling the supernatural is not generally part of religious complex associated with these more pure gods.[9]

The fact that in this part of South India there are three states of ritual purity, that castes are grouped into three class, system and that there are three grades of supernaturals, is more than coincidental Brahmins are potentially pure-they can attain the highest state (unless compare with gods) of purity(Madi),[10] untouchables remain in absolute state of impurity (muttuchettu). *Sudras* corresponds to mailage,[11] a state that is pure relative to untouchables, neutral towards Brahmins in mailage and impure to Brahmins in madi Devarus[12] can attain a state of absolute

8. ತಾ.೧೯.೧೧.೧೯೭೩ಕ್ಕೆ ಇಟಲಿ ಪ್ರವಾಸಿ ಪೀಟ್ರೋ ಡೆಲ್ಲಾವಾಲ್ಲೆಯ ಪ್ರವಾಸಿ ಕಥನವು ಈ ಸಂಬಂಧಕ್ಕೆ ಅನ್ವಯವಾಗುತ್ತದೆ.

9. Op. Cit. 184.

10. Ibid., 153 p.

11. Ibid., 152 p.

12. Devarus - detail - Ibid. 181 p.

purity devvas[13] cannot be otherwise than impure and *devates* fluctuate between the two extremes in much the same manner as do the hierarchically graded *sudra* castes

ಡಾ. ಹೆಲೆನ್ ಉಲ್ರೀಚ್‌ರವರ ಕನ್ನಡ ಅಧ್ಯಯನ:

ಕನ್ನಡದ ಗಂಧವನ್ನೇ ಅರಿಯದ ಅಮೇರಿಕಾ ವಿಶ್ವವಿದ್ಯಾಲಯದ ವಿದ್ವಾಂಸರ ಈ ಸಾಧನೆಯು ಕನ್ನಡ ಜನತೆಗೆ ಒಂದು ಸವಾಲಿನೋಪಾದಿಯಲ್ಲಿದೆ. ಮನಸ್ಸು ಮಾಡಿದರೆ ಯಾವ ಭಾಷೆಯನ್ನಾದರೂ ಜ್ಞಾನದಾಹಿಗಳು ಕರಗತ ಮಾಡಿಕೊಳ್ಳಬಲ್ಲರು ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಈಕೆಯು ಕನ್ನಡ ಭಾಷೆಯನ್ನು ಕರಗತ ಮಾಡಿಕೊಂಡು ಅಮೇರಿಕಾ ವಿಶ್ವವಿದ್ಯಾನಿಲಯಕ್ಕೆ "clause structure of Northern Havyaka Kannada – A Tagmemic Analysis" ಎಂಬ ಮಹಾಪ್ರಬಂಧವನ್ನು ಸಾದರಪಡಿಸಿದ್ದಾಳೆ. ಡಾ. ಹೆಲೆನ್ ಉಲ್ರೀಚ್‌ರವರ ಇತರ ಕೃತಿಗಳು ಈ ರೀತಿ ಇವೆ–

1. Current areas of research include multilingualism, Kannada dialects
2. Socio Linguistics, Kannada folk tales and South Asian ethonography.
3. Her linguistic publications includes – profiles multi lingualism: A study of Bangalore.
4. The Kannada verb: Socio linguistics implications.
5. Etiquitte among women in rural Karnataka
6. Women in selected Kannada folk tales ಇತ್ಯಾದಿ

ಡಾ. ಹೆಲೆನ್‌ರವರ ಕನ್ನಡಾಭಿಮಾನ ಹಾಗೂ ಅಧ್ಯಯನಾಸಕ್ತಿಯು ಮೆಚ್ಚುವಂತಹದು. ಅಚ್ಚಕನ್ನಡಿಗರಿಗೂ ಸಾಧ್ಯವಾಗದ ಮೂಲ ಸಾಮಗ್ರಿಗಳನ್ನು ಎಲೆಮರೆಯ ಕಾಯಿಯಂತೆ ಏಕಾಂತವಾಗಿನ್ನು, ಸ್ವಸಾಮರ್ಥ್ಯದಿಂದ ತಪಸ್ಸಿನ ರೀತಿಯಲ್ಲಿ ಸಂಶೋಧನೆ ಕೈಗೊಂಡು ಈಕೆಯು ಕನ್ನಡವನ್ನು ಕರಗತ ಮಾಡಿಕೊಂಡು ಸಾಧಿಸಿ ತೋರಿಸಿದ್ದಾಳೆ.[14] ಈಕೆಯ ಅಧ್ಯಯನದ ಹಲವಂಶಗಳನ್ನು ಇಲ್ಲಿ ಪ್ರಸ್ತಾಪಿಸಿ ನಿರೂಪಿಸಲಾಗಿದೆ.

---

13. Devarus - detail - Ibid. 185 p.

14. ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದ ಪುಸ್ತಕವೊಂದರಲ್ಲಿ ಈಕೆಯು ಪೂರ್ತಿಯಾಗಿ ಕನ್ನಡದಲ್ಲಿಯೇ ಬರೆದಿರುತ್ತಾಳೆ.

1. ತೂಕಮಾಪನದಲ್ಲಿ–
(Vand no: taku byalige) (hat naya paysa)
1 2 3 4 5 6

One notaku (Unit of measurement)
1 2

of dal (is) ten naya paysa
3 4 5 6

L.R. + T + S amt + T + p. amt

2. The following text is provided to illustrate the analysis. The Kannada text is provided first followed by an English translation. Translations for individual sentences may be obtained by referring to the sentence number. On the third section the formula for each clause is provided as well as relevant comments –

Kannada text*

1. Vandu uirage vandu me:stru idda 2. ganda henti ella idda 3. skulige inspektru bartha ydda 4. yem manige banni yali va:gu karita: yidda me:stru 5. batti batti vand divsa anta he:ltidda 6. Kadige vand divsa inspektru banda 7. avattu yem manige banni saiynik:la u:takke anta helta mestru. 8. Ivathu batti saiynk:la nitakke anta helda inspektru – etc.,

English translation -

1. There was a school teacher in a village. 2. There were both a husband and a wife. 3. The inspector used to come to the school 4. The teacher always used to invite him say "come to my house" 5. He used to say, I will come to I will come on day" 6. Finally one day the inspector came 7. On that day the school master said come to my house, this evening for supper 8. The inspector said today, I will come in the evening for supper – etc.,

---

* Clause structure of Northern Havyaka Kannada, A Tagmemic Analysis P.223.

5-3 Commentary on text

1. (Vandu Uirage) (Vandu meistru idda)
    1   2   3   4   5

\+ L.pl. + S.i. + P.staa

(There) was a school teacher in a vilalge
    5 3   4   2 1   2

etc.,

ಉಪಸಂಹಾರ:

ಒಂದು ಕಾಲದಲ್ಲಿ ಯುರೋಪಿಯನ್ನರು ಅದರಲ್ಲೂ ಬ್ರಿಟಿಷರು "ಕೆನರೀಸ್" (Canarese) ಎಂದು ಕರೆಯುತ್ತಿದ್ದ ಕನ್ನಡವನ್ನು ಇದರ ಗಂಧವನ್ನೇ ಅರಿಯದ ಅಮೇರಿಕದ ವಿದ್ವಾಂಸರು ಭಾಷೆಯನ್ನು ಕರಗತ ಮಾಡಿಕೊಂಡು ಸಂಶೋಧನೆ ನಡೆಸಿರುವುದು ಗಮನಾರ್ಹವಾದುದು. ಕನ್ನಡವೆಂದರೆ ಮೂಗು ಮುರಿಯುವವರಿಗೆ ಇದೊಂದು ಸವಾಲಾಗಿದೆ. ಮದರಾಸಿನಲ್ಲಿದ್ದಾಗ ದಕ್ಷಿಣಕೋರಿಯದ ವಿದ್ವಾಂಸರೊಬ್ಬರು " ಕನ್ನಡವೂ ಒಂದು ಭಾಷೆಯೇ" ಎಂದು ನನ್ನನ್ನು ಕೇಳಿದ್ದುಂಟು. ಇದಕ್ಕೆ ಕಾರಣ, ತಮಿಳು ಭಾಷೆಯು ಕನ್ನಡವನ್ನು ವಿಶ್ವದಲ್ಲಿ ಅಳಿಸಿಹಾಕುವಂತೆ ಆಕ್ರಮಿಸಿಕೊಂಡಿತ್ತು. ೧೯೬೧ರ ಸೆನ್ಸಸ್(ಗಣತಿ) ಪ್ರಕಾರ ಭಾರತದಲ್ಲಿ ೮೧೨ ಭಾಷೆಗಳಿದ್ದು, ದ್ರಾವಿಡ ಭಾಷೆಯಲ್ಲಿ ಕನ್ನಡವು ೫ರಲ್ಲಿ ಪ್ರಧಾನ ಭಾಷೆಯಾಗಿದೆ. ತಮಿಳು ಮತ್ತು ತೆಲುಗುಗಳಿಗಿಂತಲೂ ಕನ್ನಡದ ಜ್ಞಾನರಾಶಿಯು ವಿಶ್ವವ್ಯಾಪಕತೆಯನ್ನು ಗಳಿಸಲು ಅರ್ಹತೆ ಪಡೆದಿದೆ. ಈ ಕಾರಣದಿಂದಲೇ ದಕ್ಷಿಣಭಾರತದ ಭಾಷಾ ಗಣತಿಯ ಮೇರೆಗೆ ಕನ್ನಡಕ್ಕೆ ಅಗ್ರ ಸ್ಥಾನ ಸಲ್ಲುತ್ತದೆ. ಡಾ ಹೆಲೆನ್ ಎಲಿಜಬೆತ್ ಉಲ್ರೀಚ್‌ರವರೇ ನಿರೂಪಿಸಿದಂತೆ.

"Of these the Dravidian language Kannada is the subject of this study Dravidian languages which rank second to Indo-European languages with regard to the number of speakers in India are generally spoken in the South of the country".

ಎಂದು ಉಕ್ತಿಸಿರುವುದು ಇದರ ವ್ಯಾಪಕತೆಯ ಅರಿವಾಗುತ್ತದೆ.[೧೫]

ಕನ್ನಡ ಭಾಷೆ. ಕಲೆ ಹಾಗೂ ಸಂಸ್ಕೃತಿಗಳು ವೈವಿಧ್ಯಮಯವಾಗಿ ವಿದೇಶೀಯರ ಆಕರ್ಷಣೆಗೆ ಒಳಗಾಗಿರುವುದನ್ನು ಬೇಕಾದಷ್ಟು ಉದಾಹರಣೆಗಳು ಸಮರ್ಥಿಸುತ್ತವೆ. ಅಮೇರಿಕಾದಲ್ಲಿ ಹಲವು ಪ್ರದೇಶ ಕನ್ನಡಿಗರಿಂದ ಆಳಲ್ಪಟ್ಟಿತೆಂಬುದಾಗಿ

---

15. Total number of speakers of Dravidan languages is listed as 107, 410, 820 - Kannada with a total 17, 415, 827 (Ibid).

ವಿದ್ವಾಂಸರೊಬ್ಬರು ಕುತೂಹಲಕರವಾಗಿ ನೂತನ ಬೆಳಕನ್ನು ಚೆಲ್ಲಿದ್ದಾರೆ.[16] ಕರ್ನಾಟಕ ಸಂಗೀತವನ್ನು ಸತತ ಪರಿಶ್ರಮದಿಂದ ಡಾ. ಹಿಗ್ಗಿನ್ಸ್‌ರವರು ಅಭ್ಯಸಿಸಿ, ಕನ್ನಡಿಗರನ್ನು ನಾಚಿಸಿ ಬಡಿದೆಬ್ಬಿಸುತ್ತಿದ್ದಾರೆ. ಕನ್ನಡವೆಂದರೆ ಮೂಗುಮುರಿಯುವ ಕರ್ನಾಟಕ ಜನತೆಯು ವಿದೇಶೀಯರ ಇಂತಹ ಆದರ್ಶಗಳನ್ನು ಇನ್ನಾದರೂ ಮನಗಂಡು ಸಾಹಸೀ ಪ್ರವೃತ್ತಿಯನ್ನು ಉಳಿಸಿಕೊಂಡು ಸ್ವಂತಿಕೆಯನ್ನು ಬೆಳೆಸಿಕೊಳ್ಳಬೇಕಾಗಿದೆ. ಇದಕ್ಕೆ ಪರಿಸರ ಹಾಗೂ ವಿಶ್ವವಿಶಾಲ ವ್ಯಾಪ್ತಿಯುಳ್ಳ ಸರ್ಕಾರದ ಹಾಗೂ ಸಾರ್ವಜನಿಕ ಪ್ರತಿಯೊಬ್ಬ ಕನ್ನಡಿಗನ ಅಂತಃಕರಣಗಳ ಸಂವೇದನೆ ಅಗತ್ಯ. ಈ ಸಂವೇದನೆಗೆ ಪ್ರೇರಕ ಶಕ್ತಿಯಾಗಿ ಡಾ. ಕಲ್ಬುರ್ಗಿ ಆದಿಯಾಗಿ. ಜಿ. ನಾರಾಯಣ ಡಾ. ಚಿದಾನಂದಮೂರ್ತಿ ಮುಂತಾದ ಅಚ್ಚಕನ್ನಡಿಗರು ವಿದ್ವಾಂಸರು ಹಾಗೂ ಕನ್ನಡ ಜನತೆ ಕನ್ನಡಕ್ಕಾಗಿ ಜೀವನವನ್ನೇ ಮುಡಿಪಾಗಿ ಇಟ್ಟು ಹೋರಾಡುತ್ತಿರುವುದು ಕನ್ನಡದ ಸೌಭಾಗ್ಯವಲ್ಲವೇ?

---

16. ಇದನ್ನು ಧಾರವಾಡದಲ್ಲಿ ಜರುಗಿದ್ದ ಶಾಸನಶಾಸ್ತ್ರ ವಿದ್ವತ್ ಸಮ್ಮೇಳನದಲ್ಲಿ ವಿದ್ವಾಂಸರೊಬ್ಬರು ಪ್ರದರ್ಶನಕ್ಕಿಟ್ಟಿದ್ದರು.

ಸಕಲಪುರಾತನರ ವಚನಕಟ್ಟು : ಕೆಲವು ಸಮಸ್ಯೆಗಳು

– ಎಂ.ಎಂ.ಕಲಬುರ್ಗಿ

ಪ್ರಾಚೀನ ವಚನಸಂಕಲನ ಕಟ್ಟುಗಳಲ್ಲಿ "ಸಕಲಪುರಾತನರ ವಚನ" ಹೆಚ್ಚು ವಿಶ್ವಾಸಾರ್ಹವೆನಿಸಿವೆ. ಸಾಮಾನ್ಯವಾಗಿ ಇವು ಮೂರು ಬಗೆಯಾಗಿದ್ದು ಒಂದು ಗೊಗ್ಗವ್ವೆಯ ವಚನಗಳಿಂದ, ಇನ್ನೊಂದು ಕೋಲಶಾಂತಯ್ಯನ ವಚನಗಳಿಂದ, ಮತ್ತೊಂದು ಬಸವಣ್ಣನ ವಚನಗಳಿಂದ ಪ್ರಾರಂಭವಾಗುತ್ತವೆ. ಈ ಕಟ್ಟುಗಳಲ್ಲಿ ಅಡಕವಾಗಿರುವ ವಚನಕಾರರ ಸಂಖ್ಯೆ, ಪ್ರತಿಯೊಬ್ಬ ವಚನಕಾರನ ವಚನಸಂಖ್ಯೆಗಳು ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತ ಬಂದಿರುವುದರಿಂದ ಈ ಮೂರೂ ಬಗೆಯ ಕಟ್ಟುಗಳ ಮೂಲಸ್ವರೂಪವನ್ನು ನಿರ್ಧರಿಸುವುದು ಸಮಸ್ಯೆಯಾಗಿದೆ. ಇದನ್ನು ಬಿಟ್ಟರೂ ಇಲ್ಲಿಯ ಶರಣರ ಹೆಸರು ಮತ್ತು ಮುದ್ರಿಕೆಗಳ ವಿಷಯದಲ್ಲಿ ಕಟ್ಟುಗಳ ಸಂಯೋಜನಕರಿಂದ ಇಲ್ಲವೆ ತರುವಾಯದ ಲಿಪಿಕಾರರಿಂದ ಇಲ್ಲವೆ ಆಧುನಿಕ ಸಂಪಾದಕರಿಂದ ಕೆಲವು ದೋಷಗಳು ಘಟಿಸಿವೆ. ಇವುಗಳನ್ನು ವಿದ್ವಾಂಸರ ಗಮನಕ್ಕೆ ತಂದು, ಸಾಧ್ಯವಿದ್ದ ಪರಿಹಾರ ಸೂಚಿಸುವುದು ಈ ಲೇಖನದ ಉದ್ದೇಶವಾಗಿದೆ.

೧. ಮಹಾದೇವೀರಯ್ಯ:

ಸಕಲಪುರಾತನರ ವಚನಕಟ್ಟಿನಲ್ಲಿ(ಗೊ) ವೀರಶಂಕರದಾಸಯ್ಯ ಮತ್ತು ಸಂಗಮೇಶ್ವರದ ಅಪ್ಪಣ್ಣ ಇವರ ನಡುವೆ "ಜಾತಿ ಶೈವರು. ಅಜಾತ ಶೈವರೆಂದೆರಡು ಪ್ರಕಾರವಾಗಿಹರಯ್ಯಾ ...." ಎಂದು ಪ್ರಾರಂಭವಾಗಿ 'ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯ' ಎಂದು ಮುಗಿಸುವ ಒಂದೇ ಒಂದು ವಚನವಿದೆ. ಇದನ್ನು ಆಧುನಿಕ ಎಲ್ಲ ಸಂಪಾದಕರೂ ಮಹಾದೇವಿಯಕ್ಕನ ವಚನವೆಂದು ಗ್ರಹಿಸಿ ಅವಳ ಹೆಸರಿನಲ್ಲಿ ಪ್ರಕಟಿಸುತ್ತ ಬಂದಿದ್ದಾರೆ. ಆದರೆ ಭಕ್ತಿಭಾವನೆಯ ಅಕ್ಕಮಹಾದೇವಿಯು ಶೈವದ ಪ್ರಕಾರ, ಅವುಗಳ ಲಕ್ಷಣಗಳನ್ನು ಪ್ರತಿಪಾದಿಸುವ ಈ ಶಾಸ್ತ್ರವಚನ ಬರೆದಿರುವುದು ಸಂದೇಹ. ಈ ಸಂದೇಹ ಪರಿಹಾರಕ್ಕಾಗಿ ಮೂಲಹಸ್ತಪ್ರತಿಯಲ್ಲಿಯ ಪಾಠಪರೀಕ್ಷೆ ಅನಿವಾರ್ಯವಾಗುತ್ತದೆ.

ಹಸ್ತಪ್ರತಿಗಳಲ್ಲಿ ಲಿಪಿಯ ಅಂಗವಾಗಿ ಬರುವ ದೀರ್ಘ(ಉದಾ:ಕಾ)ವನ್ನು ಸರಿಯಾಗಿ ಬರೆಯುವರೇ ಹೊರತು, ಲಿಪಿಯ ಭಾಗವಾಗಿ ಬರದೆ ಸ್ವತಂತ್ರವಾಗಿ ಬರುವ ದೀರ್ಘವನ್ನು (ೀ) ಬರೆಯುವವೇ ಇಲ್ಲ. ಸಂದರ್ಭದ ಬಲದಿಂದ ಇಂಥ ದೀರ್ಘವನ್ನು ನಾವು ಭಾವಿಸಿಕೊಳ್ಳಬೇಕಾಗುತ್ತವೆ. ಈ ಮೇರೆಗೆ ಸಕಲಪುರಾತನರ ವಚನ

ಕಟ್ಟಿನಲ್ಲಿ(ಗೊ) 'ಮಹಾದೆವಿರಯ್ಯ ವಚನ' ಎಂದು (ತಾ.ಪ್ರ. ೬೧೩), 'ಮಹಾದೆವಿರಯ್ಯಗಳ ವಚನ' ಎಂದು (ತಾ.ಪ್ರ.೬೯೩) ಬರೆಯಲಾಗಿದೆ. ಹೆಸರಿನ ಹೋಲಿಕೆ, ಮುದ್ರಿಕೆಯ ಸಾಮ್ಯತೆಗಳಿಂದಾಗಿ ಇದು, ಪ್ರಾಚೀನ ಲಿಪಿಕಾರರಿಗೆ ಮಹಾದೇವಿಯರ ವಚನವೆಂಬ ಭ್ರಾಂತಿಯನ್ನು ಹುಟ್ಟಿಸಿದಂತಿದೆ. ಇದಕ್ಕೆ ನಿದರ್ಶನವೆಂಬಂತೆ ತಾ.ಪ್ರ. ೭೬ರಲ್ಲಿ 'ಮಹಾದೆವಿಯರ ವಚನ' ಎಂದೇ ಬರೆಯಲಾಗಿದೆ. ಇದೇ ರೀತಿ ಆಧುನಿಕ ವಿದ್ವಾಂಸರೂ ಮೇಲೆ ಹೇಳಿದ ವಚನವನ್ನು ಮಹಾದೇವಿಯಕ್ಕನ ಹೆಸರಿನಲ್ಲಿ ತಪ್ಪಾಗಿ ಪ್ರಕಟಿಸುತ್ತ ಬಂದಿದ್ದಾರೆ. ಇನ್ನು ಮೇಲೆ ಇದರ ಕರ್ತೃ 'ಮಹಾದೇವೀರಯ್ಯ'ನಾಗಿರುವನೆಂದು ಇಟ್ಟುಕೊಳ್ಳಬೇಕು. ಇದರಿಂದ ಒಬ್ಬ ಹೊಸ ವಚನಕಾರನನ್ನು ಸಾಹಿತ್ಯಲೋಕಕ್ಕೆ ಪರಿಚಯಿಸಿದಂತಾಗುತ್ತದೆ.

೨. ಅಮರಗುಂಡದ ಮಲ್ಲಿಕಾರ್ಜುನ ತಂದೆ-ಪುರದ ನಾಗಣ್ಣ:

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಸಕಲಪುರಾತನರ ವಚನಸಂಪುಟ – ೩ರಲ್ಲಿ ಅಮರಗುಂಡದ ಮಲ್ಲಿಕಾರ್ಜುನತಂದೆಗಳ ಹೆಸರಿನ ಕೆಳಗೆ ಒಂದೇ ಒಂದು ವಚನ (ಕಾಯವೆಂಬ ಪಟ್ಟಣಕ್ಕೆ . . .) 'ಅಮರಗುಂಡದ ಮಲ್ಲಿಕಾರ್ಜುನಾ'ಎಂಬ ಮುದ್ರಿಕೆಯಲ್ಲಿ ಸಿಗುತ್ತದೆ. ಇದೇ ಸಂಪುಟದಲ್ಲಿ ಪುರದ ನಾಗಣ್ಣನ ಹೆಸರಿನ ಕೆಳಗೆ ಒಂದೇ ಒಂದು ವಚನವಿದ್ದು (ನಾನಾ ಯೋನಿಯಲ್ಲಿ . . . .) ಅದರ ಮುದ್ರಿಕೆಯೂ 'ಅಮರಗುಂಡದ ಮಲ್ಲಿಕಾರ್ಜುನಾ' ಎಂದಿದೆ. ಇಲ್ಲಿ ಒಂದೇ ಮುದ್ರಿಕೆ ಇಬ್ಬರ ಹೆಸರಿನಲ್ಲೇಕೆ? ಎಂದು ಉದ್ಭವಿಸುವ ಪ್ರಶ್ನೆಗೆ ಹೀಗೆ ಉತ್ತರಿಸಬಹುದು.

ಮೂಲತಃ ಅಮರಗುಂಡದ ಮಲ್ಲಿಕಾರ್ಜುನತಂದೆಗಳ ಮುದ್ರಿಕೆ 'ಅಮರಗುಂಡದ ಮಲ್ಲಿಕಾರ್ಜುನ' ಅಲ್ಲ, 'ಮಾಗುಡದ ಮಲ್ಲಿಕಾರ್ಜುನ'. ಲಿಪಿಕಾರರ ಪ್ರಮಾದದಿಂದಾಗಿ ಇದು 'ಅಮರಗುಂಡದ ಮಲ್ಲಿಕಾರ್ಜುನ' ಎಂಬ ರೂಪಕ್ಕೆ ತಿರುಗಿದ ಇತಿಹಾಸ ಹೀಗಿದೆ:

ಮೇಲೆ ಹೇಳಿದ 'ಕಾಯವೆಂಬ ಪಟ್ಟಣಕ್ಕೆ . . . ' ಎಂಬ ವಚನ 'ಮಹಾಮಹಿಮಾ ಮಾಗುಡದ ಮಲ್ಲಿಕಾರ್ಜುನಾ' ಎಂದು ಮುಗಿಯುತ್ತದೆ. ಲಿಪಿಸುವ ವೇಗದಲ್ಲಿ ಲಿಪಿಕಾರ ಒಂದು 'ಮಾ' ಬಿಟ್ಟು 'ಮಹಾಮಹಿಮಾ ಗುಡದ ಮಲ್ಲಿಕಾರ್ಜುನಾ' ಎಂದು ಬರೆದಿರಬಹುದು. ಮುಂದೆ ಬಂದ ಲಿಪಿಕಾರರಲ್ಲಿ ಒಬ್ಬನು ಈ ದೋಷಪಾಠವನ್ನು 'ಗುಡ್ಡದ ಮಲ್ಲಿಕಾರ್ಜುನಾ' ಎಂದೂ, ಇನ್ನೊಬ್ಬನು 'ಗುಂಡದ ಮಲ್ಲಿಕಾರ್ಜುನಾ' ಎಂದೂ ತಿದ್ದಿ ಬರೆದುಕೊಂಡ ಪಾಠಗಳು ಹಸ್ತಪ್ರತಿಯಲ್ಲಿ ಸಿಗುತ್ತವೆ. ಇಂಥ ಸಂದರ್ಭದಲ್ಲಿ ಗುಂಡ ಎಂಬುದು ಅಮರಗುಂಡದ ಪರ್ಯಾಯ ನಾಮವಾಗಿರುವದನ್ನು ಗಮನಿಸಿದ ಬೇರೊಬ್ಬ ಲಿಪಿಕಾರ, 'ಗುಂಡದ ಮಲ್ಲಿಕಾರ್ಜುನಾ' ಎಂಬುದನ್ನು 'ಅಮರಗುಂಡದ ಮಲ್ಲಿಕಾರ್ಜುನಾ' ಎಂದು ಬೆಳೆಸಿಕೊಂಡಂತಿದೆ. ಈ ವಚನದ ಕರ್ತೃವಿನ ಹೆಸರೂ 'ಅಮರಗುಂಡದ ಮಲ್ಲಿಕಾರ್ಜುನತಂದೆ' ಎಂದು ಇರುವುದೂ ಅವನಿಗೆ ಹೀಗೆ ಬೆಳೆಸಿಕೊಳ್ಳಲು ಒತ್ತಾಯ ಮಾಡಿರಬಹುದು. ಆದುದರಿಂದ ಇನ್ನು ಮೇಲೆ ಅಮರಗುಂಡದ ಮಲ್ಲಿಕಾರ್ಜುನತಂದೆಗಳ ಮುದ್ರಿಕೆ 'ಮಾಗುಡದ

ಮಲ್ಲಿಕಾರ್ಜುನಾ' ಎಂದೂ, ಪುರದ ನಾಗಣ್ಣನ ಮುದ್ರಿಕೆ 'ಅಮರಗುಂಡದ ಮಲ್ಲಿಕಾರ್ಜುನಾ' ಎಂದೂ ಉಚಿತವಾಗಿ ಇಟ್ಟುಕೊಳ್ಳಬೇಕಾಗುತ್ತದೆ.

ತುಮಕೂರು ಜಿಲ್ಲೆಯ ಗುಬ್ಬಿ ಗ್ರಾಮಕ್ಕೆ ಇನ್ನೊಂದು ಹೆಸರು ಅಮರಗುಂಡ. ಇಲ್ಲಿ ಮಲ್ಲಿಕಾರ್ಜುನ ಹೆಸರಿನ ದೇವಾಲಯವಿದೆ. ಈ ಗ್ರಾಮಕ್ಕೆ ಐದು ಮೈಲು ದೂರದಲ್ಲಿ ಪುರ ಹೆಸರಿನ ಗ್ರಾಮವಿದೆ. ಪುರಗ್ರಾಮದ ನಾಗಣ್ಣ ನೆರೆಯ ಅಮರಗುಂಡದ (ಗುಬ್ಬಿ) ಮಲ್ಲಿಕಾರ್ಜುನನ ಭಕ್ತನಾಗಿರಬೇಕು.

ಅಮರಗುಂಡದ ಮಲ್ಲಿಕಾರ್ಜುನತಂದೆಯ ಮುದ್ರಿಕೆಯಲ್ಲಿ ಕಂಡುಬರುವ ಮಾಗುಡ ಎಂಬುದು ಅಮರಗುಂಡದ ಇನ್ನೊಂದು ಹೆಸರಾಗಿರುವಂತಿದೆ. ಇದು ನಿಜವಿದ್ದರೆ ಈ ಮಲ್ಲಿಕಾರ್ಜುನತಂದೆಯು ಅಮರಗುಂಡ(ಗುಬ್ಬಿ)ದವನೆಂದೂ ಇವನ ಆರಾಧ್ಯದೈವತ ಅಲ್ಲಿಯ ಮಲ್ಲಿಕಾರ್ಜುನನೆಂದೂ ಹೇಳಬೇಕಾಗುತ್ತದೆ.

೩. ಅಗ್ಘವಣಿ ಹಂಪಯ್ಯ - ಅಗ್ಘವಣಿ ಹೊನ್ನಯ್ಯ:

'ಹಂಸಪತಿ ಗರುಡಪತಿ . . . .' ಎಂದು ಪ್ರಾರಂಭವಾಗಿ 'ಹಂಪೆಯ ವಿರುಪಯ್ಯ'ವೆಂಬ ಮುದ್ರಿಕೆಯಿಂದ ಮುಗಿಯುವ ಒಂದೇ ಒಂದು ವಚನ ಸಕಲಪುರಾತನರ ವಚನಕಟ್ಟಿನಲ್ಲಿ(ಗೊ) ಸಿಗುತ್ತದೆ. ಇದರ ಕರ್ತೃ ಅಗ್ಘವಣಿ ಹೊನ್ನಯ್ಯನೆಂದು ಕರ್ನಾಟಕ ವಿಶ್ವವಿದ್ಯಾಲಯದ ಸಕಲಪುರಾತನರ ವಚನಗಳು (ಸಂಪುಟ-೩)ದಲ್ಲಿ ಸೂಚಿಸಲಾಗಿದೆ. ಆದರೆ ಮೂಲಹಸ್ತಪ್ರತಿಯಲ್ಲಿ ಅಗ್ಘವಣಿ ಹಂಪಯ್ಯನದೆಂಬ ಸೂಚನೆಯಿರುವುದರಿಂದ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರದಲ್ಲಿ ಅಗ್ಘವಣಿ ಹಂಪಯ್ಯನ ಮುದ್ರಿಕೆ "ಹಂಪೆಯ ವಿರುಪ" ಎಂದು ಹೇಳಿರುವುದರಿಂದ, ಇನ್ನು ಮೇಲೆ ಇದನ್ನು ಅಗ್ಘವಣಿ ಹಂಪಯ್ಯನ ವಚನವೆಂದೇ ಇಟ್ಟುಕೊಳ್ಳಬೇಕು.

ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರವಲ್ಲಿ ಅಗ್ಘವಣಿ ಹೊನ್ನಯ್ಯನ ಮುದ್ರಿಕೆ 'ಪುಲಿಗೆರೆಯ ವರದ ಸೋಮನಾಥಾ' ಎಂದು ಹೇಳಲಾಗಿದೆ. ಆಧುನಿಕ ವಿದ್ವಾಂಸರಲ್ಲಿ ಕೆಲವರು ಈ ಮುದ್ರಿಕೆ ಪುಲಿಗೆಯ ಸೋಮಯ್ಯನದೆಂದು ಹೇಳಿದರೆ, ಇನ್ನು ಕೆಲವರು ಈ ಮುದ್ರಿಕೆ ಯಾರದೆಂಬ ವಿಷಯದಲ್ಲಿ ಪ್ರಶ್ನೆ ಚಿಹ್ನೆ ಇಡುತ್ತ ಬಂದಿದ್ದಾರೆ. ಆದರೆ ಮೇಲೆ ಹೇಳಿದಂತೆ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರವನ್ನಾಧರಿಸಿ ಇನ್ನು ಮುಂದೆ 'ಪುಲಿಗೆರೆಯ ವರದ ಸೋಮನಾಥಾ' ಎಂಬುದು ಅಗ್ಘವಣಿ ಹೊನ್ನಯ್ಯನ ಮುದ್ರಿಕೆಯೆಂದು ಭಾವಿಸಬೇಕು.

ಒಟ್ಟಿನಲ್ಲಿ ಅಗ್ಘವಣಿ ಹಂಪಯ್ಯನ ಮುದ್ರಿಕೆ 'ಹಂಪೆಯ ವಿರುಪ', ಅಗ್ಘವಣಿ ಹೊನ್ನಯ್ಯನ ಮುದ್ರಿಕೆ 'ಪುಲಿಗೆರೆಯ ವರದ ಸೋಮನಾಥಾ' ಎಂದು ಇಟ್ಟುಕೊಳ್ಳಬೇಕಾಗುತ್ತದೆ.

೪. ನಾಚಯ್ಯ - ದಶಗಣ ಸಿಂಗಿದೇವ:

ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿದ ಸಕಲಪುರಾತನರ ವಚನಗಳು (ಸಂಪುಟ-3) ಕೃತಿಯಲ್ಲಿ 'ನಾಚಯ್ಯಪ್ರಿಯ ಮಲ್ಲಿನಾಥಾ'ಮುದ್ರಿಕೆಯ

೧. ಹೆಂಡಿರೆನ್ನದೆ ಮಕ್ಕಳೆನ್ನದೆ . . . . . .
೨. ಸತಿಸುತ ಮಾತಾಪಿತರಿಗೆಂದು . . . .
೩. ಪೂರ್ವಕರ್ಮವ ಕೆಡಿಸಿದನೆನ್ನ ಗುರು . . . .
೪. ಮುಂಚಿದೆವಯ್ಯಾ ಪರಬ್ರಹ್ಮವ . . . .

ಎಂಬ ನಾಲ್ಕು ವಚನಗಳು ಒಮ್ಮೆ ನಾಚಯ್ಯನ ಹೆಸರಿನ ಕೆಳಗೆ, ಇನ್ನೊಮ್ಮೆ ದಶಗಣ ಸಿಂಗಿದೇವನ ಹೆಸರಿನ ಕೆಳಗೆ ಇದೇ ಅನುಕ್ರಮದಲ್ಲಿ ಕಂಡುಬರುತ್ತವೆ.[೧] ಮೂಲ ಹಸ್ತಪ್ರತಿಯಲ್ಲಿಯೇ ಒಮ್ಮೆ ಒಬ್ಬನ ಹೆಸರಿನಲ್ಲಿ, ಮತ್ತೊಮ್ಮೆ ಇನ್ನೊಬ್ಬನ ಹೆಸರಿನಲ್ಲಿ ಈ ವಚನಗಳು ಸಿಗುವುದೇ ಈ ರೀತಿ ಪ್ರಕಟಿಸಲು ಕಾರಣವಾಗಿದೆ. ಹೀಗಾಗಿ ಇವುಗಳ ಕರ್ತೃ ನಾಚಯ್ಯನೇ? ದಶಗಣ ಸಿಂಗಿದೇವನೆ? ಎಂಬುದು ಬಿಡಿಸಬೇಕಾದ ಪ್ರಶ್ನೆಯನಿಸಿದೆ.

ವೀರಶೈವ 'ದಶಗಣ' ವರ್ಗಕ್ಕೆ ಸೇರಿದವ ದಶಗಣ ಸಿಂಗಿದೇವ. ಇವನ ಗುರು ಮಾರುಡಿಗೆ ನಾಚಯ್ಯ. ಈ ನಾಚಯ್ಯನ ಆರಾಧ್ಯದೈವತ ಮಲ್ಲಿನಾಥ. ಶರಣರು ತಮ್ಮ ಹೆಸರು ಮತ್ತು ತಮ್ಮ ದೈವತದ ಹೆಸರುಗಳ ನಡುವೆ 'ಪ್ರಿಯ' ಶಬ್ದ ಸೇರಿಸಿ ಮುದ್ರಿಕೆ ರೂಪಿಸಿಕೊಳ್ಳುವ ಪದ್ಧತಿ ಕಂಡುಬರುವುದರಿಂದ 'ನಾಚಯ್ಯಪ್ರಿಯ ಮಲ್ಲಿನಾಥಾ'ಎಂಬುದು ಮಾರುಡಿಗೆ ನಾಚಯ್ಯನದೆಂದೂ ಈ ಕಾರಣದಿಂದಾಗಿ ಮೇಲಿನ ನಾಲ್ಕೂ ವಚನಗಳು ಅವನದೆಂದೂ ಹೇಳಬಹುದಾಗಿದೆ.

ಈ ಸಂದರ್ಭದಲ್ಲಿ ಒಂದು ಸಂದೇಹ ಉದ್ಭವಿಸುತ್ತದೆ: ಬಹುರೂಪಿ ಚೌಡಯ್ಯನ ಮುದ್ರಿಕೆ 'ಚೌಡಯ್ಯ ಪ್ರಿಯ ನಾಗಿನಾಥಾ' ಎಂದು ಇಲ್ಲ, ' ರೇಕಣ್ಣಪ್ರಿಯ ನಾಗಿನಾಥಾ' ಎಂದು ಇದೆ. ಚೌಡಯ್ಯನ ಗುರು ರೇಕನಾಥಾಚಾರ್ಯ (ಭೈ. ಕಾ.ಕ. ಸೂ ರತ್ನಾಕರ). ತನ್ನ ಗುರುವಿಗೆ ಪ್ರಿಯನಾದ ದೇವತೆ ಎಂಬ ಅರ್ಥದಲ್ಲಿ ಇವನು 'ರೇಕಣ್ಣಪ್ರಿಯ ನಾಗಿನಾಥ' ಎಂಬ ಅಂಕಿತ ಇಟ್ಟುಕೊಂಡಿದ್ದಾನೆ. ಇದೇ ರೀತಿ ದಶಗಣ ಸಿಂಗಿದೇವನು ತನ್ನ ಗುರು ನಾಚಯ್ಯನಿಗೆ ಪ್ರಿಯನಾದ ಮಲ್ಲಿನಾಥ ಎಂಬ ಅರ್ಥದಲ್ಲಿ 'ನಾಚಯ್ಯಪ್ರಿಯ ಮಲ್ಲಿನಾಥಾ' ಎಂಬ ಮುದ್ರಿಕೆ ಇಟ್ಟುಕೊಂಡಿರಬಾರದೇಕೆ? ಎಂಬ ಸಂದೇಹ ದೋರುತ್ತದೆ. ಇದು ನಿಜವಿದ್ದರೆ ಮೇಲಿನ ನಾಲ್ಕೂ ವಚನಗಳ ಕರ್ತೃ ಗುರು ಮಾರುಡಿಗೆ ನಾಚಯ್ಯನಲ್ಲ, ಶಿಷ್ಯ ದಶಗಣ ಸಿಂಗಿದೇವನೆಂದು ಹೇಳಲು ಮನಸ್ಸಾಗುತ್ತದೆ.

ಇಂಥ ಸಂದರ್ಭದಲ್ಲಿ ಹಸ್ತಪ್ರತಿಗಳನ್ನೇ ವಿವರವಾಗಿ ಪರೀಕ್ಷಿಸುವುದು ಸೂಕ್ತ. ಸಕಲ ಪುರಾತನರ ವಚನಕಟ್ಟುಗಳಲ್ಲಿ(ಗೊ.ಬ) ಈ ವಚನಗಳು ತಪ್ಪದೆ ನಾಚಯ್ಯನ ಹೆಸರಿನಲ್ಲಿ ಸಿಗುತ್ತವೆ. ಗೊಗ್ಗವ್ವೆಯಿಂದ ಪ್ರಾರಂಭವಾಗುವ ಒಂದೆರಡು ಪ್ರತಿಗಳಲ್ಲಿ ಮಾತ್ರ (೩೭.೪೦) 'ದಶಗಣ ಸಿಂಗಿದೇವನ ವಚನ'ವೆಂಬ ಶೀರ್ಷಿಕೆಯಲ್ಲಿ ಸಿಗುತ್ತವೆ. ಹೀಗಾಗಿ ಇದು ಲಿಪಿಕಾರರ ಪ್ರಮಾದವೆಂದು ಭಾವಿಸಿ, ಈ ವಚನದ ಕರ್ತೃ ನಾಚಯ್ಯನೆಂದೇ ಇಟ್ಟುಕೊಳ್ಳುವದು ಯೋಗ್ಯ.

---

೧. ಸಕಲ ಪುರಾತನರ ವಚನ ಕಟ್ಟುಗಳ (ಕೋ) ಒಂದೆರಡು ಪ್ರತಗಳಲ್ಲಿ ಇವು ಉಳಿಯುಮೇಶ್ವರ ಚಿಕ್ಕಯ್ಯನ ವಚನಗಳೆಂದು ತಪ್ಪಾಗಿ ಸೂಚಿಸಲಾಗಿದೆ.

ಹೀಗೆ ಸಮಸ್ಯೆಯನ್ನು ಬಗೆಪರಿಸಿಕೊಂಡ ಸಂದರ್ಭದಲ್ಲಿ 'ಶರಣಚಾರಿತ್ರದ ವಚನಗಳು' ಹೆಸರಿನ ಕೃತಿಯಲ್ಲಿ ಸಿಗುವ 'ತನು ಉಡುಗಿ, ಮನ ಉಡುಗಿ . . . .' ಎಂದು ಪ್ರಾರಂಭವಾಗಿ 'ಮಾರುಡುಗೆ ನಾಚೀಶ್ವರಾ' ಎಂದು ಕೊನೆಗೊಳ್ಳುವ, "ಅರ್ಥಾಸನ, ವ್ಯರ್ಥಾಸನ .." ಎಂದು ಪ್ರಾರಂಭವಾಗಿ "ನಾಚೀಶ್ವರಾ" ಎಂದು ಮುಕ್ತಾಯಗೊಳ್ಳುವ ಈ ವಚನಗಳು ಮೇಲಿನ ನಮ್ಮ ನಿರ್ಣಯಕ್ಕೆ ಅಡ್ಡಬರುತ್ತವೆ. ಆದರೆ ಸಕಲ ಪುರಾತನರ ವಚನಕಟ್ಟು ಈ ಶರಣಚಾರಿತ್ರದ ವಚನಕಟ್ಟಿಗಿಂತ ಹೆಚ್ಚು ಅಧಿಕೃತವಾಗಿರುವುದರಿಂದ ಮೇಲೆ ನಿರ್ಣಯಿಸಿದ ಮೇರೆಗೆ ಪ್ರಾರಂಭದಲ್ಲಿ ಪ್ರಸ್ತಾಪಿಸಿರುವ ನಾಲ್ಕೂ ವಚನಗಳು ನಾಚಯ್ಯನದೆಂದು ಇಟ್ಟುಕೊಳ್ಳಬಹುದು. ಶರಣಚಾರಿತ್ರದ ವಚನಗಳು ಕೃತಿಯಲ್ಲಿ ಸಿಗುವ ವಚನಗಳ ಕರ್ತೃತ್ವ ಇತ್ಯಾದಿಗಳು ವಿಚಾರಣೀಯವೆಂದು ಭಾವಿಸಬಹುದು.

೫. ಹಡಪದ ಅಪ್ಪಣ್ಣ - ಸಂಗಮೇಶ್ವರದ ಅಪ್ಪಣ್ಣ:

ಸಕಲಪುರಾತನರ ವಚನಕಟ್ಟಿನಲ್ಲಿ(ಗೊ) ಒಂದೆಡೆ ಹಡಪದ ಅಪ್ಪಣ್ಣನ ಹೆಸರಿನ ಕೆಳಗೆ, ಇನ್ನೊಂದಡೆ ಸಂಗಮೇಶ್ವರದ ಅಪ್ಪಣ್ಣನ ಹೆಸರಿನ ಕೆಳಗೆ ವಚನಗಳು ಕಂಡುಬರುವುದರಿಂದ ಇವರಿಬ್ಬರೂ ಭಿನ್ನರೆಂದು ಸ್ಪಷ್ಟವಾಗುತ್ತದೆ. ಸಂಗಮೇಶ್ವರದ ಅಪ್ಪಣ್ಣನ ವಚನಗಳಲ್ಲಿ ಸಂಸ್ಕೃತದ ಉದ್ಧರಣೆ ಅಧಿಕವಾಗಿದ್ದರೆ, ಹಡಪದ ಅಪ್ಪಣ್ಣನ ವಚನಗಳಲ್ಲಿ ಬೆಡಗಿನ ಶೈಲಿ ಕೆಲವೊಮ್ಮೆ ಮಿಂಚುತ್ತವೆ. ಈ ವಿಭಿನ್ನ ಲಕ್ಷಣಗಳೂ ಇವರಿಬ್ಬರು ಭಿನ್ನರೆಂಬುದನ್ನು ಪೋಷಿಸುತ್ತವೆ. ಆದರೆ ಇವರ ಮುದ್ರಿಕೆಗಳ ವಿಷಯವಾಗಿ ಬಹುಕಾಲದ ಹಿಂದೆಯೇ ಗೊಂದಲ ಉದ್ಭವಿಸಿದೆ.

ಸಕಲಪುರಾತನರ ವಚನಕಟ್ಟಿನಲ್ಲಿ ಸಂಗಮೇಶ್ವರದ ಅಪ್ಪಣ್ಣನ ಇಪ್ಪತ್ತು ವಚನಗಳಿದ್ದು, ಅವುಗಳ ಮುದ್ರಿಕೆ 'ಬಸವಪ್ರಿಯ ಕೂಡಲ ಚೆನ್ನಸಂಗಮದೇವ' ಎಂದು ತಪ್ಪದೇ ಬರುವುದರಿಂದ ಇದು ಆತನ ಮುದ್ರಿಕೆಯೆಂದು ಒಪ್ಪಿಕೊಳ್ಳುವದು ನ್ಯಾಯಸಮ್ಮತ. ನಿಜವಾದ ಸಮಸ್ಯೆ ಇರುವುದು ಹಡಪದ ಅಪ್ಪಣ್ಣನ ವಚನಗಳ ಮುದ್ರಿಕೆಯ ವಿಷಯವಾಗಿ.

ಸಕಲಪುರಾತನರ ವಚನಕಟ್ಟುಗಳಲ್ಲಿ ಹಡಪದ ಅಪ್ಪಣ್ಣನ ಹೆಸರಿನ ಕೆಳಗೆ ೪ ವಚನಗಳ ಗುಂಪು, ಈ ನಾಲ್ಕೂ ಒಳಗೊಂಡ ೬ ವಚನಗಳ ಗುಂಪು, ಈ ಆರೂ ಒಳಗೊಂಡ ೧೫ ವಚನಗಳ ಗುಂಪು, ಈ ಯಾವ ವಚನಗಳನ್ನೂ ಒಳಗೊಳ್ಳದ ೧೭ ವಚನಗಳ ಗುಂಪು – ಈ ರೀತಿ ನಾಲ್ಕು ಕಡೆಗಳಲ್ಲಿ ಅವನ ವಚನಗಳು ಸಿಗುತ್ತವೆ. ಇವುಗಳಲ್ಲಿ ೧೭ ವಚನಗಳ ಗುಂಪಿಗೆ 'ಹಡಪದ ಅಪ್ಪಣ್ಣಗಳು ನುಡಿದ ಬೊಲ್ಲೆಯ ವಚನ' ಎಂದು ನಿರ್ದೇಶಿಸಲಾಗಿದ್ದು ಇವುಗಳಿಗೆ ತಪ್ಪದೆ 'ಬಸವಪ್ರಿಯ ಕೂಡಲಚೆನ್ನಬಸವಣ್ಣ' ಎಂಬ ಮುದ್ರಿಕೆ ಬಳಸಲಾಗಿದೆ. ಇಲ್ಲಿ ಸಮಸ್ಯೆಯಿಲ್ಲ. ಮಿಕ್ಕ ಮೂರು ಕಡೆಗಳಲ್ಲಿ ೬ರ ಗುಂಪಿಗೆ 'ಬಸವಪ್ರಿಯ ಕೂಡಲಸಂಗಮದೇವಾ', ೧೫ರ ಮತ್ತು ೪ರ ಗುಂಪುಗಳಿಗೆ 'ಬಸವಪ್ರಿಯ ಕೂಡಲಚೆನ್ನಸಂಗಮದೇವಾ' ಎಂಬ ಮುದ್ರಿಕೆಗಳು ಹೀಗೆ ಕಂಡುಬರುತ್ತವೆ:

	೧೫ ವಚನ ಗುಂಪು	೬ ವಚನ ಗುಂಪು	೪ ವಚನ ಗುಂಪು
	ಬ.ಪ್ರಿ.ಕೂ.ಚೆ.ಸಂ.ದೇ	ಬ.ಪ್ರಿ.ಕೂ.ಸಂ.ದೇ	ಬ.ಪ್ರಿ.ಕೂ.ಚೆ.ಸಂ.ದೇ
೧. ಅಯ್ಯಾ ಹಳಿಯ ಹುತ್ತು	"	"	"
೨. ಅಯ್ಯಾ ಮರದೊಳಗಣ	"	"	"
೩. ಅಯ್ಯಾ ಎನ್ನ ಹಲ್ಲ ಮರೆ	"	"	"
೪. ನಾನೊಂದೂರಿಗೆ	"	"	"
೫. ಲಿಂಗ ಮುಂತಾದ ಭಕ್ತ	"	"	—
೬. ಹರನ ಕೈಕಪಾಲ	"	"	—
೭. ಶಿವನ ಪ್ರಸಾದವಲ್ಲದೆ	"	—	—
೮. ಕುಲಜರೆದು	"	—	—
೯. ದ್ವಿಜರೊಮ್ಮೆ ಮರೆದು	"	—	—
೧೦. ದೈವವೆನಿಸಿಕೊಂಬ	"	—	—
೧೧. ಅಜನೆಂದು ಸಾರಿ	"	—	—
೧೨. ಎನಗೆ ನಾನೇ ಹಗೆ	"	—	—
೧೩. ದೇವಾ ನಿಮ್ಮ ಪರಿಹಾಸ	"	—	—
೧೪. ಭಕ್ತರಿಗೆ ನೋಡಿ	"	—	—
೧೫. ಎನ್ನ ತನು ನಿಮ್ಮ ಸೇವೆ	"	—	—

ಇಲ್ಲಿ ೬ ವಚನಗಳ ಗುಂಪು ಮಾತ್ರ ಮುದ್ರಿಕೆಯ ವಿಷಯವಾಗಿ ಪ್ರತ್ಯೇಕ ನಿಲ್ಲುತ್ತದೆ. ನಿಜವಾಗಿಯೂ ಇಲ್ಲಿ ಇರಬೇಕಾದುದು 'ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ' ಎಂಬ ಮುದ್ರಿಕೆಯೇ ಎಂದು ನಾವು ಊಹಿಸಿದರೆ ಸಮಸ್ಯೆ ಮಾಯವಾಗಿ ಹಡಪದ ಅಪ್ಪಣ್ಣನ ಹದಿನೈದೂ ವಚನಗಳ ಮುದ್ರಿಕೆ 'ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ' ಎಂಬುದೇ ಆಗಿದೆಯೆಂದು ಒಪ್ಪಬೇಕಾಗುತ್ತದೆ. ಶೂನ್ಯಸಂಪಾದನೆ ಮತ್ತು ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರಗಳಲ್ಲಿಯೂ ಹಡಪದ ಅಪ್ಪಣ್ಣನಿಗೆ ಇದೇ ಮುದ್ರಿಕೆಯನ್ನು ಆರೋಪಿಸಲಾಗಿದೆ.

ಒಟ್ಟಿನಲ್ಲಿ ಹಡಪದ ಅಪ್ಪಣ್ಣನಿಗೆ ಎರಡು ಮುದ್ರಿಕೆಗಳಿದ್ದು, ಮೇಲೆ ಹೇಳಿದಂತೆ ೧೭ ಬೊಲ್ಲೆಯ ವಚನಗಳಿಗೆ "ಬಸವಪ್ರಿಯ ಕೂಡಲ ಚೆನ್ನಬಸವಣ್ಣ", ೧೫ ವಚನಗಳಿಗೆ ಮತ್ತು ಮಿಕ್ಕ ವಚನಗಳಿಗೆ 'ಬಸವಪ್ರಿಯ ಕೂಡಲ ಚೆನ್ನಸಂಗಮದೇವಾ' ಎಂಬ ಮುದ್ರಿಕೆಗಳಿವೆಯೆಂದು ತಾತ್ಪೂರ್ತಿಕವಾಗಿ ಭಾವಿಸಬಹುದು. ಹೀಗಿದ್ದೂ ಬಸವಣ್ಣನಿಗೆ ಪ್ರಿಯನಾದವ ಕೂಡಲ ಸಂಗಮದೇವನೇ ಹೊರತು ಕೂಡಲ ಚೆನ್ನಸಂಗಮದೇವನಲ್ಲ ಎಂಬ ಸಂದೇಹ ಉಳಿದುಕೊಳ್ಳುತ್ತದೆ. ಸಂಗಮೇಶ್ವರದ ಅಪ್ಪಣ್ಣನದೂ 'ಬಸವಣ್ಣ ಪ್ರಿಯ ಕೂಡಲಚೆನ್ನಸಂಗಮದೇವಾ' ಎಂಬ ಮುದ್ರಿಕೆ ಇರುವುದರಿಂದ ಇಬ್ಬರಿಗೂ ಒಂದೇ ಬಗೆಯ ಮುದ್ರಿಕೆಯೇಕೆ? ಎಂಬ ಇನ್ನೂ ಒಂದು ಸಂದೇಹ ಉಳಿದುಕೊಳ್ಳುತ್ತದೆ.

೬ ಸತ್ತಿಗೆ ಕಾಯಕದ ಮಾರಿತಂದೆ - ಸತ್ತಿಗೆ ಕಾಯಕದ ವಿಟ್ಟಪ್ಪಯ್ಯ:

ಸತ್ತಿಗೆ ಕಾಯಕದ ಮಾರಿತಂದೆ ಹೆಸರಿನ ಕೆಳಗೆ ೧೦ ವಚನಗಳಿವೆ. ಈ ವಚನಗಳ ಕರ್ತೃವಿನ ಹೆಸರಿನ ವಿಷಯವಾಗಿ ಸಂದೇಹವಿದೆ. ಏಕೆಂದರೆ ಕೆಲವು ಪ್ರತಿಗಳಲ್ಲಿ ಸತ್ತಿಗೆ

ಕಾಯಕ (ಗೊ ೬೧೩). ಸತ್ತಿಗೆ ಕಾಯಕದ (ಗೊ ೬೯೩). ಸತ್ತಿಗೆ ಕಾಯಕದವರ (ಗೊ ೪೦). ಸತ್ತಿಗೆ ಕಾಯಕದವರು (ಗೊ ೩೭). ಸತ್ತಿಗೆ ಕಾಯಕದ ವಚನ (ಗೊ ೭೬). ಸತ್ತಿಗೆ ಕಾಯಕದವರ ವಚನ (ಕೋ ೩೫. ಕೋ೩೦೦) – ಎಂದು ವ್ಯಕ್ತಿನಾಮವಿಲ್ಲದೆ ಕಾಯಕನಾಮ ಸೂಚಿಸಿ ೧೦ ವಚನಗಳನ್ನು ಅಡಕಗೊಳಿಸಲಾಗಿದೆ. ಬಹುಶಃ ಪ್ರಾಚೀನ ಲಿಪಿಕಾರರಿಗೆ ಈ ಹೆಸರಿನ ಬಗ್ಗೆ ಸಂದೇಹ ತಲೆದೋರಿದ ಕಾರಣ ಅದನ್ನು ಬಿಟ್ಟು ಕೇವಲ ಕಾಯಕವನ್ನು ಸೂಚಿಸುತ್ತ ಹೋಗಿರಬಹುದು. ಹಾಗಾದರೆ ಈ ವಚನಗಳ ಕರ್ತೃವಿನ ಹೆಸರೇನು? ಎಂಬ ಪ್ರಶ್ನೆ ಎದುರಾಗುತ್ತದೆ.

ಹಸ್ತಪ್ರತಿಗಳಲ್ಲಿ ಕೆಲವೊಮ್ಮೆ ಈ ವಚನಕರ್ತೃವಿನ ಹೆಸರಿನ ವಿಷಯದಲ್ಲಿ ಪ್ರಧಾನವಾಗಿ ಎರಡು ಬಗೆಯ ಉಲ್ಲೇಖಗಳು ಸಿಗುತ್ತವೆ: (ಅ). ಸತ್ತಿಗೆಯ ಕಾಯಕದ ಮಾರಿತಂದೆಯ ವಚನ (ಬ. ೬೧೯). ಸತ್ತಿಗೆ ಕಾಯಕ ಮಾರಯ್ಯನವರ ವಚನ (ಕೋ ೮೨), (ಬ). ಸತ್ತಿಕೆ ವಿಟ್ಟಪ್ಪೆಯ ವಚನ (ಕೋ.೨೬೯). ಇಲ್ಲಿ ಒಮ್ಮೆ ಮಾರಿತಂದೆ ಎಂಬ ಹೆಸರು ಇನ್ನೊಮ್ಮೆ ವಿಟ್ಟಪ್ಪೆಯ ಎಂಬ ಹೆಸರು ಕಾಣಿಸಿಕೊಂಡಿರುವುದಕ್ಕೆ ಹೀಗೆ ಸಮಾಧಾನ ಹೇಳಬಹುದು:

ಮೂರು ಬಗೆಯ (ಗೊ. ಕೋ. ಬ) ಸಕಲಪುರಾತನರ ವಚನಕಟ್ಟುಗಳಲ್ಲಿ ಕಂಬದ ಮಾರಿತಂದೆಯ ವಚನಗಳ ಬಳಿಕವೇ ಸತ್ತಿಗೆ ಕಾಯಕದ ಮಾರಿತಂದೆಯ ವಚನಗಳು ಬರುತ್ತವೆ. ಬಹುಶಃ ಲಿಪಿಕಾರ ಮೇಲಿನ ಕಂಬದ ಮಾರಿತಂದೆ ಎಂಬಲ್ಲಿಯ ಮಾರಿತಂದೆ ಎಂಬುದನ್ನು ಕೆಳಗಿನ ವಚನಗಳಿಗೂ ಕೈ ತಪ್ಪಿ ಬಳಸಿ, ಸತ್ತಿಗೆಯ ಕಾಯಕದ ಮಾರಿತಂದೆಗಳ ವಚನ ಎಂದು ಬರೆದಿರಬೇಕು. ಆಮೇಲೆ ಅದು ಪ್ರತಿಯಿಂದ ಪ್ರತಿಗೆ ಸಾಗಿ ಬಂದಿರಬೇಕು. ಆದುದರಿಂದ ಇನ್ನು ಮೇಲೆ ಸತ್ತಿಗೆ ಕಾಯಕದ ಮಾರಿತಂದೆ ಎಂಬ ಹೆಸರನ್ನು ಕೈಬಿಟ್ಟು, ಸತ್ತಿಗೆಯ ಕಾಯಕದ ವಿಟ್ಟಪ್ಪೆಯ ಎಂಬುದೇ ಇಲ್ಲಿ ಇರಬೇಕಾದ ನಿಜನಾಮವೆಂದು ಇಟ್ಟುಕೊಳ್ಳಬಹುದಾಗಿದೆ. ಕೆಲವೆಡೆ ಇದು ವಿಟ್ಟಪ್ಪಯ್ಯ ಎಂದೂ ಸಿಗುತ್ತದೆ.

ಈ ಸಂದರ್ಭದಲ್ಲಿ ಕೋಲಾಶಾಂತಯ್ಯನಿಂದ ಪ್ರಾರಂಭವಾಗುವ ಸಕಲಪುರಾತನರ ವಚನ ಕಟ್ಟನ್ನು ಆಧರಿಸಿ ರೂಪಿಸಿರುವ 'ಎಲ್ಲ ಪುರಾತನರ ಸ್ತೋತ್ರದ ವಚನ' (ತಾ.ಪ್ರ.೩೩) ಕೃತಿಯಲ್ಲಿ ಈ ವಚನಗಳ ತಲೆಯ ಮೇಲೆ 'ಸತ್ತಿಗೆಯ ಕಾಯಕದ ಶಂಕಣ್ಣಗಳ ವಚನ' ಎಂಬ ಸೂಚನೆಯಿದ್ದು, ಬಹುಶಃ ಇದು ದೋಷಪೂರ್ಣ ಬರವಣಿಗೆಯಾಗಿರಬಹುದು.

೨. ಅನಾಮಿಕ ನಾಚಯ್ಯ - ವಿಜಯಪುರದ ಸೋಮಯ್ಯ:

'ಅನಾಮಿಕ ನಾಚಯ್ಯನ ವಚನ' ಹೆಸರಿನ ಕೆಳಗೆ 'ಅನಾಮಿಕ ನಾಚಯ್ಯಪ್ರಿಯ ಚೆನ್ನರಾಮೇಶ್ವರ' ಮುದ್ರಿಕೆಯ ನಾಲ್ಕು ವಚನಗಳು ಸಕಲ ಪುರಾತನರ ವಚನಕಟ್ಟುಗಳಲ್ಲಿ ಕಂಡುಬರುತ್ತವೆ. ಮುದ್ರಿಕೆಯನ್ನು ಗಮನಿಸಿ ಪ್ರಾಚೀನ ಲಿಪಿಕಾರರು ಈ ವಚನಗಳ ಕರ್ತೃ ಅನಾಮಿಕ ನಾಚಯ್ಯನೆಂದು ಭಾವಿಸಿದರೆ? ಅಥವಾ ನಾಚಯ್ಯನೇ ಇವುಗಳ ನಿಜಕರ್ತೃವಾಗಿರುವನೆ? ಎಂಬ ಸಂದೇಹ ಮೂಡುತ್ತದೆ. ಈ ಸಂದರ್ಭದಲ್ಲಿ

ಸಕಲಪುರಾತನರ ವಚನಕಟ್ಟನ್ನು (ಕೋ) ಆಧರಿಸಿ ರೂಪಗೊಂಡ 'ಎಲ್ಲ ಪುರಾತನರ ಸ್ತೋತ್ರದ ವಚನಗಳು' ಕೃತಿ (ತಾ.ಪ್ರ ೩೩) ಮೇಲಿನ ನಾಲ್ಕು ವಚನಗಳಲ್ಲಿ ಮೂರನ್ನು ಆಯ್ದುಕೊಂಡು. ಇವು ವಿಜಯಪುರದ ಸೋಮಯ್ಯನ ವಚನವೆಂದು ಸೂಚಿಸಿದುದು ಇನ್ನೂ ಗೊಂದಲವನ್ನುಂಟು ಮಾಡುತ್ತದೆ. ಬಹುಶಃ ಅನಾಮಿಕ ನಾಚಯ್ಯನೆಂಬವನಿಗೆ ಪ್ರಿಯನಾದ ಚೆನ್ನರಾಮದೇವತೆಯನ್ನು ವಿಜಯಪುರದ ಸೋಮಯ್ಯನು ಮುದ್ರಿಕೆಯಾಗಿ ಇಟ್ಟುಕೊಂಡಂತಿದೆ. ರೇಕಣ್ಣನಿಗೆ ಪ್ರಿಯನಾದ ನಾಗನಾಥನನ್ನು ಬಹುರೂಪಿ ಚೌಡಯ್ಯ ಮುದ್ರಿಕೆಯಾಗಿ ಇಟ್ಟುಕೊಂಡಂತೆ. ವಿದ್ವಾಂಸರು ಈ ವಿಷಯವನ್ನು ಸಮಾಲೋಚಿಸುವದು ಅಗತ್ಯವಿದೆ. ಹೆಸರೇ ಸೂಚಿಸುವಂತೆ ಅನಾಮಿಕ ನಾಚಯ್ಯನು ಶೂದ್ರನೆಂದು ಕಾಣುತ್ತದೆ.

೮. ಏಲೇಶ್ವರ ಕೇತಯ್ಯ - ಅಕ್ಕಮ್ಮ:

ಕೋಲಶಾಂತಯ್ಯನ ವಚನಗಳಿಂದ ಮತ್ತು ಬಸವಣ್ಣನ ವಚನಗಳಿಂದ ಪ್ರಾರಂಭವಾಗುವ ಸಕಲ ಪುರಾತನರ ವಚನಕಟ್ಟುಗಳಲ್ಲಿ 'ಏಲೇಶ್ವರ ಕೇತಯ್ಯನ ವಚನಗಳು' ಹೆಸರಿನ ಕೆಳಗೆ 'ಏಲೇಶ್ವರ ಲಿಂಗ.' 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' – ಹೀಗೆ ಎರಡು ಬಗೆಯ ಅಂಕಿತದ ವಚನಗಳು ಅಡಕವಾಗಿವೆ. ಒಂದಕ್ಕೊಂದು ಸಂಬಂಧವೇ ಇಲ್ಲದ ಈ ಎರಡು ಮುದ್ರಿಕೆಗಳು ಒಬ್ಬನ ಹೆಸರಿನಲ್ಲಿ ಸಿಗುವದು ಸಹಜವಾಗಿಯೇ ಸಂದೇಹ ಹುಟ್ಟಿಸುತ್ತದೆ. ಈ ಸಂದರ್ಭದಲ್ಲಿ ಗೊಗ್ಗವ್ವೆಯ ವಚನಗಳಿಂದ ಪ್ರಾರಂಭವಾಗುವ ಸಕಲಪುರಾತನರ ವಚನಕಟ್ಟಿನಲ್ಲಿ ಅಕ್ಕಮ್ಮನ ಹೆಸರಿನ ಕೆಳಗೆ ಸಿಗುವ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬ ಅಂಕಿತದ ಮೂರು ವಚನಗಳು. ಈ ಮುದ್ರಿಕೆ ಅಕ್ಕಮ್ಮನದೆಂದು ತಿಳಿಸಿಕೊಡುತ್ತವೆ.[೧] ಇದನ್ನು ಆಧಾರವಾಗಿಟ್ಟುಕೊಂಡು ಮೇಲೆ ಹೇಳಿದ ಏಲೇಶ್ವರ ಕೇತಯ್ಯನ ಹೆಸರಿನ ಕೆಳಗೆ ಎರಡು ಬಗೆಯ ಮುದ್ರಿಕೆಗಳಲ್ಲಿ ಸಿಗುವ ವಚನಗಳಿಂದ 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಮುದ್ರಿಕೆಯ ವಚನಗಳನ್ನು ಬೇರ್ಪಡಿಸಿಕೊಂಡು. ಅವುಗಳನ್ನು ಡಾ. ಆರ್.ಸಿ. ಹಿರೇಮಠ ಅವರು 'ಅಕ್ಕಮ್ಮನ ವಚನಗಳು ಕೃತಿಯಲ್ಲಿ ಸೇರಿಸಿಕೊಂಡುದು ಸರಿಯೆಂದು ತೋರುತ್ತದೆ. ಇದರಿಂದಾಗಿ ಏಲೇಶ್ವರದ ಕೇತಯ್ಯನ ೭೪ ವಚನಗಳು. ಅಕ್ಕಮ್ಮನ ಹೆಸರಿನಲ್ಲಿ ೧೨೭ ವಚನಗಳು ಅವರ ಆವೃತ್ತಿಗಳಲ್ಲಿ ಸಂಗ್ರಹಗೊಂಡಿವೆ. ಆದರೆ ''ಶಸ್ತ್ರಸಮಾಧಿ....''ಎಂದು ಆರಂಭವಾಗಿ ಏಲೇಶ್ವರಲಿಂಗ' ಎಂದು ಮುಗಿಯುವ ವಚನ ಡಾ. ಹಿರೇಮಠರ ಅಕ್ಕಮ್ಮನ ವಚನಗಳು ಕೃತಿಯಲ್ಲಿ (ನಂ. ೧೩೮) ಸೇರಿಕೊಂಡಿದೆ. ಇದನ್ನು ತೆಗೆದು ಏಲೇಶ್ವರ ಕೇತಯ್ಯನ ವಚನಗಳಲ್ಲಿ ಸೇರಿಸಬೇಕು.

ಇಷ್ಟೆಲ್ಲ ಚರ್ಚೆ ಮಾಡಿದರೂ ಕೋಲಶಾಂತಯ್ಯನ ವಚನದಿಂದ ಪ್ರಾರಂಭವಾಗುವ ಸಕಲಪುರಾತನರ ವಚನಕಟ್ಟಿನಲ್ಲಿ 'ಏಲೇಶ್ವರ ಕೇತಯ್ಯನ ವಚನಗಳು' ಎಂಬ ಶೀರ್ಷಿಕೆಯ ಕೆಳಗೆ ಎರಡೂ ಮುದ್ರಿಕೆಯ ವಚನಗಳು ಏಕೆ ಸೇರಿದವು?

---

೧. ಈ ಮೂರು ವಚನಗಳು ಸಕಲ ಪುರಾತನರ ಕಟ್ಟುಗಳಲ್ಲಿ (ಕೋ) ಏಲೇಶ್ವರ ಕೇತಯ್ಯನ ಹೆಸರಿನ ಕೆಳಗೂ ಸಿಗುತ್ತವೆ.

'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಮುದ್ರಿಕೆಯಲ್ಲಿ ಅಕ್ಕಮ್ಮನ ೧೨೬ ರಷ್ಟು ವಚನಗಳು ಸಿಗುತ್ತಿದ್ದರೂ ಸಕಲಪುರಾತನರ(ಗೊ) ಕಟ್ಟಿನಲ್ಲಿ ಮೂರೇ ವಚನಗಳನ್ನು ಏಕೆ ಆಯ್ದುಕೊಂಡರು? ಇವೇ ಮೊದಲಾದ ಪ್ರಶ್ನೆಗಳು ಉಳಿದುಕೊಳ್ಳುತ್ತವೆ.

೯. ಏಕಾಂತರಾಮಯ್ಯ - ಏಕಾಂತರಾಮಯ್ಯನ ಪುಣ್ಯಸ್ತ್ರೀ:

ಗೊಗ್ಗವ್ವೆ, ಕೋಲಶಾಂತಯ್ಯಗಳಿಂದ ಪ್ರಾರಂಭವಾಗುವ ಸಕಲಪುರಾತನರ ವಚನಕಟ್ಟುಗಳಲ್ಲಿ ಏಕಾಂತರಾಮಯ್ಯನ ಒಟ್ಟು ೬ ವಚನಗಳು ಸಿಗುತ್ತವೆ. ಇವನ ಮುದ್ರಿಕೆ 'ಎನ್ನಯ್ಯ ಚೆನ್ನರಾಮಾ'.

ಷಟ್‌ಪ್ರಕಾರ ಸಂಗ್ರಹದಲ್ಲಿ 'ಮುನ್ನವೆ ಮುನ್ನವೆ . . . . . ' ಎಂದು ಪ್ರಾರಂಭವಾಗುವ ವಚನ (ನಂ. ೪೭೯) 'ಎನ್ನಯ್ಯ ಚೆನ್ನರಾಮ' ಎಂದು 'ಶಿಲೆ ಹಲವು ತೆರದಲ್ಲಿ . . . . . ' ಎಂದು ಪ್ರಾರಂಭವಾಗುವ ವಚನ (ನಂ. ೬೪೯) 'ಎನ್ನಯ್ಯಪ್ರಿಯ ಚೆನ್ನರಾಮ' ಎಂದು ಮುಗಿಯುತ್ತವೆ. ಇದನ್ನು ನೋಡಿ ಈ ಕೃತಿಯ ಸಂಪಾದಕರು ಮೊದಲಿನದು ಏಕಾಂತ ರಾಮಯ್ಯನ ವಚನವೆಂದೂ ಎರಡನೆಯದು ಆವನ ಪತ್ನಿ(?)ಯ ವಚನವೆಂದೂ ಪ್ರಶ್ನೆಚಿಹ್ನೆಯಿಂದ ಸೂಚಿಸಿದ್ದಾರೆ. ಆದರೆ 'ಶಿಲೆ ಹಲವು ತೆರದಲ್ಲಿ . . . . . . ' ಎಂದು ಪ್ರಾರಂಭವಾಗಿ 'ಎನ್ನಯ್ಯ ಚೆನ್ನರಾಮಾ' ಎಂದು ಮುಗಿಯುವ ವಚನವೊಂದು ಸಕಲಪುರಾತನರ ವಚನ (ಗೊ) ಕಟ್ಟಿನಲ್ಲಿ ಏಕಾಂತ ರಾಮಯ್ಯನ ಹೆಸರಿನಲ್ಲಿಯೇ ಸಿಗುವುದರಿಂದ ಷಟ್‌ಪ್ರಕಾರ ಸಂಗ್ರಹದ ಈ ವಚನದಲ್ಲಿ 'ಪ್ರಿಯ' ಎಂಬುದು ಪ್ರಮಾದವಶಾತ್ ಹೆಚ್ಚಿನದಾಗಿ ಸೇರಿಕೊಂಡಿದೆಯೆಂದು ಹೇಳಬೇಕಾಗುತ್ತದೆ. ಆಗ ಏಕಾಂತದ ರಾಮಯ್ಯನ ಹೆಂಡತಿ ಹೆಸರಿನಲ್ಲಿ ಷಟ್‌ಪ್ರಕಾರ ಸಂಗ್ರಹದ ಸಂಪಾದಕರು ಊಹಿಸಿದ ಇದ್ದೊಂದು ವಚನ ಈಗ ಏಕಾಂತ ರಾಮಯ್ಯನ ಹೆಸರಿನಲ್ಲಿಯೇ ಸೇರಿಕೊಳ್ಳುತ್ತದೆ. ಇದರಿಂದ ಏಕಾಂತದ ರಾಮಯ್ಯನ ಪುಣ್ಯಸ್ತ್ರೀ ವಚನ ಬರೆದಿಲ್ಲ. ಅಷ್ಟೇ ಅಲ್ಲ ಅವನಿಗೆ ಪುಣ್ಯಸ್ತ್ರೀ ಇದ್ದ ಬಗ್ಗೆ ಆಧಾರಗಳೇ ಇಲ್ಲವೆಂದು ಹೇಳಬೇಕಾಗುತ್ತದೆ.

ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರದಲ್ಲಿ ಏಕಾಂತ ರಾಮಯ್ಯನ ಮುದ್ರಿಕೆ 'ಎನ್ನಯ್ಯ ಪ್ರಿಯ ಚೆನ್ನರಾಮ' ಎಂದು ಹೇಳಿರುವುದು ನಾವು ಈ ವರೆಗೆ ಚರ್ಚಿಸಿದ ವಿಷಯಕ್ಕೆ ವಿರುದ್ಧವಾಗಿ ನಿಲ್ಲುತ್ತದೆ. ಬಹುಶಃ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರಕಾರನು ತಪ್ಪು ಮುದ್ರಿಕೆಯನ್ನು ಗ್ರಹಿಸಿದಂತಿದೆ. ಇಲ್ಲವೆ ಏಕಾಂತದ ರಾಮಯ್ಯನಿಗೆ ಎರಡೂ ಮುದ್ರಿಕೆಗಳಿರುವ ಸಾಧ್ಯತೆಯಿದೆ.

೧೦. ಕೊಟ್ಟಣದ ಸೋಮವ್ವೆ - ಸೂಳೆ ಸಂಕವ್ವೆ:

ಕೊಟ್ಟಣದ ಸೋಮವ್ವೆ, ಸೂಳೆ ಸಂಕವ್ವೆಯರ ಒಂದೊಂದು ವಚನ ಮಾತ್ರ ಈ ವರೆಗೆ ಸಿಕ್ಕಿವೆ. ಎರಡರಲ್ಲಿಯೂ ಉತ್ತರಾರ್ಧದ ಪಾಠ ಒಂದೇ ಬಗೆಯಾಗಿದ್ದು, ಮುದ್ರಿಕೆಯೂ ಒಂದೇ ರೀತಿ ಅಂದರೆ 'ನಿರ್ಲಜ್ಜೇಶ್ವರಾ' ಎಂದೇ ಇದೆ.

ಪವ ತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಲ್ಲ.
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದವರು ಪೋಗಲಿ. ಅರಿದು ಬೆರೆದೆನಾದಂತೆ
ಕಾದ ಕತ್ತಿಯಲ್ಲಿ ಕಿವಿಯ ಕೊಯ್ಯುವರಯ್ಯಾ
ಒಲ್ಲೆ ಬಲ್ಲೆನಾಗಿ ನಿಮ್ಮಾಣೆ, ನಿರ್ಲಜ್ಜೇಶ್ವರಾ

(ಕೊಟ್ಟಣದ ಸೋಮವ್ವೆ)

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
ಹಿಡಿವಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನ ಅರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ, ಕಿವಿ, ಮೂಗ ಕೊಯ್ವರಯ್ಯ.
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ

(ಸೂಳೆ ಸಂಕವ್ವೆ)

ಇವುಗಳಲ್ಲಿ ಕೊಟ್ಟಣದ ಸೋಮವ್ವೆಯ ವಚನ ಸಕಲಪುರಾತನರ ವಚನಕಟ್ಟು, ಶೀಲಸಂಪಾದನೆಯು ವಚನಗಳು, ಜ್ಞಾನಷಟ್‌ಸ್ಥಲಸಾರ ಕೃತಿಗಳಲ್ಲಿ, ಸೂಳೆಸಂಕವ್ವೆಯ ವಚನ ಸಕಲಪುರಾತನರವಚನ ಕಟ್ಟು, ಶೀಲಸಂಪಾದನೆ ವಚನಗಳು ಕೃತಿಗಳಲ್ಲಿ ಪಾಠವ್ಯತ್ಯಯಿಂದ ಏನೂ ವ್ಯತ್ಯಾಸವಿಲ್ಲದೆ ಹೀಗೆಯೇ ಸಿಗುತ್ತವೆ. ಇಲ್ಲಿಯ "ಶೀಲಸಂಪಾದನೆಯು ವಚನಗಳು ಕೃತಿ"ಗೆ ಸಕಲಪುರಾತನರ ವಚನಕಟ್ಟು ಆಧಾರವಾಗಿದೆ. ಬಹುಶಃ ಜ್ಞಾನಷಟ್‌ಸ್ಥಲಸಾರಕ್ಕೂ ಸಕಲಪುರಾತನರ ವಚನಕಟ್ಟು ಆಕರವಾಗಿರಬಹುದು. ಆದುದರಿಂದ ಸಕಲ ಪುರಾತನರ ವಚನ ಕಟ್ಟುಗಳಷ್ಟು ಪೂರ್ವದಲ್ಲಿಯೇ ಮೇಲಿನ ವಚನಗಳು ಪರಸ್ಪರ ಬೆರೆತುಹೋಗಿವೆಯೆಂದು, ಇಲ್ಲವೆ ಈ ವಚನಗಳ ನಿಜಪಾಠವೇ ಈ ರೀತಿ ಇದೆಯೆಂದು ಭಾವಿಸಬೇಕಾಗುತ್ತದೆ. ಬಹುಶಃ ಬೆರೆತುಹೋಗಿರುವ ಸಾಧ್ಯತೆಯೇ ಅಧಿಕವಾಗಿರುವುದರಿಂದ ಇವುಗಳ ನಿಜಪಾಠದ ಬಗ್ಗೆ ಇಲ್ಲಿ ಚರ್ಚಿಸಬಹುದು.

'ನಿರ್ಲಜ್ಜೇಶ್ವರಾ' ಎಂಬುದು ಸೂಳೆವೃತ್ತಿಯ ಸಂಕವ್ವೆಗೆ ಒಪ್ಪುವ ಮುದ್ರಿಕೆಯಾಗಿದೆ. ಇವಳ ವಚನದ ಅರ್ಥವೂ ಮೊದಲ ಚರಣದಿಂದ ಕೊನೆಯ ಚರಣದ ವರೆಗೂ ಇವಳ ವೃತ್ತಿಗನುಗುಣವಾಗಿ ಬಿಚ್ಚುತ್ತಹೋಗಿ ಪೂರ್ಣಗೊಳ್ಳುತ್ತದೆ. ಆದುದರಿಂದ ಮೇಲಿನ ಎರಡನೆಯ ವಚನ ಇಡಿಯಾಗಿ ಸೂಳೆ ಸಂಕವ್ವೆಯದೆಂದೂ ಮುದ್ರಿಕೆ 'ನಿರ್ಲಜ್ಜೇಶ್ವರಾ' ಎಂದೂ ಇಟ್ಟುಕೊಳ್ಳಬಹುದು.

ಹೀಗೆ ಒಪ್ಪಿಕೊಂಡಾಗ ಮಿಶ್ರಪಾಠಕ್ಕೆ ಗುರಿಯಾದುದು ಕೊಟ್ಟಣದ ಸೋಮವ್ವೆಯದೆಂದು ಹೇಳುವುದು ಅನಿವಾರ್ಯವಾಗುತ್ತದೆ. 'ನಿರ್ಲಜ್ಜೇಶ್ವರಾ' ಎಂಬುದು ಕೊಟ್ಟಣದ ಸೋಮವ್ವೆಗೆ ಒಪ್ಪುವ ಮುದ್ರಿಕೆಯಲ್ಲ. ಅವಳ ಮುದ್ರಿಕೆ ಬೇರೊಂದಿರಬಹುದು. ಲಿಪಿಕಾರನ ಅನವಧಾನದಿಂದಾಗಿ ಅವಳ ವಚನದ ಉತ್ತರಾರ್ಧದಲ್ಲಿ ಸೂಳೆಸಂಕವ್ವೆಯ ವಚನದ ಉತ್ತರಾರ್ಧ ಸೇರಿಕೊಂಡಂತಿದೆ.

ಆದುದರಿಂದ ಸೋಮವ್ವೆಯ ವಚನದ ಪೂರ್ವಾರ್ಧದ

ಪದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಲ್ಲ.
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ
ಅರಿಯದವರು ಹೋಗಲಿ

ವರೆಗಿನ ವಚನಪಾಠ ಅವಳದಾಗಿರಬಹುದು. ಇಲ್ಲಿ ಬಳಸಲಾದ ಕುಟ್ಟುವ ರೂಪಕವೂ ಈ ಅಭಿಪ್ರಾಯವನ್ನು ಸೂಚಿಸುತ್ತದೆ. ಇಲ್ಲಿಂದ ಮುಂದೆ ಕಳೆದುಹೋಗಿರುವ ಇವಳ ವಚನದ ಉತ್ತರಾರ್ಧವನ್ನು ನಾವು ಶೋಧಿಸಬೇಕು. ಆಗ ಸಹಜವಾಗಿಯೇ ಕಣ್ಮರೆಯಾಗಿರುವ ಇವಳ ಮುದ್ರಿಕೆಯೂ ನಮಗೆ ಲಭ್ಯವಾಗುತ್ತದೆ.

೧೧. ಅಮುಗಿದೇವಯ್ಯಗಳ ಪುಣ್ಯಸ್ತ್ರೀ - ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ:

ಬಸವಣ್ಣನ ವಚನಗಳಿಂದ ಪ್ರಾರಂಭವಾಗುವ ಸಕಲಪುರಾತನರ ವಚನಕಟ್ಟಿನಲ್ಲಿ ಅಮುಗಿದೇವಯ್ಯಗಳ ಪುಣ್ಯಸ್ತ್ರೀ ಶೀರ್ಷಿಕೆಯ ಕೆಳಗೆ ಒಂದೇ ಒಂದು ವಚನ. ಗೊಗ್ಗವ್ವೆಯ ವಚನಗಳಿಂದ ಪ್ರಾರಂಭವಾಗುವ ಸಕಲಪುರಾತನರ ವಚನಕಟ್ಟಿನಲ್ಲಿ ರಾಯಸದ ಮಂಚಣ್ಣನ ಪುಣ್ಯಸ್ತ್ರೀ ರಾಯಮ್ಮ ಶೀರ್ಷಿಕೆಯ ಕೆಳಗೆ ಒಂದೇ ಒಂದು ವಚನ ಹೀಗೆ ಸಿಗುತ್ತವೆ:

ಅಂಗಕ್ಕಾಚಾರ ಮನಕ್ಕೆ ಜ್ಞಾನ ಸಮರಸಾದ್ವೈತವಾದ ಮತ್ತೆ
ಪುನರಪಿ ಪುನರ್ದೀಕ್ಷೆಯುಂಟೆ?
ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಉಂಟೆ ಕೋಲು?
ಭವಿಗೆ ಮೇಲು ವ್ರತ ಪುನರ್ದೀಕ್ಷೆಯಲ್ಲದೆ ಭಕ್ತಗುಂಟೆ?
ವ್ರತ ತಪ್ಪಿ ಅನುಗ್ರಹವಿಡಿದ ನರಕಿಗಳಿಗೆ ಮುಕ್ತಿಯಿಲ್ಲ ಎಂದೆ
ಅಮುಗೇಶ್ವರ ಲಿಂಗದಲ್ಲಿ.

(ಅಮುಗಿದೇವಯ್ಯಗಳ ಪುಣ್ಯಸ್ತ್ರೀಯ ವಚನ)

ಗರುಡಿಯಲ್ಲಿ ಕೋಲಿಲ್ಲದೆ ಕಾಳಗದಲ್ಲಿ ಕೋಲುಂಟೆ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ ಭಕ್ತಗುಂಟೆ?
ವ್ರತತಪ್ಪಲು ಶರೀರವಿಡಿದ ನರಕಿಗೆ ಮುಕ್ತಿಯಿಲ್ಲ
ಅಮುಗೇಶ್ವರ ಲಿಂಗದಲ್ಲಿ.

(ರಾಯಸದ ಮಂಚಣ್ಣ ಪುಣ್ಯಸ್ತ್ರೀ ರಾಯಮ್ಮಗಳ ವಚನ)

ಪರಸ್ಪರ ಹೋಲಿಕೆಯಿಂದ ಕೂಡಿರುವ ಇವುಗಳಲ್ಲಿ ಮೊದಲಿನದು ಸಕಲಪುರಾತನರ ವಚನ (ಬ). ಶರಣ ಚಾರಿತ್ರ್ಯದ ವಚನ – ಹೀಗೆ ಎರಡು ಕೃತಿಗಳಲ್ಲಿ. ಎರಡನೆಯದು ಸಕಲಪುರಾತನರ ವಚನ (ಗೊ). ಶೀಲಸಂಪಾದನೆಯ ವಚನಗಳು. ಜ್ಞಾನ ಷಟ್‌ಸ್ಥಲಸಾರ – ಹೀಗೆ ಮೂರು ಕೃತಿಗಳಲ್ಲಿ ಸಿಗುತ್ತವೆ. ಇವೆಲ್ಲವುಗಳಿಗೆ

ಮೂಲವಾದುದು ಸಕಲಪುರಾತನರ ವಚನಕಟ್ಟುಯೆಂಬುದರಲ್ಲಿ ಸಂದೇಹವಿಲ್ಲ. ಹೀಗಾಗಿ ಈ ಪಾಠವ್ಯತ್ಯಾಸ ಬಹುಕಾಲದ ಹಿಂದೆಯೇ ಘಟಿಸಿದಂತೆ ತೋರುತ್ತದೆ. ಅಮುಗಿದೇವಯ್ಯನ ಪತ್ನಿಯ ಹೆಸರು ರಾಯಮ್ಮನೆಂದು ಅನ್ಯಮೂಲಗಳಿಂದ ತಿಳಿದುಬರುತ್ತದೆ. ರಾಯಸ ಮಂಚಣ್ಣಗಳ ಹೆಂಡತಿಯ ಹೆಸರು ರಾಯಮ್ಮನೆಂದು ಇಲ್ಲಿ ಹೇಳಲಾಗಿದೆ. ಹೆಸರಿನ ಈ ಸಾಮ್ಯತೆಯಿಂದಾಗಿ ಮೇಲಿನ ವಚನಗಳಲ್ಲಿ ಗೊಂದಲ ಸೃಷ್ಟಿಯಾದಂತಿದೆ.

ಸಾಮಾನ್ಯವಾಗಿ ಹೆಂಡತಿಯ ವಚನಮುದ್ರಿಕೆಯಲ್ಲಿ ಗಂಡನ ದೈವತದ ಸೂಚನೆಯಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ ಅಮುಗಿದೇವಯ್ಯಗಳ 'ಸಿದ್ಧಸೋಮನಾಥ' ಎಂಬ. ರಾಯಸ ಮಂಚಣ್ಣಗಳ 'ಜಾಂಬೇಶ್ವರಾ' ಎಂಬ ಮುದ್ರಿಕೆಗಳು ಮೇಲಿನ ಗೊಂದಲವನ್ನು ಬಿಡಿಸುವಲ್ಲಿ ನೆರವಾಗುವದಿಲ್ಲ. ಆದರೆ ಗಂಡನ ಹೆಸರಿನಲ್ಲಿಯ ಅಮುಗಿದೇವಯ್ಯ. ಹೆಂಡತಿಯ ಮುದ್ರಿಕೆಯಲ್ಲಿಯ ಅಮುಗೇಶ್ವರಲಿಂಗ – ಇವುಗಳ ಸಾಮ್ಯತೆಯ ಮೇಲೆ ಒತ್ತುಕೊಟ್ಟು ನಾವು ಅಮುಗೇಶ್ವರಲಿಂಗ ಮುದ್ರಿಕೆಯ ಮೊದಲಿನ ವಚನ ಅಮುಗೆ ದೇವಯ್ಯಗಳ ಪುಣ್ಯಸ್ತ್ರೀಯದೆಂದು ಇಟ್ಟುಕೊಳ್ಳಬಹುದು. ಆಗ ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ ವಚನ ಬರೆದಿಲ್ಲವೆಂದೂ ಲಿಪಿಕಾರರು ಅಮುಗೆರಾಯಮ್ಮನ ವಚನವನ್ನೇ ಹೆಸರಿನ ಸೌಮ್ಯಭ್ರಾಂತಿಯಿಂದ ರಾಯಸದ ರಾಯಮ್ಮನ ತಲೆಗೆ ಕಟ್ಟಿರುವರೆಂದೂ. ಹೀಗೆ ಮಾಡುವಾಗ ಮೊದಲಿನ ಎರಡು ಸಾಲುಗಳು ಕಳಚಿ ಹೋಗಿವೆಯೆಂದೂ ಹೇಳಬಹುದಾಗಿದೆ.

ಅಮುಗೆರಾಯಮ್ಮನ ವಚನಕ್ಕೆ ಮೇಲೆ ಸೂಚಿಸಿದ ಎರಡು ಆಕರಗಳಲ್ಲದೆ. 'ಅಮುಗೆರಾಯಮ್ಮನ ವಚನಗಳು' ಎಂಬ ಹೆಸರಿನ ಪ್ರತ್ಯೇಕ ಕಟ್ಟು ಸಿಗುತ್ತಿದ್ದು ಈ ಮೂರೂ ಆಕರಗಳು ಇವಳಿಗೇ ಸಂಬಂಧಪಟ್ಟಿವೆಯೆಂದು ಇಟ್ಟುಕೊಳ್ಳಬಹುದು. ಹೀಗೆ ಇಟ್ಟುಕೊಂಡು ಡಾ. ಆರ್.ಸಿ. ಹಿರೇಮಠ ಅವರು ಈ ಮೂರು ಆಕರಗಳಿಂದ ವಚನಗಳನ್ನು ಸಂಗ್ರಹಿಸಿ 'ಅಮುಗೆ ರಾಯಮ್ಮನ ವಚನಗಳು' ಹೆಸರಿನಲ್ಲಿ ಅಚ್ಚಿಸಿರುವುದು ಸೂಕ್ತವಾಗಿದ್ದರೂ. ಸಕಲಪುರಾತನರ ವಚನಗಳು (ಸಂಪುಟ-೩) ಕೃತಿಯಲ್ಲಿ 'ಅಮುಗೆದೇವಯ್ಯಗಳ ಪುಣ್ಯಸ್ತ್ರೀ'. 'ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮನ ವಚನ'ವೆಂದು ಪ್ರತ್ಯೇಕಿಸಿದುದು ಸೂಕ್ತವಲ್ಲವೆನಿಸುತ್ತದೆ.

ಹೀಗೆ ಶರಣರ ಮುದ್ರಿಕೆಗಳ. ವಚನಗಳ ವಿಷಯವಾಗಿ ಸಕಲ ಪುರಾತನರ ವಚನ ಕಟ್ಟುಗಳ ಸಂಕಲನಕಾರರೂ. ಪ್ರಾಚೀನ ಲಿಪಿಕಾರರೂ ಆಧುನಿಕ ಸಂಪಾದಕರೂ ಗೊಂದಲಗಳನ್ನು ಸೃಷ್ಟಿಸಿದ್ದಾರೆ. ಈ ಗೊಂದಲಗಳ ತಿಳುವಳಿಕೆಯಿಲ್ಲದೆ ಹೋದರೆ ಅಭ್ಯಾಸಿಗಳು ಖಂಡಿತ ತಪ್ಪುದಾರಿ ಹಿಡಿಯುತ್ತಾರೆ. ಎಲ್ಲ ಸಮಸ್ಯೆಗಳನ್ನು ಪ್ರಥಮಬಾರಿ ವಿದ್ವಾಂಸರ ಗಮನಕ್ಕೆ ಇಲ್ಲಿ ತರಲಾಗಿದ್ದು. ಇವುಗಳ ಬಗ್ಗೆ ಹೆಚ್ಚಿನ ಶೋಧ ಆವಶ್ಯವಿದೆ.[೧]

●

೧. ಈ ಲೇಖನದಲ್ಲಿ ಸೂಚಿಸಲಾದ ಹಸ್ತಪ್ರತಿಗಳು ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರಕ್ಕೆ ಸಂಬಂಧಿಸಿದವುಗಳಾಗಿವೆ.

ವೈದ್ಯಕೀಯಶಾಸ್ತ್ರ ನಡೆದುಬಂದ ದಾರಿ

— ಎಸ್.ಬಿ. ಪಾಟೀಲ

ಜೀವ, ನಿಸರ್ಗದಿಂದ ಉತ್ಪತ್ತಿಯಾದದ್ದು. ಮನುಷ್ಯ, ನಿಸರ್ಗದ ಒಂದು ಅಂಗ. ನಿಸರ್ಗದ ಎಲ್ಲ ಜೀವಿಗಳಲ್ಲಿ ಮನುಷ್ಯಜೀವ ಅತಿ ಶ್ರೇಷ್ಠ; ಯಾಕೆಂದರೆ ತನಗೆ ಆದ ರೋಗಗಳನ್ನು ಅವನು ಗುಣಪಡಿಸಿಕೊಳ್ಳಬಲ್ಲ. ಜೀವಕ್ಕೆ ಒದಗಬಹುದಾದ ಅಪಾಯಗಳನ್ನು ಪ್ರತಿಬಂಧಿಸಬಲ್ಲ. ಉಳಿದ ಪ್ರಾಣಿಜೀವಿಗಳು ತಮಗೆ ಆಗಬಹುದಾದ ರೋಗಗಳನ್ನು ಗುಣಪಡಿಸಿಕೊಳ್ಳಲು ಮತ್ತು ಒದಗಬಹುದಾದ ಅಪಾಯಗಳನ್ನು ಪ್ರತಿಬಂಧಿಸಲು ನಿಸರ್ಗವನ್ನೇ ಅವಲಂಬಿಸಬೇಕಾಗುವದು (Vis Mediatrix naturae). ಪ್ರಾಣಿಜೀವಿಗಳು ತಮ್ಮ ಸಹಜ ಮನೋವೃತ್ತಿಯಿಂದ ಅನೇಕ ಕಾಯಿಲೆಗಳಿಗೆ ಉಪಾಯ ಕಂಡುಹಿಡಿಯುತ್ತವೆ. ಇಂಥದೇ ಮನೋವೃತ್ತಿ ಮಾನವನಿಗೆ ಕೂಡ ಪ್ರಾಚೀನ ಕಾಲದಲ್ಲಿ ಇರಬಹುದು. ಆದರೆ ಅವನು ತನ್ನ ವಿಚಾರಶಕ್ತಿಯಿಂದ ಇಂಥ ಸಹಜ ಮನೋವೃತ್ತಿಗಳನ್ನು ಉಪಚಾರದ ವಿಧಾನಗಳನ್ನಾಗಿ ಅಳವಡಿಸಲು ಶಕ್ತನಾದನು. ಥಾಮಸ್ ಸಿಡೆನ್‌ಹ್ಯಾಮ (೧೬೨೪-೧೬೮೯) ಹೇಳಿದಂತೆ:

"Thou Nature art my Goddess;
to thy law
my services are bound"

("ನಿಸರ್ಗ ನೀ ನನ್ನ ದೇವತೆ;
ನಿನ್ನ ನಿಯಮಗಳಿಗೆ
ನನ್ನ ಸೇವೆಗಳು ಬದ್ಧ")

ಪ್ರಾಚೀನಕಾಲದಲ್ಲಿ ಮಾನವನಿಗೆ ಅನೇಕ ಅಪಾಯಗಳು ಒದಗಿರಬಹುದು; ಅವು ನೈಸರ್ಗಿಕ ಅನಾಹುತಗಳೇ ಆಗಿರಬಹುದು. ಮಾನವ ಈ ಎಲ್ಲ ಅಪಾಯಗಳನ್ನು ಎದುರಿಸುವಲ್ಲಿ ಜಯಶಾಲಿಯಾಗಿದ್ದಾನೆ. ಆದುದರಿಂದಲೇ ಅನೇಕ ಪ್ರಾಣಿಗಳು ಸಂಪೂರ್ಣ ನಾಶವಾದರೂ ಮಾನವ ಉಳಿದಿದ್ದಾನೆ. ಆದರೆ ಮಾನವನು ಯಾವರೀತಿಯಾಗಿ ಇಂಥ ಅಪಾಯಗಳನ್ನು ಎದುರಿಸಿದನು. ಇದರ ಬಗ್ಗೆ ಇಂದು ಯಾವ ದಾಖಲೆಗಳೂ ಇಲ್ಲ.

ಆದರೆ ಭೂಗರ್ಭಶಾಸ್ತ್ರಜ್ಞರು ಗುಹೆ ಮತ್ತು ಬಂಡೆಗಳ ಮೇಲಿದ್ದ ಚಿತ್ರಗಳಿಂದ ಪ್ರಾಚೀನ ಮಾನವನ ಬಗೆಗೆ ಕೆಲವು ಕಲ್ಪನೆಗಳನ್ನು ಊಹಿಸಿದ್ದಾರೆ. ಇಂಥ ಕೆಲವು

ಚಿತ್ರಗಳು ಮಧ್ಯಪ್ರದೇಶದ ಸಂಘನಾಪೂರ, ಉತ್ತರಪ್ರದೇಶದ ಮಿರ್ಝಾಪೂರ ಅದರಂತೆ ಸ್ಪೇನ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಉಂಟು. ಈ ಚಿತ್ರಗಳಿಂದ ಆಗಿನ ಕಾಲದಲ್ಲಿಯ ರೋಗ ಚಿಕಿತ್ಸೆಯ ಅರಿವು ಇತ್ತು ಎಂದು ಅನಿಸುತ್ತದೆ.

ವೈದ್ಯಕೀಯ ಕಲೆ ಮತ್ತು ವಿಜ್ಞಾನ ಕಾಲಕ್ಕೆ ಅನುಗುಣವಾಗಿ ಮಾರ್ಪಾಡು ಹೊಂದುವದು. ಆಯಾಕಾಲದ ಮೇಲೆ ಆಗ ಇದ್ದಂಥ ವೈದ್ಯಕೀಯ ಜ್ಞಾನ, ಸಮಾಜದ ರೂಢಿಗಳು, ವೈದ್ಯಕೀಯ ಪದ್ಧತಿಗಳು, ನಂಬುಗೆಗಳು, ರೋಗಗಳ ಬಗ್ಗೆ ಇದ್ದ ಕಲ್ಪನೆ ಮತ್ತು ಗುಣಪಡಿಸುವ ವಿಧಾನಗಳು ತಮ್ಮ ಪ್ರಭಾವ ಬೀರುವವು.

"Vis Mediatrix naturae" ಇದು ಮಾನವಜೀವಿಗಾಗಲೀ ಅಥವಾ ಉಳಿದ ಜೀವಿಗಳಿಗಾಗಲೀ ಸಿಕ್ಕ ನಿಸರ್ಗದ ಕೊಡುಗೆ. ವೈದ್ಯಕೀಯ ಕಲೆ ಮತ್ತು ವಿಜ್ಞಾನ ನಿಸರ್ಗದ ಕೊಡುಗೆ. ವೈದ್ಯಕೀಯ ಕಲೆ ಮತ್ತು ವಿಜ್ಞಾನ ನಿಸರ್ಗದ ನಿಯಮಕ್ಕೆ ಅನುಗುಣವಾಗಿ ಮತ್ತು ಅದಕ್ಕೆ ಪೂರಕವಾಗಿ ಬೆಳೆದುಬಂದಿದೆ. ಈ ಕುರಿತು ವಿಲಿಯಮ್ ಹಾರ್ವೆ(೧೫೭೮-೧೬೫೭) ಹೀಗೆ ಹೇಳಿದ್ದಾನೆ : "Nature herself must be our adviser, the path she chalks must be our walk, ... " ("ನಿಸರ್ಗವೇ ನಮ್ಮ ಸಲಹೆಗಾರ'. ನಿಸರ್ಗ ಹಾಕಿಕೊಟ್ಟ ದಾರಿಯಲ್ಲಿಯೇ ನಾವು ನಡೆಯಬೇಕು; .... ")

ಇತಿಹಾಸಪೂರ್ವಕಾಲದಲ್ಲಿ ಮನುಷ್ಯನ ಜೀವನ ಒಂದು ಅಪಾಯಕಾರಿ ಮತ್ತು ಗಂಡಾಂತರದ ಸಾಹಸವಾಗಿತ್ತು; ಯಾಕೆಂದರೆ ಅವನು ಅನೇಕ ಗೊತ್ತಿದ್ದ ಮತ್ತು ಗೊತ್ತಿರದಂಥ ಅಪಾಯಗಳನ್ನು ಎದುರಿಸಬೇಕಾಗುತ್ತಿತ್ತು. ಅವನಿಗೆ ಬದಲಾಗುತ್ತಿದ್ದ ಪರಿಸರದೊಂದಿಗೆ ಹೊಂದಿಕೊಳ್ಳಬೇಕಾಗುತ್ತಿತ್ತು. ಆದ್ದರಿಂದ ಅವನು ತನ್ನನ್ನು ರಕ್ಷಿಸಿಕೊಳ್ಳಲು ಅನೇಕ ಆಯುಧಗಳನ್ನು ಕಂಡುಹಿಡಿದನು. ಇವುಗಳನ್ನು ಕಂಡುಹಿಡಿದಂಥ ಮಾನವನ ಬುದ್ಧಿಮತ್ತೆ ಅಗಾಧವಾದುದು.

ಮಾನವ ಅಗ್ನಿಯನ್ನು ಶೋಧಿಸಿದನು. ಇದು ಅವನ ಅತಿಶ್ರೇಷ್ಠ ಶೋಧನೆ. ಅಗ್ನಿಯನ್ನು ಉಪಯೋಗಿಸುವದನ್ನು ಕಲಿತನು. ಮಾನವನು ಅಗ್ನಿಯ ಉತ್ಪತ್ತಿ ಅಲೌಕಿಕ ಎಂದು ಭಾವಿಸಿದನು. ಈ ಅಲೌಕಿಕ ಭಾವನೆಯೇ ಮೂಢನಂಬಿಕೆಗಳ ಉತ್ಪತ್ತಿಗೆ ಕಾರಣವಾಯಿತು. ಇದೇ ರೀತಿ ಮಾನವನು ಅಲೌಕಿಕ ಕಾರಣಗಳಿಂದಲೇ ಜಾಡ್ಯಗಳು ಬರುತ್ತವೆ ಎಂದು ನಂಬಿದನು. ಅವನು ಆತ್ಮಗಳ ಕಾಯಿಲೆಯಿಂದಲೇ ದೇಹದ ಕಾಯಿಲೆಗಳು ಬರುತ್ತವೆಯೆಂದು ಬಗೆದನು. ಆದ್ದರಿಂದ ಅವನು ಆ ಕಾಲದಲ್ಲಿ ದೇಹದ ಕಾಯಿಲೆಗಳ ಉಪಚಾರಕ್ಕೆ ಪಾದ್ರಿ ಮತ್ತು ಪೂಜಾರಿಗಳನ್ನು ಅವಲಂಬಿಸಿದನು. ಪ್ರತಿಜೀವಿಯಲ್ಲಿ ಆತ್ಮವೆಂಬುದು ಇದೆ ಎಂಬ ಕಲ್ಪನೆ ಮನುಷ್ಯನಲ್ಲಿ ಬೇರೂರಿತ್ತು. ಮನುಷ್ಯನ ದೇಹದಲ್ಲಿ ಅನಿಷ್ಟ ಭೂತ, ಪಿಶಾಚಿಗಳು ಹೋಗುವದರಿಂದ ಕಾಯಿಲೆ ಬರುತ್ತವೆ ಎಂದು ನಂಬಿದ್ದನು. ಆದ್ದರಿಂದ ಆಗ 'ವೈದ್ಯಕೀಯ ಶಾಸ್ತ್ರ' ಮೂಢನಂಬಿಕೆಗಳ ಹಿಡಿತಕ್ಕೆ ಸಿಕ್ಕಿತು. ಇದೇ ಮಾಟಗಾರಿಕೆಗೆ, ಬಾನಾಮತಿಗೆ, ಗಾಳಿ ಬಿಡಿಸುವಿಕೆಗಳಿಗೆ ಕಾರಣವಾಯಿತು. ಮಾನವನು ಧಾರ್ಮಿಕ ಮೂಢನಂಬಿಕೆಗಳಿಗೆ ಇಲ್ಲಿಯೇ ಬಲಿಯಾದನು. ಮಾನವನು ಇವರಿಂದ ತನ್ನ ಜಾಡ್ಯಗಳ ನಿವಾರಣೆಗೆ

ಅರ್ಚಕರು ಮತ್ತು ಆಚಾರ್ಯರನ್ನು ಅವಲಂಬಿಸಹತ್ತಿದನು. ಇದರ ಬಗ್ಗೆ ಮಹಾಭಾರತದ ಸಮಕಾಲೀನ ಸಾಹಿತ್ಯದಲ್ಲಿ 'ಭಿಸಗ ಅಥರ್ವರು' (Priest doctor) ಎಂಬ ಉಲ್ಲೇಖ ಬರುತ್ತದೆ. ಹೈಪೊಕ್ರೆಟಿಕ್ ಪ್ರತಿಜ್ಞೆಯಲ್ಲಿ, ವೈದ್ಯರು ಧಾರ್ಮಿಕ ಭಾವನೆಯನ್ನು ಹೊಂದಿರಬೇಕು. ಆದರೆ ಅದು ಮೂಢನಂಬಿಕೆಯಷ್ಟು ದೂರ ಹೋಗಬಾರದು (Pious without going so far as superstition) ಎಂದು ಇದೆ. ಇದರಿಂದ ವೈದ್ಯಶಾಸ್ತ್ರ ಮತ್ತು ಧರ್ಮಗಳ ನಡುವಿನ ಸಂಬಂಧ ಮೊದಲು ಇತ್ತು; ಇಂದೂ ಇದೆ ಎಂದು ಅರ್ಥವಾಗುವದು. ಇಲ್ಲಿ ಮಾರ್ಟಿನ್ ಲೂಥರ್ ಕಿಂಗ ಹೇಳಿದ ಒಂದು ತೀಕ್ಷ್ಣ ಮಾತು ಉಲ್ಲೇಖಿಸುವಂಥದು,: "No malady comes from God." ("ದೇವರಿಂದ ಯಾವ ವ್ಯಾಧಿಗಳು ಬರುವದಿಲ್ಲ.") ಎಲ್ಲ ಮೂಢನಂಬಿಕೆಗಳು ಅವೈಜ್ಞಾನಿಕವೆಂದಲ್ಲ; ಕೆಲವು ಮೂಢನಂಬಿಕೆಗಳಿಗೆ ವೈಜ್ಞಾನಿಕ ತಳಹದಿ ಉಂಟು. ರೋಗಗಳಿಗೆ ಪರಿಹಾರ ಕಂಡುಹಿಡಿಯುವ ಪ್ರಯತ್ನದಲ್ಲಿ ವೈಜ್ಞಾನಿಕವಾದ ಮೂಢನಂಬಿಕೆಗಳು ಬೆಳೆದುಬಂದವು.

ಕಾಲಾಂತರದಲ್ಲಿ ಮೂಢನಂಬಿಕೆಗಳ ಸ್ಥಾನದಲ್ಲಿ ವೈಜ್ಞಾನಿಕ ವಿಚಾರಗಳು ಬರಹತ್ತಿದವು; ಹೆಚ್ಚಾಗಿ ಇವು ಮನುಷ್ಯನ ಅನುಭವದಿಂದ ನೈಸರ್ಗಿಕವಾಗಿ ಬಂದ ವಿಚಾರಗಳು. ಇಂಥ ಅನುಭವದ ವಿಚಾರಗಳಿಗೆ ಮೂಢನಂಬಿಕೆಯ ಆಶ್ರಯ ಪಡೆಯದೇ ವೈಜ್ಞಾನಿಕ ತಿರುವು ಕೊಡುವ ಮೊದಲನೇ ಉದಾಹರಣೆ ಗ್ರೀಸದಲ್ಲಿದ್ದ ಹೈಪೊಕ್ರಟಸ್ ವೈದ್ಯಕೀಯ ಶಾಲೆಯಿಂದ ಕ್ರಿಸ್ತ ಪೂರ್ವ ೫ನೇ ಶತಕದಲ್ಲಿ ಪ್ರಾರಂಭವಾಯಿತು. ಚರಕ ಮತ್ತು ಶುಶ್ರುತ ಭಾರತೀಯ ಸಂಸ್ಕೃತಿಯಲ್ಲಿ ಇಂಥದೇ ವಿಚಾರಗಳನ್ನು ಪ್ರತಿಪಾದಿಸಿದರು. ಪುರಾತನಕಾಲದಿಂದಲೂ ಮಾನವನು ವನಸ್ಪತಿಗಳ ಕೂಡ 'ಪ್ರಯೋಗ' ಮಾಡುತ್ತಲೇ ಬಂದಿದ್ದಾನೆ. ಯಾವ ವನಸ್ಪತಿಯಿಂದ ತನಗೆ ಹೆಚ್ಚಿನ ಉಪಯೋಗವಿದೆಯೋ ಅಂಥ ವನಸ್ಪತಿಯನ್ನು ಅವನು ಪೂಜಿಸಹತ್ತಿದನು. ಇಂಥ ಉಪಯೋಗಕಾರಿ ವನಸ್ಪತಿಗಳ ಬಗ್ಗೆ ಚರ್ಚೆಗಳು ಕೂಡ ನಡೆಯುತ್ತಿದ್ದವು. ಇಂಥ ವಿಚಾರಗೋಷ್ಠಿಯ ಒಂದು ವಿವರಣೆ ಚರಕ ಸಂಹಿತೆಯಲ್ಲಿ ಬರುವದು. 'ರೋಗ ಉಪಚಾರದಲ್ಲಿ ವನಸ್ಪತಿಗಳ ಪಾತ್ರ' ಎಂಬ ಬಗ್ಗೆ ಜಗತ್ತಿನ ಇತಿಹಾಸದಲ್ಲಿಯೇ ಮೊದಲ ವಿಚಾರಗೋಷ್ಠಿ ಕ್ರಿಸ್ತ ಪೂರ್ವ ೭ನೇ ಶತಮಾನದಲ್ಲಿ ಹಿಮಾಲಯ ಪರ್ವತದ ಹಸಿರು ಗಿಡಗಳ ನೆರಳಿನಲ್ಲಿ ನಡೆಯಿತೆಂದು ಚರಕಸಂಹಿತೆಯಲ್ಲಿ ಉಲ್ಲೇಖಿಸಲಾಗಿದೆ; ಈ ವಿಚಾರಗೋಷ್ಠಿಯ ಅಧ್ಯಕ್ಷತೆಯನ್ನು ಭಾರದ್ವಾಜ ಮುನಿಗಳು ವಹಿಸಿದ್ದರೆಂದು ಪ್ರಸ್ತುತಿ ಇದೆ. ಈಗ ವಿಚಾರ ಮಾಡಿದರೆ ಇದೊಂದು ಐತಿಹಾಸಿಕ ಚರ್ಚಾಕೂಟವಾಗಿತ್ತೆಂದು ಹೇಳಬಹುದು. ವೈದ್ಯಕೀಯ ಇತಿಹಾಸದಲ್ಲಿ ಇಂಥ ಮಹತ್ವದ ಚರ್ಚಾಕೂಟದ ವಿವರಗಳು ಲಭ್ಯ ಇರದೇ ಇರುವದು ದುರದೃಷ್ಟಕರ.

ಯಾವುದೇ ಲೋಹವನ್ನು ಉಪಯೋಗಿಸಿ ಬಂಗಾರ ಮಾಡುವ ಪ್ರಯತ್ನವೂ ಒಂದು ರೀತಿಯಿಂದ ವೈದ್ಯಕೀಯ ವಿಜ್ಞಾನದಲ್ಲಿಯ ಕಿರುಹೆಜ್ಜೆ ಅನ್ನಬಹುದು; ಯಾಕೆಂದರೆ ಇಲ್ಲಿಯೇ ರಸಾಯನಶಾಸ್ತ್ರ ಪ್ರಾರಂಭವಾಯಿತು. ಬಂಗಾರದಿಂದ ಯಾವದೇ ಕಾಯಿಲೆಯನ್ನು ಗುಣಪಡಿಸಬಹುದೆಂಬ ಭಾವನೆ ಇದ್ದಿತು.

ಬಂಗಾರವನ್ನು 'ಅಧ್ಯಾತ್ಮಕರ ಕಲ್ಲು' (Philosopher's stone) ಎಂದು ಕರೆಯುತ್ತಿದ್ದರು. ಅದನ್ನು ಜೀವನ ರಸ (elixer of life) ಎಂದೂ ಬಗೆದಿದ್ದರು.

ಆದ್ದರಿಂದ ಯಾವದೇ ಪದಾರ್ಥವನ್ನು ಬಂಗಾರಕ್ಕೆ ಮಾರ್ಪಡಿಸಿ ಎಲ್ಲ ಕಾಯಿಲೆಗಳನ್ನು ಗುಣಪಡಿಸುವ ಜೀವನರಸವನ್ನು ಸಂಶೋಧಿಸುವದು ಒಂದು ಗುರಿಯಾಗಿತ್ತು. ಹೀಗೆ ಪ್ರಾರಂಭವಾದ ರಸಾಯನಶಾಸ್ತ್ರ ಅನೇಕ ಹೊಸಪುಟಗಳನ್ನು ತೆರೆಯಿತು.

೧೫ನೇ ಮತ್ತು ೧೬ನೇ ಶತಕಗಳಲ್ಲಿ ಮನುಷ್ಯನ ರೋಗಗಳನ್ನು ಗುಣಪಡಿಸಲು ಬಾಯಿಯಿಂದ ರಸಾಯನಗಳನ್ನು ಕೊಡುವದು ಪ್ರಾರಂಭವಾಯಿತು. ಪದಾರ್ಥಗಳನ್ನು ಬಂಗಾರವನ್ನಾಗಿ ಮಾರ್ಪಡಿಸುವದನ್ನು ಬಿಟ್ಟು ಈಗ ಮಾನವ ನಿಸರ್ಗದಿಂದ ನಿಸರ್ಗವನ್ನು ಸರಿಪಡಿಸುವಲ್ಲಿ ಮಗ್ನನಾದ. ಜಠರವು ರಸಾಯನಕ್ರಿಯೆಯ ಅಂಗವೆಂದು ಬಗೆದ ಮಾನವ ಬಾಯಿಯಿಂದ ಕೊಟ್ಟ ರಸಾಯನಗಳು ಜಠರವನ್ನು ಸೇರಿ, ರೋಗವನ್ನು ನಿವಾರಿಸುವದು ಎಂದು ಊಹಿಸಿದ. ಇಂದಿನ ಔಷಧಿಶಾಸ್ತ್ರಕ್ಕೆ ಇದೇ ಮೊದಲ ಸೋಪಾನ.

ಇದೇ ಸಮಯದಲ್ಲಿ ವೈದ್ಯಶಾಸ್ತ್ರದಲ್ಲಿ ಮಹತ್ತರ ಬದಲಾವಣೆ ತಂದವರಲ್ಲಿ ಅಂಡ್ರಿಯಾಸ್ ವೆಸಾಲಿಯಸ್ (Andreas Vesalius) ಮತ್ತು ಆರಿಒಲಸ್ ಥಿಒಫ್ರೆಟಸ್ ಬೊಂಬಾಸ್ಟಸ್ ವೊನ ಹೋಹೆನ್‌ಹೀಮ(Aureolus Theophratus Bombastus Von Hohenheim) ಉರ್ಫ ಪ್ಯಾರಾಸೆಲ್ಸಸ್ (paraselus) ಮುಖ್ಯರು.

ಅಂಡ್ರಿಯಾಸ್ ವೆಸಾಲಿಯಸ್(೧೫೧೪-೧೫೬೪)ಬ್ರುಸೆಲ್ಸದಲ್ಲಿ ಜನಿಸಿದನು. ಮುಂದೆ ಅಂಗರಚನಾಶಾಸ್ತ್ರ ಪ್ರಾಧ್ಯಾಪಕನಾದ. ಅವನು ಇದ್ದ ಸಂಸ್ಥೆ ಆಗಿನಕಾಲದಲ್ಲಿ ಯುರೋಪದಲ್ಲಿಯೇ ಅತಿ ಪ್ರಮುಖವಾದ ಪಡುವಾ ವೈದ್ಯಕೀಯ ವಿದ್ಯಾಲಯ. ತನ್ನ ಸಂಶೋಧನೆಯನ್ನೊಳಗೊಂಡ ಮತ್ತು ಶರೀರರಚನೆಯ ಚಿತ್ರಗಳನ್ನೊಳಗೊಂಡ 'ದಿ ಫೆಬ್ರಿಕ್ ಹ್ಯುಮನಿ ಕಾರ್ಪೊರಿಸ್ (De Fabrica Humani Corporis) ಎಂಬ ಈ ಗ್ರಂಥ. ಶರೀರ ರಚನಾಶಾಸ್ತ್ರದಲ್ಲಿ ಬರೆದ ಮೊದಲ ಗ್ರಂಥ ಎನ್ನಬಹುದು. ತನಗಿಂತಲೂ ಮೊದಲು ೧೫೦೦ ವರ್ಷಗಳ ಹಿಂದೆ ಗೆಲನ್ (Galen) ಬರೆದ ವಿಚಾರಗಳು ತಪ್ಪು ಎಂದು ಎತ್ತಿ ತೋರಿಸಿದ. ಅಂಡ್ರಿಯಾಸನನ್ನು ಜನರು ತೆಗಳಹತ್ತಿದರು. ಪರಿಣಾಮವಾಗಿ ಅವನು ತನ್ನ ಅಧ್ಯಾಪಕ ವೃತ್ತಿಯನ್ನು ಬಿಡಬೇಕಾಯಿತು; ಆದರೆ ಅಂಗರಚನಾಶಾಸ್ತ್ರ ಅವನನ್ನು ಬಿಡಲಿಲ್ಲ. ಮುಂದೆ ಎರಡು ಶತಕಗಳವರೆಗೆ ಅವನು ಬರೆದ ಅಂಗರಚನಾಶಾಸ್ತ್ರದ ಗ್ರಂಥ ವೈದ್ಯಕೀಯ ಜಗತ್ತಿಗೆ ದಾರಿದೀಪವಾಯಿತು. ಅವನ ವಿಚಾರಗಳು ವೈದ್ಯಕೀಯಕ್ಕೆ ಒಂದು ಹೊಸ ಜೀವ ಮತ್ತು ಕಳೆ ತುಂಬಿದವು.

ಕ್ರಿ.ಶ. ೧೫೪೩, ಸ್ವರ್ಣ ಅಕ್ಷರಗಳಲ್ಲಿ ಬರೆದಿಡಬೇಕಾದ ವರ್ಷ. ಆ ವರ್ಷ ಮೂರು ಗ್ರಂಥಗಳು ಪ್ರಕಟವಾದವು. ಮೇಲೆ ನಮೂದಿಸಿದ ಅಂಡ್ರಿಯಾಸನ ಅಂಗರಚನೆ ಬಗ್ಗೆ ಬರೆದ ಗ್ರಂಥ, ಗ್ರೀಕ ಭಾಷೆಯಿಂದ ಭಾಷಾಂತರಗೊಂಡ ಆರ್ಕಿಮಿಡಿಸ್‌ನ ಗಣಿತ ಮತ್ತು ಭೌತಶಾಸ್ತ್ರದ ಗ್ರಂಥ ಮತ್ತು ನಿಕೋಲಸ್ ಕೋಪರ್ನಿಕಸ್‌ನ ಸೌರಮಂಡಲ ರಚನೆಯ ಬಗ್ಗೆ ಕ್ರಾಂತಿಕಾರಿ ಹೊಸ ವಿಚಾರಗಳ 'ರೆವಲೂಶನ್ ಆಫ್ ದಿ ಹೆವನ್ಲಿ

ಆರ್ಬ್ಸ್‌ (Revolution of the neavenly orbs) ಗ್ರಂಥ. ಪೃಥ್ವಿಯೇ ಸ್ಥಿರವಾಗಿದ್ದು ಸೂರ್ಯ ಮತ್ತು ಗ್ರಹಗಳು ಪೃಥ್ವಿಯ ಸುತ್ತ ತಿರುಗುತ್ತವೆ ಎಂಬ ವಿಚಾರಧಾರೆಯನ್ನು ಬದಲಿಸಿ ಸೌರಮಂಡಲ ರಚನೆಯ ಈಗಿನ ಕಲ್ಪನೆಯನ್ನು ಕೋಪರ್ನಿಕಸ್ ಮಾಡಿಕೊಟ್ಟ.

ಪ್ಯಾರಾಸೆಲ್ಸಸ್ ಔಷಧಿಶಾಸ್ತ್ರದ ಜನಕ ಎಂದು ಕರೆಯಬಹುದು. ಒಂದನೇ ಶತಮಾನದಲ್ಲಿ ಆಗಿಹೋದ ಸೆಲ್ಸಸ್ (Celsus) ರೋಮನ್. ವೈದ್ಯಶಾಸ್ತ್ರ ಬರಹಗಾರನಿಗಿಂತಲೂ ತಾನು ವೈದ್ಯಶಾಸ್ತ್ರದಲ್ಲಿ ಹೆಚ್ಚು ಬಲ್ಲವನೆಂಬ ಅಭಿಪ್ರಾಯ ಹೊಂದಿ ನಡೆದ ಮಹಾನ್‌ವ್ಯಕ್ತಿ. ಸ್ವಿಝರ್‌ಲ್ಯಾಂಡದವನಾದ ಇವನು ಔಷಧಿಶಾಸ್ತ್ರಕ್ಕೆ ಹೊಸದಿಶೆಯನ್ನು ತೋರಿಸಿದ. ಅನೇಕ ಅಜೈವಿಕ (inorganic) ಔಷಧಿಗಳನ್ನು ಇವನು ಜಗತ್ತಿಗೆ ಪರಿಚಯಿಸಿದ. ಇವನೂ ಕೂಡ ಗೆಲನ್‌ನ ವಿಚಾರಗಳನ್ನು ವಿರೋಧಿಸಿದ. ಅವನು ಹೇಳಿದ ಎರಡು ಮಾತುಗಳು ಬಹು ಮುಖ್ಯವಾಗಿವೆ: (೧) ವಿಚಾರ ಮತ್ತು ಕೃತಿ ಎರಡೂ ಒಂದೇ ಆಗಿರಬೇಕು. (೨) ಕೃತಿ ವಿಚಾರಕ್ಕೆ ಅನ್ಯೋನ್ಯವಾಗಿರಬೇಕು ಮತ್ತು ಇಂಥ ಕೃತಿಗಳಿಂದಲೇ ಹೊಸ ವಿಚಾರಗಳು ಉತ್ಪತ್ತಿಯಾಗಬೇಕು.

ದೇಹ ರಚನೆಯ ಸರಿಯಾದ ಕಲ್ಪನೆಯಿಂದ ಶಸ್ತ್ರಕ್ರಿಯೆಶಾಸ್ತ್ರ ಬೆಳೆಯಿತು. ಆಂಬ್ರೊಸ್ ಪೇರ (Ambroise Pare ೧೫೧೦-೧೫೯೦) ಆಧುನಿಕ ಶಸ್ತ್ರಕ್ರಿಯೆಶಾಸ್ತ್ರದ ಪಿತಾಮಹನೆಂದು ಕರೆಯಬಹುದು. ೧೬ನೇ ಶತಮಾನದಲ್ಲಿ ಅಂಧ ಅನುಕರಣೆಗಳು ಮಾಯವಾಗಿ ವೈಜ್ಞಾನಿಕವಾಗಿ ಮತ್ತು ಪ್ರಯೋಗಗಳಿಂದ ಕಂಡುಬಂದ ವಿಚಾರಗಳು ಬೇರು ಬಿಡಹತ್ತಿದವು. ವಿಲಿಯಮ್ ಹಾರ್ವೆ (William Harvey ೧೫೭೮-೧೬೫೭) ಪ್ರಾಯೋಗಿಕ ಸಂಶೋಧನೆಗೆ ಹೆಚ್ಚಿನ ಮಹತ್ವ ಕೊಟ್ಟನು. ಶರೀರದ ಅವಯವಗಳು ಆರೋಗ್ಯದಲ್ಲಿ ಮತ್ತು ಅನಾರೋಗ್ಯದಲ್ಲಿ ಯಾವ ರೀತಿ ಕಾರ್ಯ ಮಾಡುವವು ಎಂಬುದನ್ನು ಕಂಡುಹಿಡಿಯಲು ಪ್ರಯತ್ನ ಮಾಡಿದನು.

ಇದೇ ಸಮಯದಲ್ಲಿ ಅನೇಕ ಪ್ರಯೋಗಗಳು ಜಾರಿಯಲ್ಲಿ ಬಂದವು. ಅದರಲ್ಲಿ ರಕ್ತಪೂರಣೆ (Blood transfusion)ಯೂ ಒಂದು. ರಕ್ತಪೂರಣೆ ವಿಧಾನ ವೈದ್ಯಕೀಯ ಶಾಸ್ತ್ರದಲ್ಲಿಯ ಮಹತ್ವದ ಹೆಜ್ಜೆ. ಆಧುನಿಕಶಾಸ್ತ್ರಗಳು ರಕ್ತವನ್ನು ಬಹುವಿಧವಾಗಿ ಅನೇಕ ದಿಶೆಗಳಿಂದ ಅಭ್ಯಸಿಸಿವೆ. ಇಂದು ರಕ್ತದಾನವು ಸುಲಭ ಹಾಗೂ ಸುರಕ್ಷಿತ ವಿಧಾನವೆಂದು ಎಣಿಸಲ್ಪಟ್ಟಿದೆ ಅಷ್ಟೇ ಏಕೆ, ಇಂದು ರಕ್ತದ ಪ್ರತ್ಯೇಕ ಘಟಕವನ್ನು ಪೂರಣೆ ಮಾಡಬಹುದಾಗಿದೆ. ಆದರೆ ಇದಕ್ಕೂ ಒಂದು ಇತಿಹಾಸವಿದೆ. ೧೭ನೇ ಶತಮಾನದ ಆದಿಭಾಗದಲ್ಲಿ ಒಂದು ಜೀವಿಯ ರಕ್ತವನ್ನು ಇನ್ನೊಂದು ಜೀವಿಗೆ ಕೊಡಬಹುದೆಂಬ ಕಲ್ಪನೆ ಇತ್ತು. ಆ ಗುರಿಯನ್ನು ಸಾಧಿಸಲು ಕೆಲವು ಪ್ರಯತ್ನಗಳು ನಡೆದಿರಬಹುದು. ಇವಕ್ಕೆ ಮ್ಯಾಗ್ನಸ್ ಪೆಚೆಲ್ (೧೬೦೪) ಮತ್ತು ಹೈರೋನಿಯಸ್ ಕಾರ್ಡ್ಯಾನಸ್ (೧೫೦೫-೧೫೭೬) ಎಂಬವರ ಲೇಖನಗಳು ಪುಷ್ಟಿ ಕೊಡುತ್ತವೆ. ಮೊದಲು ಇಂಥ ಪ್ರಯೋಗವನ್ನು ಯಶಸ್ವಿಯಾಗಿ ನಾಯಿಗಳ ಮೇಲೆ ನಡೆಸಲಾಯಿತು. ಆಮೇಲೆ ಒಂದು ಜಾತಿಯ ಪ್ರಾಣಿಯ ರಕ್ತವನ್ನು ಇನ್ನೊಂದು ಜಾತಿಯ ಪ್ರಾಣಿಗೆ ಕೊಡುವ ಪ್ರಯೋಗ ನಡೆಯಿತು. ಕುರಿಯ ರಕ್ತವನ್ನು ನಾಯಿಗೆ ಕೊಟ್ಟರೆ ನಾಯಿಯ ದೇಹದ ಮೇಲೆ ಕುರಿಯ ದೇಹದ ಮೇಲಿರುವಂತೆ ಉಣ್ಣೆ ಬೆಳೆಯಬಹುದೆಂದು ಅಂದಾಜಿಸಿ ಹಾಗೆ ಪ್ರಯತ್ನಿಸಿದರು. ಇಂಥ

ಸಂಗತಿ ಸಾಧ್ಯವಿಲ್ಲ ಎಂಬುದು ಮನವರಿಕೆಯಾದಾಗ ಕುರಿಯ ರಕ್ತವನ್ನು ಮನುಷ್ಯನಿಗೆ ಕೊಡುವ ವಿಧಾನ ಜಾರಿಗೆ ಬಂದಿತು. ಡೆನಿಸ್ ಎಂಬ ಸಾಹಸಿ ೧೬೬೭ರಲ್ಲಿ ಕುರಿಯ ಕುತ್ತಿಗೆಯಲ್ಲಿರುವ ಕಾರೊಟಿಡ್ (Carotid) ರೋಹಿಣಿಯಿಂದ ಸುಮಾರು ೨೫೦ ಮಿ.ಲೀ. ರಕ್ತವನ್ನು ಓರ್ವ ಯುವಕನಿಗೆ ನೀಲ ಮಾರ್ಗದಿಂದ ಪೂರಣಗೊಳಿಸಿದನು. ಇದೊಂದು ಅಪೂರ್ವ ಘಟನೆಯಾಗಿತ್ತು. ಡೆನಿಸ್‌ರು ತಮ್ಮ ವಿಧಾನವನ್ನು ಮುಂದುವರಿಸಿದರು. ಆದರೆ ಫಲಗಳು ವಿಪರೀತವಾಗತೊಡಗಿದವು. ಮೊದಲನೇ ಸಲ ಪೂರಣೆಯಿಂದ ಯಾವ ದುಷ್ಪರಿಣಾಮಗಳು ಆಗದಿದ್ದರೂ ಎರಡನೇ ಸಲ ತೊಂದರೆಗಳು ಕಾಣತೊಡಗುತ್ತಿದ್ದವು. ಮತ್ತು ಇದರಿಂದ ವ್ಯಕ್ತಿಗಳು ಮರಣವನ್ನೂ ಹೊಂದಿದರು. ಆದರೆ ಕೆಲವು ರೋಗಿಗಳು ಗುಣ ಹೊಂದಿದ್ದರಿಂದ ಈ ವಿಧಾನ ಮುಂದೆವರಿಯಿತು. ಡೆನಿಸ್‌ರನ್ನು ಒಮ್ಮೆ ನ್ಯಾಯಾಲಯಕ್ಕೂ ಎಳೆಯಲಾಯಿತು. ಡೆನಿಸ್‌ರು ನಿರಪರಾಧಿಗಳೆಂದು ಸಾರಲಾಯಿತಾದರೂ ಪ್ರಾಣಿಗಳ ರಕ್ತವನ್ನು ಮನುಷ್ಯನಿಗೆ ಕೊಡುವದು ಕಾಯ್ದೆ ಬಾಹಿರವೆಂದು ಸಾರಲಾಯಿತು. ಮುಂದೆ ಕ್ರಿ.ಶ. ೧೯೦೦ರಲ್ಲಿ ರಕ್ತದ ಘಟಕಗಳನ್ನು ಕಂಡುಹಿಡಿಯಲಾಯಿತು ಮತ್ತು ಅದರಂತೆ ರಕ್ತ ಹೆಪ್ಪುಗೆಡದಂತೆ ಶೇಖರಿಸುವ ವಿಧಾನ ಗೊತ್ತಾದಾಗಲೇ ಇಂದಿನ ರಕ್ತಪೂರಣೆ ವಿಧಾನ ಜಾರಿಗೆ ಬಂದದ್ದು.

೧೮೧೯ರಲ್ಲಿ ಫ್ರೆಂಚ ದೇಶದ ಲೆನೆಕ್ (Laennec) ಸ್ಟೆಥೋಸ್ಕೋಪ ಕಂಡು ಹಿಡಿದಿದ್ದೂ ಒಂದು ವಿಶಿಷ್ಟ ಹೆಜ್ಜೆ. ರೋಗಿಯ ಎದೆಗೆ ಕಿವಿ ಹಚ್ಚಿ ಹೃದಯದ ಮಿಡಿತವನ್ನು ಆಲಿಸಿ ಅದರಂತೆ ಶ್ವಾಸೋಚ್ಛ್ವಾಸದ ಶಬ್ದಗಳನ್ನು ಕೇಳಿ ರೋಗನಿಧಾನ ಮಾಡುವ ಪರಿಪಾಠವನ್ನು ಲೆನೆಕ್ ಇಟ್ಟುಕೊಂಡಿದ್ದನು. ಆದರೆ ಒಮ್ಮೆ ಒಬ್ಬ ತರುಣಿ ತನ್ನ ಪ್ರಕೃತಿಯನ್ನು ತೋರಿಸಿಕೊಳ್ಳಲು ಬಂದಾಗ ಲೆನೆಕ್‌ರಿಗೆ ಸಂಕೋಚವಾಯಿತು. ತರುಣಿಯ ಎದೆಗೆ ಕಿವಿ ಹಚ್ಚುವದು ಹೇಗೆ ಎಂದು ವಿಚಾರಮಗ್ನನಾದ ಲೆನೆಕ್‌ನಿಗೆ ಇಬ್ಬರು ಹುಡುಗರು ಒಂದು ಕಟ್ಟಿಗೆ ತುಂಡಿಗೆ ಒಂದು ಕಡೆ ಒಬ್ಬರು. ಇನ್ನೊಂದು ಬದಿಗೆ ಮತ್ತೊಬ್ಬನು ಆಲಿಸುವ ಆಟವಾಡುವದನ್ನು ಕಂಡರು. ಕೂಡಲೇ ಒಂದು ಕಾಗದವನ್ನು ಸುರಳಿ ಮಾಡಿ ಅದನ್ನು ಎದೆಗೆ ಹಚ್ಚಿ ಆಲಿಸಿದನು. ಅಂದೇ ಸ್ಟೆಥೋಸ್ಕೋಪ ಜನ್ಮ ತಳೆಯಿತು. ಲೆನೆಕ್‌ನು ಮುಂದೆ ಕ್ಷಯರೋಗಕ್ಕೆ ತುತ್ತಾದದ್ದು ಒಂದು ದುರದೃಷ್ಟಕರ ಸಂಗತಿ.

೧೮೭೭ರಲ್ಲಿ ಕಾಲರಾ ರೋಗಾಣುವನ್ನು, ೧೮೮೨ರಲ್ಲಿ ಕ್ಷಯರೋಗಾಣುಗಳನ್ನು ಕಂಡುಹಿಡಿದ ರಾಬರ್ಟ್ ಕಾಕ್ (Robert Koch) ವೈದ್ಯಕೀಯ ವಿಜ್ಞಾನಕ್ಕೆ ಹೊಸ ದಿಕ್ಕು ತೋರಿಸಿದನು. ರಾಬರ್ಟ್ ಕಾಕ್ ಮತ್ತು ಲುಯಿಸ್ ಪಾಶ್ಚರ್(Luis Pasteur) ಸೋಂಕು (Infectious) - ರೋಗಗಳು ಹರಡುವ ಬಗೆಗೆ ಹೊಸ ವಿಚಾರಗಳನ್ನು ವೈಜ್ಞಾನಿಕವಾಗಿ ಕಂಡುಹಿಡಿದರು. 'ಸೋಂಕುರೋಗಗಳು ರೋಗಜೀವಾಣುಗಳಿಂದ ಬರುತ್ತವೆ. ಈ ರೋಗಜೀವಾಣುಗಳನ್ನು ಪ್ರಯೋಗ ಶಾಲೆಗಳಲ್ಲಿ ಬೆಳೆಸಬಹುದು. ಮತ್ತು ಈ ರೋಗಜೀವಾಣುಗಳಿಂದ ರೋಗಗಳನ್ನು ಬರಿಸಬಹುದು.' ಇವು ಇವರು ತಮ್ಮ ಪ್ರಯೋಗಗಳಿಂದ ತೋರಿಸಿಕೊಟ್ಟ

ವಿಚಾರಗಳಾಗಿದ್ದವು. ಸೋಂಕು ರೋಗಗಳನ್ನು ನಿಯಂತ್ರಿಸುವಲ್ಲಿ ಇದರಿಂದ ಅನುಕೂಲವಾಯಿತು.

ಚಾರ್ಲ್ಸ್ ಡಾರ್ವಿನ್ (Charles Darwin ೧೮೦೯-೧೮೮೨)ನ ವಿಕಾಸದ ವಿಚಾರಸರಣಿ (Theory of evolution), ಅದರಂತೆ ಗ್ರೆಗರ್ ಮೆಡೆಲ್ (Gregor Mendel ೧೮೨೨-೧೮೮೪)ನ ಅನುವಂಶಿಕ ವಿಧಾನಗಳು (Method of heredity) ಬಗ್ಗೆ ಮಂಡಿಸಿದ ವಿಚಾರಗಳು ಹೊಸ ಕ್ರಾಂತಿಯನ್ನೇ ಎಬ್ಬಿಸಿದವು.

ಮಾರಿ ಬಿಕ್ಯಾಟ (Marie Bichat) ೧೮೦೧ರಲ್ಲಿ ದೇಹದ ಪ್ರತಿ ಅವಯವ ಕಣಜಾಲ(Tissue) ದಿಂದ ಆಗಿದೆಯೆಂದು ಪತ್ತೆ ಹಚ್ಚಿದರು. ಜೋಹಾನೆಸ್ ಮುಲ್ಲರ (Johannes Muller) ೧೮೩೫ರಲ್ಲಿ ಜೀವಕಣ(Cell)ಗಳನ್ನು ವಿವರಿಸಿದರು. ಇದರೊಂದಿಗೆ ಊತಕ್ತ ಶಾಸ್ತ್ರ (Histology) ಪ್ರಾರಂಭವಾಯಿತು. ೧೮೩೮ರಲ್ಲಿ ಸ್ಲೆಡೆನ್ (Schleiden) ನಡೆಸಿದ ಪ್ರಯೋಗಗಳಿಂದ ಸಸ್ಯಗಳ ಜೀವಕಣಗಳ ಕಾರ್ಯವಿಧಾನದ ಪರಿಚಯವಾದರೆ. ೧೮೩೯ರಲ್ಲಿ ಇದೇ ತೆರನಾದ ಪ್ರಯೋಗಗಳಿಂದ ಸ್ವಾನ್ (Schwann) ಪ್ರಾಣಿಗಳಲ್ಲಿಯ ಜೀವಕಣಗಳ ಕಾರ್ಯವಿಧಾನಗಳನ್ನು ಪರಿಚಯಿಸಿದ. ಮುಂದೆ ರುಡಾಲ್ಫ ವಿರ್ಚೊ (Rudolf Virchow ೧೮೨೧-೧೯೦೨) ರೋಗಗಳಲ್ಲಿ ಜೀವಕಣಗಳ ಪಾತ್ರವನ್ನು ಕಂಡುಹಿಡಿದನು.

೧೮೯೫ರಲ್ಲಿ ಪ್ರೊಫೆಸರ್ ರೋಂಜನ್ (Roentgen) ಕ್ಷ ಕಿರಣಗಳನ್ನು ಕಂಡುಹಿಡಿದರೆ, ರೋಗನಿದಾನದಲ್ಲಿ ಕ್ಷ ಕಿರಣಗಳ ಬಳಕೆ ೧೯೦೪ರಲ್ಲಿ ಪ್ರಾರಂಭವಾಯಿತು.

ಜಗತ್ತು ಇಪ್ಪತ್ತನೇ ಶತಮಾನದಲ್ಲಿ ಕಾಲಿಡುತ್ತಲೇ ಅನೇಕ ಹೊಸ ವಿಧಾನಗಳನ್ನು ಕಂಡು ಹಿಡಿಯಲಾಯಿತು. ಎರಡು ಮಹಾಯುದ್ಧಗಳು ವಿನಾಶಕಾರಿಯಾದರೂ. ವೈದ್ಯಕೀಯ ವಿಜ್ಞಾನಕ್ಕೆ ಹೊಸ ತಿರುವು ಕೊಟ್ಟವು. ೧೯೨೮ರಲ್ಲಿ ಅಲೆಗ್ಝಾಂಡರ ಫ್ಲೇಮಿಂಗ (Alexander Fleming) ಪೆನಿಸಿಲಿನ್ ಕಂಡು ಹಿಡಿದರೆ ೧೯೪೭ರಲ್ಲಿ ಬಾರ್ಕಹೋಲ್ಡರ್ (Bark Holder) ಕ್ಲೊರೊಮೈಸೆಟಿನ್ ಕಂಡು ಹಿಡಿದ. ಇಂದು ಜೀವಾಣುನಾಶಕ (Antibacterial) ಔಷಧಿಗಳ ದೊಡ್ಡ ಸರಮಾಲೆಯೇ ನಿರ್ಮಿತವಾಗಿದೆ. ಫೆಡರಿಕ್ ಬ್ಯಾಂಟಿಂಗ್ (Ffedrick Banting) ಮತ್ತು ಚಾರ್ಲ್ಸ ಬೆಸ್ಟ್ (Charles Best) ಮಧುಮೇಹಿಗಳಿಗೆ ಬೇಕಾದ ಇನ್ಸುಲಿನ್‌ನ್ನು ೧೯೨೧ರಲ್ಲಿ ಕಂಡುಹಿಡಿದರು.

ಎರಡೂ ಮಹಾಯುದ್ಧಗಳು ಮುಗಿದ ಮೇಲೆ ಸಂಯುಕ್ತರಾಷ್ಟ್ರ ಸಂಸ್ಥೆ (UNO) ಮತ್ತು ಅದರಡಿಯಲ್ಲಿ ವಿಶ್ವಾರೋಗ್ಯ ಸಂಸ್ಥೆಗಳು (WHO) ಜಾಗತಿಕವಾಗಿ ವೈದ್ಯ ವಿಜ್ಞಾನಕ್ಕೆ ನೆರವು ನೀಡುತ್ತಿವೆ.

ಇಂದು ಗಣಕಶಾಸ್ತ್ರವು ವೈದ್ಯಶಾಸ್ತ್ರಕ್ಕೆ ಬಹಳೇ ಅನುವು ಮಾಡಿಕೊಟ್ಟಿವೆ. ಅದರಂತೆ ಅಣು ವೈದ್ಯಶಾಸ್ತ್ರ ಆಧುನಿಕ ಶಾಸ್ತ್ರಗಳಲ್ಲಿ ಒಂದಾಗಿವೆ. ಈಗ ನ್ಯೂಕ್ಲಿಯರ

ರಿಯಾಕ್ಟರಿನಲ್ಲಿ ಹಲವಾರು ಐಸೋಟೋಪಗಳನ್ನು ತಯಾರಿಸಲು ಸಾಧ್ಯವಾಗಿದೆ. ವಾಸ್ತವವಾಗಿ ಈ ಐಸೋಟೋಪಗಳು ದೇಹದ ವಿಭಿನ್ನ ಭಾಗಗಳಲ್ಲಿ ನೆಲೆಯೂರಿ, ಸಾಂದ್ರತೆಗಳಿಸಲು ಗುಣವೇ ರೋಗ ಪತ್ತೆಗೆ ನೆರವಾದದ್ದು. ಇವನ್ನು ರೋಗ ಪತ್ತೆಗೆ ಮಾತ್ರವಲ್ಲ, ರೋಗ ಚಿಕಿತ್ಸೆ ಮತ್ತು ರೋಗ ಹರಡಿಕೆಯನ್ನು ಅಂದಾಜು ಮಾಡಲು ಕೂಡ ಬಳಸಬಹುದು. ಚುಚ್ಚುಮದ್ದಿನ ಮೂಲಕ ನೀಡುವ ಈ ಐಸೋಟೋಪಗಳು ದೇಹದ ಮಾಮೂಲು ಕೆಲಸಗಳಿಗೆ ಯಾವ ತೊಂದರೆಯನ್ನೂ ಉಂಟುಮಾಡುವದಿಲ್ಲ. ನಿರ್ದಿಷ್ಟ ಅವಧಿಯೊಳಗೆ ಅವು ದೇಹದಿಂದ ವಿಸರ್ಜಿತವಾಗುತ್ತವೆ. ಐಸೋಟೋಪಗಳನ್ನು ಅವು ಯಾವುದೇ ರೀತಿಯ ಅಪಾಯ ಮಾಡಲಾರದಂತೆ ಉಪಯೋಗಿಸಲು ಬರುತ್ತದೆ. ಅಂತೆಯೇ ಅದನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಸಾಧ್ಯವಾಗಿದೆ.

ಅರ್ಧ ಶತಮಾನದ ಹಿಂದೆ ರೋಗ ಪತ್ತೆಗಳಲ್ಲಿ ಮುಖ್ಯವಾಗಿ ಬಳಸಲಾಗುತ್ತಿದ್ದುದು ಕ್ಷ-ಕಿರಣ. ಆದರೆ ಮೃದು ಅಂಗಾಂಗಗಳಾದ ಯಕೃತ್ತು, ಮೂತ್ರಪಿಂಡ ಅವುಗಳ ಕ್ಷ-ಕಿರಣ ತೆಗೆಯಲು ಸಾಧ್ಯ ಇರಲಿಲ್ಲ. ಆದರೆ ಈಗ ಒಂದೊಂದು ಅಂಗಕ್ಕೂ ಪ್ರತ್ಯೇಕವಾದ ಐಸೋಟೋಪಗಳನ್ನು ಮತ್ತು ಅದರ ಜೊತೆಗೆ ಹೊಂದಿಸುವಂಥ ಔಷಧಿಗಳನ್ನು ಕಂಡುಹಿಡಿದಿದ್ದಾರೆ. ಅವುಗಳ ನೀಡಿಕೆಯಿಂದಾಗಿ ಆಯಾ ಅಂಗಗಳ ಕಾರ್ಯವಿಧಾನ, ತೊಂದರೆಗಳು ಮತ್ತು ಕಾಯಿಲೆಗಳನ್ನು ನಿಖರವಾಗಿ ಪತ್ತೆ ಹಚ್ಚುವದು ಸಾಧ್ಯವಾಗಿದೆ. ಇದಕ್ಕೆ ಬಳಸುವ ಯಂತ್ರಗಳಿಗೆ ಕಂಪ್ಯೂಟರ್ ಅಳವಡಿಕೆಯಾಗಿರುವವರಿಂದ ಪ್ರತಿಯೊಂದೂ ಸ್ಪಷ್ಟವಾಗಿ ಅತಿ ಶೀಘ್ರವಾಗಿ ನಮಗೆ ಲಭಿಸುತ್ತವೆ.

ಚಿಕ್ಕ ಕ್ಷ-ಕಿರಣ ಚಿತ್ರಗಳಿರುವ ಹಾಗೆ ಕಾಣುವ ಈ ಸೌಲಭ್ಯಕ್ಕೆ 'ಸ್ಕ್ಯಾನ್' ಅನ್ನುತ್ತಾರೆ. ಮೆದುಳು, ಶ್ವಾಸಕೋಶ, ಯಕೃತ್ತು, ಮೂಳೆಗಳು ಮುಂತಾದ ಅವಯವಗಳ 'ಸ್ಕ್ಯಾನ್' ತೆಗೆಯಬಹುದು. ಕಂಪ್ಯೂಟರೈಜ್ಡ ಟೋಪ್ರೋಗ್ರಾಫಿ ಅಥವಾ ಸಿ.ಟಿ. ಸ್ಕ್ಯಾನ್ ಇಂದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಅದರಂತೆ ಮೆಗ್ನೆಟಿಕ್ ರಿಸೊನನ್ಸ ಇಮೇಜಿಂಗ ಅಥವಾ ಎಮ್.ಆರ್.ಐ. ಇದು ಇನ್ನೂ ಮುಂದುವರಿದ ವಿಧಾನ. ದೇಹದಲ್ಲಿ ಎಷ್ಟೇ ಸೂಕ್ಷ್ಮವಾದ ಗಂಟುಗಳನ್ನು ಇದರಿಂದ ಪತ್ತೆಹಚ್ಚಬಹುದು.

ಹೃದಯ ಬಡಿತವನ್ನು ನಿಲ್ಲಿಸಿ, ರಕ್ತಚಲನೆಯನ್ನು 'ಹೃದಯ-ಪುಪ್ಪಸ ಯಂತ್ರಕ್ಕೆ (Heart-Lung Machine) ಒಪ್ಪಿಸಿ, ಹೃದಯದ ಮೇಲೆ ಶಸ್ತ್ರಕ್ರಿಯೆ ಮಾಡುವ ವಿಧಾನವನ್ನು ೧೯೬೪ರಲ್ಲಿ ಮೈಕೆಲ್ ಡಿ ಬ್ಯಾಕಿ (Michel de Bakey) ಕಂಡು ಹಿಡಿದನು. ಜಗತ್ತನ್ನೇ ದಿಗ್ಭ್ರಮೆಗೊಳಿಸಿದ ಹೃದಯ ಕಸಿಯನ್ನು (Heart Transplant) ದಕ್ಷಿಣ ಆಫ್ರಿಕಾದಲ್ಲಿ ಕ್ರಿಶ್ಚಿಯನ್ ಬರ್ನಾರ್ಡ ಯಶಸ್ವಿಯಾಗಿ ಮಾಡಿದನು. ಇಂದು ಹೃದಯದ ರಕ್ತನಾಳಗಳನ್ನು ಆಯುರ್ವೇದದಲ್ಲಿ ಸಾಕಷ್ಟು ಪರಿಣಾಮಕಾರಿ ಔಷಧಿಗಳಿದ್ದರೂ, ಅಲೋಪತಿಯಲ್ಲಿದ್ದ ಕೆಲವು ಉತ್ತಮ ಮೌಲ್ಯಮಾಪನ (Parameters)ಗಳನ್ನು ಅಳವಡಿಸಿಕೊಂಡು ಆಯುರ್ವೇದ ಔಷಧಗಳ ಬಗ್ಗೆ ಹೆಚ್ಚಿನ ಅಭ್ಯಾಸ ನಡೆಸುವದು ಉತ್ತಮ. ಇದರಿಂದ ರೋಗಿಯ ಚಿಕಿತ್ಸೆಯಲ್ಲಿ ಅನುಕೂಲವಾಗುವದು.

'೨೦೦೦ನೇ ವರ್ಷಕ್ಕೆ ಎಲ್ಲರಿಗೂ ಆರೋಗ್ಯ' ಇದು ವಿಶ್ವ ಆರೋಗ್ಯ ಸಂಸ್ಥೆ ಕೊಟ್ಟ ಕರೆ. ಆರೋಗ್ಯದ ಅರ್ಥವನ್ನು ಇಂದು ವಿಸ್ತರಿಸಲಾಗಿದೆ. ಆರೋಗ್ಯ ಅಂದರೆ ಕೇವಲ ದೈಹಿಕ ಆರೋಗ್ಯ ಅಲ್ಲ; ಆರೋಗ್ಯ ಅಂದರೆ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಆರೋಗ್ಯ ಎಂಬ ಅರ್ಥ. ಭಾರತದಂಥ ದೇಶದಲ್ಲಿ ದೈಹಿಕ ಅನಾರೋಗ್ಯ ಹೆಚ್ಚಿರಬಹುದು; ಆದರೆ ಆರ್ಥಿಕವಾಗಿ ಮುಂದುವರಿದ ದೇಶಗಳಲ್ಲಿ ಮಾನಸಿಕ ಮತ್ತು ಸಾಮಾಜಿಕ ಅನಾರೋಗ್ಯ ಹೆಚ್ಚಾಗಿದೆ. ಇದಕ್ಕೆ ಆಯಾ ದೇಶದ ಆರ್ಥಿಕ ಸ್ಥಿತಿ ಅಷ್ಟೇ ಕಾರಣವಾಗಿರದೇ ಆಯಾ ದೇಶದ ಸಂಸ್ಕೃತಿ ಕೂಡ ಕಾರಣೀಭೂತವಾಗಿದೆ. ಶಾಂತಿಗಾಗಿ ನೋಬೆಲ್ ಪ್ರಶಸ್ತಿ ಪಡೆದ ತಾಯಿ ಥೆರೇಸಾ ಅಮೇರಿಕಾದಲ್ಲಿ ಒಂದು ಮಾತನ್ನು ಹೇಳಿದರು. ಅದೇನೆಂದರೆ. "ಭಾರತೀಯರು ಕಡುಬಡವರಿರಬಹುದು. ಆದರೆ ಅವರು ಆರ್ಥಿಕರೀತಿಯಿಂದ ಬಡವರೇ ಹೊರತಾಗಿ ಸಂಸ್ಕೃತಿಯಿಂದಲ್ಲಾ. ನೀವು ಅಂದರೆ ಅಮೇರಿಕನ್‌ರು ಮುಂದುವರಿದವರು; ಆದರ ಅರ್ಥ ನೀವು ಕೇವಲ ತಾಂತ್ರಿಕ ಮತ್ತು ಆರ್ಥಿಕವಾಗಿ ಮುಂದುವರಿದಿದ್ದೀರಿ ಹೊರತಾಗಿ ನೀವು ಮಾನಸಿಕ ಮತ್ತು ಸಾಮಾಜಿಕ ಕಾಯಿಲೆಯಿಂದ ಬಳಲುತ್ತಿದ್ದೀರಿ. ಆದುದರಿಂದ ನಿಮ್ಮ ಬಗ್ಗೆ ನನಗೆ ಭಾರತೀಯರಿಗಿಂತ ಹೆಚ್ಚಿನ ಅನುಕಂಪ ಮತ್ತು ಕನಿಕರ ಇದೆ!" ಇದನ್ನು ಇಲ್ಲಿ ಉದಾಹರಿಸಲು ಕಾರಣವೆಂದರೆ ವೈದ್ಯಶಾಸ್ತ್ರಕ್ಕೆ ಇಂದು ಜಗತ್ತಿನ ಆರೋಗ್ಯ ಸಮಸ್ಯೆಗಳ ವಿಪಾರ್‍ಯಾಸಗಳನ್ನು ಎದುರಿಸಬೇಕಾಗಿದೆ. ಹೃದಯಶಾಸ್ತ್ರ (Cardiology), ಪುಪ್ಪುಸಶಾಸ್ತ್ರ (Pulmology), ನರಮಂಡಳ ಶಾಸ್ತ್ರ (Neurology) - ಹೀಗೆ ವೈದ್ಯಶಾಸ್ತ್ರ ಅನೇಕ ಉಪಶಾಸ್ತ್ರಗಳಲ್ಲಿ ಮುನ್ನಡೆದಿದ್ದರೆ. ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳೂ ವೈದ್ಯಶಾಸ್ತ್ರದ ಪರಿಮಿತಿಯಲ್ಲಿ ಬಂದಿವೆ. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರಗಳನ್ನು ವೈದ್ಯಶಾಸ್ತ್ರ ಹೇಗೆ ಕಂಡುಕೊಳ್ಳುತ್ತದೆ ಎಂಬುದನ್ನು ಮುಂದಿರುವ ಸಮಯವೇ ಹೇಳಬಲ್ಲದು! ಕಸಿ ಮಾಡುವದು 'ಬಾಯ್ ಪಾಸ್ ಸರ್ಜರಿ'ಯೆಂದೇ ಎಲ್ಲರಿಗೂ ಪರಿಚಯವಾಗಿದೆ. ಹೃದಯವನ್ನು ಮುಟ್ಟದೇ ರಕ್ತನಾಳಗಳಲ್ಲಿ ನಳಿ (Catheter) ಸೇರಿಸಿ ಹೃದಯದ ರಕ್ತನಾಳಗಳಲ್ಲಿಯ ಅಡೆತಡೆಗಳನ್ನು ಸರಿಪಡಿಸುವ ವಿಧಾನ (Angioplasty) ಬಂದಿದೆ. ಈ ವಿಧಾನದಲ್ಲಿ ರೋಗಿ ಎಚ್ಚರವಾಗಿಯೇ ಇರುವದು ಒಂದು ವಿಶಿಷ್ಟ.

ಮೈಲಿಬೇನೆಯಂಥ ರೋಗಗಳು ಮಾಯವಾಗಿದ್ದರೆ (೧೯೮೦ ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜಗತ್ತಿನಲ್ಲಿ ಮೈಲಿ ಬೇನೆ ನಿರ್ಮೂಲನೆ ಹೊಂದಿತೆಂದು ಪ್ರಕಟಿಸಿತು), ಏಡ್ಸ(AIDS)ದಂಥ ರೋಗಗಳು ತಲೆ ಎತ್ತುತ್ತಿವೆ. ಇಂದು ಜೀವಕಣಮಟ್ಟದಲ್ಲಿ (Cellular level) ಸಂಶೋಧನೆ ನಡೆದಿದೆ. ರೋಗನಿರೋಧಶಾಸ್ತ್ರ (immumology) ಒಂದು ಉನ್ನತಮಟ್ಟವನ್ನು ತಲುಪಿದೆ. ವಂಶವಾಹಿಶಾಸ್ತ್ರ(Genetics)ದ ಬಗ್ಗೆ ಸಾಕಷ್ಟು ತಿಳುವಳಿಕೆ ಉಂಟಾಗಿದ್ದು. ಅನೇಕ ರೋಗಗಳನ್ನು ಪ್ರತಿಬಂಧಿಸುವಲ್ಲಿ ಮತ್ತು ಗುಣಪಡಿಸುವಲ್ಲಿ ಜೆನೆಟಿಕ್ ಎಂಜಿನಿಯರಿಂಗ ಕಾರ್ಯ ಪ್ರವೃತ್ತವಾಗಿದೆ.

ಈ ಎಲ್ಲ ವಿಷಯಗಳನ್ನು ಗಮನಿಸಲಾಗಿ ಮೂಢನಂಬಿಕೆಗಳಿಂದ ಪ್ರಾರಂಭವಾದ ವೈದ್ಯಕೀಯ ಶಾಸ್ತ್ರ ಎಷ್ಟು ಮುಂದುವರಿದಿದೆ ಎಂಬುದರ ಕಲ್ಪನೆ

ಬರುವದು. ವೈದ್ಯರಿಗೆ ವೈದ್ಯಕೀಯಶಾಸ್ತ್ರದ ಮುನ್ನಡೆ ಒಂದು ವರದಾನ. ಯಾವದೇ ರೋಗದ ನಿದಾನ ಮಾಡುವದು ಬಹಳೇ ಸುಲಭವಾಗಿದೆ. ಆದರೆ ವೈದ್ಯಕೀಯಶಾಸ್ತ್ರ ಎಷ್ಟು ಮುಂದುವರೆದಿದೆಯೋ ಅಷ್ಟು ರೋಗಗಳ ಕಡೆಗೆ ಗಮನ ಹರಿದಿದೆಯೇ ಹೊರತಾಗಿ ರೋಗಿಯೂ ಒಬ್ಬ ಮನುಷ್ಯ ಎಂಬ ಅಂಶವನ್ನು ಕಡೆಗಣಿಸಲಾಗುತ್ತಿದೆ. ರೋಗಿಯನ್ನು ಚಿಕಿತ್ಸೆ ಮಾಡಬೇಕೇ ಹೊರತಾಗಿ ರೋಗವನ್ನಲ್ಲ!ಇದೇ ರೀತಿಯಾಗಿ ರೋಗಿ ವೈದ್ಯನ ಕಡೆಗೆ ಬಂದಾಗ, ವೈದ್ಯ ರೋಗಿಯನ್ನು ಮೊದಲು ಚೆನ್ನಾಗಿ ತಪಾಸಿಸಿ ಆಮೇಲೆ ರೋಗಿಗೆ ರಕ್ತ, ಕ್ಷ-ಕಿರಣಗಳ ಅವಶ್ಯಕತೆ ಇದೆಯೋ ಹೇಗೆ ಎಂಬುದನ್ನು ನಿರ್ಣಯಿಸಬೇಕು. ಆದರೆ ಈಗ ಬಹಳಷ್ಟು ವೈದ್ಯರು ರೋಗವಿಧಾನದಲ್ಲಿ ಲಭ್ಯವಿದ್ದ ಉಪಕರಣಗಳಿಂದಾಗಿ, ಈ ಉಪಕರಣಗಳ ಮೇಲೆಯೇ ಹೆಚ್ಚಾಗಿ ಅವಲಂಬಿಸುವ ಪರಿಪಾಠ ಪ್ರಾರಂಭ ಮಾಡಿಕೊಂಡಿದ್ದಾರೆ. ಈ ಕಾರಣಗಳಿಂದ ಇಂದು ವೈದ್ಯ ಚಿಕಿತ್ಸೆ ಬಹಳಷ್ಟು ದುಬಾರಿಯಾಗಿದೆ.

ಆಧಾರ ಗ್ರಂಥಗಳು

೧. 'ದಿ ಆರ್ಟ ಆ್ಯಂಡ ಸಾಯನ್ಸ ಆಫ ಮೆಡಿಸಿನ್ ಥ್ರೂದ ಏಜೆಸ್'': ಲೇಖಕರು – ಪಿ.ಎನ್. ಲಾಹಾ – ಜರ್ನಲ್ ಆಫ್ ದಿ ಫಿಜಿಸಿಯನ್ಸ ಆಫ್ ಇಂಡಿಯಾ – ವ್ಯಾಲ್ಯುಮ ೨೯ ಸಪ್ಟೆಂಬರ್ ೧೯೮೧.

೨. ''ಮ್ಯಾನ, ಮೆಲೆಡಿ ಆ್ಯಂಡ ಮೆಡಿಸಿನ್'': ಲೇಖಕರು – ಪಿ.ಎನ್. ಲಾಹಾ – ಜರ್ನಲ ಆಫ್ ದಿ ಫಿಜಿಸಿಯನ್ಸ್ ಆಫ್ ದಿ ಇಂಡಿಯಾ – ವ್ಯಾಲ್ಯುಮ ೨೩ ಎಪ್ರಿಲ ೧೯೭೫.

೩. ಟೆಕ್ಸ್ಟ ಬುಕ್ ಆಫ್ ಟುಬರಕ್ಯುಲೋಸಿಸ್-ಟ್ಯುಬಾರಕ್ಯುಲೋಸಿಸ್ ಅಸೋಸಿಯೇಶನ್ ಆಫ್ ಇಂಡಿಯಾ.

೪. ವೈದ್ಯ ಪದಕೋಶ: ಡಿ.ಎಸ್. ಶಿವಪ್ಪ

೫. 'ರಕ್ತದಾನ': ಲೇಖಕರು - ಎಸ್.ಜೆ. ನಾಗಾಲೋಟಿಮಠ – ಕನ್ನಡ ಅಧ್ಯಯನಪೀಠ, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೬. ''ಕ್ಯಾನ್ಸರ್ ಜಗತ್ತು'': ಲೇಖಕರು - ಅನುಪಮಾ ನಿರಂಜನ ಡಿ.ವಿ.ಕೆ ಮೂರ್ತಿ ಮೈಸೂರು ೪ : ೧೯೯೦.

೭. ಪಾರಥೀಯರ ಆ್ಯಂಡ್ ದಿ ಆರ್ಟ್ ಆಫ್ ಹೀಲಿಂಗ : ಲೇಖಕರು - ಮೇಜರ ಜನರಲ್ ಎಸ್.ಎಲ್. ಭಾಟಿಯಾ ೧೯೭೦.

ಅನುವಾದಿತ ಕವನಗಳು

—ಬುದ್ದಣ್ಣ ಹಿಂಗಮಿರೆ

ಮುಗುಳು

ಒಮ್ಮೊಮ್ಮೆ ನಾ ಕೌತುಕದಲ್ಲಿ ಮುಳುಗಿ ಹೋಗುತ್ತೇನೆ.
ನನಗೆ ಸಿಕ್ಕಿರುವ ಸೌಲಭ್ಯಗಳು ಒಮ್ಮೊಮ್ಮೆ
ಉಸಿರುಗಟ್ಟಿಸಿ ಕೊಲ್ಲುತ್ತವೆ ನನ್ನನ್ನು.
ಸುಡುತ್ತೇನೆ, ಸುಟ್ಟುಕೊಳ್ಳುತ್ತೇನೆ ಸಷ್ಮತೆಗಾಗಿ ನನ್ನನ್ನು.
ಹೊಸ ಗೆಳೆಯರು, ಹೊಸ ಮುಖಗಳು.
ಸ್ಥಳಗಳು,
ಹೊರಗಿರಬಯಸುತ್ತೇನೆ ಇವುಗಳಿಂದ.
ನನಗೆ ಬೇಕಾಗಿರುವುದು ಇಷ್ಟೆ!
ಉಳಿಸಿಕೊಳ್ಳುವದು ಹೊಸತನವನ್ನು.
ಆದರೆ ನೀ,
ಪ್ರೀತಿಯೆ, ನೀನೆ ಹೆಚ್ಚು ಪ್ರಿಯಳು ಎಲ್ಲಕ್ಕಿಂತಲೂ
ಮನ್ನಿಸುವದಿಲ್ಲವೆ ನಾನು ಮನಸ್ಸಿಲ್ಲದೆಯೆ
ಎಲ್ಲ ಗೋಡೆಗಳನ್ನು, ರಸ್ತೆಗಳನ್ನು, ಕಲ್ಲುಗಳನ್ನು
ಎಲ್ಲ ಥರದ ರಾಡಿಯನ್ನು, ಮಂಜು ಮತ್ತು ಹಿಮವನ್ನು*

ಫೀನಿಕ್ಸ್ ಪಕ್ಷಿಗಳು

ಕ್ರೀಡೆಯಾಡುತ್ತಿವೆ ಫೀನಿಕ್ಸ್ ಪಕ್ಷಿಗಳು ಕಟ್ಟೆ ಮೇಲೆ
ಹಾರಿಹೋದ ಮೇಲೆ ಫೀನಿಕ್ಸ್ ಪಕ್ಷಿಗಳು
ಹರಿಯುತ್ತಿದೆ ನದಿಯೊಂದೇ.
ಹರಡಿಕೊಂಡಿದೆ ಕಪ್ಪು ರಸ್ತೆಯ ಮೇಲೆ
ಹೂ ಮತ್ತು ಹುಲ್ಲು.

* ಮೂಲ: 'The Plunge' ಕವನ

‘ಗೋ’ನ ರಾಜವಂಶದ ಮನೆತನ ಇದ್ದ ಸ್ಥಳದಲ್ಲಿ.
ಅಲ್ಲಿವೆ ಮಿರಿಮಿರಿ ಮಿಂಚುವ ಬಟ್ಟೆ ಮತ್ತು
ಷಿನ್‌ನ ಟೊಪ್ಪಿಗೆಗಳು ಗುಡ್ಡಗಳ ತಳದಲ್ಲೀಗ
ಬಿದ್ದಿವೆ ಮೂರು ಪರ್ವತಗಳು ದೂರದ ಸ್ವರ್ಗದಿಂದ.
ಸೀಳುತ್ತದೆ ಎರಡೂ ಪ್ರವಾಹಗಳನ್ನು
ಬಿಳಿಯ ನಡುಗಡ್ಡೆಯೊಂದು.
ಕವಿದಿವೆ ಮೋಡಗಳು ಸೂರ್ಯನನ್ನು
ಉನ್ನತ ಆಕಾಶದಲ್ಲಿ
ಕಾಣಿಸುವುದಿಲ್ಲ ಈಗ ದೂರದ ಚೋಅನ್ ನಗರ.
ಆವರಿಸುವುದು ವ್ಯಸನ ನನ್ನನ್ನು *

ಎರಡು ಶಿಲಾಲೇಖ

ಒಂದನೆಯ ಫೂ ಪ್ರೀತಿಸಿದ ಎತ್ತರದ
ಮೋಡಗಳನ್ನು ಮತ್ತು ಗುಡ್ಡಗಳನ್ನು.
ಪಾಪ. ಆಲ್ಕೊಹಾಲ್ ಕುಡಿದು ಸತ್ತನವನು.

ಲೀಪೊ

ಮತ್ತು ಲೀಪೊ ಕೂಡ ಸತ್ತನು ಕುಡಿಕುಡಿದು
ಓಡಿಯಲೆತ್ನಿಸಿದನವನು
ಹಳದಿ ಬಣ್ಣದ ನದಿಯಲ್ಲಿ ತೇಲುವ
ಚಂದ್ರನನ್ನು.

---

*ಮೂಲ: ‘The City of Choan’ ಕವನ

ಕೆಳದಿ : ಕನ್ನಡ ಧಾರ್ಮಿಕಸಾಹಿತ್ಯ

—ಬಿ. ಆರ್. ಹಿರೇಮಠ

ವಿಜಯನಗರೋತ್ತರ ವೀರಶೈವ ಅರಸುಮನೆತನಗಳ ಸಮಗ್ರ ಅಧ್ಯಯನ. ಬರೆವಣಿಗೆ ನಮ್ಮಲ್ಲಿ ಬಹಳಷ್ಟು ಅಲಕ್ಷಿತವಾಗಿದೆ. ಈ ಅರಸುಮನೆತನಗಳು ನಾಡಿನ ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹಾಗೂ ವಾಸ್ತುಶಿಲ್ಪ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಅಪಾರ. ಅನುಪಮ. ಹೀಗಾಗಿ ಕರ್ನಾಟಕದ ಇಂಥ ವೀರಶೈವ ಅರಸುಮನೆತನಗಳ ತಲಸ್ಪರ್ಶಿಯಾದ ಅಧ್ಯಯನ ನಡೆಯುವುದು ಇಂದು ತೀರ ಅವಶ್ಯ ಹಾಗೂ ಉಪಯುಕ್ತವೆನಿಸುತ್ತದೆ. ಇದರಿಂದ ಸಂಸ್ಕೃತಿಯ ಪರಿಚಯವಾಗುತ್ತದೆ. ಅರಸುಮನೆತನಗಳ ಅಧ್ಯಯನವೆಂದರೆ. ನಿಜವಾದ ಅರ್ಥದಲ್ಲಿ ನಾಡಿನ ಸಂಸ್ಕೃತಿಯ ಅಧ್ಯಯನವೆಂದೇ ಅರ್ಥ. ಈ ಅವಧಿಯ ವೀರಶೈವ ಅರಸುಮನೆತನಗಳಲ್ಲಿ ಅತ್ಯಂತ ಪ್ರಮುಖವಾದುದು ಕೆಳದಿ. ಸಾಮ್ರಾಜ್ಯದ ಅವಧಿಯುದ್ದಕ್ಕೂ ವೀರಶೈವಕ್ಕಾಗಿಯೇ ಹೆಚ್ಚಾಗಿ ಕಾರ್ಯ ಮಾಡಿದ ಮಧ್ಯಕಾಲೀನ ಕರ್ನಾಟಕದ ಅತ್ಯಂತ ದೊಡ್ಡ ವೀರಶೈವ ಅರಸುಮನೆತನಗಳಲ್ಲಿ ಕೆಳದಿ ಪ್ರಥಮಪಂಕ್ತಿಯಲ್ಲಿ ನಿಲ್ಲುತ್ತದೆ. ಈ ಅರಸುಮನೆತನ ಮಲೆನಾಡು. ಪಶ್ಚಿಮಘಟ್ಟದ ಮೇಲೆ ಹಾಗೂ ಕೆಳಗೆ ವೀರಶೈವ ಧರ್ಮವನ್ನು ಸಮರ್ಥವಾಗಿ. ಸಮರ್ಪಕವಾಗಿ ಪ್ರಸಾರ ಮಾಡಿತು. ಕರ್ನಾಟಕದ ಒಳ-ಹೊರಗೆ ವೀರಶೈವ ಮಠಗಳನ್ನು ವ್ಯವಸ್ಥಿತವಾಗಿ ಸ್ಥಾಪಿಸಿತು. ರಾಜಗುರು. ಧರ್ಮಗುರು ಹಾಗೂ ಆಸ್ಥಾನಕವಿಗಳ ಮೂಲಕ ಧಾರ್ಮಿಕ ಸಾಹಿತ್ಯ ನಿರ್ಮಾಣವಾಗುವಂತೆ ಪ್ರೋತ್ಸಾಹಿಸಿತು. ರಾಜಾಶ್ರಯ ನೀಡಿತು. ಹೀಗೆ ಕೆಳದಿ ಅರಸುಮನೆತನ ಕರ್ನಾಟಕದಲ್ಲಿ. ಅದರಲ್ಲಿಯೂ ಮಲೆನಾಡು ಪ್ರದೇಶದಲ್ಲಿ 'ವೀರಶೈವ ವಾತಾವರಣ ನಿರ್ಮಾಣ ಕಾರ್ಯ' ಕೈಕೊಂಡಿತು. ಇದರಿಂದ ಹಂಪೆ. ಗುಬ್ಬಿ. ಎಡೆಯೂರು. ಗೂಳೂರು. ಗುಮ್ಮಳಾಪುರಗಳ ತರುವಾಯ. ಕೆಳದಿ ವೀರಶೈವದ ಪ್ರಧಾನಕೇಂದ್ರವೆನಿಸಿತು.

ಕೆಳದಿ ಅರಸರ ಕಾಲದಲ್ಲಿ ಕನ್ನಡ ಹಾಗೂ ಸಂಸ್ಕೃತ ಭಾಷೆಗಳೆರಡರಲ್ಲಿಯೂ 'ರಾಜಾಶ್ರಯ ಸಾಹಿತ್ಯ' ಹುಟ್ಟಿಕೊಂಡಿವೆ. ಈ ಅರಸುಮನೆತನದವರು. ಅರಸುಮನೆತನದ ಪರಿವಾರದವರು ವಿದ್ಯಾಪಕ್ಷಪಾತಿಗಳೂ ಕಾವ್ಯಪೋಷಕರೂ ಧರ್ಮಪ್ರಸಾರಕರೂ ಆಗಿದ್ದುದರಿಂದ ಕವಿಗಳಿಂದ. ಶಾಸ್ತ್ರಜ್ಞರಿಂದ ವಿಪುಲ ಪ್ರಮಾಣದ ಭಕ್ತಿ-ನೀತಿ-ಧಾರ್ಮಿಕ-ಚಾರಿತ್ರಿಕಪರ ಸಾಹಿತ್ಯಸೃಷ್ಟಿಕಾರ್ಯ ನಡೆಯಲು ಸಾಧ್ಯವಾಯಿತು. ಇದಲ್ಲದೆ ಈ ಅರಸುಮನೆತನದ ಅರಸರೇ ಕವಿಗಳಾಗಿ. ದಾರ್ಶನಿಕರಾಗಿ. ಉಭಯಭಾಷಾ ಬಲ್ಲಿದರಾಗಿ ವೈವಿಧ್ಯಪೂರ್ಣ ಸಾಹಿತ್ಯ ರಚನೆ ಮಾಡಿದ್ದಾರೆ.

ಕೆಳದಿ ರಾಜಾಶ್ರಯದಲ್ಲಿ ರಚಿತವಾದ ಸಾಹಿತ್ಯದಲ್ಲಿ ಧಾರ್ಮಿಕ ಸಾಹಿತ್ಯವೇ ಸಿಂಹಪಾಲಿನಷ್ಟಿದೆ. ಈ ಅರಸುಮನೆತನ ಸರ್ವಧರ್ಮಗಳಿಗೂ ಸಮಾನ ವೇದಿಕೆಯಾಗಿ ಕಾರ್ಯ ನಿರ್ವಹಿಸಿದರೂ ಈ ಆಸ್ಥಾನದಲ್ಲಿ ಹುಟ್ಟಿದ ಧಾರ್ಮಿಕ ಸಾಹಿತ್ಯ ಕೇವಲ ಶೈವ ಇಲ್ಲವೆ ವೀರಶೈವಪರವಾದುದಾಗಿರುತ್ತದೆ. ಕೆಳದಿ ಅರಸರ ಆಸ್ಥಾನದಲ್ಲಿ ಧಾರ್ಮಿಕ ಸಾಹಿತ್ಯ, ಕನ್ನಡ ಭಾಷೆಯಲ್ಲಿಗಿಂತ ಸಂಸ್ಕೃತ ಭಾಷೆಯಲ್ಲಿಯೇ ಅಧಿಕ ಪ್ರಮಾಣದಲ್ಲಿ ರಚನೆಗೊಂಡಿದೆ. ಈ ಪ್ರಬಂಧದಲ್ಲಿ ಈ ಅರಸುಮನೆತನದ ಸಮಕಾಲೀನ ಅವಧಿಯಲ್ಲಿ ಬೇರೆಬೇರೆ ಪ್ರದೇಶದಲ್ಲಿ ವಿವಿಧ ಕವಿಗಳಿಂದ ಸೃಷ್ಟಿಯಾದ ಧಾರ್ಮಿಕ ಸಾಹಿತ್ಯವನ್ನು ಕೈಬಿಟ್ಟು, 'ಕೆಳದಿ ಆಸ್ಥಾನ'ದಲ್ಲಿ ಮಾತ್ರ ನಿರ್ಮಾಣವಾದ ಧಾರ್ಮಿಕ ಸಾಹಿತ್ಯವನ್ನು ಅನುಲಕ್ಷಿಸಲಾಗಿದೆ. ಇದಲ್ಲದೆ ಕೆಲವು ಧಾರ್ಮಿಕ ಗ್ರಂಥಗಳು ಸಂಸ್ಕೃತಭಾಷೆಯಲ್ಲಿದ್ದು, ಅವುಗಳಿಗೆ ಕನ್ನಡ ಟೀಕೆ ಬರೆಯಲಾಗಿದೆ. ಇಂಥ ಕನ್ನಡ ವ್ಯಾಖ್ಯಾನ ಧಾರ್ಮಿಕ ಗ್ರಂಥಗಳನ್ನೂ ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಕೆಳದಿ ಅರಸರ ರಾಜಗುರು ಮತ್ತು ಧರ್ಮಗುರುಗಳು ಗುರುವರ್ಗದ ಹಿರಿಯ ಮಠಾಧಿಪತಿಗಳು. ಬನವಾಸಿ, ಸೋದೆಗಳಲ್ಲಿರುವಂತೆ ಕೆಳದಿಯಲ್ಲಿಯ ಇವರ ಹಿರಿಯಮಠ ಮಳೆಯಬಗೆಯದಾಗಿರಬೇಕೆನಿಸುತ್ತದೆ. ಈ ಮಳೆಯಬಗೆಯ ಹಿರಿಯ ಮಠದ ಅಧಿಪತಿ ಮಳೆಯ ಗುರು ನಂದೀಶನು ಸೋದೆಯ ಅರಸರ ರಾಜಗುರು, ಧರ್ಮಗುರುವಾಗಿದ್ದನೆಂಬುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಹೀಗಾಗಿ 'ಪಂಚಾಚಾರ್ಯ' ಅಥವಾ ಲಕುಲೀಶಪಾಶುಪತದ ಆಚಾರ್ಯ ಪರಂಪರೆಯವರಾದ ಈ ಗುರುವರ್ಗ, ಗುರುವರ್ಗದ ಶಿಷ್ಯ ಹಾಗೂ ಗುರುವರ್ಗದ ಮಾರ್ಗದರ್ಶನದಲ್ಲಿ ವಿಶೇಷವಾಗಿ ಧಾರ್ಮಿಕ-ಸೈದ್ಧಾಂತಿಕ ಸಾಹಿತ್ಯವೇ ರಚಿತವಾಯಿತು. ಇದರಿಂದ ಬಸವ ಹಾಗೂ ಬಸವೋತ್ತರ ಕಾಲದ ವಚನ ಸಾಹಿತ್ಯಕ್ಕೆ ಬದಲಾಗಿ ಶಿವಯೋಗಿ ಶಿವಾಚಾರ್ಯರ 'ಸಿದ್ಧಾಂತ ಶಿಖಾಮಣಿ' ಪ್ರಮಾಣಗ್ರಂಥವಾಯಿತು. ಈ ಅರಸರ ಕಾಲದಲ್ಲಿ ಕಾಶಿ(ಬನಾರಸ), ಬಾಳೇಹಳ್ಳಿ ಸಂಸ್ಥಾನಮಠಗಳಿಗೆ ಹೆಚ್ಚಿನ ಸ್ಥಾನಮಾನ, ವಿಶೇಷ ಪುರಸ್ಕಾರ ಸಂದಿರುವುದೂ ವೀರಶೈವ ಸಂಸ್ಕೃತಿ, ವಿದ್ಯಾಕೇಂದ್ರಗಳೆನಿಸಿದ ಮಹತ್ತಿನ ಹಾಗೂ ಮಹಾಮಹತ್ತಿನ ಮಠಗಳಲ್ಲಿ ಕೇವಲ ಶಿವಾದ್ವೈತ ಅಥವಾ ವೀರಶೈವ ಸಿದ್ಧಾಂತ ರೂಪದ ಶಿಕ್ಷಣ ನೀಡುತ್ತಿದ್ದುದೂ ಕಂಡುಬರುತ್ತದೆ. ಇದರಿಂದ ಈ ಆಸ್ಥಾನದ ವೀರಶೈವ ಧಾರ್ಮಿಕ ಸಾಹಿತ್ಯದಲ್ಲಿ ವೈದಿಕ ವಿಧಿ-ವಿಧಾನ ಮತ್ತು ಸಂಸ್ಕೃತ ಭಾಷೆಗಳಿಗೆ ಅಧಿಕ ಮನ್ನಣೆ, ಪ್ರೋತ್ಸಾಹ ಪ್ರಾಪ್ತವಾಗಲು ಅನುಕೂಲವಾಯಿತು. ಹೀಗೆ ಕೆಳದಿಯ ಆಸ್ಥಾನದಲ್ಲಿ ವೈದಿಕ ಹಾಗೂ ವೇದಾಂತ ಪ್ರತಿಪಾದಕ ಧಾರ್ಮಿಕ ಸಾಹಿತ್ಯವೇ ಹೆಚ್ಚಾಗಿ ಬೆಳೆಯಿತು. ಲಿಂಗಣ್ಣಕವಿಯು "ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮ ಮೂರ್ತಿಗಳಿಂ ನಾನಾ ವಿಧ ಭಕ್ಷ್ಯಭೋಜ್ಯ ರಸಾಯನ ಫಲಂಗಳ್ ಮುಂತಾದ ಇಚ್ಛಾಪದಾರ್ಥಂಗಳಂ ನೀಡಿಸಿ, ಸಂತುಷ್ಟಿ ಪಡಿಸಿಯುವರ್ಗೆ ನಾನಾವಿಧ ವಿಚಿತ್ರ ವಸ್ತ್ರ ಕಂಬಳಿ ಕಂಥೆ ಶಿವದಾರ ವಿಭೂತಿಯಾಧಾರ ಭಸ್ಮ ರುದ್ರಾಕ್ಷಿ ಆಗಮ ಶಿವಶಾಸ್ತ್ರ ಲಿಖಿತ ಪುಸ್ತಕ ಪಾವಡ ಛತ್ರ ಪಾದುಕೆ ಹಸ್ತಾಧಾರ ದಂಡ ಮುಂತಾದ ಇಚ್ಛಾಪದಾರ್ಥಂಗಳಂ ಕೊಡಿಸಿ, ಪೇಟೆಯಲ್ಲಿ ಆರಾಧನಪೂರ್ವಕಂ ಮಹೋತ್ಸವ

ಮೆರವಣಿಗೆಗಳಂ ಮಾಡಿಸಿ" ಎಂಬ ಈ ವಿವರಣೆಯಿಂದ ಕೆಳದಿ ಬಸವ ಭೂಪಾಲನ ಧರ್ಮಾಭಿಮಾನ ಮತ್ತು ಗ್ರಂಥದಾನಗಳು ವ್ಯಕ್ತವಾಗುತ್ತವೆ. ಗ್ರಂಥದಾನ. ಧರ್ಮಾಭಿಮಾನಗಳಲ್ಲಿ ಅತ್ತಿಮಬ್ಬೆಯನ್ನು ಮೀರಿಸಿದ ಈತ ಧಾರ್ಮಿಕಗ್ರಂಥಗಳಾದ 'ಆಗಮ ಶಿವಶಾಸ್ತ್ರ'ಗಳು ಹೊರಬರಲು ಕಾರಣಪುರುಷನೆನಿಸಿದನು. ಕೆಳದಿಯಲ್ಲಿ 'ಶಿವಭಕ್ತ ಸಮ್ಮೇಳನ' ನಡೆದುದನ್ನೂ ಮೋದಿಯರುವ್ರ ಉಲ್ಲೇಖಿಸುತ್ತಾನೆ. ಹೀಗೆ ಕೆಳದಿ ಅರಸರ ಪ್ರೇರಣೆ. ಪ್ರೋತ್ಸಾಹ ಹಾಗೂ ಶರಣ ಸಮ್ಮೇಳನಗಳ ಮೂಲಕ ಧಾರ್ಮಿಕ ಸಾಹಿತ್ಯ ರಚನೆಯಾಗಲು ಸಾಧ್ಯವಾಯಿತು.

ಬಸವಯುಗದಲ್ಲಿ ಭಕ್ತಿ, ಜ್ಞಾನ. ಕ್ರಿಯೆಗಳಿಗೆ ಸಮಾನಸ್ಥಾನವಿದ್ದಿತು. ಆದರೆ ಈ ಅವಧಿಯಲ್ಲಿ ಬಸವಯುಗದ 'ಕ್ರಿಯೆ'ಯ ಸ್ಥಾನದಲ್ಲಿ ' ವೈರಾಗ್ಯ' ವಿರಾಜಿಸತೊಡಗಿತು. ಹೀಗಾಗಿ ಬಸವೋತ್ತರಯುಗದ ವೀರಶೈವ ಸಾಹಿತ್ಯದಲ್ಲಿ ವೈರಾಗ್ಯ। ಮುಕ್ತಿ ಪ್ರತಿಪಾದನೆ ಅಧಿಕಗೊಳ್ಳುವಂತಾಯಿತು. ಇದರಿಂದ ವಚನಸಾಹಿತ್ಯದಂಥ ಸಮಾಜವಾದಿ ಜನಪರಸಾಹಿತ್ಯ ಬೆಳೆಯದೆ, ಆತ್ಮವಾದಿಸಾಹಿತ್ಯ ಸಂವರ್ಧಿಸತೊಡಗಿತು. ಈ ಕಾಲದ ವೀರಶೈವ ಕವಿಗಳು ಸಮಾಜಪರ ಅಥವಾ ಸಮಾಜಮುಖಿ ಸಮಸ್ಯೆಗಳಿಗೆ ಗಮನ ಹರಿಸದೆ. ಆತ್ಮ-ಪರಮಾತ್ಮ-ಮೋಕ್ಷಮುಖಿ ವಿಚಾರಗಳಲ್ಲಿ ವಿಹರಿಸತೊಡಗಿದರು. ಅಷ್ಟಕ್ಕೇ ಸೀಮಿತಗೊಂಡರು. ಅದರಲ್ಲಿಯೇ ಸಂತೃಪ್ತಿ ಕಂಡುಕೊಂಡರು. ಆದುದರಿಂದ ವೀರಶೈವದ ಭಕ್ತಿ, ಜ್ಞಾನಗಳು ಸಮಾಜದಲ್ಲಿ ಕ್ರಿಯಾರೂಪ ಪಡೆಯದೆ ವೈರಾಗ್ಯ ಅಥವಾ ಜೀವನ್ಮುಕ್ತಿಯಲ್ಲಿ ಸೇರಿಹೋದವು. ಹೀಗಾಗಿ ಈ ಅರಸುಮನೆತನದ ವೀರಶೈವ ಧಾರ್ಮಿಕ ಸಾಹಿತ್ಯ ವೈದಿಕ. ಆಗಮಿಕ ಮತ್ತು ವೇದಾಂತ ಪ್ರತಿಪಾದಕವಾದಂಥದಾಯಿತು. ಇದರಿಂದ ಬಸವಣ್ಣನವರಂತೆ ಆತ್ಮಕಲ್ಯಾಣದೊಂದಿಗೆ ಲೋಕಕಲ್ಯಾಣ ಕಾರ್ಯ ನೆರವೇರದೆ. ಕೇವಲ ಆತ್ಮೋದ್ಧಾರದ ಮಾತುಗಳು ಪ್ರವಹಿಸತೊಡಗಿದವು. ಆದುದರಿಂದ ಇಂಥ ಧಾರ್ಮಿಕ ಸಾಹಿತ್ಯದ ರಚನೆಯಿಂದ ಹನ್ನೆರಡನೆಯ ಶತಮಾನದಲ್ಲಿಯಂತೆ ಈ ಅವಧಿಯಲ್ಲಿ ಹೊಸ ಮೌಲ್ಯಗಳಿಗಾಗಿ. ಹೊಸ ಧಾರ್ಮಿಕ ವಿಚಾರಗಳಿಗಾಗಿ ಧಾರ್ಮಿಕ ಮನ್ವಂತರ ಸಾಧ್ಯವಾಗಲಿಲ್ಲವೆನಿಸುತ್ತದೆ. ಇದಕ್ಕೆ ಯುಗಧರ್ಮವೂ ಕಾರಣವಾಗಿರುವಂತೆ ಕಾಣಿಸುತ್ತದೆ. ಈ ಹಿನ್ನೆಲೆಯ ಬೆಳಕಿನಲ್ಲಿ ಕೆಳದಿ ಅರಸರ ಆಸ್ಥಾನದಲ್ಲಿ ರಚಿತವಾದ ಕನ್ನಡ ಧಾರ್ಮಿಕ ಸಾಹಿತ್ಯದ ಸ್ಥೂಲ ಪರಿಚಯ ಹಾಗೂ ವಿವೇಚನೆಯನ್ನು ಇಲ್ಲಿ ಮಾಡಲಾಗಿದೆ.

ಕೆಳದಿ ಅರಸರ ಆಸ್ಥಾನದ ಕನ್ನಡ ಧಾರ್ಮಿಕಸಾಹಿತ್ಯ ೧. ವ್ಯಾಖ್ಯಾನ ಕೃತಿ ೨.ಪದ್ಯಕೃತಿ ೩. ಗದ್ಯಕೃತಿಗಳ ರೂಪದಲ್ಲಿ ಹೊರಬಂದಿದೆ. ಇಂಥ ಸ್ವರೂಪದ ಧಾರ್ಮಿಕ ಸಾಹಿತ್ಯವನ್ನು ಹೀಗೆ ಪರಿಶೀಲಿಸಬಹುದಾಗಿದೆ:

ವ್ಯಾಖ್ಯಾನ ಕೃತಿಗಳು

ರಾಜಗುರುಗಳ ಮೂಲಕ ಕೆಳದಿ ಅರಸರ ಆಸ್ಥಾನದಲ್ಲಿ ಸಂಸ್ಕೃತ ಭಾಷೆಗೆ ಅಗ್ರಪ್ರಾಶಸ್ತ್ಯ ಲಭಿಸಿತು. ಸಂಸ್ಕೃತ ದೇವಭಾಷೆ. ಧರ್ಮಭಾಷೆ ಎನಿಸಿದ್ದರಿಂದ

ಧಾರ್ಮಿಕಗ್ರಂಥಗಳು ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿಯೇ ಸೃಷ್ಟಿಗೊಂಡವು. ಆಮೇಲೆ ಈ ಸಂಸ್ಕೃತ ಭಾಷೆಯ ಧಾರ್ಮಿಕಗ್ರಂಥಗಳಿಗೆ, ವೇದ-ಆಗಮಗಳಿಗೆ ವ್ಯಾಖ್ಯಾನ ಬರೆಯುವ ಕಾರ್ಯ ಆರಂಭವಾಯಿತು. ಇಂಥ ಧಾರ್ಮಿಕ ವ್ಯಾಖ್ಯಾನ ಗ್ರಂಥಗಳು ಹೀಗಿರುತ್ತವೆ:

ಸಟೀಕ ಪುರುಷಸೂಕ್ತ:

'ಪುರುಷಸೂಕ್ತ'ವು ಋಗ್ವೇದದಲ್ಲಿದೆ. ಇದು 'ವೇದಗಳ ಸಾರಸರ್ವಸ್ವ'ವೆಂದು ವೇದ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಕೃಷ್ಣಯಜುರ್ವೇದದ ತೈತ್ತರೀಯ ಆರಣ್ಯಕ, ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆ ಹಾಗೂ ಅಥರ್ವವೇದಗಳಲ್ಲಿಯೂ ಇದು ಅಲ್ಪವ್ಯತ್ಯಾಸದೊಂದಿಗೆ ದೊರೆಯುತ್ತದೆ. ಬೃಹದಾರಣ್ಯಕೋಪನಿಷತ್ತು, ಶತಪಥ ಬ್ರಾಹ್ಮಣ, ನಿರುಕ್ತ, ತೈತ್ತರೀಯ ಆರಣ್ಯಕ, ಶ್ವೇತಾಶ್ವತರೋಪನಿಷತ್ತು ಮುಂತಾದ ಕೃತಿಗಳಲ್ಲಿಯೂ ಈ ಸೂಕ್ತದ ಕೆಲವು ಭಾಗಗಳ ವಿವರಣೆಯಿದೆ. ಸಟೀಕ ಪುರುಷಸೂಕ್ತ ಅತ್ಯಂತ ಚಿಕ್ಕ (೨೦ ಪುಟ ಗಾತ್ರದ) ಕೃತಿ. ಋಗ್ವೇದದ ೧೦ನೆಯ ಮಂಡಲದ ಎಂಟನೆಯ ಪ್ರಪಾಠಕದಲ್ಲಿರುವ ಇಪ್ಪತ್ತೈದು ಸೂಕ್ತಗಳಿಗೆ ಪದಶಃ ಟೀಕು ರಚಿಸಿದ್ದಾನೆ. ಕೆಲವು ಸಲ ಈ ಟೀಕೆ ಭಾಷ್ಯವಾಗಿಯೂ ಪರಿಣಮಿಸಿ ಹೆಚ್ಚಿನ ವಿವರಗಳನ್ನು ಒದಗಿಸುತ್ತದೆ. 'ಪುರುಷ' ಎಂಬ ಪದದ ಮೂಲಾರ್ಥ 'ಪರವಸ್ತು', 'ಪರಬ್ರಹ್ಮ'. ಆದರೆ ಚೆನ್ನವೀರ ಮಾಹೇಶ್ವರನು ಇಲ್ಲಿ 'ಪುರುಷ' ಪದಕ್ಕೆ 'ನಿರಂಜನ ಜಂಗಮಮೂರ್ತಿ' ಎಂಬ ಹೊಸ ವ್ಯಾಖ್ಯಾನ ಬರೆದಿದ್ದಾನೆ. ಇದು ಈತನ ವೀರಶೈವ ವಿಶೇಷತೆಯನ್ನು ಎತ್ತಿತೋರಿಸುತ್ತದೆ. ಇದರಿಂದ ಪುರುಷ = ಪರವಸ್ತು, ಪರಬ್ರಹ್ಮ = ನಿರಂಜನ ಜಂಗಮಮೂರ್ತಿ ಎಂದರ್ಥವಾಗುತ್ತದೆ. ಆದುದರಿಂದ ಚೆನ್ನವೀರ ಮಾಹೇಶ್ವರನ ಈ ಕೃತಿ 'ಪುರುಷಸೂಕ್ತ'ಕ್ಕೆ 'ವೀರಶೈವಪರ'ವಾಗಿ ಬರೆದ 'ನಿರಂಜನ ಜಂಗಮ ಭಾಷ್ಯ' ಅಥವಾ 'ವೀರಶೈವ ಭಾಷ್ಯ'ವೆಂದು ಹೆಸರಿಸಬಹುದಾಗಿದೆ. ಈತನು ವೇದಸೂಕ್ತದ ಪದಗಳಿಗೆ ವೀರಶೈವ ಪರಿಭಾಷಾಪದಗಳ ಅರ್ಥವನ್ನು ನೀಡುವುದರೊಂದಿಗೆ ಶಿವಾದ್ವೈತರೀತಿಯ ಪ್ರತಿಪಾದನೆ ಮಾಡಿದ್ದಾನೆ. ಈ ಕೃತಿಯ ಅಂತ್ಯದಲ್ಲಿ ಬರುವ 'ಓಂ ಶಾಂತಿಶ್ಶಾಂತಿಸ್ಸರ್ವಶಾಂತಿರಸ್ತು' ಎಂಬ ವಾಕ್ಯಕ್ಕೆ ಬರೆದ ಭಾಷ್ಯ ಹೀಗಿದೆ: "ಓಂ ಶಾಂತಿ-ನಿರಂಜನ ಜಂಗಮ ಕಾರುಣ್ಯವುಂ. ಅಸ್ತು-ಆಗಲಿ. ಶಾಂತಿ-ಸಾಕಾರ ಜಂಗಮದ ಕಾರುಣ್ಯವುಂ. ಅಸ್ತು-ಆಗಲಿ. ಸರ್ವಶಾಂತಿ-ಸದಾಶಿವನ ಸದ್ಯೋಜಾತ ವಾಮದೇವಾಘೋರ ತತ್ಪುರುಷ ಮುಖಂಗಳ ಭೂತಿ ಭಸಿತ ಭಸ್ಮ ಕ್ಷಾರಂಗಳ ಪಕ್ಷಿಗಳಿಂ ಪುಟ್ಟಿದ ಘಂಟಾಕರ್ಣ ಗಜಕರ್ಣ ದಾರುಕ ರೇಣುಕರ ಗೋತ್ರಂಗಳ ಋಗ್ಯಜುರಥರ್ವ ಸಾಮ ಶಾಖಾಧ್ಯಯನರ ವೀರಶೈವ ತಂತ್ರ ವೀರ ಮಾಹೇಶ್ವರ ತಂತ್ರ ಪರಮರಹಸ್ಯ ತಂತ್ರ ಶಿವರಹಸ್ಯತಂತ್ರ ಸೂತ್ರಂಗಳ ಪಕೋರಾಮ ಪಂಡಿತ ಮರುಳಸಿದ್ಧ ರೇವಣಸಿದ್ಧ ಪ್ರವರಂಗಳ ವಿರಕ್ತಾರಾಧ್ಯಾತಿಥಿಘನಲಿಂಗರ ಕಾರುಣ್ಯವುಂ. ಅಸ್ತು-ಆಗಲಿ". ವೇದಸೂಕ್ತಗಳನ್ನು ಹೀಗೆ (ಆಗಮಿಕ)ವೀರಶೈವದ ಹಿನ್ನೆಲೆಯಲ್ಲಿ ಅರ್ಥೈಸಿ, ಕನ್ನಡ ಭಾಷೆಯ ಮೂಲಕ ಸರಳರೀತಿಯಲ್ಲಿ ವಿವರಿಸಿರುವ ಈತನ ಪ್ರಯತ್ನ, ವೀರಶೈವ ನಿಷ್ಠೆ ಮೆಚ್ಚುವಂಥದಾಗಿದೆ.

ನಮಕ-ಚಮಕ ಅಥವಾ ಶ್ರೀರುದ್ರ ಕರ್ನಾಟಕದ ಟೀಕೆ :

ಶತರುದ್ರೀಯಂ. ಶ್ರೀರುದ್ರೋಪನಿಷತ್‌ವೆಂದು ಪ್ರಸಿದ್ಧವಾಗಿರುವ 'ಶ್ರೀ ರುದ್ರಾಧ್ಯಾಯ'ದ ಕನ್ನಡ ಟೀಕೆಯೇ 'ಶ್ರೀರುದ್ರ ಕರ್ನಾಟಕದ ಸಟೀಕೆ' ಕೃತಿ. ಇದೂ ವೇದೋಕ್ತವಾದ ಕೃತಿಯಾಗಿದೆ. ಯಜುರ್ವೇದದ ನಾಲ್ಕನೆಯ ಕಾಂಡದ ಐದನೆಯ ಪ್ರಪಾಠದಲ್ಲಿ ಈ 'ಶ್ರೀರುದ್ರ'ವಿದೆ. ಇದು ಶಿವ ಮಹಿಮೆ. ಶಿವಸ್ತುತಿಗಳಿಗೇ ಮೀಸಲಾದುದಾಗಿದೆ. ಶ್ರೀರುದ್ರ ಪಾರಾಯಣದಿಂದ ಶಿವಾರ್ಚಕರಿಗೆ ಮುಕ್ತಿ ದೊರೆಯುವುದೆಂಬ ನಂಬಿಕೆಯಿದೆ. ಹೀಗಾಗಿ ದಿನನಿತ್ಯದ ಶಿವಾರಾಧನೆಯಲ್ಲಿ ಶಿವಭಕ್ತರು ಶ್ರೀರುದ್ರ ಪಠಿಸುತ್ತಾರೆ. ಇಲ್ಲಿ ಶ್ರೀರುದ್ರದ ಪ್ರತಿಯೊಂದು ಅನುವಾಕದ ಎಲ್ಲ ಮಂತ್ರಗಳಿಗೂ ಪ್ರತಿಪದಾರ್ಥ ಟೀಕೆಯಿದ್ದು, ಅತ್ಯಂತ ಸರಳವಾಗಿದೆ. ಈ ಟೀಕೆಯಲ್ಲಿ ವ್ಯಾಖ್ಯಾನಕಾರನ ಕಾಲದ ಮಲೆನಾಡಿನ ಭಾಷೆ, ಪರಿಸರಗಳು ದಟ್ಟವಾಗಿ ಸಾಂದ್ರಗೊಂಡಿರುತ್ತವೆ. ಅಪ್ರಕಟಿತರೂಪದಲ್ಲಿರುವ 'ಶ್ರೀ ರುದ್ರಟೀಕೆ' ಹಸ್ತಪ್ರತಿಗಳು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಸಂಸ್ಥೆ ಹಾಗೂ ಮದ್ರಾಸ ಪ್ರಾಚ್ಯ ವಿದ್ಯಾಸಂಶೋಧನಾಲಯದ ಹಸ್ತಪ್ರತಿ ಭಾಂಡಾರಗಳಲ್ಲಿ ಲಭಿಸುತ್ತವೆ.

ವೀರಮಾಹೇಶ್ವರ ತಂತ್ರದ ಟೀಕೆ:

ಅನುಪಲಬ್ಧ ಕೃತಿ. 'ಇದು ವೀರಶೈವಾಚಾರಗಳಿಗೆ ಸಂಬಂಧಿಸಿದ ಆಗಮ ಅಥವಾ ತಾಂತ್ರಿಕ ವಿಧಾನಗಳಿಂದ ಕೂಡಿದ ಧರ್ಮಗ್ರಂಥವಿರಬಹುದೆಂ'ದು ವಿದ್ವಾಂಸರು ಊಹಿಸುತ್ತಾರೆ. ಇದಕ್ಕಿಂತ ಹೆಚ್ಚಿನ ವಿವರಗಳು ಸಧ್ಯ ಗೊತ್ತಾಗುವುದಿಲ್ಲ.

ಈ ಮೇಲಿನ ಧಾರ್ಮಿಕ ವ್ಯಾಖ್ಯಾನ ಕೃತಿಗಳ ಕರ್ತೃ ಚೆನ್ನವೀರ ಮಾಹೇಶ್ವರ (ಕ್ರಿ.ಶ. ೧೫೫೦). ಈತನು ಕವಿಪೋಷಕ ಕೆಳದಿಯ ದೊಡ್ಡಸಂಕಣ್ಣನಾಯಕನ (ಕ್ರಿ.ಶ.೧೫೪೬-೧೫೫೯) ಆಸ್ಥಾನದ ಆದಿಕವಿಯೂ ಅರಸುಮನೆತನದ ರಾಜಗುರುವೂ ಮಠಾಧಿಪತಿಯೂ ಆಗಿದ್ದನು. ವೀರಶೈವನಾದ ಈತನು ಯಾಗಂಟಿ ಶರಭಲಿಂಗನ ಭಕ್ತನಾಗಿದ್ದ. ತಂದೆ-ಕೋಕಿಲಾಕುಂಡಸಂಗನ ಗುರುಲಿಂಗ. ತಾಯಿ-ನಂದ್ಯಂಬೆ. ಗುರು-ಪಿತೃವ್ಯ ಸಂಬಣ್ಣ. ಪತ್ನಿ-ಕವಿಪರಮೇಶ್ವರಿ ಗಂಗಾದೇವಿ. ಸ್ಥಳ-ಸಹ್ಯಾದ್ರಿಯ ತಪ್ಪಲಲ್ಲಿರುವ ಕುಂಟಿಕಾಪುರ. ಚೆನ್ನವೀರಮಾಹೇಶ್ವರನದು ಅತ್ರಿಗೋತ್ರ. ತೈತ್ತರೀಯ ಯಜುಶ್ಶಾಖೆ. ವೀರಮಾಹೇಶ್ವರತಂತ್ರಸೂತ್ರ. ಶಿವಲೆಂಕ ಮಂಚಣ್ಣ ಪಂಡಿತಾರಾಧ್ಯ ವಂಶ. ಉಭಯಭಾಷಾ ಪಂಡಿತನೆನಿಸಿದ್ದ ಈತನು ಕವಿ. ದಾರ್ಶನಿಕ. ವೈಯಾಕರಣಿ. ವ್ಯಾಖ್ಯಾನಕಾರನಾಗಿ ಕಂಡುಬರುತ್ತಾನೆ. ವೇದಪಾರಂಗತನೂ ಆಗಮಜ್ಞಾನಿಯೂ ಆದ ಕಾಶೀಕಾಂಡದ ಚೆನ್ನವೀರ ಮಾಹೇಶ್ವರನು ಕನ್ನಡ ಭಾಷೆಯಲ್ಲಿ ಸ್ವತಂತ್ರವಾದ ವೀರಶೈವ ಧಾರ್ಮಿಕ ಕೃತಿಗಳನ್ನು ರಚಿಸಿವೆ. ವೇದ-ಆಗಮಗಳಲ್ಲಿರುವ ಶಿವ-ಶಿವಾದ್ವೈತಪರ ವಿಷಯಗಳನ್ನು ಮಾತ್ರ ವ್ಯಾಖ್ಯಾನದ ಮೂಲಕ ಕನ್ನಡಿಗರಿಗೆ ಅದರಲ್ಲಿಯೂ ಶಿವಭಕ್ತರಿಗೆ ಪರಿಚಯಿಸಿ ಕೃತಾರ್ಥನಾಗಿದ್ದಾನೆ. ಈ ಮೂಲಕ ವೇದಾಗಮ ಮೂಲದ ಶಿವಧರ್ಮ ಅಥವಾ ವೀರಶೈವಧರ್ಮವನ್ನೂ ತಿಳಿಸಿಕೊಟ್ಟಿದ್ದಾನೆ.

ವೀರಮಾಹೇಶ್ವರಾಚಾರ ಸುಧಾರ್ಣವ ಟೀಕೆ:

ಹಿರಿಯ ವೆಂಕಟಪ್ಪನಾಯಕನು ಸಂಸ್ಕೃತದಲ್ಲಿ ರಚಿಸಿದ 'ವೀರಮಾಹೇಶ್ವರಾಚಾರ ಸುಧಾರ್ಣವ:' ಎಂಬ ಗ್ರಂಥಕ್ಕೆ ಶಿವಪ್ಪನಾಯಕನ ಕೋರಿಕೆಯಂತೆ ಚರಮೂರ್ತಿ ಬಸವಲಿಂಗದೇವನು (ಕ್ರಿ.ಶ. ೧೬೫೦) ಬರೆದ ಕನ್ನಡ ಟೀಕೆ. ಈ ಗ್ರಂಥ. ಈ ಕೃತಿಯನ್ನು 'ಸಿದ್ಧಾಂತ ಶಿಖಾಮಣಿ, ಕ್ರಿಯಾಸಾರ, ಶಿವಧರ್ಮೋತ್ತರ, ಶಂಕರ ಸಂಹಿತೆ, ಸ್ಕಾಂದ ಪುರಾಣ, ಲಿಂಗಪುರಾಣ, ಹಂಸೋಪನಿಷತ್, ವಾತುಳಾಗಮ, ಶಿವರಹಸ್ಯ, ವಾಯುವೀಯ ಸಂಹಿತಾ, ಪಾವನಾಗಮ, ಗೋರಕ್ಷ ಸಂಹಿತಾ, ಗರುಡ ಪುರಾಣ, ಆದಿತ್ಯ ಪುರಾಣ, ಕಾಶೀಕಾಂಡ, ಕಾಮಿಕಾಗಮ, ಕ್ರಿಯಾತಿಲಕ, ಬ್ರಹ್ಮಗೀತೆ ಮುಂತಾದವುಗಳನ್ನು ಆಧರಿಸಿ, ರೂಪಿಸಲಾಗಿದೆ. ಇಂಥ ಕೃತಿಯನ್ನು ಟೀಕೆಯ ಮೂಲಕ ವೀರಶೈವರಿಗೆ ಪರಿಚಯಿಸಿದ ಚರಮೂರ್ತಿ ಬಸವಲಿಂಗದೇವನ ಸಾಹಸ ಮೆಚ್ಚುವಂತಹದಾಗಿದೆ. ಈತ "ಶ್ರೀಮದ್ವೇದವೇದಾನ್ತ ಸಿದ್ಧಾನ್ತೇತಿಹಾಸ ಪುರಾಣ ಪ್ರವೀಣ ಸನಾತನ ಪುರಾತನ ವಚನಾನುಭವೋದ್ಭವ ಜ್ಞಾನ ವೈರಾಗ್ಯವಿಜಿತ ಕುಸುಮಬಾಣ ಚಿರಕಾಲಧರ ನಿರಂತರಾರ್ಚಿತ ಸ್ವೇಷಲಿಂಗಾಂತರಂಗ ಪರಮತಖಂಡ ಶೈವಸಭಾಮಂಡನ ಪ್ರಸಂಗ ಗುರುಲಿಂಗಜಂಗಮ ಪದಾಯುಕ್ತ ಚಿತ್ತ ಪರಮಯೋಗೀಶ್ವರಾರ್ಚಿತ ಕೀರ್ತಿವಿತ್ತ ಭಸ್ಮರುದ್ರಾಕ್ಷಾದಿ ವಿಭೂಷ ವಿಸ್ಮಯಾವಹ ತತ್ವಭೂಷ ಶಿವಜ್ಞಾನ ಶಿವಧ್ಯಾನ ಶಿವಪೂಜಾನಿರತ ಶಿವಭೂಪಾಲ ವಿಜ್ಞಾಪಿತ ಷಟ್ಸ್ಥಲಾಚಾರ ಚಕ್ರವರ್ತಿ" ಆಗಿದ್ದನು. ವೀರಮಾಹೇಶ್ವರನಾದ ಈ ಕವಿಯು ಕೃತಿಯಲ್ಲಿ ಶಿವಮಹತ್ವಸ್ಥಲಂ, ಗುರುಮಹತ್ವಸ್ಥಲಂ, ಲಿಂಗಮಹತ್ವಸ್ಥಲಂ, ಜಂಗಮ ಮಹತ್ವಸ್ಥಲಂ, ಪಾದೋದಕ ಮಹತ್ವಸ್ಥಲಂ, ಪ್ರಸಾದ [ಮಹತ್ವ ಸ್ಥಲಂ], ವಿಭೂತಿ [ಮಹತ್ವಸ್ಥಲಂ], ರುದ್ರಾಕ್ಷಮಹತ್ವಸ್ಥಲಂ, ಪಂಚಾಕ್ಷರಿ ಮಹತ್ವಸ್ಥಲಂ, ದೀಕ್ಷಾಮಹತ್ವಸ್ಥಲಂ, ಭಕ್ತಮಹತ್ವಸ್ಥಲಂ, ಶಿವಪೂಜಾಮಹತ್ವಸ್ಥಲಂ, ಷಟ್ಸ್ಥಲ ಮಹತ್ವಸ್ಥಲಂ- ಹೀಗೆ ಹದಿಮೂರು ಸ್ಥಲಗಳಿದ್ದು, ಅಷ್ಟಾವರಣ-ದೀಕ್ಷೆ-ಶಿವಪೂಜೆ-ಷಟ್‌ಸ್ಥಲಗಳನ್ನು ಕುರಿತು ವಿವರಿಸಲಾಗಿದೆ.

ವೀರಶೈವ ಸುಧಾನಿಧಿ ಟೀಕೆ:

ಈ ಕೃತಿಯ ಕರ್ತೃ, ಸಂಗನಬಸಪ್ಪ (ಕ್ರಿ.ಶ. ೧೭೫೦). ಈತ ಕೆಳದಿಯ ಮಹಾಮಂತ್ರಿ ನಿರ್ವಾಣಾರ್ಯನ ಮಗ. ನಿರ್ವಾಣಾರ್ಯನ ಅಪ್ಪಣೆಯ ಮೇರೆಗೆ ಗುರುಬಸವದೇಶಿಕೇಂದ್ರನು ಸಂಸ್ಕೃತದಲ್ಲಿ ರಚಿಸಿದ 'ವೀರಶೈವ ಸುಧಾನಿಧಿ' ಗ್ರಂಥಕ್ಕೆ ಬರೆದ ಕನ್ನಡ ಟೀಕೆ ಇದಾಗಿದೆ. ಈ ಟೀಕಾಕೃತಿ ಅನುಪಲಬ್ಧವಾಗಿದೆ. ಮೂಲಕೃತಿಯಲ್ಲಿ ಐದು ಪ್ರಕರಣಗಳಿದ್ದು-ವೀರಶೈವ ಮತ, ಭಕ್ತಿ, ಲಿಂಗಧಾರಣ, ತ್ರಿಪುಂಡ್ರಧಾರಣ, ರುದ್ರಾಕ್ಷಿಧಾರಣ, ಪಂಚಾಕ್ಷರಿ ಜಪವಿಧಿ, ಗುರುತತ್ವ, ಪಾದೋದಕ, ಜಂಗಮ ಲಕ್ಷಣ, ಚರಪಾದೋದಕ, ವೀರಮಾಹೇಶ್ವರ ದಾನವಿಧಿ, ಸಹಜದಾನ, ಮಂತ್ರ ಮಹಿಮೆ, ವೀರಶೈವದ ಘನತೆ, ಜಂಗಮ ಮಹತ್ವ, ವೀರ ಮಾಹೇಶ್ವರ ದರ್ಶನ, ವೀರಶೈವ ಮತಸ್ಥಾಪಕ, ವೀರಶೈವ ಶಾಸ್ತ್ರ ಶ್ರವಣ ಫಲ ಮೊದಲಾದ (ಆಗಮಿಕ) ವೀರಶೈವ

ಧರ್ಮಾಚಾರದ ವಿಧಿ-ವಿಧಾನಗಳನ್ನು ವಿವರಿಸಿ ಹೇಳಲಾಗಿದೆ. ಇದರ ಕನ್ನಡ ಟೀಕಾಗ್ರಂಥದಲ್ಲಿಯೂ ವೀರಶೈವಕ್ಕೆ ಸಂಬಂಧಿಸಿದ ಇದೇ ವಿಷಯಗಳ ಪ್ರತಿಪಾದನೆಯಿದ್ದಿರಬೇಕೆನಿಸುತ್ತದೆ.

ಪದ್ಯಕೃತಿಗಳು

ಕೆಳದಿ ಅರಸರ 'ರಾಜಾಶ್ರಯ'ದಲ್ಲಿ ರಚಿತವಾದ ಧಾರ್ಮಿಕ ಪದ್ಯ (=ಕಾವ್ಯ)ಕೃತಿಗಳನ್ನು ೧. ಸ್ವತಂತ್ರಕೃತಿ. ೨. ಅನುವಾದಕೃತಿಗಳೆಂದು ವಿಂಗಡಿಸಿ ವಿವರಿಸಬಹುದಾಗಿದೆ.

ಸ್ವತಂತ್ರಕೃತಿಗಳು

ಶಿವಪೂಜಾದರ್ಪಣ ಹಾಗೂ ಗಣಸಹಸ್ರನಾಮ - ಇವು ಈ ಅರಸರ ಕಾಲದಲ್ಲಿ ರಚಿತವಾದ ಸ್ವತಂತ್ರ ಧಾರ್ಮಿಕ ಕೃತಿಗಳಾಗಿರುತ್ತವೆ.

ಶಿವಪೂಜಾದರ್ಪಣ:

ಇದು ಸ್ವತಂತ್ರವಾಗಿ ಸೃಷ್ಟಿಯಾದ ಧಾರ್ಮಿಕ ಕಾವ್ಯಕೃತಿಯಾಗಿದೆ. ಕೆಳದಿಯ ಕಿರಿಯ ಬಸವಪ್ಪನಾಯಕನ ಆಸ್ಥಾನದ ಬ್ರಾಹ್ಮಣ ಕವಿ ಕವಿಲಿಂಗಣ್ಣ (ಕ್ರಿ.ಶ. ೧೭೫೦). ಈ ಕೃತಿ ರಚಿಸಿದ್ದಾನೆ. ಶಿವಪೂಜಾದರ್ಪಣವು ಶಿವಭಕ್ತರ ಪವಿತ್ರ ಆರಾಧನಾ ಕೃತಿ. ಶಿವಪೂಜೆಯ ಕ್ರಮವನ್ನು ತಿಳಿಸುತ್ತ, ಶಿವಪೂಜೆ ಮಂಗಲಪ್ರಸಂಗಕ್ಕಾಗಿಯೇ ಮೀಸಲಾದ ಈ ಕೃತಿಯಲ್ಲಿ ಐದು ಆಶ್ವಾಸಗಳಿದ್ದು, ೫೮೫ ಸಂಖ್ಯೆಯ ಕಂದ, ವೃತ್ತ, ವಚನ, ಗದ್ಯಗಳನ್ನೊಳಗೊಂಡಿದೆ. ಇಲ್ಲಿ ಭಕ್ತಿ ಮಾರ್ಗದ ವೈಶಿಷ್ಟ್ಯವನ್ನು ವಿವರಿಸಲಾಗಿದೆ. ಹೀಗಾಗಿ ಇದು ಶಿವಭಕ್ತಿ ಪ್ರಧಾನ ಕಾವ್ಯವೆಂದೇ ಹೇಳಬೇಕಾಗುತ್ತದೆ.

ಗಣಸಹಸ್ರನಾಮ:

ಲಿಂಗಣ್ಣಕವಿಯ ಮಗನಾದ ವೆಂಕಣ್ಣಕವಿಯಿಂದ ಪ್ರಸ್ತುತ ಕೃತಿ ಸೃಷ್ಟಿಯಾಗಿದೆ. ಇದು ಸ್ತೋತ್ರಕಾವ್ಯ. ವೀರಶೈವಸ್ತೋತ್ರಸಾಹಿತ್ಯವೆನಿಸಿದ ಈ ಕಾವ್ಯ ಬ್ರಾಹ್ಮಣ ಕವಿಯಿಂದ ಹುಟ್ಟಿದುದು ಗಮನಿಸಬೇಕಾದ ಅಂಶವಾಗಿದೆ. ಇದರಲ್ಲಿ ಭಾಮಿನಿ ಪರಿವರ್ಧಿನಿ, ವಾರ್ಧಕ- ಹೀಗೆ ೧೦೧ ಷಟ್ಪದಿಗಳಿರುತ್ತವೆ. ಈ ಕೃತಿಯಲ್ಲಿ ಪ್ರಥಮಗಣ-೪೧೨ ರುದ್ರಗಣ-೧೩೯, ವೃಷಭಗಣ-೨೦, ಪುರಾತನರು-೬೩, ಷೋಡಶಗಣ-೧೬, ತೇರಸರು-೧೩, ದಶಗಣ-೧೦, ಅಮರಗಣ-೩೫೨-ಹೀಗೆ ಒಂದು ಸಾವಿರದ ಇಪ್ಪತ್ತೈದು ಗಣಧರರ ನಾಮಾವಳಿಯಿದೆ. ಶಿವಭಕ್ತರಾದವರು ಈ ಗಣಸಹಸ್ರನಾಮಾವಳಿ ಮಂತ್ರದ ಮಹತ್ವ ತಿಳಿದುಕೊಳ್ಳುವುದು ಅವಶ್ಯವಿದೆಯೆಂಬುದನ್ನು ಕವಿ ಪ್ರತಿಪಾದಿಸಿದ್ದಾನೆ. ಈ ನಾಮಾವಳಿ ಪಠಣದಿಂದ ಜೀವನ್ಮುಕ್ತಿ, ಶಿವಸಾಕ್ಷಾತ್ಕಾರವಾಗುವುದೆಂಬುದು ಶಿವಭಕ್ತರ ಅಚಲ ನಂಬಿಕೆಯಾಗಿದೆ. ಹೀಗೆ ಮುಕ್ತಿಯ ಸಾಧನಕ್ಕೆ ಈ ಕೃತಿ ಸೋಪಾನದಂತಿದೆ. ಇದು ಪ್ರಕಟಿತ ಕೃತಿಯಾಗಿದೆ.

ಅನುವಾದ ಕೃತಿಗಳು

ಚೆನ್ನವೀರ ಮಾಹೇಶ್ವರನ 'ಕಾಶೀಕಾಂಡ' ಹಾಗೂ ಬ್ರಾಹ್ಮಣ ಕವಿ ತಿರುಮಲಭಟ್ಟನ 'ಕರ್ನಾಟಕ ಶಿವಗೀತೆ'ಗಳು ಅನುವಾದಿತ ಧಾರ್ಮಿಕ ಕೃತಿಗಳಾಗಿರುತ್ತವೆ.

ಕಾಶೀಕಾಂಡ:

ಅನುಪಲಬ್ಧ ಕೃತಿ. ಇದು. ಸಂಸ್ಕೃತ ಸ್ಕಾಂದಪುರಾಣಾಂತರ್ಗತ ಕಾಶೀಕಾಂಡದ ಕನ್ನಡ ಅನುವಾದ ಆಗಿರುವಂತಿದೆ. ಈ ಕೃತಿ ರಚನೆಯ ಮೂಲಕ ಈತನು 'ಕಾಶೀಕಾಂಡ ಚೆನ್ನವೀರ ಕವಿ'ಯೆಂದೇ ಪ್ರಸಿದ್ಧಿ ಪಡೆದ ಸಂಗತಿ ಗೊತ್ತಾಗುತ್ತದೆ. ಹೆಚ್ಚಿನ ವಿವರ ಲಭಿಸುವುದಿಲ್ಲ.

ಕರ್ನಾಟಕ ಶಿವಗೀತೆ:

ಹಿರಿಯ ವೆಂಕಟಪ್ಪನಾಯಕನ ಆಸ್ಥಾನ ಕವಿಯೂ ಉಭಯ ಸತ್ಕವಿ ಶಿರೋಮಣಿಯೂ ಆದ ತಿರುಮಲಭಟ್ಟನಿಂದ ಹಿರಿಯವೆಂಕಟಪ್ಪನಾಯಕ ಲೋಕೋಪಕಾರಾರ್ಥವಾಗಿ ಈ ಕೃತಿಯನ್ನು ವಾರ್ಧಕ ಷಟ್ಪದಿಯಲ್ಲಿ ಬರೆಯಿಸಿದ್ದಾನೆ. ಈ ಕೃತಿಯಲ್ಲಿ ೧೬ ಸಂಧಿಗಳಿದ್ದು, ೩೭೭ ವಾರ್ಧಕ ಷಟ್ಪದಿಗಳಿರುತ್ತವೆ. ಪದ್ಮಪುರಾಣದ ಉತ್ತರಕಾಂಡದಲ್ಲಿರುವ ಶಿವಗೀತೆಯ ಕನ್ನಡ ಅನುವಾದ ಈ 'ಕರ್ನಾಟಕ ಶಿವಗೀತೆ.' ಇದು ಮೋಕ್ಷಸಾಧಕ ವಿಚಾರಗಳನ್ನು ತಿಳಿಸುವ ಉತ್ತಮ ತಾತ್ವಿಕ ಗ್ರಂಥವೆನಿಸಿದೆ. ಕವಿ ತಿರುಮಲಭಟ್ಟನು ಪುರಾಣದ ವಸ್ತುವನ್ನು ಇಲ್ಲಿ ಧಾರ್ಮಿಕ ಕಾವ್ಯವಾಗಿಸಿದ್ದಾನೆ. ಇದನ್ನು "ಸಕಲ ವಿದ್ವತ್ತಿಲಕ ಹರಿಹರಾಧ್ಯವರ ವಾಜಪೇಯಾಂಧ್ರಕೃತ ಸರಸ ಶಿವಗೀತಾನುರಂಜಕವೆನಿಪ್ಪ ಟೀಕೆಗಳ ನೆಱೆ ನೋಡಿ ಪೇೞ್ದೆಂ' ಎಂದೂ ಹೇಳಿಕೊಂಡಿದ್ದಾನೆ. ತನ್ನ ಈ ಶಿವಗೀತೆ, ಭಗವದ್ಗೀತೆಗಿಂತಲೂ ಶ್ರೇಷ್ಠವಾದುದೆಂಬುದನ್ನು ". . . ನಂದ ಗೋಪನತನಯನು ತಾ ಪೇೞ್ದನೊಲಿದು ಭಗವದ್ಗೀತೆಯಂ. ದಿಟಮದೀ ಪರಮಶಿವ ಪುಣ್ಯದೇಶ ಕಾಲದೊಳು ಭುವನೋಪಕಾರಕ್ಕೆ ನರನಾದ ಹರಿಗೊರೆದ. ಶಿವಗೀತೆಗೇಂ ದೊರೆಯೆ ಸರಿಯೇ" ಎಂಬ ಮಾತಿನ ಮೂಲಕ ಸ್ಪಷ್ಟಪಡಿಸಿದ್ದಾನೆ. "ಸಾಧಾರಣನಿಗೂ ಸಾಧ್ಯವಾಗುವ ಸುಲಭವಾದ ಮುಕ್ತಿಮಾರ್ಗವೆಂದರೆ ಭಕ್ತಿಮಾರ್ಗ". "ಯಾರಿಗೆ ಜ್ಞಾನಯೋಗವು ಸಾಧ್ಯವಾಗುವುದಿಲ್ಲವೋ. ಯಾರಿಗೆ ಶಿವಾನುಭಾವವನ್ನು ಹಠಯೋಗದಿಂದ ಸಾಧಿಸಲಿಕ್ಕಾಗುವುದಿಲ್ಲವೋ. ಯಾರಿಗೆ ಸದ್ಗುರುವಿನ ಕೃಪೆಯಿಂದ ಶಿವಾನುಭವದ ದಿವ್ಯೋಪದೇಶವು ದೊರೆಯಲಾರದೋ ಅಂತಹವರು ಭಕ್ತಿಯೋಗದಿಂದಲೇ ಪರಶಿವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಇದನ್ನು ತಿಳಿಸುವುದೇ ಶಿವಗೀತೆಯ ಮುಖ್ಯಾಭಿಪ್ರಾಯ"ವೆಂಬ ವಿದ್ವಾಂಸರ ಮಾತುಗಳು ಈ ಕೃತಿಯ ಉದ್ದೇಶವನ್ನು ಪ್ರಕಟಪಡಿಸುತ್ತವೆ.

"ಅಗಸ್ತ್ಯ ಮಹರ್ಷಿಯು ಬಂದು ಶ್ರೀರಾಮನಿಗೆ ಉಪದೇಶಿಸಿದ ಶಿವದೀಕ್ಷಾವಿಧಿಯೂ. ಪರಶಿವನು ಪ್ರತ್ಯಕ್ಷವಾಗಿ ಶ್ರೀರಾಮನಿಗೆ ಪಾಶುಪತಾಸ್ತ್ರವನ್ನಿತ್ತ ಕಥೆಯೂ . . . . ಕೆಳದಿ ರಾಮೇಶ್ವರನು ಶ್ರೀರಾಮಚಂದ್ರನಿಗೆ ನಿಜವಿಭೂತಿಯನ್ನು ಬಿತ್ತರಿಸಿ, ವಿಶ್ವರೂಪದರ್ಶನ ಮಾಡಿಸಿ, ಪಿಂಡೋತ್ಪತ್ತಿ ವಿಧಾನ, ದೇಹಸ್ವರೂಪ,

ಜೀವನಸ್ವರೂಪ, ಪುಣ್ಯ-ಪಾಪಗಳ ಫಲ, ಉಪಾಸನಾ ವಿಧಾನ, ಮುಕ್ತಿಯ ಲಕ್ಷಣ, ಪಂಚಕೋಶಕಗಳ ವಿಚಾರ, ಭಕ್ತಿಯೋಗ, ಮೋಕ್ಷಾಧಿಕಾರ" ಮುಂತಾದ ಆತ್ಮ ಸಾಕ್ಷಾತ್ಕಾರಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ಈ ಕೃತಿ ತಿಳಿಸಿಕೊಡುತ್ತದೆ. ಹೀಗೆ 'ಕರ್ನಾಟಕ ಶಿವಗೀತೆ'ಯು ಶಿವಪಾರಮ್ಯ, ಭಕ್ತಿಯೋಗ, ಜೀವನ್ಮುಕ್ತಿಗಳನ್ನು ಬಿಡಿಸಿ ಹೇಳುವ ಅಮೂಲ್ಯ ಧಾರ್ಮಿಕ ಕೃತಿಯಾಗಿದೆ.

ಗದ್ಯಕೃತಿ

ಧಾರ್ಮಿಕ ಗದ್ಯಕೃತಿಗಳು ಈ ಅವಧಿಯಲ್ಲಿ ತೀರ ಕಡಿಮೆಯೆಂದೇ ಹೇಳಬೇಕು. 'ಶಿವಪೂಜಾವಿಧಾನ' ಈ ಅರಸುಮನೆತನದ ಆಸ್ಥಾನದಲ್ಲಿ ಸೃಷ್ಟಿಯಾದ ಏಕೈಕ ಧಾರ್ಮಿಕ ಗದ್ಯಕೃತಿಯಾಗಿದೆ.

ಶಿವಪೂಜಾವಿಧಾನ:

ಕಿರಿಯ ಸೋಮಶೇಖರನಾಯಕನ ಮಾವನೂ ಕೆಳದಿಯ ಮಹಾಮಂತ್ರಿಯೂ ಆಗಿದ್ದ ನಿರ್ವಾಣಾರ್ಯ ಈ ಕೃತಿ ಬರೆದಿದ್ದಾನೆ. ಗದ್ಯರೂಪದಲ್ಲಿರುವ ಈ ಕೃತಿಯ ಮಧ್ಯದಲ್ಲಿ ಸಂಸ್ಕೃತ ಶ್ಲೋಕಗಳೂ ಕಂಡುಬರುತ್ತವೆ. ವೀರಶೈವಧರ್ಮದ ಶಿವಪೂಜಾ ವಿಧಾನವನ್ನು ವೇದಶಾಸ್ತ್ರಾನುಸಾರವಾಗಿ ಇದರಲ್ಲಿ ಹೇಳಲಾಗಿದೆಯೆಂದು ಕವಿಚರಿತೆಕಾರರು ತಿಳಿಸುತ್ತಾರೆ. ಇದರ ಹಸ್ತಪ್ರತಿ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದಲ್ಲಿರುವುದಾಗಿ ತಿಳಿದುಬರುತ್ತದೆ. ಇದು ಇನ್ನೂ ಅಪ್ರಕಟಿತವಾಗಿದೆ.

ಕೆಳದಿ ಅರಸರ ಆಸ್ಥಾನದಲ್ಲಿ ಸೃಷ್ಟಿಯಾದ ಕನ್ನಡ ಧಾರ್ಮಿಕ ಸಾಹಿತ್ಯದಿಂದ ವ್ಯಕ್ತವಾಗುವ ಸಂಗತಿಗಳನ್ನು ಸಂಗ್ರಹಿಸಿ, ಹೀಗೆ ವಿವರಿಸಬಹುದಾಗಿದೆ:

೧. ಶರಣ ಸಾಹಿತ್ಯ(ವಚನ)ದ ಪ್ರಭಾವ ಕಂಡುಬರುವುದಿಲ್ಲ.

೨. ವೈದಿಕ, ಆಗಮಿಕ ಹಾಗೂ ವೇದಾಂತ ಪ್ರತಿಪಾದಕ ಸಾಹಿತ್ಯ ರಚನೆ ಅಧಿಕವಾಗಿದೆ.

೩. ಧಾರ್ಮಿಕ ಸಾಹಿತ್ಯ ಸೃಷ್ಟಿಸಿದವರು ರಾಜಗುರುಗಳು, ವೀರಶೈವ ಕವಿಗಳು.

೪. ಮಂತ್ರಿಗಳಿಂದಲೂ ಧಾರ್ಮಿಕ ಸಾಹಿತ್ಯ ನಿರ್ಮಾಣ.

೫. ವೀರಶೈವೇತರ ಕವಿಗಳಿಂದಲೂ ವೀರಶೈವ ಧಾರ್ಮಿಕ (ಶಿವ)ಸಾಹಿತ್ಯ ರಚನೆಯಾಯಿತು.

೬. ಧಾರ್ಮಿಕ ಸ್ವತಂತ್ರ ಕೃತಿ ರಚನೆ ಕಡಿಮೆ.

೭. ವೇದಾಗಮ ಪುರಾಣಾಂತರ್ಗತ ಸಂಸ್ಕೃತಗ್ರಂಥಗಳಿಗೆ ಬರೆದ ವ್ಯಾಖ್ಯಾನ ಅಧಿಕ ಪ್ರಮಾಣದಲ್ಲಿದೆ.

೮. ವೇದಾಗಮೋಕ್ತ ವಿಧಿ-ವಿಧಾನಗಳ ವ್ಯವಸ್ಥಿತವಾದ ನಿರೂಪಣೆ, ಆಚರಣೆ.

೯. ವೀರಮಾಹೇಶ್ವರ ಹಾಗೂ ವೀರಮಾಹೇಶ್ವರ ಸಾಹಿತ್ಯಕ್ಕೆ ವಿಶೇಷ ಮನ್ನಣೆ, ಪ್ರಾಶಸ್ತ್ಯ.

೧೦. ಧಾರ್ಮಿಕ ಸಾಹಿತ್ಯ ಶೈವ ಹಾಗೂ ವೀರಶೈವಪರವಾದುದಾಗಿದೆ.

೧೧. ಆಚಾರ್ಯರ ಸೈದ್ಧಾಂತಿಕ ಸಾಹಿತ್ಯಸೃಷ್ಟಿಗೆ ವಿಶೇಷ ಉತ್ತೇಜನ.

೧೨. ಶಿವಪಾರಮ್ಯ, ಶಿವಭಕ್ತಿ, ಶಿವದರ್ಶನಗಳ ಪರಾಕಾಷ್ಠತೆ.

೧೩. ಭಕ್ತಿಪರಸ್ತೋತ್ರ ಸಾಹಿತ್ಯ ರಚನೆಗೊಂಡಿತು.

೧೪. ಧಾರ್ಮಿಕ ಸಾಹಿತ್ಯದಲ್ಲಿ ಭಕ್ತಿಪರ ಸಾಹಿತ್ಯ, ವೈರಾಗ್ಯಪರ ಅಥವಾ ಜೀವನ್ಮುಕ್ತಿಪರ ಆತ್ಮಸಾಕ್ಷಾತ್ಕಾರ ಸಾಹಿತ್ಯ ಅಧಿಕವಾಗಿರುತ್ತದೆ.

೧೫. ಭಕ್ತಿಮಾರ್ಗ ಅಥವಾ ಭಕ್ತಿಯೋಗಕ್ಕೆ ಪ್ರಾಶಸ್ತ್ಯ.

೧೬. ವೀರಶೈವ ಅಥವಾ ಶಿವಾದ್ವೈತ ಸಿದ್ಧಾಂತ ಪ್ರತಿಪಾದನೆಗೆ ಕೆಳದಿ ಆಸ್ಥಾನ ಸಮರ್ಥ ವೇದಿಕೆಯಾಗಿ ಪರಿಣಮಿಸಿತು.

೧೭. ಶೈವ ಹಾಗೂ ವೀರಶೈವ ಧಾರ್ಮಿಕ ಸಾಹಿತ್ಯ ಕನ್ನಡ ಭಾಷೆಗಿಂತ ಧರ್ಮಭಾಷೆಯಾದ ಸಂಸ್ಕೃತದಲ್ಲಿಯೇ ಹೆಚ್ಚು ಪ್ರಮಾಣದಲ್ಲಿದೆ.

೧೮. ಪೌರಾಣಿಕ ಘಟನೆಗಳನ್ನು ವಸ್ತುವಾಗಿಟ್ಟುಕೊಂಡ ಕೃತಿಗಳಲ್ಲಿ ಶಿವಪಾರಮ್ಯ, ವಿಷ್ಣುಪಾರಮ್ಯವಿದ್ದು, ಭಕ್ತಿ ಸ್ಥಾಯಿಗೊಂಡಿದೆ.

೧೯. ಕೆಳದಿ ಅರಸುಮನೆತನದಲ್ಲಿ ವೀರಶೈವೇತರ ಧಾರ್ಮಿಕ ಕವಿಗಳಿಗೂ ರಾಜಾಶ್ರಯ ಲಭಿಸಿದೆ.

೨೦. ಕರ್ನಾಟಕ ಶಿವಗೀತೆಯಲ್ಲಿ ವೈದಿಕ, ಆಗಮಿಕ ವಿಧಿ-ವಿಧಾನಗಳ ತತ್ತ್ವೋಪದೇಶವಿದ್ದರೆ, ಶಿವಪೂಜಾದರ್ಪಣದಲ್ಲಿ ಆಗಮೋಕ್ತ ಶಿವಾರ್ಚನೆಯ ವೈಭವವಿದೆ.

೨೧. ವೀರಶೈವ ಸುಧಾನಿಧಿ ಟೀಕೆ, ವೀರಮಾಹೇಶ್ವರಾಚಾರ ಸುಧಾವಾರ್ಧಿ ಟೀಕೆಗಳಲ್ಲಿ ವೀರಶೈವ/ಶಿವಾದ್ವೈತ ಸಿದ್ಧಾಂತದ ಪ್ರತಿಪಾದನೆಯಿದೆ.

೨೨. ಬ್ರಾಹ್ಮಣಕವಿಗಳಿಂದ ಶುದ್ಧಧಾರ್ಮಿಕ ಕೃತಿಗಳು ಸೃಷ್ಟಿಯಾಗಲಿಲ್ಲ. ವಿಷ್ಣುಪಾರಮ್ಯ ಶಿವಪಾರಮ್ಯ, ಸಾರುವ ಗ್ರಂಥ ಬರೆದರು.

೨೩. ಭಕ್ತಿ ಹಾಗೂ ನೀತಿಪರವಾದ ಕೀರ್ತನ ಸಾಹಿತ್ಯ ನಿರ್ಮಾಣ.

೨೪. ಜೈನ ಕವಿಗಳಾಗಲೀ, ಇದರಿಂದ ರಚಿತವಾದ ಜೈನಧಾರ್ಮಿಕ ಗ್ರಂಥಗಳ ಉಲ್ಲೇಖವಾಗಲೀ ಕಂಡುಬರುವುದಿಲ್ಲ.

೨೫. ಧಾರ್ಮಿಕ ಸಾಹಿತ್ಯ ಕಂದ, ವೃತ್ತ, ಷಟ್ಪದಿ, ಗದ್ಯಗಳಲ್ಲಿದೆ.

೨೬. ಇವು ಆಗಮಿಕ ವೀರಶೈವ/ಶಿವಾಚಾರ್ಯ ಧರ್ಮವನ್ನು ಹೇಳುವ ಧಾರ್ಮಿಕಕೃತಿಗಳಾಗಿವೆ.

೨೭. 'ಸಜ್ಜನ ಶುದ್ಧ ಶಿವಾಚಾರ ಸಂಪಂನ', 'ವಿಶುದ್ಧ ವೈದಿಕಾದ್ವೈತ ಸಿದ್ಧಾಂತ ಪ್ರತಿಷ್ಠಾಪಕ', 'ಶಿವಗುರು ಭಕ್ತಿ ಪರಾಯಣ'-ಶಾಸನೋಕ್ತ ಈ ಹೇಳಿಕೆಗಳು ಕೆಳದಿ ಅರಸರ ವೀರಶೈವತ್ವವನ್ನೂ ವೀರಶೈವ ಧಾರ್ಮಿಕ ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹ. ಪ್ರೇರಣೆಗಳನ್ನೂ ಪ್ರಚುರಪಡಿಸುತ್ತವೆ.

೨೮. ಜನಪರ ಧಾರ್ಮಿಕ ಸಾಹಿತ್ಯಕ್ಕಿಂತ ಮುಮುಕ್ಷುಪರ ಸಾಹಿತ್ಯ ಸೃಷ್ಟಿಯಾಯಿತು.

೨೯. ಧಾರ್ಮಿಕ ಕೃತಿಗಳ ಮೂಲಕ ಸಾಂಪ್ರದಾಯಿಕ ವೀರಶೈವ ಧಾರ್ಮಿಕ ಮೌಲ್ಯಗಳ ಪ್ರಸಾರ.

೩೦. ಧಾರ್ಮಿಕ ಸಾಹಿತ್ಯದಲ್ಲಿ ಹೊಸಪರಿಕಲ್ಪನೆ. ಪ್ರಯೋಗಶೀಲತೆ ಕಂಡುಬರುವುದಿಲ್ಲ.

ಒಟ್ಟಿನಲ್ಲಿ ಕೆಳದಿ ಅರಸರ ಕಾಲದ ಕನ್ನಡ ಧಾರ್ಮಿಕ ಕೃತಿಗಳು ಆ ಕಾಲದ (ವೀರಶೈವದ) ಧಾರ್ಮಿಕ ಸ್ವರೂಪ. ಧಾರ್ಮಿಕ ಮನೋಭಾವ. ಧಾರ್ಮಿಕ ಸ್ಥಿತಿ-ಗತಿ. ಧಾರ್ಮಿಕ ಚಟುವಟಿಕೆಗಳನ್ನು ತಿಳಿಸಿಕೊಡುತ್ತವೆ. ಧಾರ್ಮಿಕ ಅಪ್ರಕಟಿತ ಕೃತಿಗಳ ಪ್ರಕಟನ ಕಾರ್ಯ. ಅನುಪಲಬ್ಧ ಕೃತಿಗಳ ಶೋಧಕಾರ್ಯ. ಹೊಸ ಕೃತಿಗಳ ಅನ್ವೇಷಣ ಕಾರ್ಯ ನಡೆಯುವಂತಾಗಲಿ.

ಸಹಾಯಕ ಗ್ರಂಥಗಳು

ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ
– ಡಾ. ಸಾ.ಶಿ. ಮರುಳಯ್ಯ
ಪ್ರ: ಬೆಂಗಳೂರು ವಿಶ್ವವಿದ್ಯಾಲಯ. ಬೆಂಗಳೂರು

ಕರ್ನಾಟಕ ಕವಿಚರಿತೆ (ಸಂಪುಟ: ೧, ೨)
–ಆರ್. ನರಸಿಂಹಾಚಾರ್
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಕೆಳದಿನೃಪವಿಜಯ
–ಸಂ. ಕೆಳದಿ ಗುಂಡಾ ಜೋಯಿಸ
ಪ್ರ: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ವೀರಶೈವ ಅಪ್ರಕಟಿತ ಗ್ರಂಥಸೂಚಿ
–ಎಸ್. ಶಿವಣ್ಣ
ಪ್ರ: ವೀರಶೈವ ಅಧ್ಯಯನಸಂಸ್ಥೆ, ಗದಗ

ಭೂ ಸವಕಳಿ ಮತ್ತು ಅದರ ನಿಯಂತ್ರಣ

– ಎಂ. ಮುನಿಸ್ವಾಮಯ್ಯ
– ಎಸ್.ಕೆ.ಭಟ್


ಭೂಮಿಯಲ್ಲಿಯ ವಿವಿಧ ಶಿಲೆಗಳು ಋತುಮಾನದ ಹವಾಗುಣಕ್ಕೆ ಸಿಲುಕಿ ಶಿಥಿಲವಾಗಿ ಮಣ್ಣು ರೂಪಗೊಳ್ಳುತ್ತದೆ. ಈ ಪರಿವರ್ತನೆ ಆಗಬೇಕಾದರೆ ಸಾವಿರಾರು ವರ್ಷಗಳೇ ಬೇಕು. ಸಾಮಾನ್ಯವಾಗಿ ಶಿಲೆಯ ಬಣ್ಣದಂತೆ ನೆಲದ ಬಣ್ಣವಿರುತ್ತದೆ. ಫಲವತ್ತಾದ ಮಣ್ಣನ್ನು ನದಿಗಳ ತೀರ ಮತ್ತು ನದಿಗಳ ಮುಖಜ ಭೂಮಿಯಲ್ಲಿ ಕಾಣುತ್ತೇವೆ. ಏಕೆಂದರೆ ಬೆಟ್ಟ, ಗುಡ್ಡ, ಇಳಿಮೇಡುಗಳ ಪ್ರದೇಶದಲ್ಲಿ ಮಳೆ ನೀರಿಗೆ ತಡೆಯನ್ನುಂಟುಮಾಡುವ ನೈಸರ್ಗಿಕವಾದ ಅರಣ್ಯ ಸಂಪತ್ತು ಹುಲ್ಲುಗಾವಲನ್ನು ನಾಶಮಾಡಿದುದರಿಂದ. ಆ ಪ್ರದೇಶದ ಮೇಲ್ಮಣ್ಣಿನ ಪದರು ಮಳೆಯಿಂದ ಕೊಚ್ಚಿಹೋಗಿ. ಕೊರಕಲು. ಕಮರಿ. ಹಳ್ಳ ಮುಂತಾದವುಗಳಿಂದ ಮಣ್ಣಿನ ಸವಕಳಿ ಹೆಚ್ಚಾಗಿ ಭೂಮಿಯು ಬರಡಾಗುತ್ತದೆ. ಈ ಮಣ್ಣಿನ ಸವೆತಕ್ಕೆ "ಭೂ ಸವೆತ ಅಥವಾ ಭೂ ಸವಕಳಿ" ಎಂದು ಕರೆಯುತ್ತಾರೆ. ಒಮ್ಮೆ ಈ ರೀತಿ ನಾಶವಾದ ಪರಿಸರವನ್ನು ಮತ್ತೆ ಮರಳಿ ಪಡೆಯಬೇಕಾದರೆ ನಾವು ಅತಿ ದುಬಾರಿ ಬೆಲೆಯನ್ನು ತೆರಬೇಕಾಗುತ್ತದೆ. ಹಾಗೂ ಬಹಳ ವರ್ಷಗಳು ಕಾಯಬೇಕಾಗುತ್ತದೆ.

ಅಮೇರಿಕಾದ ಒಂದು ಅಂದಾಜಿನ ಪ್ರಕಾರ ಈಗಾಗಲೇ ಮೂರನೇ ಒಂದು ಭಾಗ ಫಲವತ್ತಾದ ಭೂಮಿಯ ಮೇಲ್ಮಣ್ಣು ಭೂ ಸವಕಳಿಯಿಂದ ನಾಶವಾಗಿದೆ ಎಂದು ಹೇಳಲಾಗಿದೆ. ಆದರೆ "ಸರ್ ಹೆರಾಲ್ಡ್ ಗ್ಲೋವರ"ರವರ ಒಂದು ಅಂದಾಜಿನ ಪ್ರಕಾರ. ನಮ್ಮ ಭಾರತ ದೇಶದ ಸಾಗುವಳಿ ಭೂಮಿಯ ಅರ್ಧ ಭಾಗ ಈಗಾಗಲೇ ಭೂ ಸವಕಳಿಯಿಂದ ನಾಶವಾಗಿದೆ ಎಂದು ಹೇಳುತ್ತಾರೆ. ಆದಕಾರಣ ಒಮ್ಮೆ ಕೊಚ್ಚಿಹೋದ ಮಣ್ಣನ್ನು ಆ ಪ್ರದೇಶಕ್ಕೆ ಮತ್ತೆ ತಂದು ಹರಡಲು ಸಾಧ್ಯವಿಲ್ಲದ ಮಾತು. ಅದು ತುಂಬಾ ದುಬಾರಿಯ ಕೆಲಸವಾದ್ದರಿಂದ ನಾವು ಆದಷ್ಟು ಆದ್ಯತೆ ಮೇರೆಗೆ ಮೊದಲು ಫಲವತ್ತಾದ ಭೂ ಪ್ರದೇಶವನ್ನು ರಕ್ಷಿಸುವುದು. ನಂತರ ಈಗಾಗಲೇ ಭೂ ಸವಕಳಿಯಿಂದ ಸೊರಗಿರುವ ಪ್ರದೇಶವನ್ನು ಹಲವು ಬಗೆಯ ವೈಜ್ಞಾನಿಕ ವಿಧಾನಗಳನ್ನು ಅನುಸರಿಸಿ ಭೂ ಸವಕಳಿಯನ್ನು ನಿಯಂತ್ರಿಸಬೇಕು.

ಮಣ್ಣು ಮತ್ತು ಅದರ ಮೂಲ

ಭೂಮಿಯಲ್ಲಿರುವ ಶಿಲೆಗಳು ಓಮ. ಮಳೆ. ಗಾಳಿ. ಶಾಖ. ಚಳಿಗಳಿಂದ ಶಿಥಿಲಗೊಂಡು ಪುಡಿ ಪುಡಿಯಾಗಿ ಗರಸು. ನುರುಜು. ಮರಳಾಗಿ ನಂತರ ಮರಳು

ಇಳಿಜಾರು ಪ್ರದೇಶಗಳಲ್ಲಿ ಮೆಟ್ಟಿಲು ದಿಬ್ಬಗಳಿಗೆ ಹುಲ್ಲು
ಬೆಳೆಸದೇ ಇರುವುದರಿಂದ ಮೆಟ್ಟಿಲು ದಿಬ್ಬಗಳು
ಕೊರೆದು ಕೊರಕಲಾಗಿರುವುದು.



ಇಳಿಜಾರು ಪ್ರದೇಶಗಳಲ್ಲಿ ಮೆಟ್ಟಿಲು ದಿಬ್ಬಗಳ ಮೇಲೆ
ಹುಲ್ಲು ಬೆಳೆಸಿರುವುದರಿಂದ ಭೂ ಸವಕಳಿಯನ್ನು
ನಿಯಂತ್ರಿಸಬಹುದು.



ಸವೆದು ಒಂದಾಗಿ, ಜೇಡಿಯಾಗಿ ಜೈವಿಕ ವಸ್ತುಗಳಿಂದ ಕೂಡಿ ಮಣ್ಣಾಗುತ್ತದೆ. ಸಾಮಾನ್ಯವಾಗಿ ಮಣ್ಣಿನ ಪದರು ೧೦ ಸೆಂ.ಮೀ. ನಿಂದ ೧೦೦ ಸೆಂ.ಮೀ., ವರೆಗೆ ದಪ್ಪವಿರುತ್ತದೆ. ಕೆಲವು ಪ್ರದೇಶದಲ್ಲಿ ಇನ್ನೂ ದಪ್ಪವಿರುತ್ತದೆ. ಆದರೆ ಅದು ಇನ್ನೂ ದಪ್ಪವಿದ್ದರೆ ಮಳೆ ನೀರಿನಿಂದ ಸಾಗಿಸಲ್ಪಟ್ಟು ಶೇಖರಣೆಯಾದದ್ದು ಎಂದು ಹೇಳಬಹುದು. ಈ ಮಣ್ಣಿನ ಪದರು ಸಸ್ಯ, ಮರ, ಗಿಡಗಳ ಬೇರು ಬೆಳವಣಿಗೆಗೆ ಆಧಾರವಾದದ್ದು. ಮಣ್ಣಿನ ಮೇಲ್ಭಾಗ ನಯವಾದ ಒಂಡು ಜೇಡಿಮಣ್ಣಿನಿಂದಲೂ, ಮಧ್ಯಭಾಗ ಮರಳು ಮಿಶ್ರಿತ ಮಣ್ಣಿನಿಂದಲೂ, ತಳಭಾಗ ಮರಳು ಮಿಶ್ರಿತ ಗರಸು, ನುರುಜು, ಉಂಡೆಕಲ್ಲುಗಳಿಂದಲೂ ಕೂಡಿರುತ್ತದೆ. ಯಾವುದೇ ಸಸ್ಯ ರಾಶಿಯು ಸೊಂಪಾಗಿ ಬೆಳೆಯಬೇಕಾದರೆ ಮಣ್ಣಿನ ಗಾತ್ರ ಮತ್ತು ಮಣ್ಣಿನಲ್ಲಿಗುವ ಖನಿಜಾಂಶಗಳ ಮೇಲೆ ಅವಲಂಬನೆಯಾಗಿರುತ್ತದೆ.

ಸಾಮಾನ್ಯವಾಗಿ ಮಣ್ಣು ಮೂರು ಬಣ್ಣದಿಂದ ಕೂಡಿರುತ್ತದೆ. ಶಿಲೆಯಲ್ಲಿ ಕಬ್ಬಿಣಾಂಶವು ಹೆಚ್ಚಾಗಿದ್ದರೆ ಅಂತಹ ಪ್ರದೇಶದ ಮಣ್ಣು ಕೆಂಪಾಗಿರುತ್ತದೆ. ಮೂಲ ಕ್ಷಾರೀಯ ಮತ್ತು ಕ್ಷಾರೀಯ ಲವಣಾಂಶವುಳ್ಳ ಶಿಲೆಗಳಿದ್ದರೆ ಮಣ್ಣು ಕಪ್ಪಾಗಿರುತ್ತದೆ. ಹಾಗೂ ಇದು ಜೈವಿಕ ವಸ್ತುಗಳೊಂದಿಗೆ ಬೆರೆತುಕೊಂಡಿರುತ್ತದೆ. ಅಲ್ಲದೆ ಈ ಮಣ್ಣು ಜಾಸ್ತಿ ದಿವಸ ಓಡಿದಿಟ್ಟಿರುತ್ತದೆ. ಇವೆರಡು ಬಣ್ಣದ ಮಣ್ಣು ಬೆರೆತುಕೊಂಡಿದ್ದರೆ ಕೆಂಪು – ಕಪ್ಪು ಮಿಶ್ರಿತ ಮಣ್ಣು, ಅಥವಾ ಕಪ್ಪು – ಕೆಂಪು ಮಿಶ್ರಿತ ಮಣ್ಣೆಂದು ಕರೆಯುತ್ತಾರೆ. ಕಪ್ಪು ಮಣ್ಣಿನ ಸಾಂದ್ರತೆಯು ಕಡಿಮೆ ಇರುವುದರಿಂದ, ಭೂ ಸವಕಳಿಯು ಹೆಚ್ಚು. ಕೆಂಪು ಮಣ್ಣಿನ ಸಾಂದ್ರತೆಯು ಹೆಚ್ಚಿರುವುದರಿಂದ ಭೂ ಸವಕಳಿಯು ಕಡಿಮೆ ಹಾಗೂ ಮಿಶ್ರಿತ ಮಣ್ಣಿನಲ್ಲಿ ಸಾಂದ್ರತೆಯು ಮಧ್ಯಮ ಇರುವುದರಿಂದ ಭೂ ಸವಕಳಿಯು ಮಧ್ಯಮ.

ಭೂ ಸವಕಳಿಯ ದುಷ್ಪರಿಣಾಮಗಳು

ನೈಸರ್ಗಿಕವಾಗಿ ಬೆಳೆಯುವ ಸಸ್ಯಗಳು ಯಾವಾಗಲೂ ಆ ಪ್ರದೇಶದ ಹವಾಮಾನಕ್ಕೆ ಹೊಂದಿಕೊಂಡಿರುತ್ತವೆ. ಬೆಟ್ಟ, ಗುಡ್ಡ, ಇಳಿಮೇಡುಗಳ ಪ್ರದೇಶದಲ್ಲಿನ ಭೂ ಸವಕಳಿಯನ್ನು ನಿಯಂತ್ರಿಸುವ ಕಾಡು, ಹುಲ್ಲುಗಾವಲನ್ನು ನಾಶಮಾಡಿ ಅವೈಜ್ಞಾನಿಕ ಸಾಗುವಳಿ ಮಾಡಿದರೆ, ಆ ಪ್ರದೇಶವು ಮುಂಗಾರಿನ ಮಳೆಗೆ ಸಿಕ್ಕಿ ಭೂಮಿ ಮೇಲ್ಮಣ್ಣು ನೀರಿನಲ್ಲಿ ಕೊಚ್ಚಲ್ಪಟ್ಟು, ಪ್ರವಾಹವಾಗಿ, ರಸ್ತೆ, ಹಳ್ಳ, ಸೇತುವೆ, ಕೆರೆ, ಜಲಾಶಯಗಳಿಗೆ ಹೂಳು ತುಂಬಿ ಹಾಳು ಮಾಡುವುದಲ್ಲದೆ ನೀರನ್ನು ಕಲುಷಿತಗೊಳಿಸುತ್ತದೆ. ಹೀಗೆ ಸವಕಳಿಯಿಂದ ಸಸ್ಯಗಳಿಗೆ ಬೇಕಾದ ಫಲವತ್ತಾದ ಮಣ್ಣು ಕೊಚ್ಚಿ ಹೋಗಿ, ಕೆಳಗೆ ಗರಸು ಮಣ್ಣು ಉಳಿಯುವುದರಿಂದ ಆ ಪ್ರದೇಶದ ಭೂಮಿ ಬರಡಾಗುತ್ತದೆ. ಅದ್ದರಿಂದಲೇ ಮಣ್ಣಿನ ಸವಕಳಿಯನ್ನು "ರೈತನನ್ನು ನಿಧಾನವಾಗಿ ಸಾಯಿಸುವ ಭೂತ" ಎಂದು ಕರೆಯುತ್ತಾರೆ.

ಭೂ ಸವಕಳಿಯ ವಿಧಗಳು


ಭೂ ಸವಕಳಿಯು ಗಾಳಿ ಮತ್ತು ನೀರಿನಿಂದ ಆಗುತ್ತದೆ. ಗಾಳಿಯಿಂದಾಗುವ ಭೂ ಸವಕಳಿ ಕಡಿಮೆ. ಈ ಬಗೆಯ ಭೂ ಸವಕಳಿಯನ್ನು ಬೆಂಗಾಡು, ಅರೆಬೆಂಗಾಡು,



ಸಮಮಟ್ಟದ ಪ್ರದೇಶದ ಎರೆ ಭೂಮಿಯಲ್ಲಿ ನೂರಾರು ಎಕರೆ ಮೇಲ್ಮಣ್ಣಿನ ಪದರದ ಸವಕಳಿಯನ್ನು ಕಾಣಬಹುದು.



ಮೇಲ್ಮಣ್ಣಿನ ಪದರದ ಸವಕಳಿಯಿಂದ ಭೂಮಿಯು ಬರಡಾಗಿ ಕಲ್ಲಿನ ಕುರುಚಲುಗಿಡಗಳೂ ಸಹ ಹುಟ್ಟಿರುವುದು.



ಭೂ ಸವಕಳಿಯ ಪರಿಣಾಮದಿಂದ ಮರದ ರೆಂಬೆಗಳಂತಿರುವ
ಕೊರಕಲುಗಳು



ಕೊರಕಲುಗಳು ದೊಡ್ಡದಾದ ಮೇಲೆ ಹಳ್ಳಗಳಾಗಿರುವುದು

ಮರುಭೂಮಿಯಲ್ಲಿ ಕಾಣಬಹುದು. ಕರ್ನಾಟಕದಲ್ಲಿ ಮೈಸೂರು ಜಿಲ್ಲೆಯಲ್ಲಿರುವ ಕಾವೇರಿ ತೀರದಲ್ಲಿರುವ ತಲಕಾಡು ಪ್ರದೇಶದಲ್ಲಿ ನೋಡಬಹುದು. ಇಲ್ಲಿ ಕೆಲವು ದೇವಾಲಯಗಳು ಗಾಳಿಗೆ ತೂರಿಬಂದ ಮರಳಿನಿಂದ ಮುಚ್ಚಿ ಹೋಗಿವೆ.

ನಮ್ಮ ದೇಶದಲ್ಲಿ ಮಳೆನೀರಿನಿಂದಾಗುವ ಸವಕಳಿಯೇ ಅಧಿಕ. ಮುಖ್ಯವಾಗಿ ಈ ನೀರಿನಿಂದಾಗುವ ಸವಕಳಿಯನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

೧ ಸಮಮಟ್ಟ ಪ್ರದೇಶದ ಮೇಲ್ಮಣ್ಣಿನ ಪದರದ ಸವಕಳಿ.

೨ ಕೊರಕಲುಗಳಿಂದಾಗುವ ಸವಕಳಿ.

೩ ಕಮರಿಗಳಿಂದಾಗುವ ಸವಕಳಿ.

೪ ಹಳ್ಳಗಳಿಂದಾಗುವ ಸವಕಳಿ.

೧ ಸಮಮಟ್ಟ ಪ್ರದೇಶದ ಮೇಲ್ಮಣ್ಣಿನ ಸವಕಳಿ:

ಈ ಪ್ರದೇಶದಲ್ಲಿ ಭೂ ಸವಕಳಿಯು ನೀರಿನ ಹರಿವಿನಿಂದಾಗುತ್ತದೆ. ಕಪ್ಪು ಭೂಮಿಯಲ್ಲಿ ನೀರು ಬೇಗನೆ ಇಂಗದ ಕಾರಣ ಹರಿದು ಹೋಗುವುದೇ ಹೆಚ್ಚು. ಅಲ್ಲದೇ ಈ ಮಣ್ಣಿನ ಸಾಂದ್ರತೆಯು ಕಡಿಮೆ ಇರುವುದರಿಂದ ಸುಲಭವಾಗಿ ಮಣ್ಣು ಕೊಚ್ಚಿ ಹೋಗುತ್ತದೆ. ಭೂಮಿಯು ಸಾಮಾನ್ಯವಾಗಿ ಸಮತಟ್ಟಾಗಿರುವ ಕಡೆ ಈ ಬಗೆಯ ಸವಕಳಿಯು ಅಗೋಚರವಾಗಿ ನೂರಾರು ಎಕರೆಗಳಲ್ಲಿ (ಬದು, ಒಡ್ಡುಗಳಿಲ್ಲದೆ ಇದ್ದರೆ) ಒಂದೇ ತರಹ ಇರುತ್ತದೆ. ಮಣ್ಣಿನ ಸವಕಳಿ ತಕ್ಷಣ ಗೋಚರಿಸುವುದಿಲ್ಲ. ಏನಿದ್ದರೂ ಕೆಲವು ವರ್ಷಗಳು ಕಳೆದರೆ ಫಲವತ್ತಾದ ಮೇಲ್ಮಣ್ಣಿನ ಪದರ ಸವೆದು ಹೋಗಿ, ಗರಸು ಕಂಡಾಗ ಮಣ್ಣಿನ ಸವಕಳಿಯ ಮಹಿಮೆ ತಿಳಿಯುವುದು. ಇದು ತುಂಬಾ ಹಾನಿಕಾರಕ.

೨. ಕೊರಕಲುಗಳಿಂದಾಗುವ ಸವಕಳಿ:

ಇದು ಸಾಮಾನ್ಯವಾಗಿ ಬೆಟ್ಟ, ಗುಡ್ಡ, ಇಳಿಮೇಡುಗಳಲ್ಲಿ, ಸಣ್ಣ ಜರಿ ಕೊರಕಲುಗಳಿಂದಾಗುವ ಸವಕಳಿ. ಅಡೆ ತಡೆಗಳು ಇಲ್ಲದಿದ್ದರೆ, ಮರದ ಬುಡದಲ್ಲಿ ರೆಂಬೆಗಳು ಒಡೆದ ಹಾಗೆ ಮುಂಗಾರಿಯ ಮಳೆಯ ನೀರಿನ ಸವಕಳಿ ಆಗುತ್ತದೆ.

೩. ಕಮರಿಗಳಿಂದಾಗುವ ಸವಕಳಿ:

ಸಣ್ಣ ಕೊರಕಲುಗಳು ದೊಡ್ಡದಾದ ಮೇಲೆ ಕಮರಿಗಳಾಗಿ, ಅವುಗಳ ಅಗಲ ಜಾಸ್ತಿಯಾಗಿ ನೀರು ವೇಗವಾಗಿ ಹರಿಯುತ್ತದೆ. ಕೆಲವೆಡೆ ಮೇಲ್ಗಡೆಯಿಂದ ಹರಿದು ಬಂದ ನೀರು ಕಮರಿಗಳ ದಡದ ಮೇಲಿಂದ ಕೆಳಕ್ಕೆ ಉರುಳಿದರೆ ಜಲಪಾತವಾಗಿ ದಡವನ್ನು ಕುಸಿಯುವಂತೆ ಮಾಡಿ ಕಮರಿಯ ಅಗಲವನ್ನು ಮತ್ತಷ್ಟು ಹೆಚ್ಚಿಸುತ್ತದೆ. ನೀರು ಉರುಳಿ ಬಿದ್ದ ಜಾಗದಲ್ಲಿ ಗುಂಡಿಗಳಾಗಿ ಮತ್ತೆ ನೀರು ಮುಂದೆ ಹರಿದು ಹೋಗುತ್ತದೆ. ಈ ಗುಂಡಿಗಳಲ್ಲಿ ನೀರಿನ ಸುಳಿಗಳಾಗುತ್ತವೆ. ಈ ಸುಳಿಗಳಿಂದ ಭೂ ಸವಕಳಿಯು ಮತ್ತಷ್ಟು ಜಾಸ್ತಿಯಾಗುತ್ತದೆ. ಇದು ತುಂಬಾ ಅಪಾಯಕಾರಿಯು ಹೌದು.



[illegible]



[illegible]



ಧಾರವಾಡ ಜಿಲ್ಲೆ [illegible] ತಾಲೂಕಿನ [illegible]



[illegible] ತಾಲೂಕಿನ [illegible]

೪. ಹಳ್ಳಗಳಿಂದಾಗುವ ಸವಕಳಿ:

ಕೊರಕಲು ಕಮರಿಗಳನ್ನು ದಾಟಿ ಮುಂದೆ ಬಂದರೆ ದೊಡ್ಡ ಹಳ್ಳಗಳಾಗಿ ನೀರು ರಭಸದಿಂದ ಹರಿಯುತ್ತಿರುತ್ತದೆ. ಇದು ಹಳ್ಳದ ದಡ ಮತ್ತು ತಳ ಎರಡನ್ನು ಸವೆಸಿಕೊಂಡು ಮುನ್ನುಗ್ಗುತ್ತದೆ. ಹೀಗೆ ಹರಿದು ಹೋಗುತ್ತಿರುವಾಗ ತಿರುವು ಸಿಕ್ಕಿದರೆ ನೀರಿನಲ್ಲಿ ಬಂದ ಮಣ್ಣನ್ನು ಪಕ್ಕಕ್ಕೆ ಹರಡಿ ಮುಂದೆ ಹೋಗುತ್ತದೆ. ಹಳ್ಳವು ನೇರವಾಗಿ ಹರಿಯುತ್ತಿದ್ದರೆ. ತಳ ಮತ್ತು ದಡವನ್ನು ಕೊರೆಯುತ್ತದೆ. ಇದರಿಂದ ಭೂ ಸವಕಳಿಯು ಜಾಸ್ತಿ ಹಾಗೂ ಅಪಾಯಕಾರಿ.

ಇತರ ಮೂಲಗಳಿಂದಾಗುವ ಸವಕಳಿ

ಸಾಮಾನ್ಯವಾಗಿ ಬಂಡಿ ದಾರಿಗಳಲ್ಲಿ ಬಂಡಿಯ ಚಕ್ರಗಳಿಂದ ದಾರಿಯು ಸವೆದು ಕೊರಕಲುಗಳಾಗುತ್ತವೆ. ಸಾಗುವಳಿ ಭೂಮಿಯನ್ನು ಉಳುಮೆ ಮಾಡುವಾಗ ಇಳುಕಲಿಗೆ ಅಡ್ಡಲಾಗಿ ಉಳುಮೆ ಮಾಡುವ ಬದಲು ಉದ್ದುದ್ದವಾಗಿ ಉಳುಮೆ ಮಾಡಿ ಪೈರನ್ನು ನೆಟ್ಟರೆ ಭೂ ಸವಕಳಿಗೆ ದಾರಿಮಾಡಿಕೊಟ್ಟಂತಾಗುತ್ತದೆ. ರಸ್ತೆ ಮತ್ತು ರೈಲು ದಾರಿಗಳನ್ನು ನಿರ್ಮಿಸಲು ರಸ್ತೆ ಪಕ್ಕದಲ್ಲಿ ಕಂದಕ ತೋಡಿ ಮಣ್ಣನ್ನು ರಸ್ತೆಗೆ ಹಾಕುವುದಲ್ಲದೆ ಮತ್ತೆ ಈ ರೀತಿ ತೋಡಿದ ಜಾಗದಲ್ಲೇ ಕಂದಕ ತೋಡುತ್ತಾ ಹೋದರೆ ಕೊರಕಲು ಬಿದ್ದು ಭೂ ಸವಕಳಿಗೆ ದಾರಿ ಮಾಡಿಕೊಡುತ್ತದೆ.


ಭೂ ಸವಕಳಿಯ ಪ್ರಮಾಣ

ಕೆಂಪು ಮಣ್ಣಿನಲ್ಲಿ ಸಾಂದ್ರತೆಯು ಹೆಚ್ಚಿರುವುದರಿಂದ ಭೂ ಸವಕಳಿಯು ಕಡಿಮೆ. ಕಪ್ಪು ಮಣ್ಣಿನಲ್ಲಿ ಸಾಂದ್ರತೆಯು ಕಡಿಮೆ ಇರುವುದರಿಂದ ಸವಕಳಿಯು ಅಧಿಕ. ಹಾಗೂ ಮಿಶ್ರಿತ ಮಣ್ಣಿನಲ್ಲಿ ಸವಕಳಿಯು ಮಧ್ಯಮ. ಭೂ ಸವಕಳಿಯ ಪ್ರಮಾಣವು ಮಳೆಯ ಪ್ರಮಾಣ ಮತ್ತು ಮಳೆ ಬೀಳುವ ಸಮಯ ಹಾಗೂ ಮಣ್ಣಿನ ಗುಣಮಟ್ಟ, ಇಳುಕಲು ಮತ್ತು ನೀರಿನ ವೇಗ ಅವುಗಳ ಮೇಲೆ ಅವಲಂಬನೆಯಾಗಿರುತ್ತದೆ.

ಭೂ ಸವಕಳಿಯನ್ನು ತಡೆಯಲು ಸಸ್ಯಗಳ ಪಾತ್ರ

ಸಸ್ಯಗಳು ಭೂ ಸವಕಳಿಯನ್ನು ತಡೆಯಲು ಮತ್ತು ಅಂತರ್ಜಲವನ್ನು ಹೆಚ್ಚಿಸಲು ತುಂಬ ಸಹಕಾರಿಯಾಗಿವೆ. ಇವುಗಳ ಪ್ರಯೋಜನವನ್ನು ಕೆಳಗಿನಂತೆ ರುಜುವಾತು ಪಡಿಸಿದೆ:

೧. ಮರ-ಗಿಡಗಳು ಮಳೆ ಹನಿಯನ್ನು ಎಲೆಯಿಂದ ತಡೆದು, ನಂತರ ಭೂಮಿಗೆ ಇಳಿಯಲು ಬಿಡುತ್ತವೆ. ಬಿದ್ದ ಹನಿಯ ನೀರು ನಿಧಾನವಾಗಿ ಭೂಮಿಗೆ ಇಂಗಲು ಸಹಕರಿಸುತ್ತದೆ. ಹಾಗೂ ಮಳೆ ಮೋಡಗಳಾಗಲು, ಆವಿಯಾಗಿ ಹೋಗಲು ಸಹಕರಿಸುತ್ತದೆ.



ಜಲ್ಲಗಳ ದಾದ ವೆಲ್ಲಿಂದ ನೀರು ಕೆಳಕೆ, ಉರುಳುವುದರಿಂದಾಗುವ
ಬಲವಾದ ಭೂ ಸವಕಳಿ.



ಕೊರಕಲುಗಳು ದೊಡ್ಡದಾಗಿ... ಅಗಲ, ಆಳ ದೊಡ್ಡದಾಗಿರುವುದು.

ಇಳಿಜಾರುಗಳಲ್ಲಿ ಮಳೆಯು ಬಿದ್ದಾಗಲೆಲ್ಲದರ ಪರಿಣಾಮ -
ವಾಗಿ ಭೂ ಸವೆತವನ್ನು ಕಾಣಬಹುದು.



೨. ಇಳಿಮೇಡುಗಳಲ್ಲಿ ಹುಲ್ಲು ಮತ್ತು ಸಸ್ಯಗಳನ್ನು ಬೆಳೆಸುವುದರಿಂದ ಹಾಗೂ ಇಳುಕಲಿಗೆ ಅಡ್ಡಲಾಗಿ ಉಳುಮೆ ಮಾಡಿ ಸಸ್ಯ ನೆಡುವುದರಿಂದ ಭೂ ಸವಕಳಿಯನ್ನು ತಡೆಯಬಹುದು.

೩. ಸಸ್ಯಗಳ ಬೇರುಗಳು ಮಣ್ಣಿನಲ್ಲಿ ತೂರಿರುವುದರಿಂದ ನೀರು, ಬೇರಿನ ಪಕ್ಕದಲ್ಲಿಳಿಯಲು ಸಹಕರಿಸುತ್ತವೆ. ಹಾಗೂ ಭೂ ಸವಕಳಿಯನ್ನು ನಿಯಂತ್ರಿಸುತ್ತವೆ.

೪. ಸಸ್ಯಗಳ ಎಲೆಗಳು ಬಿದ್ದು ಕೊಳೆತು ಭೂಮಿಯನ್ನು ಫಲವತ್ತಾಗಿ ಮಾಡುವುದಲ್ಲದೆ ಭೂಮಿಯಲ್ಲಿರುವ ತೇವವನ್ನು ಬಹುಕಾಲ ಹಿಡಿದಿಡುತ್ತದೆ. ಹಾಗೂ ಕೊಳೆತ ಎಲೆಗಳಿರುವುದರಿಂದ ಭೂ ಸವಕಳಿಯನ್ನು ಸಹ ತಡೆಯುತ್ತದೆ.

ಭೂ ಸವಕಳಿಯನ್ನು ತಡೆಯುವ ವಿಧಾನಗಳು

ರೈತರಿಗೆ ಭೂ ಸವಕಳಿಯ ಬಗ್ಗೆ ಇರುವ ನಿರ್ಲಕ್ಷ, ಅಜ್ಞಾನ ಹಾಗೂ ಮುಂದಾಲೋಚನೆ ಇಲ್ಲದಿರುವುದರ ಫಲವೆಂದು ಹೇಳಬಹುದು. ಬೆಟ್ಟ, ಗುಡ್ಡ, ಇಳಿಮೇಡುಗಳಲ್ಲಿ ಇಳಿಜಾರುಗಳಿದ್ದರೆ ಭೂ ಸವಕಳಿಯು ಜಾಸ್ತಿ. ಇಳಿಜಾರು ಕಡಿಮೆ ಇದ್ದರೆ ಭೂ ಸವಕಳಿಯು ಕಡಿಮೆ. ಆದ್ದರಿಂದ ಇಂಥ ಇಳಿಮೇಡುಗಳಲ್ಲಿ ಅರಣ್ಯ ಹುಲ್ಲುಗಾವಲು ಬೆಳೆಸುವುದು ಒಳ್ಳೆಯದು. ಸಾಗುವಳಿ ಮಾಡಬೇಕಾದರೆ ಇಂತಹ ಇಳಿಮೇಡುಗಳಲ್ಲಿ ಮೊದಲು ಸಮಪಾತಳಿ ದಿಬ್ಬಗಳನ್ನು ಇಳುಕಲಿಗೆ ಅಡ್ಡಲಾಗಿ ೫೦ ರಿಂದ ೧೫೦ ಅಡಿ ಅಂತರಗಳಿಗೊಂದರಂತೆ ನಿರ್ಮಿಸಬೇಕು. ಇದು ಆರ್ಥಿಕವಾಗಿ ರೈತರಿಗೆ ತುಂಬಾ ದುಬಾರಿ. ಇಲ್ಲದಿದ್ದರೆ ಭೂಮಿಯ ಮೇಲ್ಮಣ್ಣೆಲ್ಲಾ ಕೊಚ್ಚಿ ಹೋಗುತ್ತದೆ. ಅಲ್ಲದೆ ಬೇಸಿಗೆಯಲ್ಲಿ ದನ ಕಾಯುವವರು ಇಳಿಮೇಡುಗಳಲ್ಲಿರುವ ಹುಲ್ಲುಗಾವಲಿಗೆ ಬೆಂಕಿ ಇಟ್ಟರೆ ಹುಲ್ಲಿನ ಜೊತೆಯಲ್ಲಿ ಕಾಡು ಸುಟ್ಟು ಹೋಗುತ್ತದೆ. ಆದ್ದರಿಂದ ಈ ಪ್ರದೇಶದಲ್ಲಿ ಮುಂಗಾರಿನ ಮಳೆ ನೀರಿಗೆ ಭೂ ಸವಕಳಿಯು ಅಧಿಕ. ದೇಶದಲ್ಲಿ ಭೂ ಸವಕಳಿಯನ್ನು ಹತೋಟಿಗೆ ತರಬೇಕಾದರೆ ಕೆಳಗೆ ತಿಳಿಸಿರುವ ವಿಧಾನಗಳನ್ನು ಪಾಲಿಸಬೇಕು.

೧. ಸಮಪಾತಳಿಯಲ್ಲಿ ಬದು, ದಿಬ್ಬಗಳನ್ನು ನಿರ್ಮಿಸುವುದು.

೨. ಸಮಪಾತಳಿಯ ಬದುಗಳ ಪಕ್ಕದಲ್ಲಿ ಉದ್ದನೆಯ ಕಂದಕಗಳನ್ನು ತೋಡುವುದು.

೩. ಇಳಿಮೇಡುಗಳಲ್ಲಿ ಮೆಟ್ಟಿಲು ದಿಬ್ಬಗಳನ್ನು ನಿರ್ಮಿಸುವುದು.

೪. ಬೆಟ್ಟ, ಗುಡ್ಡ, ಇಳಿಮೇಡುಗಳಲ್ಲಿ ಅರಣ್ಯ ಹುಲ್ಲುಗಾವಲು ಮತ್ತು ಬೆಳೆ ಬೆಳೆಸುವುದು.

೫. ಪರಿವರ್ತಿತ ಬೆಳೆಗಳ ವಿಧಾನವನ್ನು ಅನುಸರಿಸುವುದು.

೬. ಮಿಶ್ರ ಬೆಳೆಗಳನ್ನು ಬೆಳೆಯುವ ತಂತ್ರಗಾರಿಕೆಯನ್ನು ರೂಪಿಸಿಕೊಂಡರೆ ಭೂ ಸವಕಳಿಯನ್ನು ನಿಯಂತ್ರಿಸಬಹುದು.

೧. ಸಮಪಾತಳಿಯಲ್ಲಿ ಬದುಗಳನ್ನು ನಿರ್ಮಿಸುವುದು:

ಸಮಪಾತಳಿಯಲ್ಲಿ ಬದುಗಳನ್ನು ಇಲಿಜಾರಿಗೆದುರಾಗಿ ನಿರ್ಮಿಸಬೇಕಾದರೆ, ಮೊದಲು ಭೂಮಿಯ ಇಳಕಲಿನ ಪ್ರಮಾಣ, ಮಣ್ಣಿನ ಗುಣ, ಆ ಪ್ರದೇಶದ ಪ್ರಮಾಣವನ್ನು ಗಮನದಲ್ಲಿಟ್ಟುಕೊಂಡು ಬದುಗಳನ್ನು ನಿರ್ಮಿಸಬೇಕು. ಇಳುಕಲು ಜಾಸ್ತಿ ಇದ್ದಕಡೆ ಎತ್ತರದ ಬದುಗಳನ್ನು ೩೦೦ ಅಡಿಗಳ ಅಂತರದಲ್ಲಿ ನಿರ್ಮಿಸಬೇಕು. ಬದುಗಳ ಮಧ್ಯದ ಜಮೀನಿನಲ್ಲಿ ಬಿದ್ದ ಮಳೆಯ ನೀರು ಅಲ್ಲಿಯೇ ಇಂಗಿ ಭೂ ಸವಕಳಿಯನ್ನು ತಡೆಯುವುದಲ್ಲದೆ ಅಂತರ್ಜಲದ ಪ್ರಮಾಣವನ್ನು ಹೆಚ್ಚಿಸುವುದು. ಹೀಗೆ ಮಾಡಿದ ಮೇಲೆ ಮಳೆಗಾಲದಲ್ಲಿ ಬಿಸಿನೀರಿನ ಚಿಲುಮೆಗಳನ್ನು ಈ ಪ್ರದೇಶದಲ್ಲಿ ನೋಡಬಹುದು.

೨. ಸಮಪಾತಳಿಯಲ್ಲಿ ಕಂದಕವನ್ನು ತೋಡುವುದು:

ಇಳಿಮೇಡುಗಳ ಇಳುಕಲಿಗೆ ಅಡ್ಡಲಾಗಿ ಸಮಪಾತಳಿಯ ಬದುಗಳ ಮೇಲ್ಭಾಗದ ಪಕ್ಕದಲ್ಲಿ ಕಂದಕಗಳನ್ನು ಉದ್ದಕ್ಕೂ ತೋಡಿದರೆ(೨.೦೦ ಮೀ.ಆಳ), ಬಿದ್ದ ಮಳೆ ನೀರು ಕಂದಕಗಳಲ್ಲಿ ತುಂಬಿ ಬಹಳ ದಿವಸದವರೆಗೂ ತಂಪುಕೊಡುತ್ತದೆ. ಅಲ್ಲದೆ ಅಂತರ್ಜಲವು ಹೆಚ್ಚಾಗುತ್ತದೆ. ಹಾಗೂ ಈ ಪ್ರದೇಶದಲ್ಲಿ ಭೂ ಸವಕಳಿಯನ್ನು ಕೂಡ ನಿಯಂತ್ರಿಸಬಹುದು.

೩. ಮೆಟ್ಟಲು ದಿಬ್ಬಗಳನ್ನು ನಿರ್ಮಿಸುವುದು:

ಹೆಚ್ಚು ಮಳೆ ಬೀಳುವ ಬೆಟ್ಟ, ಗುಡ್ಡ ಪ್ರದೇಶದಲ್ಲಿ ಇಳಿಮೇಡಿನ ಇಳಿಜಾರು ಹೆಚ್ಚಿರುವ ಕಡೆ ಇಳುಕಲಿಗೆ ಅಡ್ಡಲಾಗಿ ಸಮಪಾತಳಿಯಲ್ಲಿ ದೊಡ್ಡ ದಿಬ್ಬಗಳನ್ನು ನಿರ್ಮಿಸಿ ನೀರು ಹರಿದು ಹೋಗಲು ದಿಬ್ಬದ ಪಕ್ಕದಲ್ಲಿ ಕಾಲುವೆ ತೋಡಿ, ಪ್ರತಿ ಮೆಟ್ಟಲು ದಿಬ್ಬದಿಂದ ಕೆಳಗಡೆ ಹರಿಯುವ ಜಾಗದಲ್ಲಿ ಬಚ್ಚಲುಗಳನ್ನು ನಿರ್ಮಿಸಿ, ನೀರು ಅದರಲ್ಲಿ ಹರಿಯಲು ಬಿಟ್ಟರೆ ಭೂ ಸವಕಳಿಯನ್ನು ನಿಯಂತ್ರಿಸಿ, ಭೂಮಿಯಲ್ಲಿ ನೀರು ಇಂಗಲು ಸಹಕಾರಿಯಾಗುತ್ತದೆ.

೪. ಕ್ರಮಬದ್ಧವಾಗಿ ಅರಣ್ಯ ಬೆಳೆಸುವುದು:

ಮನುಷ್ಯ ದುರಾಸೆಯಿಂದ ಇಳಿಮೇಡುಗಳಲ್ಲಿ ಸಾಗುವಳಿ ಮಾಡಲು ಪಕ್ಕದ ಅರಣ್ಯ ಪ್ರದೇಶಕ್ಕೆ ಸಂದರ್ಭ ನೋಡಿ ಜಮೀನನ್ನು ಒತ್ತುವರಿ ಮಾಡಲು ಕಾಡಿಗೆ ಬೆಂಕಿ ಇಟ್ಟು, ಅಲ್ಲಿ ಬೆಳೆದ ಹುಲ್ಲು, ಸಸ್ಯ, ಗಿಡ, ಮರಗಳನ್ನು ಸುಟ್ಟು, ಅರಣ್ಯ ಮತ್ತು ಕಂದಾಯ ಅಧಿಕಾರಿಗಳು ನೋಡುತ್ತಾರೆಂಬ ಭಯಕ್ಕೆ ಬದು, ಬಂಕಗಳನ್ನು ಮಾಡದೇ ಉಳುಮೆ ಮಾಡಿ ಬೆಳೆ ಇಡುತ್ತಾನೆ. ಆದರೆ ಮೊದಲ ಮುಂಗಾರಿ ಬೆಳೆಗೆ ಅಡೆತಡೆ ಇಲ್ಲದ ಕಾರಣ ಮೇಲ್ಮಣ್ಣು ಕೊಚ್ಚಿ ಹೋಗಿ ಮತ್ತೆ ನೂರಾರು ಎಕರೆಗಳಲ್ಲಿ ಕುರುಚಲು ಗಿಡಗಳೂ ಹುಟ್ಟದಂತೆ ಮಾಡುತ್ತಾನೆ.

ಆದ ಕಾರಣ ಇಂಥ ಗುಡ್ಡಗಾಡಿನ ಇಳಿಮೇಡಿನ ಪ್ರದೇಶದಲ್ಲಿ ನೈಸರ್ಗಿಕವಾಗಿ ಬೆಳೆದ ಕಾಡನ್ನು ಯಾವಾಗಲೂ ಹಾಳು ಮಾಡಬಾರದು. ಅದಕ್ಕೆ ಯಾವ

ತೊಂದರೆಯನ್ನೂ ಮಾಡದೆ ಕಾಪಾಡಬೇಕು. ಒಂದು ವೇಳೆ ಆ ಪ್ರದೇಶದಲ್ಲಿ ಕಾಡನ್ನು ಕಡಿದರೆ. ಕೂಡಲೇ ಅಲ್ಲಿ ಅರಣ್ಯವನ್ನು ಕ್ರಮಬದ್ಧವಾಗಿ ಬೆಳೆಸಬೇಕು. ದನ ಕರುಗಳನ್ನು ಕಾಡಿನಲ್ಲಿ ಮೇಯಲು ಬಿಡಬಾರದು. ದನಗಳನ್ನು ಕಾಡಿನಲ್ಲಿ ಮೇಯಲು ಬಿಟ್ಟರೆ ದನಗಳಿಗೇನಾದರೂ ರೋಗ ತಗುಲಿದ್ದರೆ. ಅದು ಕಾಡು ಪ್ರಾಣಿಗಳಿಗೂ ಬರುವಂತೆ ಮಾಡುತ್ತದೆ. ದನ ಕಾಯುವವರು ಕಾಡಿಗೆ ಬೆಂಕಿ ಇಡಬಾರದು. ಹೀಗೆ ನೈಸರ್ಗಿಕತೆಯನ್ನು ಕಾಪಾಡುವುದರಿಂದ ಭೂ ಸವಕಳಿಯನ್ನು ನಿಯಂತ್ರಿಸಬಹುದು.

೫. ಗೋಮಾಳದ ಹುಲ್ಲುಗಾವಲನ್ನು ರಕ್ಷಿಸುವುದು:

ಭಾರತ. ಭೂಮಂಡಲದ ಮೂವತ್ತನೇ ಒಂದು ಭಾಗ ಮಾತ್ರ ಹುಲ್ಲುಗಾವಲು ಪ್ರದೇಶವನ್ನು ಹೊಂದಿದೆ. ಆದರೆ ಪ್ರಪಂಚದ ಆರನೇ ಒಂದು ಭಾಗ ಜನಸಂಖ್ಯೆ ಭಾರತದಲ್ಲಿದೆ. ಜೊತೆಗೆ ಜಾನುವಾರುಗಳು. ಕುರಿ. ಮೇಕೆಗಳು ಅಧಿಕ. ಹುಲ್ಲುಗಾವಲುಗಳು ಕಡಿಮೆ. ಆದ್ದರಿಂದ ಜಾನುವಾರುಗಳು ಮೇವಿಲ್ಲದೆ ಕಡಿಮೆ ಹಾಲು ಕೊಡುತ್ತವೆ. ಬೇಸಿಗೆಯಲ್ಲಂತೂ ಜಾನುವಾರುಗಳಿಗೆ ಮೇವಿಲ್ಲದ ಮರದ ಸೊಪ್ಪು ತಿಂದು ಬದುಕುವ ಗತಿ ಬರುತ್ತದೆ. ಆದ್ದರಿಂದ ಮೊದಲು ಜನಸಂಖ್ಯೆ ಹೆಚ್ಚದಂತೆ ಹತೋಟಿಯಲ್ಲಿಡಬೇಕು. ಪ್ರತಿಯೊಬ್ಬರು ತಮ್ಮ ಜವಾಬ್ದಾರಿಯನ್ನು ಅರಿತು ನೈಸರ್ಗಿಕವಾಗಿ ಬೆಳೆದಿರುವ ಅರಣ್ಯ. ಹುಲ್ಲುಗಾವಲಿಗೆ ಬೆಂಕಿ ಇಟ್ಟು ನಾಶಮಾಡದೆ ಕಾಪಾಡಿದರೆ. ಅಷ್ಟೇ ಪ್ರಯೋಜನವನ್ನು ಇವುಗಳಿಂದ ಪಡೆಯುತ್ತೇವೆಂಬುದನ್ನು ಮನಗಾಣಬೇಕು.

ಭೂ ಸವಕಳಿ ತಡೆಯುವಲ್ಲಿ ಕೃಷಿ ವಿಜ್ಞಾನದ ಪಾತ್ರ


ಬರಡು ಭೂಮಿನ್ನು ಉಳುಮೆಮಾಡಿ ಬೆಳೆಯಿಡುವುದರಿಂದ ಅಥವಾ ಹುಲ್ಲು ಬೆಳೆಯುವುದರಿಂದ ಆ ಜಾಗದಲ್ಲಿ ೫ ಪಟ್ಟು ಭೂ ಸವಕಳಿಯನ್ನು ಕಡಿಮೆ ಮಾಡುವುದಲ್ಲದೆ ಶೇಕಡಾ ೬೫ ಭಾಗ ನೀರಿನಲ್ಲಿ ಮಣ್ಣು ಕೊಚ್ಚಿ ಹೋಗುವುದನ್ನು ನಿಯಂತ್ರಿಸುವುದಲ್ಲದೆ ವಿವಿಧ ಪ್ರದೇಶದಲ್ಲಿ ಕೆಳಗೆ ಹೇಳಿರುವ ಕೃಷಿಶಾಸ್ತ್ರ ವಿಧಾನಗಳನ್ನು ಅಳವಡಿಸಿಕೊಂಡರೆ ಭೂ ಸವಕಳಿಯನ್ನು ಮತ್ತಷ್ಟು ನಿಯಂತ್ರಿಸಬಹುದು.

೧. ಬೆಳೆ ಪೈರಿನ ಹೊದಿಕೆ ವಿಧಾನ :

ಸಾಗುವಳಿ ಭೂಮಿಯನ್ನು ಪೈರುಗಳು ಹೊದಿಕೆಯಂತೆ ನೆಲವನ್ನು ಮುಚ್ಚಿಕೊಂಡಿರುವುದರಿಂದ ಮಳೆಯ ಹನಿಯು ನೇರವಾಗಿ ಪೈರಿನ ಮೇಲೆ ಬಿದ್ದು ನಂತರ ನೀರು ಪೈರಿನಿಂದ ನೆಲಕ್ಕೆ ತೊಟ್ಟಿಕ್ಕಿ ಸಾಕಷ್ಟು ಇಂಗುವಂತೆ ಮಾಡಿ. ಹರಿದು ಹೋಗುವ ನೀರಿನ ಪ್ರಮಾಣವನ್ನು ನಿಯಂತ್ರಿಸುತ್ತದೆ. ಆದ್ದರಿಂದ ಭೂ ಸವಕಳಿಯನ್ನು ಕೂಡ ನಿಯಂತ್ರಿಸುತ್ತದೆ.


೨. ಪರಿವರ್ತಿತ ಬೆಳೆಯನ್ನು ಇಡುವ ವಿಧಾನ:

ಸಾಗುವಳಿ ಭೂಮಿಯಲ್ಲಿ ಕಾಲಕ್ಕನುಗುಣವಾಗಿ ಬೆಳೆಯನ್ನು ಸರದಿಮೇಲೆ ಪರಿವರ್ತಿಸಿದರೆ (ಬದಲಾಯಿಸಿದರೆ) ಭೂಮಿಯನ್ನು ಫಲವತ್ತಾಗಿ ಮಾಡುವುದಲ್ಲದೆ ಭೂ ಸವಕಳಿಯನ್ನು ಸಹ ನಿಯಂತ್ರಿಸುತ್ತದೆ.



ಪಾರಂಪರ್ಯದಿಂದ ಬಂದಿರುವ ಬೆಳೆ ಅಧಾಂತ ಬೇಸಾಯ ಪದ್ಧತಿ.

ಸಮಪಾತಳಿಯ ಬದುಗಳಲ್ಲಿ ಸಸಿ ಬೆಳೆಸುವಿಕೆ



ಸಮಪಾತಳಿಯಾಗಿ ಬೆಳೆ ಬೆಳೆಸುವ ವಿಧಾನ

೩. ಸಾಗುವಳಿ ಭೂಮಿಯಲ್ಲಿ ಮಡಿಗಳನ್ನು ಮಾಡಿ ಬೆಳೆಯುವ ವಿಧಾನ:

ಸಮಮಟ್ಟದ ಜಮೀನುಗಳಲ್ಲಿ ಹಾಗೂ ಇಳಿಮೇಡುಗಳಲ್ಲಿ ಮೆಟ್ಟಿಲ ಬದುಗಳಿರುವ ಜಮೀನಿನಲ್ಲಿ ಸಣ್ಣ ಬದುಗಳನ್ನು ನಿರ್ಮಿಸಿ, ಕಾಲಮಾನಕ್ಕೆ ತಕ್ಕುದಾದ ಬೆಳೆಗಳನ್ನು ಇಟ್ಟರೆ ಇಳಿಜಾರಿನಲ್ಲಿ ಉರುಳಿ ಹೋಗುವ ನೀರಿನ ವೇಗವನ್ನು ತಡೆಯುವುದಲ್ಲದೆ, ಭೂ ಸವಕಳಿಯನ್ನು ನಿಯಂತ್ರಿಸುತ್ತದೆ. ಈ ಸಣ್ಣ ಚೌಕು ಮಡಿಗಳು ಶೇಕಡಾ ೬೦-೮೦ ರಷ್ಟು ಮಳೆ ನೀರನ್ನು ತಡೆಯುವ ಸಾಮರ್ಥ್ಯ ಹೊಂದಿವೆ.

೪. ಸಮಪಾತಳಿಯಲ್ಲಿ ಬೆಳೆ ನೆಡುವುದು:

ಇಳಿಮೇಡುಗಳಲ್ಲಿ ಇಳುಕಲಿಗೆ ಅಡ್ಡಲಾಗಿ ಉತ್ತಿ, ಆ ಉಳುಮೆಯ ಗೆರೆಯಲ್ಲೇ ಬೆಳೆ ಇಡುವುದರಿಂದ ಮಳೆಯ ನೀರು ಸಾಕಷ್ಟು ಇಂಗಿ, ಹರಿದು ಹೋಗುವ ನೀರನ್ನು ತಡೆಯುವುದಲ್ಲದೆ ಭೂ ಸವಕಳಿಯನ್ನು ಸಹ ನಿಯಂತ್ರಿಸುತ್ತದೆ.

೫. ಕೊರಕಲು, ಕಮರಿಗಳನ್ನು ದೊಡ್ಡದಾಗದಂತೆ ತಡೆಯುವ ವಿಧಾನ:

ಕೊರಕಲು, ಕಮರಿಗಳು ದೊಡ್ಡದಾಗಲು ಬಿಟ್ಟರೆ ಭೂ ಸವಕಳಿಯು ಅಧಿಕ. ಆದ್ದರಿಂದ ಕೊರಕಲು, ಕಮರಿಗಳಲ್ಲಿ ಇಳುಕಲು ಅತಿ ಕಡಿಮೆ ಇರುವ ಕಡೆ (೧೦ ಡಿಗ್ರಿ ಒಳಗೆ) ಒಡ್ಡುಗಳನ್ನು ಅಡ್ಡಲಾಗಿ ನಿರ್ಮಿಸಿದರೆ ಭೂ ಸವಕಳಿಯನ್ನು ತಡೆಯುವುದಲ್ಲದೆ ಭೂಮಿಯಲ್ಲಿ ಸಾಕಷ್ಟು ನೀರು ಇಂಗುವಂತೆ ಮಾಡುತ್ತದೆ. ಹಾಗೂ ಹಳ್ಳಗಳ ಪಕ್ಕದಲ್ಲಿ ದಡ ಕುಸಿದು ಬೀಳದಂತೆ ಪೊದೆ, ಗಿಡ, ಕತ್ತಾಳೆ ಮುಂತಾದ ಸಸ್ಯಗಳನ್ನು ಬೆಳೆಸಿದರೆ ಭೂ ಸವಕಳಿಯನ್ನು ತಡೆಯಬಹುದು.

ಭಾರತವು ಹಳ್ಳಿಗಾಡಿನ ಪ್ರದೇಶವಾದ್ದರಿಂದ ಜನರ ಮುಖ್ಯ ಕಸಬು ವ್ಯವಸಾಯ. ನಾವು ಪರಂಪರೆಯಿಂದ ಬಂದ ವ್ಯವಸಾಯ ಪದ್ಧತಿಯ ಜೊತೆಗೆ ಆಧುನಿಕ ವೈಜ್ಞಾನಿಕ ಪದ್ಧತಿಯನ್ನೂ ಅಳವಡಿಸಿಕೊಂಡರೆ, ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬಹುದು. ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕಾದರೆ, ಫಲವತ್ತಾದ ಭೂಮಿಯ ಮೇಲ್ಮಣ್ಣು ಕೊಚ್ಚಿ ಹೋಗದಂತೆ ಮೇಲೆ ಹೇಳಿದ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡು ಭೂ ಸವಕಳಿಯನ್ನು ನಿಯಂತ್ರಿಸಿ, ಮಳೆ ನೀರು ಸಾಕಷ್ಟು ಭೂಮಿಯಲ್ಲಿ ಇಂಗುವಂತೆ ಮಾಡಿದರೆ ಮಾತ್ರ ಸಾಧ್ಯ. ಹಾಗೂ ಈ ವೈಜ್ಞಾನಿಕ ವಿಧಾನಗಳನ್ನು ಅಳವಡಿಸಿಕೊಂಡರೆ ರಾಜ್ಯದಲ್ಲಿರುವ ಕೆರೆಗಳಿಗೆ ೨-೩ ವರ್ಷಕ್ಕೊಮ್ಮೆ ಮಾತ್ರ ಹೂಳೆತ್ತಲು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುವುದನ್ನು ಕೂಡ ತಪ್ಪಿಸಬಹುದು. ಇದಕ್ಕೆ ಜನರಿಗೆ ಸೂಕ್ತ ಮಾರ್ಗದರ್ಶನ ಬೇಕು. ಒಂದೇ ವರ್ಷದಲ್ಲಿ ಎಲ್ಲವನ್ನು ನಿಯಂತ್ರಿಸುತ್ತೇವೆಂಬುದು ಸಾಧ್ಯವಿಲ್ಲ. ಆದ್ದರಿಂದ ಇವನ್ನು ಕಾರ್ಯರೂಪಕ್ಕೆ ತರಲು ಸಮರೋಪಾದಿಯಾಗಿ ಹಲವು ವರ್ಷಗಳು ಶ್ರಮಿಸಿದ್ದೇ ಆದರೆ ಅದರ ಫಲವನ್ನು ನಾವು ಕೆಲವೇ ವರ್ಷಗಳಲ್ಲಿ ಕಾಣುತ್ತೇವೆ.

ಮಹಾಕವಿ ಸುಬ್ರಮಣ್ಯ ಭಾರತಿ

—ಎ. ಮುರಿಗೆಪ್ಪ

ಈಗ್ಗೆ ಸುಮಾರು ನೂರು ವರುಷಗಳ ಹಿಂದೆ ಅಂದರೆ ೧೮೮೨ರಲ್ಲಿ ತಮಿಳುನಾಡಿನ ತಿರುನಲ್ವೇಲಿ ಜಿಲ್ಲೆಯ ಎಟ್ಟಿಯಪುರಂನಲ್ಲಿ ಮಹಾಪುರುಷನೊಬ್ಬನ ಜನನವಾಯಿತು. ಅವರೇ ಮುಂದೆ ಸುಬ್ರಮಣ್ಯ ಭಾರತಿ ಎಂದು ಪ್ರಸಿದ್ಧರಾದರು. ತಮಿಳು ಸಮುದಾಯ ಭಾರತಿಯವರನ್ನು 'ಯುಗಪುರಷ'ನೆಂದು ಗೌರವಿಸುತ್ತದೆ. 'ಭಾರತಿ', ಏಳರ ವಯಸ್ಸಿನಲ್ಲಿಯೇ ಅವರ ಕವನ ರಚನಾ ಶಕ್ತಿಯನ್ನು ಗಮನಿಸಿ ಜನರು ಅವರಿಗಿತ್ತು ಗೌರವಿಸಿದ ಬಿರುದು.

ಸುಬ್ರಮಣ್ಯ ಭಾರತಿ ಅವರ ಜನನ ೧೮೮೨ರ ಡಿಸೆಂಬರ ಹನ್ನೆರಡನೆಯ ತಾರೀಖು ಆಯಿತು. ಚಿನ್ನಸ್ವಾಮಿ ಅಯ್ಯರ ಮತ್ತು ಲಕ್ಷ್ಮಿ ಅಮ್ಮಾಳ ಅವರಿಗೆ ಇವರು ಏಕಮಾತ್ರ ಪುತ್ರರು. ತಮ್ಮ ತಂದೆಯವರ ಮೂಲಕ ಸಂಗೀತ ಮತ್ತು ತಮಿಳು ಸಾಹಿತ್ಯದಲ್ಲಿ ಪ್ರಚಂಡ ಜ್ಞಾನವನ್ನು, ಗಣಿತ ಮತ್ತು ಇಂಗ್ಲಿಷ ಭಾಷೆಯಲ್ಲಿ ವ್ಯಾವಹಾರಿಕ ಜ್ಞಾನವನ್ನು ಇವರು ಪಡೆದರು. ತಮ್ಮ ಐದನೆಯ ವಯಸ್ಸಿನಲ್ಲಿ ವಿದ್ಯಾಭ್ಯಾಸವನ್ನು ಆರಂಭಿಸಿದ ಸುಬ್ರಮಣ್ಯರು ಏಳನೆಯ ವಯಸ್ಸಿನಲ್ಲಿ ಪುರಾಣಕಾವ್ಯವನ್ನು ಕರತಲಾಮಲಕಗೊಳಿಸಿಕೊಂಡರು. ಇಷ್ಟರಲ್ಲಿಯೇ ಸ್ವತಃ ಕವನ ರಚನೆಯಲ್ಲಿ ತೊಡಗಿದ್ದರು ಸುಬ್ರಮಣ್ಯ. ಕವಿಮನಸ್ಸು ಸದಾ ಶಾಂತ ವಾತಾವರಣ ಹಾಗೂ ಏಕಾಂತವನ್ನು ಬಯಸುತ್ತಿತ್ತು. ಇದೇ ಸಮಯದಲ್ಲಿ ಅಂದರೆ ೧೮೮೭ರಲ್ಲಿ ಭಾರತಿಯವರಿಗೆ ಮಾತೃವಿಯೋಗವುಂಟಾಯಿತು. ಸುಮಾರು ಹತ್ತು ವರ್ಷಗಳ ಕಾಲ ಇವರ ತೊಳಲಾಟವನ್ನು ಗಮನಿಸಿ ೧೮೯೭ರಲ್ಲಿ ಚೆಲ್ಲಮ್ಮನವರೊಡನೆ ಇವರ ಮದುವೆಯನ್ನು ಮಾಡಲಾಯಿತು. ಅದೇ ವರ್ಷ ಭಾರತಿಯವರ ತಂದೆ ತೀರಿಕೊಂಡರು. ಭಾರತಿಯವರು ತಮ್ಮ ಊರನ್ನು ಬಿಟ್ಟು ವಾರಣಾಸಿಗೆ ತೆರಳಿದರು. ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಯನವನ್ನು ನಡೆಸಿ ಹಿಂದಿರುಗಿದರು. ಎಟ್ಟಿಯಪುರಂ ಅರಸನಲ್ಲಿ ಆಸ್ಥಾನಕವಿಯಾಗಿ ನಂತರ ಮಧುರೆಯ ಸೇತುಪತಿ ಕಾಲೇಜಿನಲ್ಲಿ ಸಂಸ್ಕೃತ ಪಂಡಿತರಾಗಿ ಕಾರ್ಯ ನಿರ್ವಹಿಸಿ, ಅವನ್ನು ತ್ಯಜಿಸಿದರು.

೧೯೦೪ರಲ್ಲಿ ಮದ್ರಾಸಿನ 'ಸ್ವದೇಶ ಮಿತ್ರ' ಪತ್ರಿಕೆಯ ಉಪಸಂಪಾದಕರಾದರು. ೧೯೦೫ರಲ್ಲಿ ಭಾರತಿ ಮತ್ತು ಸಹೋದರಿ ನಿವೇದಿತ ಅವರ ಭೇಟಿ ಆಯಿತು. ಈ ಭೇಟಿ ಭಾರತಿಯವರ ವ್ಯಕ್ತಿತ್ವದ ಮೇಲೆ ಪ್ರಭಾವವನ್ನು ಬೀರಿತು. ಸ್ತ್ರೀ ವಿಮೋಚನೆ. ದೇಶಭಕ್ತಿಯ ಬಗ್ಗೆ ಭಾರತಿಯವರ ವ್ಯಕ್ತಿತ್ವದ ಮೇಲೆ ಪ್ರಭಾವವನ್ನು ಬೀರಿತು. ಸ್ತ್ರೀ

ವಿಮೋಚನೆ, ದೇಶಭಕ್ತಿಯ ಬಗ್ಗೆ ಭಾರತಿಯವರಲ್ಲಿ ಜಾಗೃತಿಯುಂಟಾಯಿತು. ಮುಂದೆ ತಮ್ಮ ಎರಡು ಕವನ ಸಂಕಲನಗಳನ್ನು ನಿವೇದಿತ ಅವರಿಗೆ ಭಾರತಿಯವರು ಅರ್ಪಿಸಿದರು. ೧೯೦೬ರಲ್ಲಿ ಭಾರತೀಯ ಕಾಂಗ್ರೆಸಿನ ಕಲ್ಕತ್ತ ಅಧಿವೇಶನದಲ್ಲಿ ಪ್ರತಿನಿಧಿಯಾಗಿ, ಪತ್ರಿಕಾಕರ್ತರಾಗಿ ಇವರು ಭಾಗವಹಿಸಿದರು. ಅಲ್ಲಿಯ ಟಾಗೂರರ ಹಾಗೂ ಇನ್ನಿತರರ ಕ್ರಾಂತಿ ಸಾಹಿತ್ಯ ಭಾರತಿಯವರ ಮೇಲೆ ಪ್ರಭಾವವನ್ನು ಬೀರಿತು. ಇದರ ಫಲವಾಗಿ ಭಾರತಿಯವರು ಟಾಗೂರರ, ಬಂಕಿಂಚಂದ್ರರ ಕೃತಿಗಳನ್ನು ತಮಿಳು ಭಾಷೆಗೆ ಅನುವಾದಿಸಿದರು.

ಸ್ವದೇಶ ಮಿತ್ರಕ್ಕೆ ಸೇರಿದ ಸ್ವಲ್ಪ ಸಮಯದಲ್ಲಿಯೇ 'ಬಾಲಭಾರತ' ಮತ್ತು 'ಭಾರತ' ಎಂಬ ನಿಯತಕಾಲಿಕೆಗಳ ಸಂಪಾದಕರಾದರು. ತಮ್ಮ ಬರವಣಿಗೆಯ ಮೂಲಕ ಬ್ರಿಟಿಷರ ವಿರುದ್ಧ ಯುದ್ಧ ಸಾರಿದರು. ಆದರೆ ಬ್ರಿಟಿಷರ ಉಪಟಳವನ್ನು ಸಹಿಸಲಾರದೆ ಫ್ರೆಂಚ ಅಧಿಪತ್ಯಕ್ಕೆ ಸೇರಿದ ಪಾಂಡಿಚೆರಿಯಲ್ಲಿ ತಲೆಮರೆಸಿಕೊಳ್ಳಬೇಕಾಯಿತು. ಅಲ್ಲಿಯೇ ಅವರ ಹತ್ತು ವರ್ಷದ ಜೀವಿತಕಾಲದಲ್ಲಿ ಅವರ ಪ್ರಸಿದ್ಧ ಸಾಹಿತ್ಯ ರಚನೆ ಆಯಿತು. ನಂತರ ಕಡಯುಂನಲ್ಲಿ ಎರಡು ವರ್ಷ ಕಳೆದು ೧೯೨೦ರಲ್ಲಿ ಪುನಃ ಸ್ವದೇಶ ಮಿತ್ರವನ್ನು ಸೇರಿದರು. ಜೀವನದುದ್ದಕ್ಕೂ ಹೋರಾಟದ ಬದುಕಿನಿಂದಾಗಿ ಅವರ ಆರೋಗ್ಯ ಕ್ಷೀಣಿಸತೊಡಗಿತ್ತು. ೧೯೨೧ರಲ್ಲಿ ದೇವಸ್ಥಾನದ ಆನೆಯೊಂದರ ದಾಳಿಗೆ ತುತ್ತಾದ ಭಾರತಿ ಉಳಿದ ಜೀವನವನ್ನು ಹಾಸಿಗೆಯಲ್ಲಿಯೇ ಕಳೆಯಬೇಕಾಯಿತು. ೧೯೨೧, ಸಪ್ಟೆಂಬರ್ ೧೨ರಂದು ಭಾರತಿ ದೇಹತ್ಯಾಗ ಮಾಡಿದರು. ದೈಹಿಕವಾಗಿ ಇಲ್ಲವಾದರೂ ದೇಶಭಕ್ತರ, ತಮಿಳುನಾಡಿನ ಪ್ರಜೆಗಳೆಲ್ಲರ ಹೃದಯದಲ್ಲಿ ಭಾರತಿ ಪ್ರತಿಷ್ಠಾಪಿತರಾದರು.

ತೀರ ಕಡಿಮೆ ಸಮಯದಲ್ಲಿ ಮಹತ್ತನ್ನು ಸಾಧಿಸಿದ ಮಹಾಕವಿ ಜೀವನ ಭಾರತಿಯವರದು. ಭಾರತಿಯವರು ಕೈಯಾಡಿಸದ ಸಾಹಿತ್ಯ ವಸ್ತುವಿಲ್ಲ. ಧಾರ್ಮಿಕವಾಗಿ ಸ್ತೋತ್ರಗಳನ್ನು, ನಾಲ್ಮಣಿ ಮಾಲೆಯನ್ನು ತಾತ್ವಿಕ ಪದಗಳಾಗಿ ರಚಿಸಿದರು. ನಾಡು-ನುಡಿ, ದೇಶಭಕ್ತ-ದೇಶಭಕ್ತಿಯನ್ನು, ಸ್ವಾತಂತ್ರ್ಯ ಚಳುವಳಿಯನ್ನು ಹಾಡಾಗಿಸಿದರು. ಕಿರುಗೀತೆಗಳನ್ನು, ವೃತ್ತಪದಗಳನ್ನು ನಿರ್ಮಿಸಿದರು. ಪುರಾಣವನ್ನು ಪದವಾಗಿಸಿದರು.

ಭಾರತಿಯವರು ಹುಟ್ಟಿ ಬೆಳೆದದ್ದು ಭಾರತದ ದಾಸ್ಯ ಸಂಕಲೆಯಲ್ಲಿ. ಇದರಿಂದ ಸಿಡಿದೆದ್ದು ಬ್ರಿಟಿಷರ ವಿರುದ್ಧ ಕವಿತೆಯ ಮೂಲಕ ಯುದ್ಧ ಸಾರಿದರು. ದಾಸ್ಯವನ್ನು ಒಪ್ಪಿಕೊಂಡು ಜಿಡ್ಡುಗಟ್ಟಿದ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡುವುದು ಅಷ್ಟೇನೂ ಸುಲಭದ ಕಾರ್ಯವಾಗಿರಲಿಲ್ಲ. ಈ ಹಿರಿಯ ಹೊಣೆಗಾಗಿ ಆರಿತೂ ಹೆಗಲುಕೊಟ್ಟರು ಭಾರತಿ.

ಸಂಸ್ಕೃತ ಛಂದಸ್ಸನ್ನು ತ್ಯಜಿಸಿ, ಜನಸಾಮಾನ್ಯರಿಗೆ ಹತ್ತಿರವಾದ ಸರಳದೇಸಿ ಛಂದಸ್ಸಿನ ಮೂಲಕ ಜನಸಾಮಾನ್ಯರ ಆಡುನುಡಿಯನ್ನು ಬಳಸಿ ಜನರೊಡನೆ ಸಂಪರ್ಕಿಸಿದರು. ಇದರಿಂದಾಗಿ ಜನಸಾಮಾನ್ಯರು ಇವರ ಕಾವ್ಯಕ್ಕೆ, ಕಾವ್ಯದ ಗೇಯಕ್ಕೆ ಮರುಳಾಗಿ ಅದರ ಮೂಲಕ ಚಳುವಳಿಯ ಕರೆಗೆ ಸ್ಪಂದಿಸಬೇಕಾಯಿತು. ಭಾರತಿ ಪರಂಪರಾಗತ ಕಾವ್ಯಶೈಲಿಯನ್ನು ತ್ಯಜಿಸಿದರೇ ವಿನಹ ಕಾವ್ಯವನ್ನು ತ್ಯಜಿಸಲಿಲ್ಲ. ಅದೇ ಕಾವ್ಯವನ್ನು ಸಮಕಾಲೀನ ರಾಜಕೀಯ, ಸಾಮಾಜಿಕ ಪರಿಸರಕ್ಕೆ ತಕ್ಕಂತೆ ಅಳವಡಿಸಿ, ಬಳಸಿ, ಕೃಷಿಗೈದರು.

ಇದುವರೆಗೆ ಕಡೆಗಣಿಸಲ್ಪಟ್ಟ ಜನಸಾಮಾನ್ಯ. ಆತನ ಜೀವನ ಮತ್ತು ಆಶೋತ್ತರಗಳು ಭಾರತಿಯವರ ಕಾವ್ಯಮೂಸೆಯಲ್ಲಿ ಆಕಾರ ಪಡೆದವು. ದಲಿತರ ಬಗ್ಗೆ ಕಳಕಳಿ, ಶೋಷಣೆಯ ವಿರುದ್ಧ ಪ್ರತಿಭಟನೆ ಭಾರತಿಯವರ ಕಾವ್ಯದಲ್ಲಿ ಕಂಡುಬರುತ್ತದೆ. ಜಾನಪದ ಪ್ರಕಾರವನ್ನು ಬಳಸಿ ಮೀನುಗಾರರ, ಕೃಷಿಕರ ಪದಗಳಿಗೆ ಇವರು ಹೊಸ ಜೀವ ತುಂಬಿದ್ದು ಉಂಟು.

ಬ್ರಿಟಿಷರ ಆಳ್ವಿಕೆಯನ್ನು ವಿರೋಧಿಸುವ ಭಾರತಿಯವರು ಬ್ರಿಟಿಷರ ಕೊಡುಗೆಯನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಆದ್ದರಿಂದಲೇ ವೇಲ್ಸಿನ ರಾಜಕುಮಾರನನ್ನು ಬೀಳ್ಕೊಡುವಾಗ ತುಂಬುಹೃದಯದಿಂದ ಹಾರೈಸಿದ್ದಾರೆ.

ಭಾರತೀಯರ ಮಾನಸಿಕ, ಬೌದ್ಧಿಕ ಬೆಳವಣಿಗೆ 'ಸ್ವತಂತ್ರ ಭಾರತ'ದಿಂದ ಮಾತ್ರ ಸಾಧ್ಯ ಎಂಬ ಗಾಢವಾದ ನಂಬಿಕೆ ಭಾರತಿಯವರದು. ಭಾರತದ ಹಿನ್ನಡೆಗೆ ಕಾರಣ ಅದರ ದಾಸ್ಯ ಎಂದು ಅವರು ತಿಳಿದಿದ್ದರು. ಆದ್ದರಿಂದಲೇ ಬ್ರಿಟಿಷರನ್ನು ಎದುರಿಸಿ ಜನಸಾಮಾನ್ಯರನ್ನು ನಿಲ್ಲಿಸಬಲ್ಲ ಸ್ಫೂರ್ತಿಗೀತೆಗಳನ್ನು ರಚಿಸಿ ಹಾಡಿದರು. ಭಾರತೀಯರಲ್ಲಿ ಪರಸ್ಪರ ಸೌಹಾರ್ದ, ಸಹೋದರತ್ವ ಮತ್ತು ಅರ್ಪಣಾ ಮನೋಭಾವಕ್ಕಾಗಿ ಅವರನ್ನು ಸಂಘಟಿಸುವಲ್ಲಿ ಅವರು ಜಯಪ್ರದರಾದರು.

ಪರಂಪರಾಗತ ಕಾವ್ಯಶೈಲಿಯಿಂದ ಬಿಡುಗಡೆ, ಶೋಷಣೆಗಳಿಂದ ಬಿಡುಗಡೆ, ಕಟ್ಟಳೆಯ ಕಪಿಮುಷ್ಟಿಯಿಂದ ಸ್ತ್ರೀಯ ಬಿಡುಗಡೆ, ಜಾತಿ ಕಟ್ಟಳೆಗಳಿಂದ ಬಿಡುಗಡೆ, ರಾಜಕೀಯ–ಬೌದ್ಧಿಕ ದಾಸ್ಯದಿಂದ ಬಿಡುಗಡೆ ಎಂಬ ಹಲವು ಸಾರ್ವತ್ರಿಕ, ಸ್ವಾತಂತ್ರ್ಯದಾಹದ ಸಂಗಮವೇ ಭಾರತಿಯವರು. ಅವರ ಕಾವ್ಯ ಕೇವಲ ಬ್ರಿಟಿಷರ ವಿರುದ್ಧ ಸಾರಿದ ಯುದ್ಧವಷ್ಟೇ ಆಗಿರದೆ, ದಾಸ್ಯ ಎಲ್ಲಿಯೇ ಇರಲಿ, ಯಾವ ರೂಪದಲ್ಲಿಯೇ ಇರಲಿ ಅದರ ವಿರುದ್ಧ ಸಿಡಿದು ಪುಟಿಯುವ ತೋಪಿನ ಗುಂಡುಗಳು. ಹೀಗೆ ಸಾರ್ವತ್ರಿಕ, ಸಾರ್ವಕಾಲಿಕ ಪ್ರಸ್ತುತ ಕಾವ್ಯಕೃಷಿಯಿಂದಾಗಿ ಭಾರತಿಯವರು 'ನಾಡಕವಿ'ಪಟ್ಟದಿಂದ 'ರಾಷ್ಟ್ರಕವಿ' ಪಟ್ಟವನ್ನೇರಿದರು.

ಕನ್ನಡದ ವಚನಕಾರರು ಆರಂಭಿಸಿದ ಮುಕ್ತ ಛಂದಸ್ಸು, ಸಾಮಾಜಿಕ ಬದಲಾವಣೆ, ಜಾತಿರಹಿತಸಮಾಜದ ಕಲ್ಪನೆಯ ಪ್ರತಿಧ್ವನಿ ಭಾರತಿಯವರ ಕೃತಿಗಳಲ್ಲಿ ಕಂಡುಬರುತ್ತದೆ. ಆಸ್ಥಾನಕವಿಯಾಗಿ, ಅಧ್ಯಾಪಕರಾಗಿ, ಪತ್ರಿಕಾ ಸಂಪಾದಕರಾಗಿ ಧಾರ್ಮಿಕ–ಚಳುವಳಿ ಪ್ರಬೋಧಕ–ಪುರಾಣ–ಶಿಶುಸಾಹಿತ್ಯಗಳೆಲ್ಲದರಲ್ಲಿಯೂ ಕೈಯಾಡಿಸಿದ ತುಂಬು ಕವಿಜೀವನ ಭಾರತಿಯವರದು.

ಇಂತಹ ಮಹಾಕವಿಯೊಬ್ಬನ ನೆನಪಿನ ಸಲುವಾಗಿ ಅವರ ಜನ್ಮಶತಮಾನೋತ್ಸವ ಸಂದರ್ಭದಲ್ಲಿ ತಮಿಳುನಾಡು ಸರಕಾರವು ಕೊಯಮತ್ತೂರಿನಲ್ಲಿ ಭಾರತಿಯಾರ್ ವಿಶ್ವವಿದ್ಯಾಲಯವನ್ನು ಆರಂಭಿಸಿ, ಕವಿನೆನಪನ್ನು ಚಿರಂತನವಾಗಿಸಿದೆ.

ಭಾರತಿಯಾರ್ ಎಂದೇ ತಮಿಳಿಗರೆಲ್ಲರಿಗೂ ಚಿರಪರಿಚಿತವಾಗಿರುವ ಸುಬ್ರಮಣ್ಯ ಭಾರತಿಯವರ ಶಿಶುಗೀತೆಗಳನ್ನು ತಮಿಳುನಾಡಿನ ಮನೆಮನೆಯಲ್ಲಿ ಕೇಳಬಹುದಾಗಿದೆ.

ಕೆಲವು ವ್ಯಾಕರಣ ವಿಚಾರಗಳು

– ಎಂ.ಜಿ. ವಾರಿ

೧. ಅರ್-ಪ್ರತ್ಯಯ ರೂಪ – ಒಂದು ಅವಲೋಕನ :

೧. ಕೇಶಿರಾಜನ ವಿವರಣೆಯಲ್ಲಿ ವ್ಯಕ್ತವಾಗಿರುವ ಈ ಪ್ರತ್ಯಯದ ಕಾರ್ಯಸ್ವರೂಪ ಹೀಗಿದೆ:

(i) 'ಅರ್' ಮಹತ್ ವರ್ಗದ ನಾಮಗಳಿಗೆ ಹತ್ತುವ ಒಂದು ಬಹುವಚನ ಪ್ರತ್ಯಯ (ಬ.ವ.ಪ್ರ)ವಾಗಿದೆ.[೧] -ಸೂ. ೧೦೮ ಉದಾ: ಅರಸರ್, ಕಾಂತೆಯರ್.

(ii) ಇದು ಲಿಂಗಸೂಚಕ ಪ್ರತ್ಯಯವೂ (ಲಿಂ. ಸೂ.ಪ್ರ.) ಹೌದು[೨] -ಸೂ. ೧೦೮ ಉದಾ: ಬೇಡಿದರ್, ಸಾಸಿರ್ವರ್, ಬಲ್ಲಿದರ್.

(iii) ಹಾಗೆಯೇ ಇದು ಆಖ್ಯಾತ ಪ್ರತ್ಯಯ (ಆ.ಪ್ರ) ರೂಪವಾಗಿಯೂ ಬಳಕೆಯಾಗುತ್ತದೆ. – ಸೂ. ೨೩೦. ಉದಾ: ಮಾಡಿದರ್, ನೋಟ್ಪರ್.

(iv) ಅರ್ (ಅಜ್)- ಒಂದು ಪ್ರತ್ಯಯ ಪೂರ್ವ ವರ್ಣ(ಗಳ) ರೂಪವಾಗಿಯೂ ಕಾಣಿಸಿಕೊಳ್ಳುವುದುಂಟು.[೩] ಉದಾ: ಮಾಡಿದುದಜಿಂ'

೨. ನಾಮಗಳಿಗೆ ಹತ್ತುವ ಬ.ವ.ಪ್ರ. ಮತ್ತು ಲಿಂ.ಸೂ.ಪ್ರ.ವಾಗಿ ದ್ವಿಪಾತ್ರವನ್ನು ವಹಿಸಿದರೂ ಇದರ ಈ ಬಗೆಯ ಸೂಕ್ಷ್ಮ ವ್ಯತ್ಯಾಸವನ್ನು ಗುರುತಿಸುವುದಾದರೂ ಹೇಗೆ? 'ಅರ್' ರೂಪವು ಲಿಂ.ಸೂ.ಪ್ರ.ವಾಗಿ ಬಂದಿದೆಯೋ, ಇಲ್ಲಾ ಬ.ವ.ಪ್ರ.ವಾಗಿ ಬಂದಿದೆಯೋ ಎಂದು ತಿಳಿಯಲು ಒಂದು ಕ್ರಮ ಅಥವಾ ವಿಧಾನವನ್ನು ಅನುಸರಿಸಬಹುದೆಂದು ತೋರುತ್ತದೆ.

(i) ಯಾವ ರೂಪದ ಮುಂದಿರುವ 'ಅರ್' ಪ್ರತ್ಯಯ ತೆಗೆದು ಹಾಕಿದರೂ ಅದರ (ನಾಮದ) ಅರ್ಥ ಕೆಡದೋ ಅಥವಾ ಅವಾಗ ಏಕ ವಚನಾರ್ಥದ ನಾಮವಾಗಿ ಮಾತ್ರ ಉಳಿಯುತ್ತದೆಯೊ ಆಗ ಅದು ಬ.ವ.ಪ್ರ.ವಾಗಿ ಬಂದಿದೆಯೆಂಬುದು

---

೧. ಈಗಾಗಲೆ ವಿದ್ವಾಂಸರು ಗುರುತಿಸಿರುವಂತೆ ಈ ಪ್ರತ್ಯಯ ಸರ್ವನಾಮಬಿಂತರೂಪವೇ ಆಗಿದೆ.

೨. ಲಿಂ.ಸೂ.ಪ್ರ.ದ ಹೆಚ್ಚಿನ ವಿವರಣೆಗೆ ನನ್ನದೆ ಒಂದು ಲೇಖನವನ್ನು ಗಮನಿಸಬಹುದು : 'ಲಿಂಗ – ಒಂದು ವಿವೇಚನೆ', ಸಾಧನೆ, ಸಂ-೧೪, ಸಂ-೪.

೩. ಈ ಪ್ರತ್ಯಯ ಪೂರ್ವ ವರ್ಣಾಗಮ ಕುರಿತು ಇನ್ನಷ್ಟು ವಿವರಣೆಗೆ 'ಈ ಕಾಲದ ಭಾಷೆಯ ಸ್ವರೂಪ'– ಎಂಬ ಬಿ.ಬಿ.ರಾಜಪುರೋಹಿತರ ಲೇಖನ (ಸ.ಕ.ಸಾ.ಚ. ಬೆಂ.ವಿ.ವಿ. ಸಂ-೧. ಪ್ರ.ಮು: ೧೯೭೪) ಗಮನಿಸಬಹುದು.

ಬಿಟ್ಟಿತ. ಮತ್ತೆ ಕೆಲವೊಮ್ಮೆ ನಾಮಗಳಲ್ಲಿಯ 'ಅರ್' ಪ್ರ. ಕಳಚಿದರೆ ಅದರ ನಾಮಾರ್ಥಕ್ಕೆ ಚ್ಯುತಿ ಬರುವುದೋ ಅಥವಾ ಮಹತ್ ವರ್ಗದ ನಾಮಾರ್ಥವೆ ಲುಪ್ತಗೊಳ್ಳುವುದೋ ಆಗ ಅದು ಪ್ರಧಾನವಾಗಿ ಲಿಂ.ಸೂ.ಪ್ರ.ವಾಗಿಯೇ ಬಂದಿದೆಯೆಂದು ಗಟ್ಟಿಯಾಗಿ ಹೇಳಬಹುದು.

ಉದಾ: ಕಾಂತೆಯರ್ –'ಅರ್' 'ಪ್ರ. ಕಳಚಿ ಹಾಕಿದಾಗ ⟶ ಕಾಂತೆ ಏಕವಚನದ
ಪದವಾಗಿ ಉಳಿಯುತ್ತದೆ.

ಸಾಸಿರ್ವರ್ – 'ಅರ್' ಪ್ರ. ಕಳಚಿದಾಗ ⟶ ಸಾಸಿರ್. ಮುನ್ನಿನ
'ಜನ' ಸೂಚಕಾರ್ಥವೇ (ಇಡಿಯಾಗಿ) ಲೋಪವಾಗಿದೆ.

(ii) ಇದನ್ನೇ ಹೀಗೂ ಹೇಳಬಹುದು. 'ಅರ್ ಕೇವಲ ಬ.ವ.ಪ್ರ.ವಾಗಿ ಪ್ರಯೋಗಗೊಂಡಾಗ ಅರ್ಥದಲ್ಲಿ ಬದಲಾವಣೆ ನಡೆಯುವುದಿಲ್ಲ. ಕೇವಲ ವಚನ ಬದಲಾವಣೆ ಕಾಣಿಸುತ್ತದೆ. ಆಗ 'ಅರ್' ಬ.ವ.ಪ್ರ.ವನ್ನು ಮೂಲ ಪದದಿಂದ ಬಹು ಸುಲಭವಾಗಿ ಕಳಚಬಹುದು ಅಥವಾ ಹತ್ತಿಸಲೂ ಬಹುದಾಗಿದೆ. ಇನ್ನು 'ಅರ್' ಪ್ರ.ದೊಂದಿಗೆ ರೂಪು ತಳೆಯುವ ಪದ ಒಂದು ಮಹತ್ ವರ್ಗದ ನೂತನ ನಾಮಪದವಾಗಿಯೇ ನಿರ್ಮಾಣಗೊಂಡಂತಾಗುತ್ತದೆ. ಆಗ 'ಅರ್'ಪ್ರ. ಆ ಪದದ ಅವಿಭಾಜ್ಯ ಅಂಗವಾಗಿ ಸೇರ್ಪಡೆಯಾಗಿರುತ್ತದೆ. ಅದು ಬ.ವ.ವನ್ನು ಸ್ಫುರಿಸಲು ನಿಮಿತ್ತವಾಗಬಹುದಾದರೂ ಮುಖ್ಯವಾಗಿ ಲಿಂ.ಸೂ.ಯ ಕಾರ್ಯ ನಿರ್ವಹಿಸುವ ಕಾರಣದಿಂದಾಗಿಯೇ ಇಲ್ಲಿ ಅದನ್ನು ಲಿಂ.ಸೂ.ಪ್ರ.ವೆಂದೇ ಗುರುತಿಸಬೇಕಾಗುತ್ತದೆ.

ಉದಾ: (i) ಕಾಂತೆ (ಏ.ವ. ಸೂಚಕ ಪದ) + ಅರ್ ⟶ ಕಾಂತೆಯರ್
ಏ.ವ.ದ ಪ್ರಕೃತಿ ಅಥವಾ ಪದ + ಬ.ವ.ಪ್ರ. ⟶ ಬ.ವ.ವನ್ನುಳ್ಳ ಪದ
(ಅರ್ಥ ಬದಲಾವಣೆ ಇಲ್ಲ.)

(ii) ಸಾಸಿರ್ + ಅರ್ ⟶ ಸಾಸಿರ್ವರ್
ಸಂ.ಸೂ.ಪದ + ಲಿಂ.ಸೂ.ಪ್ರ. ⟶ ಬಹುಸಂಖ್ಯೆಯ ಜನರೆಂಬ
ನಾಮಾರ್ಥದ ರೂಪ ರಚನೆಯಾಗಿದೆ.

೩. ಈ ಪ್ರತ್ಯಯ ಏಕಕಾಲದಲ್ಲಿ ಲಿಂಗ ಮತ್ತು ವಚನಗಳೆರಡನ್ನೂ ಸೂಚಿಸುತ್ತದೆ. ಆದರೆ ಆಯಾ ಸಂದರ್ಭದಲ್ಲಿ ನಿರ್ವಹಿಸುವ ಪ್ರಧಾನ ಕಾರ್ಯವನ್ನವಲಂಬಿಸಿ ಬ.ವ.ಪ್ರ. ವೆಂದೋ ಇಲ್ಲವೆ ಲಿಂ.ಸೂ.ಪ್ರ.ವೆಂದೋ ಹೆಸರಿಸಲು ಅನುವು ದೊರೆಯುತ್ತದೆ.

ಅರ್ < ಬ.ವ.ಪ್ರ. (ಲಿಂ.ಸೂ.ಯೊಂದಿಗೆ)
ಅರ್ < ಲಿಂ.ಸೂ.ಪ್ರ. (ಬ.ವ.ಸೂ.ಯೊಂದಿಗೆ)

೪. ವಕ್ತೃವಿನ ಮನೋಭಾವ ಸೂಚಕ (ಗೌರವ, ತಿರಸ್ಕಾರ, ವ್ಯಂಗ್ಯ ಇತ್ಯಾದಿ ಭಾವಗಳು)ವಾಗಿಯೂ 'ಅರ್' ಪ್ರತ್ಯಯ ಪ್ರಯೋಗವಾಗುತ್ತದೆ.[೪] ಇಲ್ಲಿ

---

೪. ಇದಕ್ಕೆ ಉದಾಹರಣೆಯಾಗಿ ದಕ್ಷಿಣ [illegible] ಅವಲೋಕಿಸೋಣ. [illegible]
[illegible] ಕಪ್ಪೆ [illegible] ಇರ್ದರ ಗಂಡರ್.

ಮಾತನಾಡುವ ವ್ಯಕ್ತಿಯ (ಇಲ್ಲಿ ಉದ್ದೇಶಿಸಿದ ವ್ಯಕ್ತಿ ಒಬ್ಬನೇ ಇದ್ದರೂ) ಭಾವವನ್ನಷ್ಟೇ ಪ್ರತಿನಿಧಿಸುವ ಪ್ರತ್ಯಯವಾಗಿ ಚಲಾವಣೆಗೊಳ್ಳುತ್ತದೆ.

೫. ಮಹತ್ ವರ್ಗದ ಅ.ಪ್ರ.ವಾಗಿಯೂ 'ಅರ್' ಪ್ರತ್ಯಯದ ಪಾತ್ರವಿದೆ.

ಒಟ್ಟಾರೆ 'ಅರ್' ಪ್ರತ್ಯಯದ ಪಾತ್ರಸ್ವರೂಪವನ್ನು ರೇಖಾಚಿತ್ರದ ಮೂಲಕ ಹೀಗೆ ಗುರುತಿಸಬಹುದು. (ನೋಡಿ: ರೇಖಾ ಚಿತ್ರ)

ಕೆರೆಯಲ್ಲಿಯ ನೀರು ಕ್ಷುದ್ರ. ಸಾಮಾನ್ಯಜೀವಿಗಳ ವಾಸಸ್ಥಾನ. ಅಲ್ಲಿ ವೀರರು ಎಂಬವರು ಜೀವಿಸಲಾರರು. ಇದು ಮೇಲ್ಪದರಿನ ಸಾಮಾನ್ಯಾರ್ಥ. ಇಲ್ಲಿ ವ್ಯಕ್ತವಾಗುವ, ಅರ್ಥದ ಸೊಗಸು. ಭಾವದ ತೀಕ್ಷ್ಣತೆ ಇನ್ನೂ ಇದೆ ಎನಿಸುತ್ತೆ.


ವೀರರ ಪರಂಪರೆಯವ ದುರ್ಯೋಧನನೂ ಹೌದು. ಆತನಿಗೆ ಅನ್ವಯಿಸಿದಾಗ ಈ ಬ.ವ. ಪ್ರಯೋಗ ವ್ಯಂಗದ ಮೊನಚಾಗಿ ಮೂಡುತ್ತದೆ. ಇದು ಇನ್ನೂ ತೀಕ್ಷ್ಣವಾದ ರೀತಿಯಲ್ಲಿ ದುರ್ಯೋಧನನನ್ನು ಮೂದಲಿಸಲು ಬಳಕೆಯಾದಂತಿದೆ. ವೀರರು ಎನಿಸಿಕೊಂಡಂಥ ನಿಮ್ಮಂಥವರು ಈ ನೀರಲ್ಲಿ ಇರುತ್ತಾರೆಯೆ? ಈ ರೀತಿ ದರಿತವಾದ ವ್ಯಂಗದ ಆಶಯವೂ ಈ ವಾಕ್ಯದ ಬ.ವ. ಪ್ರಯೋಗದಲ್ಲಿ ಅಡಗಿದೆ ಎಂಬುದು ನಿಚ್ಚಳವಾಗುತ್ತದೆ.

(ಆ) ಹೀಗೆ ಪರಿಹಾಸಗೈಯಲು ಕೇಶಿರಾಜ ಕೊಟ್ಟಿರುವ ಉದಾಹರಣೆಯೊಂದು ಗಮನೀಯವಾಗಿದೆ.

ಬಡವಾದಿರss ಅರಸs!
ಕಾಲೊಳ್ ನಡೆವಹಿರಿ$_{ss}$?
ಒಡನಾರುಮ್ ಇಲ್ಲ$_{ss}$!
ಕಡಲೆಗಳೇಮ್ ನಿಮ್ಮಡಿಯೊಳಗೆ!
ಪಡುವ ದೇಗುಲದ ಎಡೆಯಾವುದು?
ಕುಡವ ನಿಮಗುಮ್$_{ss}$ ಈ$_{ss}$ ಎಡರಾಯ್ತೇ?

ಈ ". . . . ಒಂದು ಪದ್ಯ ಅತ್ಯಂತ ಆಶ್ಚರ್ಯಕರವಾಗಿ ರಾಜ್ಯಚ್ಯುತನಾದ ರಾಜನೊಬ್ಬನನ್ನು ಆತನಿಂದ ಶೋಷಣೆಗೊಳಗಾದ ಜನ ಪರಿಹಾಸ್ಯ ಮಾಡುವ ಸಂದರ್ಭವನ್ನು ಚಿತ್ರಿಸುತ್ತದೆ." "ವ್ಯಂಗ್ಯ. ಕಟಕಿ. ಪರಿಹಾಸ್ಯಗಳಿಂದ ಇಡಿಕಿರಿದ ಇಂತಹ ಇನ್ನೊಂದು ಪದ್ಯವನ್ನು ನಾನು ಕಂಡಿಲ್ಲ" (ಕ.ಶ.ಗಳ ಶಾ.ಪ. ಮೊ.ಮು: ೧೯೮೯. ಪುಟ:೫೧ ಅಡಿಟಿಪ್ಪಣಿಯಲ್ಲಿ) - ಶಿವರುದ್ರಪ್ಪನವರ ಈ ಮಾತು ನಿಜ.

'ಅರ್' ಪ್ರತ್ಯಯ ಸ್ವರೂಪದ ರೇಖಾಚಿತ್ರ



---

೧. ಇದು ಪ್ರತ್ಯೇಕವಾದ ಒಂದು ಪ್ರತ್ಯಯ ರೂಪವೇನಲ್ಲ.

೨. ಇಲ್ಲಿ ಆ.ಪ್ರ.ದೊಂದಿಗೆ ಭಾವವನ್ನು ಪ್ರಧಾನವಾಗಿ ಸೂಚಿಸುತ್ತದೆ. ಅಥವಾ ಭಾವ ಸೂಚನೆಯೊಂದಿಗೆ ಆ.ಪ್ರವಾಗಿಯೂ ಕಾರ್ಯ ನಿರ್ವಹಿಸುತ್ತವೆ ಎನ್ನಬೇಕು.

೩. ಶಾಬ್ದಿಕ ಸ್ವರೂಪವನ್ನಾಧರಿಸಿ ಹೀಗೆ ಸ್ಥೂಲವಾಗಿ ವಿಭಾಗಿಸಬಹುದು.

ಆದರೆ ಆಶ್ಚರ್ಯದ ಸಂಗತಿಯೆಂದರೆ 'ಆರ್' ಇಲ್ಲಿ ಬ.ವ.ಪ್ರ.ದ ರೂಪವಾಗಿ ಕಾಣಿಸಿಕೊಂಡಿಲ್ಲ. 'ಬಡವಾದಿರಿ', 'ನಡೆದಪಿರಿ' ಎಂಬ ಕ್ರಿ.ಪ.ಗಳಲ್ಲಿ 'ಇರಿ' ಎನ್ನುವ ಮ.ಪ್ರ.. ಬ.ವ.ದ ಆ.ಪ್ರ.ವಾಗಿದೆ. ಅಂದರೆ ಮ.ಪ್ರ. ಬ.ವ.ದ ಸರ್ವನಾಮ 'ನೀಂ' ಬಂದಾಗ ಕ್ರಮಾಗತವಾಗಿ ಆ.ಪ್ರ. 'ಇರಿ' ಬರುತ್ತದೆ. ಈ 'ನೀಂ (ನೀಮ್)-ಇರಿ' ಎಂಬುವು 'ಅವರ್-ಅರ್'ಗಳ ಹಾಗೆಯೆ ವ್ಯಂಗ್ಯ ಕಾಕುವಿನಲ್ಲೂ ತುಂಬ ಸೊಗಸಾಗಿ ಪ್ರಯೋಗಗೊಳ್ಳುತ್ತವೆ-ಎಂದ ಹಾಗಾಯ್ತು. 'ನಿಮಗುಮ್', 'ನಿಮ್ಮ' ಎನ್ನುವ ಬ.ವ.ದ ಸರ್ವನಾಮ ಪ್ರಯೋಗದಲ್ಲಿ ಖಾರವಾದ ವ್ಯಂಗ್ಯದ ತಿವಿತವಿದೆ.

ಇಲ್ಲಿಯ 'ಅರಸ' ಏ.ವ. ವಲ್ಲಿದ್ದರೂ ಅದು ಅರಸರ್ ಎಂದೇ ಪ್ರಯೋಗಗೊಂಡಂಥ ರೀತಿಯಲ್ಲಿದೆ ಎನ್ನಬಹುದು. ಮೂಲ ಕರ್ತೃ 'ಅರಸರ್' ಪ್ರಯೋಗದ ಬದಲು 'ಅರಸ' ಎಂದು ಬಳಸಿದ್ದಾನೆ. ಏಕೆಂದರೆ ಒಂದು ಮಾತ್ರೆ ಕಡಿಮೆಗೊಳಿಸಲು ಹೀಗೆ ಮಾಡಿಕೊಂಡಿರಲೂ ಸಾಕು.

ಹಾಗಲ್ಲದೆ ಹೀಗೂ ಯೋಚನೆ ಹರಿಸಲು ಸಾಧ್ಯವಿದೆ. 'ಅರಸ' ಎಂಬ ರೂಪಕ್ಕೆ ಬ.ವ.ಪ್ರ. ಇಲ್ಲದಿರುವುದು ಮತ್ತು ಪುನ್ ಸೂಚಕ ಪ್ರತ್ಯಯ ' ಅನ್' ಕೂಡಾ ಇಲ್ಲದಿರುವುದು ಅವನಿಗೊದಗಿದ ಅನಾಥ ಸ್ಥಿತಿಯನ್ನೂ ಆ 'ರೂಪ' ತಂತಾನೆ ಸ್ಫುರಿಸಬಲ್ಲುದಲ್ಲವೆ?

(೩) ಹೊಸಗನ್ನಡ ಶಿಷ್ಟಭಾಷೆಯ 'ಅರು' ಪ್ರತ್ಯಯ ಏಕಕಾಲದಲ್ಲಿ ಗೌ.ಸೂ. + ಬ.ವ.ದ ಕಾರ್ಯಗಳೆರಡನ್ನು ನಿರ್ವಹಿಸುವ ದ್ವಿವಿಧದ ಪಾತ್ರವನ್ನೂ ಆಡುತ್ತದೆ. ಉದಾ.ಗೆ

(i) ಅಗಲಿದ ಶಾಸಕರಿಗೆ ಹೆಂಡತಿ ಇಬ್ಬರು ಮಕ್ಕಳಿದ್ದರು
'ಅರು' — ಗೌ.ಸೂ. (ಏಕವಚನದಲ್ಲಿ)

(ii) ಆ ಶಾಸಕರೆಲ್ಲ ಸೇರಿ ತಮ್ಮ ಜಿಲ್ಲೆಯ ಸಮಸ್ಯೆ ಕುರಿತು ಚರ್ಚಿಸಿದರು
ಅರು — (ಬ.ವ. + ಗೌ.ಸೂ.) ಪ್ರತ್ಯಯ

ಅರು < ಕೇವಲ ಗೌರವ ಸೂಚಕ ಪ್ರ.
ಬ.ವ.ದೊಂದಿಗೆ ಗೌ. ಸೂ.ಪ್ರ

೨. ಹಳಗನ್ನಡದ ಆಖ್ಯಾತ ಪ್ರತ್ಯಯಗಳು :

೧. ಹಳಗನ್ನಡದ (ಹ.ಗ.) ರೂಪಗಳಾಗಿರುವ ಆಖ್ಯಾತ ಪ್ರತ್ಯಯಗಳು (ಆ.ಪ್ರ.) ಈ ರೀತಿ ಇವೆ :

	ಏ.ವ.	ಬ.ವ.
ಉತ್ತಮ ಪುರುಷ (ಉ.ಪು) –	ಎನ್	ಎವು
ಮಧ್ಯಮ ಪುರುಷ (ಮ.ಪು) –	ಅಯ್	ಇರ್, ಇರಿ

ಪ್ರಥಮ ಪುರುಷ (ಪ್ರ.ಪು) –	ಅನ್	ಅರ್	ಸರ್ವನಾಮ ಖಂಡರೂಪಗಳು (ಖಂ.ರೂ.)
	ಅಳ್		
	ಉದು[೧]	ಉವು	
	(ಅದು)	(ಅವು)	

ಪ್ರ.ಪು.ದ ಆ.ಪ್ರ.ಗಳು ಸರ್ವನಾಮದ ಮೂಲರೂಪಗಳಾಗಿವೆ. ಆದರೆ ಉ.ಪ್ರ. ಮತ್ತು ಮ.ಪ್ರ.ದ ಆ.ಪ್ರ.ಗಳು ಸರ್ವನಾಮದ ಖಂಡರೂಪಗಳಲ್ಲ.[೨]

೨. ಈ ಸರ್ವನಾಮದ ಖಂ.ರೂ.ಗಳು ವಾಕ್ಯದ ಸಂದರ್ಭಕ್ಕೆ ಅನುಸಾರವಾಗಿ ಲಿಂಗ ಸೂಚಕ ಪ್ರತ್ಯಯ(ಲಿಂ.ಸೂ.ಪ್ರ.)ವಾಗಿಯೂ ಆ.ಪ್ರ.ವಾಗಿಯೂ ಬಳಕೆಯಾಗುತ್ತದೆ.[೩]

(i) ಅನ್ (ಪುನ್)	ಅರ್	–ಮಹತ್‌ವರ್ಗ (ಮ.ವ)	ಆ.ಪ್ರ. + ಲಿಂ.ಸೂ.ಪ್ರ
ಅಳ್ (ಸ್ತ್ರೀ)	(ಪುನ್ + ಸ್ತ್ರೀ)		
ಉದು(ನಪ್)	ಉವು	–ಅಮಹತ್‌ವರ್ಗ (ಅ.ವ.)	

---

೧. (i) 'ಉದು, ಉವು–ಎಂಬಿವು ಸ್ವತಂತ್ರ ಸರ್ವನಾಮಗಳೋ ಅಥವಾ ಅದು, ಅವು ಎಂಬಿವುಗಳ ರೂಪಾಂತರಗಳೋ ಹೇಳುವುದು ಕಷ್ಟ'.
–ಕೆ.ಕೈ., ಆ.ಮು: ೧೯೭೧. ಕ.ಸಾ.ಚ.ಮ.ಭಾಗ. ಅಡಿಟಿಪ್ಪಣಿ–೧. ಪು–೩೬೭.

(ii) 'ಪ.ಗ.ದಲ್ಲಿ ಉದು, ಉವುಗಳೇ ಹೆಚ್ಚು ಬಳಕೆಯಲ್ಲಿದ್ದರೆ, ಅದು ಅವು ಕ್ವಚಿತ್ತಾಗಿ ಬಳಕೆಯಲ್ಲಿ ಇದ್ದಿತು. ಆದರೆ ನಡುಗನ್ನಡ ಮತ್ತು ಹೊಸಗನ್ನಡದಲ್ಲಿ ಉದು, ಉವುಗಳು ಹಿಂದೆ ಬಿದ್ದು ಅದು, ಅವು–ಗಳು ಹೆಚ್ಚು ಬಳಕೆಯಲ್ಲಿ ಬಂದವು'.
–ಪೂರ್ವೋಕ್ತ ಗ್ರಂಥ. ಪುಟ: ೩೮೬.

(iii) ಆದರೂ ಹೊಸಗನ್ನಡದಲ್ಲಿ ಉದು, ಉವು–ಗಳು ಆ.ಪ್ರ.ಗಳಾಗಿ (ಜೊತೆಗೆ ಲಿಂ.ಸೂ.ಪ್ರ.ವಾಗಿಯೂ) ದಕ್ಷಿಣ ಕರ್ನಾಟಕದ ಲೇಖಕರಲ್ಲಿಯೂ ಅದು, ಅವು–ಗಳು ಉತ್ತರ ಕರ್ನಾಟಕದ ಲೇಖಕರಲ್ಲೂ ಕಂಡುಬರುತ್ತವೆ. ''ಮೈಸೂರು ಪ್ರಾಂತದಲ್ಲಿ ಕ್ರಿಯಾಪದಗಳಿಗೆ ನಪುಂಸಕಲಿಂಗದಲ್ಲಿ 'ಉದು,' 'ಉವು'-ಎಂಬ ಪ್ರತ್ಯಯಗಳು ಹತ್ತುತ್ತವೆ. ಧಾರವಾಡ ಪ್ರಾಂತದಲ್ಲಿ 'ಅದು,' 'ಅವು'– ಎಂಬುವು ಹತ್ತುತ್ತವೆ. – ಪೂರ್ವೋಕ್ತ ಗ್ರಂಥ. ಪುಟ: ೩೨೦.

೨. (i) ವಾಸ್ತವವಾಗಿ ಆ.ಪ್ರ.ಗಳು ಮೂಲ ಸರ್ವನಾಮಗಳಲ್ಲ. ಆದ್. ಇದ್. ಇವಿ–ಇವು ಸರ್ವನಾಮಗಳಂತೆ ವರ್ತಿಸುವುದಿಲ್ಲ. ಅದ್. ಅನ್. ಅಳ್. ಏನ್. ಏವು– ಇವು ಕೂಡ (ಬಹುಶಃ ಏನ್ ಏವು ಹೊರತಾಗಿ) ಕಾಲ್ಡ್‌ವೆಲ್ ನಿರ್ದೇಶಿಸುವಂತೆ ಸರ್ವನಾಮ ಪಿಂಡಗಳು' pronominal fragments'.
–ಎಂ.ಪಿ.ಸೀ. ಗ್ರಂಥ: ಪ್ರಾ.ಕ.ವ್ಯಾ.ಗಳು. ಪ್ರ.ಮು.–1970
ಪುಟ: ೩೦೮. ಅಡಿಟಿಪ್ಪಣಿ–೩೦೦.

(ii) ಆದರೆ ಮ.ಪ್ರ. ಉ.ಪ್ರ.ದ ಆ.ಪ್ರ.ಗಳು ಸರ್ವನಾಮ ಪಿಂಡಗಳು ಎಂದು ಪ್ರತಿಪಾದಿಸಲು ಕೈಹಿಡಿಕಾರರು ಪ್ರಯತ್ನಿಸಿದ್ದಾರೆ.
–ಅಖ್ಯಾತ ಪ್ರಕರಣದ ಅಧ್ಯಾಯವನ್ನು ಗಮನಿಸಿ

೩. ಪ್ರ.ಪು.ದ ಆ.ಪ್ರ.ಗಳು ಕೃದಂತ ವಿಶೇಷಣಗಳ ಮೇಲೆ ಹತ್ತಿದಾಗ (ದ್ವಿತೀಯಾದಿ ವಿ.ಪ್ರ.ಇಲ್ಲದಿದ್ದಾಗ) ಕ್ರಿಯಾಪದವಾಗಿಯೂ ಕೃದ್ವಂಗವಾಗಿಯೂ ಬಳಕೆಯಾಗುತ್ತವೆ.
–ಹೆಚ್ಚಿನ ವಿಚಾರಗಳಿಗೆ, 'ಲಿಂಗ–ಲಿಂಗ ವಿವೇಚನೆ'–ನ್ನು [illegible]

(ii) ಏನ್ ಎವು } -ಮಹತ್ ವರ್ಗ} - ಆ.ಪ್ರ.ಮಾತ್ರ
ಅಯ್ ಇರ್

೩. ಲಿಂ.ಸೂ.ಪ್ರಗಳು ಕೃದಂತ ವಿಶೇಷಣಗಳ (ಉದಾ: ನೋಡಿದ. ಬೇಡಿದ ಇತ್ಯಾದಿ) ಮೇಲೆ ಹತ್ತಿ ಕೃಲ್ಲಿಂಗಗಳು ರೂಪುಗೊಳ್ಳುವ ಹಾಗೆ ಸಂಖ್ಯಾ ಗುಣವಾಚಕಗಳ ಮೇಲೂ ಹತ್ತಿ ಪುನ್+ಸ್ತ್ರೀ-ನಪ್‌ವಾಚಕವಾದ ನೂತನ ನಾಮಪದಗಳು ಸಿದ್ಧಿಸುತ್ತವೆ.[೪]
ಉದಾ: ಒಳ್ಳಿದನ್. ಪಿರಿಯನ್. ಇರ್ವರ್.

೪. ಆ.ಪ್ರ.ಗಳಾದ ಮ.ಪ್ರ.ದ ಅಯ್. ಇರ್. (ಇರಿ) ಮತ್ತು ಉ.ಪ್ರ.ದ ಎನ್.ಎವುಗಳು ಕೃದಂತ ವಿಶೇಷಣಗಳ ಮೇಲೆ ಹತ್ತಿದಾಗ ಅವು ಪೂರ್ಣ ಕ್ರಿಯಾಪದಗಳೇ ಎನಿಸುತ್ತವೆ.
ಉದಾ: ಮಾಡಿದಯ್. ನೋಡಿದರ್. ನೋೞ್ಪೆನ್.

ಅಂದರೆ ಅನ್ಯಪುರುಷಾರ್ಥದ ಕ್ರಿಯಾಪದ ಮಾತ್ರ ನಾಮಪದವಾಗಿ (ಅಂದರೆ ಕೃಲ್ಲಿಂಗವಾಗಿ) ಬಳಕೆಯಾಗಬಹುದೆ ವಿನಹ ತ್ರಿಕಾಲಸೂಚಕ ಮ.ಪ್ರ ಮತ್ತು ಉ.ಪ್ರ.ದ ಕ್ರಿಯಾಪದಗಳು ಕೃಲ್ಲಿಂಗವಾಗಲಾರವು. ಇದರಿಂದ ಅವನ್ನು ಪೂರ್ಣ ಕ್ರಿಯಾಪದಗಳು ಎನ್ನಬಹುದು. ಹಾಗೆಯೆ ಇತರ ಕ್ರಿಯಾಪದ ರೂಪಗಳು ಪೂರ್ಣ ಕ್ರಿಯಾಪದಗಳೇ ಆಗುತ್ತವೆ.

(i) ವಿಧ್ಯರ್ಥಕ ಕ್ರಿಯಾಪದ : ಮಾಡಿಮ್. ನೋಡಳ್. ಪೋಕೆ. ಅಕ್ಕೆ.

(i) ನಿಷೇಧಾರ್ಥಕ ಕ್ರಿಯಾಪದ: ಮಾಡೆನ್. ನೋಡಳ್. ಪಾಡದು.

ಇವುಗಳ ಮೇಲೆ ನಾಮ ವಿಭಕ್ತಿ ಪ್ರತ್ಯಯ ಹತ್ತದು[೫]

೫. ಆ.ಪ್ರ.ಗಳಾದ ಎನ್.ಎವು. ಅಯ್. ಇರ್-ಇವೆಲ್ಲಾ ನಾಮಪದ. ಸಂಖ್ಯಾವಾಚಕ. ಗುಣವಾಚಕಗಳ ಮೇಲೆ (ಲಿಂ.ಸೂ.ಪ್ರ.ಗಳ ನಂತರ) ಹತ್ತಿ ಕ್ರಿಯಾಪದವನ್ನೆ ಕೊಡುತ್ತವೆ ಎಂಬುದನ್ನು ಗಮನಿಸಬೇಕು.[೬]
ಉದಾ: ಆನ್ ಕವಿ ಕೇಶವನೆನ್. ಮಲ್ಲಿಕಾರ್ಜುನ ಸುತನೆನ್.

---

೪. ಇದನ್ನು ನೇರವಾಗಿ ಸೂ. ೨೩೦ರಲ್ಲಿ ಕೇಶಿರಾಜ ಹೇಳಿದ್ದಾನೆ.

೫. 'ವಿಚಾರ ಮಾಡಿದರೆ. ವಿಧಿರೂಪಗಳನ್ನು ಬಿಟ್ಟರೆ. ಮಿಕ್ಕ ಪೂರ್ಣ ಕ್ರಿಯೆಗಳೆಲ್ಲಾ ನಾಮಪದಗಳೇ ಆಗಿವೆ' ಎನ್ನುವ ಕೈಪಿಡಿಕಾರರ ಮಾತು (ಪುಟ: ೩೬೫) ಇಲ್ಲಿ ಬಿದ್ದು ಹೋಗುತ್ತದೆ.

೬. (i) 'ಕವಿ ಕೇಶವನ್ ......' ನಾನು ಕವಿ ಕೇಶವನಾಗಿದ್ದೇನೆ - ಎಂದು ಒಂದು ವಾಕ್ಯದಲ್ಲಿ ಹೇಳಬೇಕಾದ್ದು ಹಳಗನ್ನಡದಲ್ಲಿ ಒಂದು ಪದದಿಂದ ಸಾಧ್ಯವಾಗುತ್ತಿತ್ತು. ಈ ಸೌಕರ್ಯ ನಡುಗನ್ನಡ ಕಾಲಕ್ಕೆ ಪೂರ್ಣ ಲುಪ್ತವಾಗಿತ್ತು; ಹೊಸಗನ್ನಡದಲ್ಲಿ ಇಲ್ಲವೆ ಇಲ್ಲ. ಇದರಿಂದ ಕನ್ನಡ ನುಡಿ ಕೊಂಚ ಬಡವಾಗಿದೆ. ಇದ್ದುದನ್ನು ಕಳೆದುಕೊಂಡು ಹೊಸತಾಗಿ ಏನನ್ನೂ ಅದರೆಡೆಯಲ್ಲಿ ಮಾಡಿಕೊಳ್ಳದೆ.
- ಡಿ.ಎಲ್.ಎನ್. ಗ್ರಂಥ 'ಪೀಠಿಕೆಗಳು. ಲೇಖನಗಳು'
ಲೇ : 'ಕನ್ನಡದಲ್ಲಿ ಶಬ್ದ ರಚನೆ' ಮೊ.ಮು : ೧೯೭೧. ಪುಟ : ೭೯೨.
(ii) 'ಇದು ಕನ್ನಡ ಭಾಷೆಯ ಮತ್ತೊಂದು ವಿಶಿಷ್ಟ ಲಕ್ಷಣ' - ಎಂದ ಎಚ್.ಚೆನ್ನಕೇಶವ ಅಯ್ಯಂಗಾರರು (ಲಿಂಗಣಾರಾಧ್ಯ ವೃತ್ತಿ ಸಹಿತ ಶಬ್ದಮಣಿದರ್ಪಣ ಅವತರಣಿಕೆ. ಪುಟ : ೯೭) ಅಭಿಪ್ರಾಯಿಸುತ್ತಾರೆ. ಇದು ಕನ್ನಡಕ್ಕೆ ಸೀಮಿತವಲ್ಲ. ದ್ರಾವಿಡ ಭಾಷೆಗಳಿಗೆಲ್ಲ ಅನ್ವಯಿಸುತ್ತದೆ ಎನ್ನಬಹುದು.

ಇದರಿಂದ ವ್ಯಕ್ತವಾಗುವುದೆಂದರೆ ಹ.ಗ.ದಲ್ಲಿ ಆ.ಪ್ರ.ಗಳು ಬರುವುದು ಎರಡು ಸಂದರ್ಭಗಳಲ್ಲಿ:

(i) ಬಹುಮಟ್ಟಿಗೆ ಪೂರ್ಣ ಕ್ರಿಯಾಪದ ರಚನೆಯಲ್ಲಿ: ಧಾತು + ಕಾ.ವಾ.ಪ್ರ. + ಆ.ಪ್ರ.

(ii) ಮಹತ್ ವರ್ಗದ ನಾಮಗಳಿಗೆ ಆ.ಪ್ರ. ನೇರವಾಗಿ ಹತ್ತಿ ಕ್ರಿಯಾರ್ಥವನ್ನೀಯುವ ವಾಕ್ಯ ರಚನೆ ನಿರ್ಮಾಣಗೊಳ್ಳುತ್ತವೆ. ಆಗ ಮಹತ್ ವರ್ಗದ ನಾಮ ನಿರ್ಮಾಣಗೊಳ್ಳಲು ಸರ್ವನಾಮ ಪಿಂಡರೂಪಗಳಾದ ಪ್ರ.ಪು.ದ ಆ.ಪ್ರ.ಗಳು ಲಿಂ.ಸೂ.ಪ್ರ.ದ ಪಾತ್ರ ನಿರ್ವಹಿಸುತ್ತವೆ. ಅವುಗಳ ಮೇಲೆ ಉ.ಪು. ಮತ್ತು ಮ.ಪು.ದ ಆ.ಪ್ರ.ಗಳು ಬರುತ್ತವೆ.

ಉದಾ: (i) ನೀನ್ ಅಗ್ನಿಪುತ್ರಿಯಯ್ (ಪದ್ಯ-೧೨)
(ii) ಲಜ್ಜಿತನೆನ್
(iii) ಅತಿ ದುಃಖಿತನೆನ್
(iv) ಪಿರಿಯನೆನ್ (ಸೂ-೩)
(v) ದೌಹಿತ್ರನೆನ್ (ಸೂ-೬)
(vi) ಪಿರಿಯರೆವು ಎಂದು ಧಿಕ್ಕರಿಸಿ ಬಯ್ದುದು . . . . . (ಸೂ-೨೩೧)

	ಮ.ವ.ದ ನಾಮ	+	ಆ.ಪ್ರ	→	ವಾಕ್ಯ
(ಪುತ್ರ + ಇ)	— ಪುತ್ರಿ	+	ಅಯ್	→	ಪುತ್ರಿಯಯ್
(ಲಜ್ಜಿತ + ಅನ್)	— ಲಜ್ಜಿತನ್	+	ಎನ್	→	ಲಜ್ಜಿತನೆನ್
(ದುಖಿತ + ಅನ್)	— ದುಃಖಿತನ್	+	ಎನ್	→	ದುಃಖಿತನೆನ್
(ಪಿರಿಯ + ಅನ್)	— ಪಿರಿಯನ್	+	ಎನ್	→	ಪಿರಿಯನೆನ್
(ದೌಹಿತ್ರ + ಅನ್)	— ದೌಹಿತ್ರನ್	+	ಎನ್	→	ದೌಹಿತ್ರನೆನ್
(ಪಿರಿಯ + ಅರ್)	— ಪಿರಿಯರ್	+	ಎವು	→	ರಿಯರೆವು.

ಈ ವಾಕ್ಯ ರಚನೆಯಲ್ಲಿ ಸ್ಪಷ್ಟವಾಗಿ ಎರಡು ಹಂತಗಳನ್ನು ಗುರುತಿಸಬಹುದು:

(i) ನಾಮ + ಲಿಂ.ಸೂ.ಪ್ರ. ಮ. ವರ್ಗದ ನಾಮಪದ

(ii) ಮ.ವ.ದ ನಾಮ + (ಉ.ಪು. ಇಲ್ಲವೆ ಮ.ಪು.ದ) ಆ.ಪ್ರ → ನಿತ್ಯವರ್ತಮಾನವುಳ್ಳ ಪ್ರ.ಪು.ದ ಪುಟ್ಟವಾಕ್ಯರಚನೆ.

ಈ ರೀತಿಯ ವಾಕ್ಯ ರಚನೆ ಹ.ಗ.ದ ವರೆಗೆ ಮಾತ್ರ ಉಳಿಯಿತು.

(iii) ನಾಮಾರ್ಥವಾದರು ಕ್ರಿಯಾರ್ಥವನ್ನೆ ಕೊಡುತ್ತವೆ. ಆದರಿಂದ 'ನಾಮ ಕ್ರಿಯೆ' ಎಂದು (ಎಚ್.ಚೆನ್ನಕೇಶವ ಅಯ್ಯಂಗಾರ; ಪೂರ್ವೋಕ್ತ ಗ್ರಂಥ) ಕರೆದಿರುವುದು ಇದೇ ಕಾರಣದಿಂದ ಎನ್ನಬೇಕು. 'ನ್ಯಾಯವಾಗಿ ದ್ರಾವಿಡ ಭಾಷೆಗಳಲ್ಲಿ ಕ್ರಿಯಾಪದಗಳೆ ಇಲ್ಲ' ಎಂಬ ಕೆ.ಕೆ.ಗೌಡರು (ಶ್ರೀಕಂಠ ತೀರ್ಥ ಗ್ರಂಥದ 'ಲಿಂಗಪೊಂಬತ್ತು ತೆರಂ' ಲೇಖನದಲ್ಲಿ) ಪ್ರಾಸಂಗಿಕವಾಗಿ ಪ್ರಸ್ತಾಪಿಸಿರುವ ಈ ಮಾತನ್ನೆ ಇಲ್ಲಿ ಇನ್ನೂ ಗಟ್ಟಿಯಾಗಿ ಪುನರುಚ್ಚರಿಸಬಹುದು.

೬. ಉ.ಪು. ಮತ್ತು ಮ.ಪು.ದ ಆ.ಪ್ರ.ಗಳು ಕೃದಂತ ವಿಶೇಷಣಗಳ ಮೇಲೆ ಹತ್ತಿದರಾಗಲಿ ಇಲ್ಲವೆ ನಾಮಪದಗಳ ಮೇಲೆ ಹತ್ತಿದರಾಗಲಿ ಒಟ್ಟಿನಲ್ಲಿ ಕ್ರಿಯಾರ್ಥವನ್ನು ಕೊಡುವ ಆ.ಪ್ರ.ಗಳಾಗಿಯೇ ಬಳಕೆಯಾಗುತ್ತವೆ.[2]

೩. ವರ್ಣ ಪಲ್ಲಟ :

೧. ಬಾದಾಮಿ ತಾಲೂಕಿನ ಉಪಭಾಷೆಯಲ್ಲಿ ವರ್ಣಪಲ್ಲಟಗೊಳ್ಳುವ ಕೆಲವು ಪದಗಳ ಮರು ಅವಲೋಕನವನ್ನು ಇದೀಗ ಮಾಡಬಹುದಾಗಿದೆ.

(i) ಕೊಣಮಗಿ– ಕೊಮಣಗಿ[೧]

(ii) ಉರವಾಟಿ–ಉವರಾಟಿ[೨]

(iii) ಹೊಟ್ಟಿಕಿಚ್ಚು-ಹೊಚ್ಚಿಕಿಟ್ಟು[೩]

(iv) ಅಳಗ್ಯಾಡು-ಅಗಳ್ಯಾಡು[೪]

(v) ಹುಂಚಿಕಪ್ಪ-ಹುಂಚಿಪಕ್ಕ[೫]

(vi) ಪಳಾರಾ-ಪರಾಳಾ[೬]

(vii) ಕಾಲವಿ-ಕಾವಲಿ[೭]

(viii) ದ್ಯಾಮವ್ವ-ದ್ಯಾವಮ್ಮ[೮]

೨. ಮೊದಲ ಐದು ಶಬ್ದಗಳು ನಾಲ್ಕು ಅಕ್ಷರಗಳುಳ್ಳ ಮತ್ತು ಕೊನೆಯ ಮೂರು ತ್ರ್ಯಕ್ಷರಗಳುಳ್ಳ ಪದಗಳಾಗಿವೆ.

---

೨. (i) ಇಲ್ಲಿಯ ಒಂದು ವಿಶೇಷವೆಂದರೆ 'ಕೂರಿದರ್', 'ಸೇರಿದರ್'– ಎಂಬವು ಕ್ರಲ್ಲಿಂಗವಾಗಿ ಬಳಕೆಯಾಗುತ್ತವೆ. 'ದ್ವಿತೀಯಾದಿ ವಿ.ಪ್ರ. ಹತ್ತಿದಾಗ ಮಾತ್ರ ಪಟ್ಟಿನ ಕ್ರಲ್ಲಿಂಗದ ಸ್ವರೂಪವನ್ನು ಗುರುತಿಸಬಹುದಾಗಿದೆ' – ಎಂದು ನನ್ನ ಪೂರ್ವೋಕ್ತ ಲೇಖನದಲ್ಲಿ (ಪುಟ.೧೪೨) ಹೇಳಿದ್ದ. ಆದರೆ ದ್ವಿತೀಯಾದಿ ವಿ.ಪ್ರ.ಗಳಿಲ್ಲದೆ ಪ್ರಥಮೋತ್ತರ ಆ.ಪ್ರ.ಗಳು ಹತ್ತಿ ಪುಟ್ಟ ವಾಕ್ಯರಚನೆಗೊಂಡಾಗಲೂ ಅದರ ಹಿಂದಿನ ರಚನಾ ಪದವು ಕ್ರಲ್ಲಿಂಗವಾಗುವುದುಂಟು – ಎಂದು ಹೆಚ್ಚುವರಿ ವಿವರಣೆಯನ್ನು ಅದಕ್ಕೆ ಸೇರಿಸಬೇಕಾಗುವುದು.
ಉದಾ : ಕೂರಿಂದರ್ ಕಾಳಗದೊಳ್. ನೆರಿದರಿರ್ ......(ಸೂತ್ರ.೨೩೧)

{ ಕೂರ್ + (ಇ)ದ + ಅರ್ / ಕ್ರಲ್ಲಿಂಗ } + ಇರ್

ಇಲ್ಲಿ 'ದ' ಭೂ.ಕಾ.ಪ್ರ.ವಾದರೂ ವರ್ತಮಾನ ಸೂಚಕವಾಗಿ ನಿಲ್ಲುವೆ. ಆದರೆ ಇಂಥ ಸಂದರ್ಭದಲ್ಲಿ 'ದಪ', 'ದ' ಪ್ರ.ಗಳು ಬರುತ್ತವೆಯೆ? ಇನ್ನೂ ಹೆಚ್ಚಿನ ಪ್ರಯೋಗಗಳ ಅವಲೋಕನದಿಂದ ಏನನ್ನಾದರೂ ಹೇಳಲು ಶಕ್ಯವಿದೆ.
(ii) ಕಾ.ವಾ.ಪ್ರ.ಗಳು ಹತ್ತಿದಾಗ (ಆ ಮಾನದಂಡದಿಂದ) ಅವುಗಳನ್ನು ಶುದ್ಧ ಕ್ರಿಯಾಪದಗಳು (ನೋಡಿ : ಎಲ್.ಬಸವರಾಜ. ಶಮದ. ಪ್ರ.ಮು : ೧೯೬೬. ಪುಟ : ೨೩೨) ಎನ್ನಬಹುದು. ಕೂರಿದರ್, ಬಿರಿದುದೆನ್. ಪಿಲಿಯರವು – ಇವು ಶುದ್ಧ ಕ್ರಿಯಾಪದಗಳಲ್ಲ. ಆದರೂ ಕ್ರಿಯಾರ್ಥವನ್ನು ನೀಡಿದರೂ ಪುಟ್ಟ ವಾಕ್ಯಗಳಾಗಿ ನಿಲ್ಲುತ್ತವೆ.
ಆ.ಪ್ರ.ಗಳ ಒಂದೆ ಕಾ.ವಾ.ಪ್ರ.ಗಳು ಒಂದುಗೂಡಿದಾಗ ಒಂದು ರೀತಿ ಕ್ರಿಯಾಪದಗಳಾದರೆ ಲಿಂ.ಸೂ.ಪ್ರವನ್ನುಳ್ಳ ಸಂಖ್ಯಾ. ವಿಶೇಷಣಾದಿ ಮಹತ್‌ವರ್ಗದ ನಾಮಗಳಿಗೆ ಆ.ಪ್ರ. ಹತ್ತಿ ವರ್ತಮಾನ ಸೂಚಕ ಕ್ರಿಯಾರ್ಥ ಪದಗಳು ಅಥವಾ ನಾಮಕ್ರಿಯೆಗಳು ರೂಪ ತಳೆಯುತ್ತವೆ. ಹೀಗೆ ಹ.ಗ.ದ ಕ್ರಿಯಾರ್ಥದ ಪದಗಳನ್ನು ೨ ರೀತಿ ವಿಭಾಗಿಸಬಹುದು.
(i) ಶುದ್ಧ ಕ್ರಿಯಾಪದಗಳು
(ii) ವಾಕ್ಯ ಸಂದರ್ಭದಲ್ಲಿ ವರ್ತಮಾನದಂತೆ ಬರುವ ಕ್ರಿಯಾವಾಚಿ ಪದಗಳು.

೧. ಕೊಣಮಗಿ. ಕೊಮಣಗಿ. – ಇವೆರಡೂ ರೂಪಗಳಿಗೆ ಮೂಲವಾದುದು 'ಕೊಣಬಗೆ' ಎಂಬ ರೂಪವಾಗಿದೆ. ಮೂಲದಿಂದ ಇಂದಿನ ರೂಪ ಸಿದ್ಧಿಸಿರುವ ಸಾಧ್ಯತೆಗಳು:
ಕೊಣಬಗೆ > ಕೊಣಮಗೆ > ಕೊಣಮಗಿ > ಕೊಮಣಗಿ > ಕೊಮ್ಣಗಿ.

೧. ಮೊದಲ ಹಂತದಲ್ಲಿ 'ಬ'ಕಾರ 'ಮ'ಕಾರವಾಗಿದೆ ೨. ಅಂತ್ಯ 'ಎ' ವರ್ಣ ಇಲ್ಲಿಯ ಉಪಭಾಷಾವೈಶಿಷ್ಟ್ಯದಂತೆ 'ಇ' ವರ್ಣವಾಗಿದೆ. ಹಾಗೆಯೆ 'ಎ'ವರ್ಣದ ಹಿಂದಿನ 'ಇ'ವರ್ಣ 'ಅ'ವರ್ಣ ಹೊಂದುವುದು. ಹುಣಿಚಿ > ಹುಣಚಿ ಎಂಬಲ್ಲಿ ಇದೆ ತೆರನಾದ ವರ್ಣ ಬದಲಾವಣೆಯನ್ನೆ ಕಾಣುತ್ತೇವೆ. ೩. ಅನಂತರ ವರ್ಣಪಲ್ಲಟ ಕ್ರಿಯೆ ('–ಣಮ–' > '–ಮಣ–') ನಡೆದಿದೆ. ೪. ಕೊನೆಯದಾಗಿ 'ಅ'ಸ್ವರ ಲೋಪವೂ ಆಗಿದೆ.

ಬಳಕೆಯಲ್ಲಿರುವ ಪರ್ಯಾಯ ರೂಪಗಳು: ಕೊಮಣ್ಗಿ. ಕೊಣಮ್ಗಿ. ವಿರಳವಾಗಿ: ಕೊಣವಿಗಿ. ಕೊಣಪ್ಗಿ. (ಜೋಳದ) ರೊಟ್ಟಿ(ಯನ್ನು ಮಾತ್ರ) ಬಡಿಯಲು ಉಪಯೋಗಿಸುವ ಪರಾತದಂಥ ಒಂದು ಸಾಧನ. ಮರ ಅಥವಾ ವಿಶಿಷ್ಟ ಕರಿಕಲ್ಲಿನಲ್ಲಿ ಮಾಡಿದ ವಸ್ತು ಇದು. ವಿಶೇಷವಾಗಿ ಬ್ರಾಹ್ಮಣೇತರರು ಬಳಸುವ ಸಾಧನಕ್ಕೆ ಈ ಶಬ್ದ ಪ್ರಯೋಗವಿದೆ. ಇನ್ನೂ ವಿಶೇಷ ಸಂಗತಿಯೆಂದರೆ ಬ್ರಾಹ್ಮಣರು ಜೋಳದ ರೊಟ್ಟಿಯನ್ನೆ ಮಾಡಿದರೂ (ಜೋಳದ ಹಿಟ್ಟಿಗೆ ಬಿಸಿ ನೀರು ಬೆರೆಸಿ ಮಿದ್ದುವ. ಕೈಯಿಂದ ತಟ್ಟುವ. ತಟ್ಟುವಲ್ಲಿ ಹೊರಡುವ ಲಯಗತಿ 'ಇವೆಲ್ಲದರಲ್ಲೂ ವ್ಯತ್ಯಾಸವಿದೆ. ಆ ಮಾತು ಬೇರೆ. ಹೀಗೆ ಪ್ರತಿ ಹಂತದಲ್ಲೂ ಉಳಿಸಿಕೊಳ್ಳುವ ಅಂತರವು ತಮ್ಮ ಸ್ವಂತಿಕೆಯ(?) ಹೆಗ್ಗಳಿಕೆ ಅಂದುಕೊಂಡಿರಬೇಕು). ಇತರರು ಬಳಸುವ 'ಕೊಮಣಗಿ'ಯನ್ನು ಉಪಯೋಗಿಸಲಾರರು. ಇದಕ್ಕೆ ಅವರು (ಅಂದರೆ ರೊಟ್ಟಿ ತಟ್ಟಲು) 'ಕೊಮಣಗಿ' ಆಕಾರದ ಹಿತ್ತಾಳಿ ಸಾಧನ ಬಳಸುವರು. ಇದೇ ರೀತಿ ಅಡಿಗೆಗೆ ಉಪಯೋಗಿಸುವ ಸಾಧನ ವಸ್ತುಗಳಿಗೆಲ್ಲ (ಬಳಸುವ ಶಬ್ದಗಳಲ್ಲಿ) ಈ ಅಂತರ ಕಾಣುತ್ತೇವೆ.

ಉದಾ: ಬ್ರಾಹ್ಮಣೇತರರಲ್ಲಿ–ಬ್ರಾಹ್ಮಣರಲ್ಲಿ

(i) (ಜೋಳದ) ರೊಟ್ಟಿ – ಭಕ್ಕರಿ/ಬಕ್ಕರಿ. ಬಕ್ರಿ*

(ii) ಗೋದಿರೊಟ್ಟಿ – ಚಪಾತಿ

(iii) ಕೊಣಮಗಿ – ಪರಾತ (ವಿರಳವಾಗಿ. 'ಕೊಮಣಗಿ'ಬಳಸಿದಾಗ 'ಕ್ವಾಣಂಬ್‌ಗಿ' ಎಂದು ಉಚ್ಚರಿಸುತ್ತಾರೆ.

(iv) ತೆವಿ. ಹಂಚು ಹಂಚು – ಹಂಚು(ಸುಡಲು ಉಪಯೋಗಿಸುವ ಸಾಧನ)

(v) (ಮುಗುಚು ಕಟ್ಟಿಗೆ>)ಮುಗುಚುಕಟ್ಟಿಗೆ–ಕಡಚಗಿ (ರೊಟ್ಟಿ ತಿರುವಿ ಹಾಕಲು ಉಪಯೋಗಿಸುವ ಸಾಧನ)

*"ಜೋಳದ ರೊಟ್ಟಿಯನ್ನು 'ಭಕ್ಕರಿ'ಎಂದು ಕನ್ನಡದಲ್ಲಿ ಮತ್ತು 'ಭಾಕರಿ' ಎಂದು ಮರಾಠಿಯಲ್ಲಿ ಹೇಳುತ್ತಾರೆ." (ವಾಪೆಂ. ಪದಾರ್ಥ ಚಿಂತಾಮಣಿ. ಕಸ್ತೂರಿ. ೮೨ನೇ ಭಾಗ) 'ಭಕ್ಕರಿ' ಮರಾಠಿಯಿಂದ ಬಂದುದೇ ಹೌದಾದರೂ ಸಾರ್ವತ್ರಿಕ ಬಳಕೆಯ ಪದವಲ್ಲ. ಕೇವಲ ಬ್ರಾಹ್ಮಣರು ಬಳಸುವ ಪದ. ತಮ್ಮ ಪ್ರತ್ಯೇಕ ಮಡಿವಂತಿಕೆಯ ಸ್ಥಾನ ಕಾಯ್ದುಕೊಳ್ಳಲು ಬ್ರಾಹ್ಮಣೇತರರು ಬಳಸುವ ಪದಗಳಿಗೆ ಪರ್ಯಾಯವಾಗಿ ಅನೇಕ ಮರಾಠಿ ಪದಗಳನ್ನು ಬಳಕೆಗೆ ತಂದರೆಂದು ತಿಳಿಯುತ್ತದೆ.

೨. (i) ಉರಪಾಟಿ – ತಿರುವು ಮುರುವು

(ii) ಉಪರಾಟಿ – ವ್ಯರ್ಥ

ತಿರುವು ಮುರುವು

೩. ಹೊಟ್ಟೆಕಿಚ್ಚು > ಹೊಚ್ಚೆಕಿಟ್ಟು

ಬ.ಪ.ರೂಗಳು: ಹೊಟ್ಟೀಕಿಚ್ಚು?ಚ್ಚ. ಹೊಚ್ಚೀ ಕಿಟ್ಟು/ಟ್ಟ.

೪. ಧಾತುಗಳೆರಡರ ಸಂಯೋಗದಿಂದ ಸಂಯುಕ್ತ ಧಾತುವೊಂದು ನಿರ್ಮಾಣವಾಗುತ್ತದೆ. ಹಾಗೆಯೇ ಇಲ್ಲೂ.

ಅಲಗು + ಆಡು > ಅಲುಗಾಡು > ಅಲಗಾಡು > ಅಳಗಾಡು > ಅಳಗ್ಯಾಡು.

(i) ಇಲ್ಲಿ ಎರಡನೆಯ ಸ್ವರ'ಉ'ಕಾರ 'ಅ'ಕಾರವಾಗಿದೆ.

(ii) ಆಮೇಲೆ 'ಲ'ಕಾರ 'ಳ'ಕಾರವಾಗಿ ಮತ್ತು 'ಆಡು' ರೂಪ 'ಯ'ಕಾರದೊಂದಿಗೆ ' ಯಾಡು' ಎಂದು ಪರಿವರ್ತನೆ ಹೊಂದುತ್ತದೆ. ಸಂಯುಕ್ತ ಧಾತು ರೂಪ ತಳೆಯುವಾಗ ಉತ್ತರಸ್ಥಾನದ 'ಆಡು' ಧಾತುವಿಗೆ ಆದಿ 'ಆ'ಕಾರದಲ್ಲಿ 'ಯ'ಕಾರ ಬರುವುದು. ಇದು ಈ ಭಾಗದ ಉಪಭಾಷಾ ವೈಶಿಷ್ಟ್ಯವೂ ಆಗಿರುತ್ತದೆ.

ಉದಾ: ಸುತ್ತು + ಆಡು > ಸುತ್ಯಾಡು

ಜಿಗಿದು + ಆಡು > ಜಿಗಿದ್ಯಾಡು

ಗುದ್ದು + ಆಡು > ಗುದ್ಯಾಡು

ಇಕ್ಕು + ಆಡು > ಇಕ್ಯಾಡು

೩. (i) ಈ ವರ್ಣಪಲ್ಲಟ ಕೇವಲ ವ್ಯಂಜನಗಳಲ್ಲಿ ಮಾತ್ರ ಸಂಭವಿಸುವುದು ಒಂದು ವಿಶೇಷ.

(ii) ಚತುರಾಕ್ಷರ ಪದಗಳಾದರೆ ೨.೩ನೆಯ ವ್ಯಂಜನಗಳಲ್ಲಿ ವಿಶೇಷವಾಗಿ. ಹಾಗೆಯೆ ವಿರಳವಾಗಿ ೩.೪ನೆಯ ಇಲ್ಲವೆ ೩.೪ನೆಯ ವ್ಯಂಜನಗಳಲ್ಲಿ ಈ 'ಅದಲಿ-ಬದಲಿ' ಕಾರ್ಯ ನಡೆಯುತ್ತದೆ. ತ್ರ್ಯಕ್ಷರ ಪದಗಳಲ್ಲಿ ಕಡ್ಡಾಯವಾಗಿ ೩.೪ನೆಯ ವ್ಯಂಜನಗಳಲ್ಲಿ ಮಾತ್ರ ಈ ಕಾರ್ಯ ಜರಗುತ್ತದೆ.

೪. (i) ಸ್ಥಾನವನ್ನು 'ಅದಲಿ-ಬದಲಿ' ಮಾಡಿಕೊಳ್ಳುವ ವ್ಯಂಜನ ಒಂದೊಂದೆ ಆಗಿರಬಹುದು ಅಥವಾ ಸಜಾತೀಯ ದ್ವಿತ್ವವಾಗಿರಬಹುದು.

ಉದಾ. ಕೊಣಮಗಿ. ಉರಪಾಟಿ. ಹೊಟ್ಟೆಕಿಚ್ಚು

(ii)ಇಲ್ಲವೆ ಎರಡನೆಯದಷ್ಟೆ ಸಜಾತೀಯ ದ್ವಿತ್ವವಾಗಿರುತ್ತದೆ.

ಉದಾ: ಹುಂಚಿಕಪ್ಪ, ದ್ಯಾಮವ್ವ

ಇಂಥ ಸಂದರ್ಭವಲ್ಲಿ ಪಲ್ಲಟ ಕ್ರಿಯೆಗೊಂಡಾಗ ೩ನೆಯ ಸ್ಥಾನವನ್ನು ಆಕ್ರಮಿಸುವ ಮೊದಲನೆಯ ವ್ಯಂಜನ ಸಜಾತೀಯ ದ್ವಿತ್ವವನ್ನು ಹೊಂದುವುದು. ಅಂದರೆ ೩ನೆಯ ಸ್ಥಾನವನ್ನಾಕ್ರಮಿಸುವ ವ್ಯಂಜನ ಯಾವುದೇ ಇರಲಿ ಒಟ್ಟಾರೆ ಅದು ಸಜಾತಿ ದ್ವಿತ್ವಾಗೇ ಉಳಿಯುತ್ತದೆ.

---

೫. ರೂಪನಿಷ್ಪತ್ತಿ:

ಪುಣಿಂಚಿ > ಪುಣಿಚಿ > ಹುಣಿಚಿ > ಹುಣಚಿ < ಹುಣಸಿ > ಹುನಸಿ > ಹುಂಸಿ
ಹುನಚಿ > ಹುಣಚಿ > ಹುಂಚಿ

ಪ.ರೂ.ಗಳು: ಹುಂಚೀಕಪ್ಪ. ಹುಂಸೀಕಪ್ಪ.

ಕೊಪ್ಪ (= ಬಿರುಸಾದ ಕವಚವನ್ನುಳ್ಳ ಬೀಜ. ಗೊಟ್ಟ) > ಕಪ್ಪ.

ಇಲ್ಲಿ ಕೊಪ್ಪ. ಕಪ್ಪ. ರೂಪಗಳೆರಡೂ ಬಳಕೆಯಲ್ಲಿವೆ. ಆದರೆ ನಿರ್ದಿಷ್ಟವಡಿಸಿದ ಬೀಜ ಎನ್ನುವಲ್ಲಿ ಇವೆರಡು ರೂಪಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬಳಕೆಯಾಗುತ್ತವೆ. ಉದಾಹರಣೆಗೆ 'ಮಾವಿನಕೊಪ್ಪ', (ಇದರೊಂದಿಗೆ 'ಮಾವಿನ ಗೊಟ್ಟ' ಪದದ ಬಳಕೆಯೂ ಉಂಟು) ' ಹುಂಚೀಕಪ್ಪ'- ಎಂದು ಈ ರೀತಿ ಪ್ರಯೋಗಗಳಿವೆ. 'ಮಾವಿನಕೊಟ್ಟ' ಎಂಬರ್ಥವನ್ನೆ ಕೊಡುತ್ತ 'ಕೊಪ್ಪ' ಎಂಬುದು ಸ್ವತಂತ್ರವಾಗಿ ಬಳಕೆಯಾಗುತ್ತದೆ. ಆದರೆ 'ಕಪ್ಪ'ಎಂಬ ರೂಪ ಹಾಗೆ ಪ್ರತ್ಯೇಕವಾಗಿ ಬಳಕೆಯಾಗದು. 'ಹುಂಚೀ' ಶಬ್ದದೊಂದಿಗೆ ಬಂದಾಗಲೆ ಅದಕ್ಕೆ ನಿಶ್ಚಿತಾರ್ಥದ ಬೆಲೆ ಸಲ್ಲುತ್ತದೆ. ಇದೊಂದು ರೀತಿ 'ಬದ್ಧ ಆಕೃತಿಮಾ'ದ ಹಾಗೆ ವರ್ತಿಸುತ್ತದೆ.

೬. ಫಲ + ಆಹಾರ > ಫಲಾಹಾರ > ಪಲ್ಹಾರಾ > ಪಳಾರಾ. ಪಳಾರಾ > ಪರಾಳಾ

ಪ.ರೂ.ಗಳು: ಪರಾಳ್. ಪರಾಳ. ಪಳಾರ್. ಪಳಾರ.

ಇದೀಗ ಹಬ್ಬ. ಜಾತ್ರೆ ಉತ್ಸವಗಳಲ್ಲಿ ಬೆಂಡು. ಬತ್ತಾಸು. ಚುರುಮುರಿ. ಉಂಡಿ ಮತ್ತು ಕರದಂಟು ಇತ್ಯಾದಿ ಸಿಹಿ ಖಾದ್ಯವನ್ನು ಖರೀದಿಸಿ ಮನೆಮಂದಿಯೆಲ್ಲಾ ಸ್ವಲ್ಪ ಬಾಯಿ ಚಪ್ಪರಿಸಲು ತರುತ್ತಾರೆ. ಇದನ್ನ ಪರಾಳಾ ಎನ್ನುವರು. ವಿರಳವಾಗಿ (?) ತಿಂಡಿ ಎಂಬ ಅರ್ಥದಲ್ಲಿ ಬಳಕೆಯಾಗುವುದುಂಟು.

೭. ಕಾಲುವೆ > ಕಾಲುವಿ. ಕಾಲವಿ > ಕಾವಲಿ. ಪ.ರೂ.ಗಳು: ಕಾಲವೆ. ಕಾವ್ಲಿ. ಕಾಲುವೆ ಶಿಷ್ಟಭಾಷೆಯ ಪದ 'ಕಾಲವಿ' ಈ ಭಾಗದ ಅವಿದ್ಯಾವಂತ ಒಕ್ಕಲಿಗರಲ್ಲಿ ಬಳಕೆಯಾಗುತ್ತದೆ.

೮. ದ್ಯಾಮವ್ವ- ಈ ಅಂಕಿತನಾಮ ಕುರುಬ ಜನಾಂಗದಲ್ಲೂ 'ದ್ಯಾವಮ್ಮ' ಎಂಬುದು ಕ್ಷತ್ರಿಯ ಜನಾಂಗದಲ್ಲೂ ಕಾಣಬಹುದು. ಇದನ್ನು ತಿಳಿಸಿದವ ನನ್ನ ಮಿತ್ರ ಎಚ್.ಕೆ.ವಾಗತ್ತಿ.

(iii) ಹಾಗೆಯೇ ಒನೆಯ ಸ್ಥಾನದ ದ್ವಿತ್ವ ವಿಜಾತಿಯಿಂದ ಕೂಡಿದ್ದಾದರೆ ಅವರಲ್ಲಿ ಮೊದಲನೆಯ ವ್ಯಂಜನ ಮಾತ್ರ ಪಲ್ಲಟ ಕ್ರಿಯೆಯಲ್ಲಿ ಪಾಲ್ಗೊಳ್ಳುತ್ತದೆ.
ಉದಾ: ಅಳಗ್ಯಾಡು-ಅಗಳ್ಯಾಡು

ಇಲ್ಲಿಯ ಒನೆಯ ಸ್ಥಾನದಲ್ಲಿ ಬರುವ ವಿಜಾತೀಯ ದ್ವಿತ್ವದಲ್ಲಿ ಎರಡನೆಯ ವ್ಯಂಜನವಾದ 'ಯ'ಕಾರ ತಟಸ್ಥವಾಗಿಯೆ ಉಳಿಯುತ್ತದೆ.

೫. ಈ ಪಲ್ಲಟ ಕ್ರಿಯೆಯಲ್ಲಿ ಅರ್ಥ ಬದಲಾವಣೆ ನಡೆಯುವುದಿಲ್ಲ. ಇದಕ್ಕೆ ಅಪವಾದ 'ಉಪರಾಟಿ' ಶಬ್ದ ಎನ್ನಬೇಕು. 'ತಿರುಗು-ಮುರುಗು' ಎಂಬರ್ಥವನ್ನು ಹೊಂದಿದ 'ಉಪರಾಟಿ' ಶಬ್ದ ಎನ್ನಬೇಕು. 'ತಿರುಗು-ಮುರುಗು' ಎಂಬರ್ಥವನ್ನು ಹೊಂದಿದ 'ಉರಪಾಟಿ' ವರ್ಣಪಲ್ಲಟದಿಂದ 'ಉಪರಾಟಿ' ಎಂದಾದಾಗ, ಇದು ಆ ಅರ್ಥವನ್ನೂ ಒಳಗೊಂಡು 'ವ್ಯರ್ಥ', ನಿರುಪಯುಕ್ತ' ಎಂಬ ಹೆಚ್ಚುವರಿ ಅರ್ಥವನ್ನೂ ಹೊಂದುತ್ತದೆ.[೯]

೬. ಇಲ್ಲಿ ಗುರ್ತಿಸಲಾದ ಶಬ್ದಗಳಲ್ಲಿ 'ದ್ಯಾಮವ್ವ' ಮಾತ್ರ ಅಂಕಿತನಾಮವಾಗಿದೆ.

೭. ಈ ಪಲ್ಲಟಕ್ರಿಯೆ ನಡೆಯಲು ನಿಶ್ಚಿತ ಕಾರಣವಾದರೂ ಏನು ಎನ್ನುವಾಗ ಉತ್ತರಕ್ಕಾಗಿ ಕುತೂಹಲ ಉಂಟಾಗುವುದೇನೋ ನಿಜ. ಇದಕ್ಕೆ ಕುಶಾಲಪ್ಪಗೌಡರು ಒಂದು ಸುಳಿವನ್ನು ಕೊಡುವುದುಂಟು. ಶಬ್ದೋಚ್ಚಾರಣೆಯಲ್ಲಿ ನಿಗದಿತ ರೀತಿಯಲ್ಲಿ ಧ್ವನ್ಯಂಗಗಳನ್ನು ಚಲಿಸುವುದು ಕಷ್ಟವಾಗಿ ಅಕ್ಷರಗಳು ಹಿಂದು ಮುಂದಾಗಿ ಬರುತ್ತದೆ.[೧೦] ಇದು ಸ್ವಲ್ಪ ಸತ್ಯಾಂಶವನ್ನು ಒಳಗೊಂಡಿದೆ ಎನ್ನಲೂ ಬಹುದು.[೧೧]

೮. ಈ ಬಗೆಯ ಪ್ರಕ್ರಿಯೆ ವಿಶೇಷವಾಗಿ ತೆಲುಗಿನಲ್ಲಿ ಕಾಣುವುದರಿಂದ ಇದು ತೆಲುಗಿನ ಪ್ರಭಾವ ಇರಬಹುದೆಂಬ ಊಹೆಯನ್ನು ಗೌಡರೆ ಮಾಡುತ್ತಾರೆ.[೧೨] ಇದು ನಿಜವಿದ್ದಿರಲಾರದು. ಯಾಕೆಂದರೆ ವಿಜಾಪುರ ಈ ಭಾಗದ ಉಪಭಾಷೆಗಳಲ್ಲಿ ಈ ಮೇಲ್ಕಂಡ ಪದಗಳು ದೊರೆಯುತ್ತವೆ. ಹಾಗಾದರೆ ಕನ್ನಡದ ಎಲ್ಲ ಉಪಭಾಷೆಗಳಲ್ಲಿ ಈ ಕಾರ್ಯ ಸಂಭವಿಸುತ್ತದೆಯೆ? ಹಾಗೆಯೆ ಅಂಥ ಎಲ್ಲ ಪದಗಳ ಆಯ್ಕೆ. ಆ ಮೂಲಕ

---

೯. ಈ 'ಉಪರಾಟಿ'ಯ ರೂಪ ಬಹುತೇಕವಾಗಿ ಈ ಹೆಚ್ಚುವರಿ ಅರ್ಥದಲ್ಲಿ ಬಳಕೆಯಾಗುತ್ತದೆ. 'ಕಾಲಿ-ಉಪರಾಟಿ' (ಖಾಲಿ > ಕಾಲಿ) ಎನ್ನುವ ಜೋಡು ನುಡಿಯಲ್ಲಿ 'ಉಪರಾಟಿ' ಸ್ಪಷ್ಟವಾಗಿ ಈ ಅರ್ಥದಲ್ಲೇ ಬಳಕೆಯಾಗುವುದು ಕಾಣುತ್ತದೆ. 'ಉಪರಾSSಟಿ' ರೂಪಕ್ಕೆ ಕೇವಲ ಈ ಅರ್ಥವೇ ಉಂಟು.

೧೦. ಕೆ.ಕೆ. ಗೌಡ. 'ಕನ್ನಡ. ತಿರುಳ್ಗನ್ನಡ ಮತ್ತು ಸಮಾಜ'. ಪ್ರ.ಮು: ೧೯೯೧. ಪುಟ: ೮೮-೯೨ ವರ್ಣಪಲ್ಲಟದ ವಿಷಯ ವಿವರಣೆ

೧೧. ಬಾಲ್ಯದ ವಿದ್ಯಾಭ್ಯಾಸದಲ್ಲಿ 'ಉತ್ಪಾದ' ಎಂಬುದನ್ನು 'ಉಸ್ಪಾತ' ಎಂದೂ ಉಚ್ಚರಿಸುತ್ತಿದ್ದುದರ ನೆನಪು ಬರುತ್ತದೆ. ಹಾಗೆಯೇ ಬಾಲಭಾಷೆಯ ತೊದಲು ನುಡಿಯಲ್ಲಿ 'ಕಬಬು' ಸ್ವಲ್ಪ ಹಿಂದುಮುಂದಾಗಿ 'ಕುಬುಡು' ಎಂದಾಗುವುದುಂಟು. ಹಾಗೆಂದ ಮಾತ್ರಕ್ಕೆ ಇದೊಂದೇ ಕಾರಣ ಎನ್ನಲೂ ಬಾರದು.

೧೨. ಪೂರ್ವೋಕ್ತ ಗ್ರಂಥ. ಪುಟ: ೮೮.

ಅಧ್ಯಯನ ಇವುಗಳಿಂದ ಈ ಬಗ್ಗೆ ಇನ್ನೂ ಖಚಿತ ಮತ್ತು ಸಮರ್ಪಕವೆನಿಸುವ ನಿಯಮಗಳ ರೂಪ ಗೋಚರವಾದಾವು ಎನಿಸುತ್ತದೆ.

೯. ಕನ್ನಡವಲ್ಲಿ ಈ ಪ್ರಕ್ರಿಯೆಯನ್ನು ಮೊದಲು ಗುರುತಿಸಿದವನು ಕೇಶಿರಾಜ. ಅವನ್ನು 'ವರ್ಣಪಲ್ಲಟ'ವೆಂದಿಲ್ಲವಾದರೂ ಈ ಕ್ರಿಯೆಯನ್ನುಳ್ಳ ಶಬ್ದಗಳ ವಿಚಾರ ಪ್ರಸ್ತಾಪವೇ ಆದಾಗಿರುತ್ತದೆ.[೧೩]

೧೦. ಮೂಲ ಮತ್ತು ವರ್ಣಪಲ್ಲಟಗೊಂಡ ರೂಪಗಳೆರಡೂ ಕೆಲಕಾಲ ಚಲಾವಣೆಯಲ್ಲಿರಬಹುದು. ಕ್ರಮೇಣ ಪಲ್ಲಟಗೊಂಡ ರೂಪ ಮರೆಯಾಗಲೂ ಬಹುದು. ಉದಾಹರಣೆಗೆ 'ಅಗಸ' ಶಬ್ದದ ಪಲ್ಲಟಗೊಂಡ ರೂಪವು ೧೩ನೆಯ ಶತಮಾನದಲ್ಲಿ ಬಳಕೆಯಲ್ಲಿತ್ತು.
ಉದಾ: 'ಊರ ಸೀರೆಗೆ ಅಸಗ ತಡಬಡಗೊಂಬಂತೆ' -ಅಕ್ಕಮಹಾದೇವಿ
ಇಂದು ಈ ಪಲ್ಲಟಗೊಂಡ ರೂಪ ಇಲ್ಲ.

---

೧೩. ಈ ಕಾರ್ಯ ಮೊದಲುಗೊಳ್ಳುವುದು ಆಡುನುಡಿಯಲ್ಲಿ. ಅನಂತರ ಮೆಲ್ಲಮೆಲ್ಲನೆ ಗ್ರಾಂಥಿಕ ನುಡಿಯಲ್ಲೂ ಪಾದಾರ್ಪಣೆಯಿಕ್ಕುತ್ತದೆ. ಇಂಥ ಮೂರು ಪದಗಳನ್ನು ಮಾರ್ಗಕವಿಗಳು ಪ್ರಯೋಗಿಸಿದ್ದರಿಂದಲೋ ಏನೋ. ಅದರಿಂದ ಕೇಶಿರಾಜನು ಅವಕ್ಕೆ ಮಾನ್ಯತೆ ನೀಡುವುದು ಕಂಡುಬರುತ್ತದೆ.

ಹಾಗೆಯೆ "ಈ ಪದಗಳಿಗ (ಮಲ್ಲರ್. ಅಲರ್. ಎಲರ್) ಸಂಬಂಧಪಟ್ಟ ರೂಪಗಳನ್ನು ತಮಿಳಿನ ರೂಪಗಳೊಂದಿಗೆ ಹೋಲಿಸಿದರೆ ಮಲರ್. ಅಲರ್-ಎಂಬಿತ್ಯಾದಿ ಪದಗಳ ಅಂತರಾಳದಲ್ಲಿ 'ಲ' ಇದ್ದು. ಅಂತ್ಯದಲ್ಲಿ ರೇಫೆ ಇರುವುದೇ ಮೂಲರೂಪವೆಂದು ತಿಳಿಯಲವಕಾಶವಿದೆ. ಆದುದರಿಂದಲೆ ಇಲ್ಲಿ ಹೇಳಿದ್ದು ತಿರುವು-ಮುರುವಾಗಿರುವಂತೆ ಕಾಣಿಸುತ್ತದೆ"(ಪ್ರೊ.ಗ್ರಂ. ಪುಟ: ೪೮)
"ಒರಿದುವೆಂಬುದಱಿಂ ಮರಲೆಂಬುದಱ ರೇಫೆಗೆ ಣತ್ವಮುಮಾಗಿ ಮಣಲೆಂದುಂಟು" (೩೯ನೆಯ ಸೂತ್ರವೃತ್ತಿ). 'ಮಲರ್'ಎಂಬ ಮೂಲ ರೂಪ 'ಮಗಲ್'ಎಂದಾದಾಗ. ಅದು ಹೂ (ನಾಮ). ಅರಳು (ಧಾತು)- ಎಂಬರ್ಥಗಳೊಂದಿಗೆ 'ಮರಳು' ಎಂಬರ್ಥದಲ್ಲಿ ಬಳಕೆಯಾಗುತ್ತಿತ್ತೆ? ಇಲ್ಲವೆ. ಈ ಭಿನ್ನಾರ್ಥ ಸೂಚನೆಯೊಂದಿಗೆ 'ಮರಲ್' ಕ್ರಮೇಣ 'ಮೆಣಲ್' ಎಂದು ಪರಿವರ್ತಿತವಾಯ್ತೆ?

ಇದರ ಸಂಭವನೀಯ ರೂಪ ನಿಷ್ಪತ್ತಿಯನ್ನು ಎಲ್. ಬಸವರಾಜು ಅವರು ಹೀಗೆ (ಅವರಿಂದ ಸಂಪಾದಿತವಾದ 'ಶಮದ'ದ ೩೯ನೆಯ ಸೂತ್ರ ವ್ಯಾಖ್ಯಾನದಲ್ಲಿ) ಊಹಿಸುತ್ತಾರೆ.: ಮರಲ್ > ಮರಳ್ > ಮಳಲ್ > ಮಣಲ್.

ಚಿತ್ತಿರಪ್ಪಾವೈ : ಒಂದು ಪರಿಚಯ

ಬಸವರಾಜ ನಾಯ್ಕರ

ಪಿ.ವಿ. ಅಕಿಲಾಂಡನ್ ಅಥವಾ ಅಕಿಲನ್ ಎಂಬವರು ತಮಿಳಿನಲ್ಲಿ ಬರೆಯುವ ಸುಪ್ರಸಿದ್ಧ ಕಾದಂಬರಿಕಾರರಾಗಿದ್ದಾರೆ. ಅವರು ನಲವತ್ತೈದಕ್ಕಿಂತ ಹೆಚ್ಚು ಸಾಹಿತ್ಯಕೃತಿಗಳನ್ನು ರಚಿಸಿ ತಮಿಳು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ೧೯೬೩ರಲ್ಲಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆಯಿತು. ಅನಂತರ ೧೯೭೫ರಲ್ಲಿ "ಚಿತ್ತಿರಪ್ಪಾವೈ" ("ಚೆಲುವೆಯ ಚಿತ್ರ") ಎಂಬ ಕಾದಂಬರಿಗೆ ಭಾರತೀಯ ಜ್ಞಾನಪೀಠ ಪುರಸ್ಕಾರ ದೊರೆಯಿತು. ಹೀಗೆ ಅಕಿಲನ್ ಅವರು ತಮಿಳು ಸಾಹಿತ್ಯಕ್ಕೆ. ಅದರ ಮೂಲಕ ಭಾರತೀಯ ಸಾಹಿತ್ಯಕ್ಕೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಅವರ ಸಾಹಿತ್ಯದಲ್ಲಿ ದಕ್ಷಿಣ ಭಾರತದ ತಮಿಳು ಸಂಸ್ಕೃತಿಯ ಜನರ ಜೀವನವನ್ನು ಅತ್ಯಂತ ಆಳವಾಗಿ ಮತ್ತು ಮನಂಬುಗುವಂತೆ ಚಿತ್ರಿಸಲಾಗಿದೆ.

ಈ ಕಾದಂಬರಿಯಲ್ಲಿ ನಡೆಯುವ ಕಾರ್ಯವೆಲ್ಲ ಮದ್ರಾಸಿನ ಸುತ್ತಮುತ್ತಲಿನ ಪರಿಸರದಲ್ಲಿ. ಹೀಗಾಗಿ ತಮಿಳು ಸಂಸ್ಕೃತಿಯ ಹಿನ್ನೆಲೆಯಲ್ಲಿ ನಡೆಯುವ ಇಲ್ಲಿಯ ಘಟನೆಗಳು ತಮ್ಮದೇ ಆದ ಛಾಯೆಯನ್ನು ಪಡೆದುಕೊಂಡಿವೆ. ಈ ಕಾದಂಬರಿಯು ಕಲಾಕಾರನೊಬ್ಬನ ಜೀವನವನ್ನು ಕುರಿತಾಗಿದ್ದು. ಆತನ ಸುಖದುಃಖಗಳನ್ನು. ತೊಡಕುಗಳನ್ನು. ಸಾಧನೆ ಮತ್ತು ಸಿದ್ಧಿಗಳನ್ನು ಅತ್ಯಂತ ಸವಿಸ್ತಾರವಾಗಿ ಚಿತ್ರಿಸುತ್ತದೆ.

ಚಿದಂಬರಂ ಮೇಸ್ತ್ರಿಯ ಮಗನಾದ ಅಣ್ಣಾಮಲೈ ಎಂಬ ತರುಣನು ಈ ಕಾದಂಬರಿಯ ಕಥಾನಾಯಕನಾಗಿದ್ದಾನೆ. ಅವನ ಮನೆಯ ಹತ್ತಿರವೇ ವಾಸವಾಗಿದ್ದ ಮಾಣಿಕಮ್‌ನು ಆತನಿಗೆ ವಿರುದ್ಧವಾದ ಪಾತ್ರವಾಗಿದ್ದಾನೆ. ಕಾದಂಬರಿಯ ಮೊದಲಿನಿಂದ ಕೊನೆಯವರೆಗೆ ಈ ಪರಸ್ಪರ ವಿರೋಧಾತ್ಮಕ ಪಾತ್ರಗಳು ಬೆಳೆಯುತ್ತ ಹೋಗುತ್ತವೆ. ಪರಿಸರದ ತೊಡಕಿನಲ್ಲಿ ಸಿಕ್ಕು ಪಾರಾಗುವ ಪ್ರಯತ್ನ ಮಾಡುತ್ತವೆ. ಚಿದಂಬರಂ ಮೇಸ್ತ್ರಿಯೊಬ್ಬ ಬಡವನಾಗಿದ್ದು ಮನೆಕಟ್ಟಿಸುವ ಉದ್ಯೋಗದಲ್ಲಿ ನಿರತನಾಗಿರುತ್ತಾನೆ. ಅಶಿಕ್ಷಿತನಾದ ಆತ ತನ್ನ ಮಗ ತನ್ನಂತೆ ಅಶಿಕ್ಷಿತನಾಗಿ ಬಡತನದಲ್ಲಿ ಸಿಕ್ಕಿ ತೊಳಲಾಡದೆ. ಉನ್ನತ ವ್ಯಾಸಂಗ ಮಾಡಿ. ಎಂಜಿನಿಯರ್‌ನಾಗಿ. ಸಾಕಷ್ಟು ಶ್ರೀಮಂತನಾಗಿ ಮೆರೆಯಬೇಕೆಂದು ಆಶಿಸುತ್ತಾನೆ. ಅನಾಥನಾದ ಮಾಣಿಕಮ್‌ನನ್ನು ಆತ ಸಾಕಿ ಆತನನ್ನೊಬ್ಬ ಕಾಂಟ್ರ್ಯಾಕ್ಟರ್‌ನನ್ನಾಗಿ ತರಬೇತುಗೊಳಿಸಲು ಬಯಸುತ್ತಾನೆ. ವ್ಯವಹಾರ ಚತುರನಾದ ಮಾಣಿಕಮ್‌ನು ಒಬ್ಬ ಭೌತಿಕವಾದಿಯಾಗಿದ್ದು. ಯಾವಾಗಲೂ ಹಣಗಳಿಸುವುದೇ ಆತನ ಜೀವನದ ಪರಮಗುರಿಯಾಗಿರುತ್ತದೆ. ಹೀಗಾಗಿ ಆತ

ಚಿದಂಬರಂ ಮೇಸ್ತ್ರಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ. ಆದರೆ ಅಣ್ಣಾಮಲೈ ಮಾತ್ರ ಮೂಲತಃ ಕಲಾಕಾರನಾಗಿದ್ದು, ಆತ ಭೌತಿಕ ಸಂತೋಷ, ಸಾಧನೆಗಳಿಗೆ ಅಷ್ಟೊಂದು ಮಹತ್ವ ಕೊಡುವುದಿಲ್ಲ. ಆತ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿ ತನ್ನ ತಂದೆಗೆ ನಿರಾಶೆಯನ್ನುಂಟು ಮಾಡುತ್ತಾನೆ. ಎಂಜಿನಿಯರಿಂಗ್ ಕಾಲೇಜಿಗೆ ಹೋಗಲು ಅನರ್ಹನಾದ ಆತ ಕಲಾಮಹಾವಿದ್ಯಾಲಯಕ್ಕೆ ಪ್ರವೇಶ ಪಡೆಯಲು ಪ್ರಯತ್ನಿಸುತ್ತಾನೆ. ಕದಿರೇಶನೆಂಬ ಕಲಾಪ್ರಾಧ್ಯಾಪಕನ ಪರಿಚಯವಾದ ನಂತರ ಆತನ ಸಹಾಯದಿಂದ ಕಲಾಮಹಾವಿದ್ಯಾಲಯದಲ್ಲಿ ಪ್ರವೇಶ ಪಡೆಯುವನಲ್ಲದೆ ಒಮ್ಮೆಲೆ ಮೂರನೆಯ ಕ್ಲಾಸಿಗೆ ಭಡ್ತಿ ಪಡೆದು ಇತರ ವಿದ್ಯಾರ್ಥಿಗಳಿಗೆಲ್ಲ ಆಶ್ಚರ್ಯವನ್ನುಂಟು ಮಾಡುತ್ತಾನೆ. ಕೆಲವೇ ದಿನಗಳಲ್ಲಿ ತನ್ನ ಕಲಾಪ್ರತಿಭೆಯನ್ನು ತೋರಿಸಿ ಶಿಕ್ಷಕರ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಕೊನೆಗೆ ಚಿದಂಬರಂ ಮೇಸ್ತ್ರಿಗೆ ಸ್ವಲ್ಪ ಸಮಾಧಾನವಾಗುತ್ತದೆ. ತನ್ನ ಮಗ ಎಂಜಿನಿಯರ್ ಆಗದಿದ್ದರೂ, ಕೊನೆಗೆ ಕಲಾಕಾರನಾದರೂ ಆಗುವ ಸಾಮರ್ಥ್ಯವನ್ನು ಹೊಂದಿದ್ದಾನೆಂಬ ಸಮಾಧಾನ ಅವನಿಗಾಗುತ್ತದೆ.

ಕಲೆಯನ್ನು ಕಲಿಯುವುದಕ್ಕಾಗಿ ಅಣ್ಣಾಮಲೈ ತನ್ನ ಗುರುಗಳಾದ ಕದಿರೇಶನ್‌ರ ಮನೆಗೆ ಹೋಗುತ್ತಲಿದ್ದಾಗ ಅವರ ಮಗಳಾದ ಆನಂದಿಯ ಪರಿಚಯವಾಗಿ, ಅವಳನ್ನು ಆಗಾಗ ಭೇಟಿಯಾಗುವ ಸುಸಂಧಿ ದೊರೆಯುತ್ತದೆ. ಅವಳೊಬ್ಬ ಕಲಾಕಾರನ ಮಗಳಾಗಿದ್ದು ಕಲೆ ಮತ್ತು ಕಲಾಕಾರರನ್ನು ಹೇಗೆ ಗೌರವಿಸಬೇಕೆಂಬುದು ಅವಳಿಗೆ ಗೊತ್ತಿದೆ. ಹೀಗಾಗಿ ಅವಳು ಅಣ್ಣಾಮಲೈಯ ಪ್ರತಿಭೆಯನ್ನು ಗುರುತಿಸಿ ಆತನಿಗೆ ಮಾರುಹೋಗುತ್ತಾಳೆ. ತನಗರಿವಿಲ್ಲದಂತೆಯೇ ಆತನನ್ನು ಪ್ರೀತಿಸತೊಡಗುತ್ತಾಳೆ. ಆದರೆ ಮುಗ್ಧಸ್ವಭಾವದ ಅಣ್ಣಾಮಲೈಗೆ ಅದು ತಿಳಿಯುವದಿಲ್ಲ. ಆದರೆ ಆತನೂ ತನಗರಿವಿಲ್ಲದಂತೆ ಅವಳನ್ನು ಪ್ರೀತಿಸುತ್ತಾನೆ. ಅವಳಲ್ಲಿ ದೈಹಿಕ ಸೌಂದರ್ಯವನ್ನು ಮೀರಿದ ಆಧ್ಯಾತ್ಮಿಕ ಸೌಂದರ್ಯವನ್ನು ಕಾಣುತ್ತಾನೆ. ಇಬ್ಬರೂ ಪರಸ್ಪರ ಪ್ರೀತಿಸಿದರೂ, ಅದನ್ನು ಬಹಿರಂಗವಾಗಿ ವ್ಯಕ್ತಪಡಿಸುವ ಧೈರ್ಯ ಇಬ್ಬರಿಗೂ ಇಲ್ಲ.

ಹೀಗೆ ಅಣ್ಣಾಮಲೈ ತನ್ನ ಕಲೋಪಾಸನೆಯಲ್ಲಿ ಮುಂದುವರಿದಾಗ ಆತನ ಜೀವನದಲ್ಲಿ ಅನಿರೀಕ್ಷಿತ ತಿರುವೊಂದು ಘಟಿಸುತ್ತದೆ. ಒಮ್ಮೆ ಕದಿರೇಶನ್‌ನು ಅಣ್ಣಾಮಲೈ ಮತ್ತು ಅವನ ತಂದೆತಾಯಿಯರನ್ನು ತನ್ನ ಮನೆಗೆ ಆಮಂತ್ರಿಸುತ್ತಾನೆ. ಬಡವರಾದ ತಮ್ಮನ್ನು ಶ್ರೀಮಂತರು ಆಮಂತ್ರಿಸಿದ್ದಾರೆಂದು ಸ್ವಲ್ಪ ಅಳುಕಿನಿಂದಲೇ ಅವರು ಕದಿರೇಶನ್‌ನ ಮನೆಗೆ ಹೋಗುತ್ತಾರೆ. ಆಗ ಅವರ ಆದಿರಾತಿಥ್ಯದಿಂದ ತುಂಬ ಸಮಾಧಾನ ಪಟ್ಟುಕೊಳ್ಳುತ್ತಾರೆ. ಅದಲ್ಲದೆ ಈ ಭೇಟಿಯಿಂದ ಕೆಲವು ಹಳೆಯ ಸಂಬಂಧಗಳೂ ನೆನಪಾಗುತ್ತವೆ. ಚಿದಂಬರಂ ಮೇಸ್ತ್ರಿಯು ಕದಿರೇಶನ್‌ನ ತಾಯಿಯನ್ನು ನೋಡಿದಾಗ ತಾನು ಅವಳ ಪತಿಯ ಸೇವೆಯಲ್ಲಿದ್ದುದನ್ನು ನೆನಪಿಸಿಕೊಳ್ಳುತ್ತಾನೆ. ಅದರಂತೆ ಕದಿರೇಶನ್‌ನ ವಿಸ್ತಾರವಾದ ಜಾಗೆಯಲ್ಲಿ ಹಳೆಯ ಮಾದರಿಯ ಮನೆಯನ್ನು ನೋಡಿದಾಗ ಆತನಿಗೆ ತಟ್ಟನೆ ವಿಚಾರವೊಂದು ಹೊಳೆಯುತ್ತದೆ. ಅದರಲ್ಲಿಯ ಅರ್ಧದಷ್ಟು ಜಾಗೆಯನ್ನು ತಾನು ಕೊಂಡು ಉಳಿದರ್ಧ ಜಾಗೆಯಲ್ಲಿ ಹೊಸ ಸಿಮೆಂಟಿನ ಮನೆಯೊಂದನ್ನು ಕಟ್ಟಿಕೊಡುವೆನೆಂಬ ಭರವಸೆಯನ್ನು ಕೊಡುತ್ತಾನೆ. ಕೆಲವು ದಿನಗಳ

ನಂತರ ಕದಿರೇಶನ್‌ನಿಗೆ ಹೊಸ ಮನೆಯ ಅವಶ್ಯಕತೆ ಹೆಚ್ಚಾಗುತ್ತದೆ. ಅದಕ್ಕಾಗಿ ಆತ ಚಿದಂಬರಂ ಮೇಸ್ತ್ರಿಯ ಯೋಜನೆಗೆ ತನ್ನ ಒಪ್ಪಿಗೆ ಕೊಡುತ್ತಾನೆ. ಆ ಪ್ರಕಾರ ಚಿದಂಬರಂ ಮೇಸ್ತ್ರಿಯು ಕದಿರೇಶನ್‌ನ ಹಳೆಯ ಮನೆಯನ್ನು ಕೆಡವಿ, ಅರ್ಧಜಾಗೆಯನ್ನು ತಾನು ಕೊಂಡು, ಉಳಿದರ್ಧ ಜಾಗೆಯಲ್ಲಿ ಆತನಿಗೆ ಹೊಸ ಮನೆಯೊಂದನ್ನು ಕಟ್ಟಿಕೊಡುತ್ತಾನೆ. ನಂತರ ತಾನು ಕೊಂಡ ಜಾಗೆಯಲ್ಲಿ ತನಗೂ ಒಂದು ಮನೆಯನ್ನು ಕಟ್ಟಿಕೊಳ್ಳುತ್ತಾನೆ. ಹೀಗೆ ಚಿದಂಬರಂ ಮೇಸ್ತ್ರಿಯ ಪರಿವಾರ ಮತ್ತು ಕದಿರೇಶನ್‌ನ ಪರಿವಾರದವರು ನೆರೆಹೊರೆಯವರಾಗುತ್ತಾರೆ. ಇದನ್ನು ಅಣ್ಣಾಮಲೈಯ ಜೀವನದ ಎರಡನೆಯ ಹಂತವೆನ್ನಬಹುದು. ಆತನೀಗಾಗಲೇ ತನ್ನ ಕಲಾವೃತ್ತಿಯಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದಾನೆ. ಆತನ ಚಿತ್ರಗಳ ಪ್ರದರ್ಶನವನ್ನು ಅಸಂಖ್ಯಾತ ಜನರು ನೋಡಿ ಮೆಚ್ಚಿಕೊಳ್ಳುತ್ತಾರೆ. ಫ್ರೆಂಚ್‌ಕಲಾವಿದನೊಬ್ಬ ಆತನ ಕಲೆಯನ್ನು ಅತ್ಯಂತ ನಿಜವಾದ ಭಾರತೀಯ ಕಲೆಯೆಂದು ಪ್ರಶಂಶಿಸುತ್ತಾನೆ. ಆತನ ಚಿತ್ರವೊಂದನ್ನು ಶರವಣನ್‌ನು ತಾನು ಸಂಪಾದಿಸುವ ಪತ್ರಿಕೆಯ ಮುಖಪುಟದಲ್ಲಿ ಮುದ್ರಿಸುತ್ತಾನೆ.

ಅಣ್ಣಾಮಲೈನಿಗೆ ಆನಂದಿಯ ಬಗೆಗೆ ವಿಶೇಷವಾದ ಆಕರ್ಷಣೆಯಿದೆ. ಅವನಿಗೆ ಅವಳನ್ನು ಮದುವೆಯಾಗುವ ಬಯಕೆಯಿದ್ದರೂ ಆತ ಅದಕ್ಕೆ ಅವಸರ ಮಾಡುವದಿಲ್ಲ. ಆದರೆ ಆತನನ್ನೇ ಮದುವೆಯಾಗಬೇಕೆಂಬ ಆಶೆಯಿಂದ ಸುಂದರಿಯು ಅವನ ಬೆನ್ನಹಿಂದೆ ಬಿದ್ದಿದ್ದಾಳೆ. ಈ ಮಧ್ಯದಲ್ಲಿ ಅವಕಾಶವಾದಿಯಾದ ಮಾಣಿಕಮ್‌ನು ಆನಂದಿಯ ಮೇಲೆ ಕಣ್ಣಿಟ್ಟಿದ್ದಾನೆ. ಒಂದು ದಿನ ಮುಸ್ಸಂಜೆಯ ಸಮಯದಲ್ಲಿ ಆತ ಕೋಣೆಯ ಪಾವಟಿಗೆಗಳನ್ನಿಳಿಯುವಾಗ ಅಲ್ಲಿಯ ವಿದ್ಯುದ್ದೀಪವನ್ನಾರಿಸಿ ಆನಂದಿಯನ್ನು ಬರಸೆಳೆದು ಚುಂಬಿಸಿಬಿಡುತ್ತಾನೆ. ಅವಳೆಷ್ಟೇ ಪ್ರಯತ್ನಿಸಿದರೂ ಅವಳಿಗೆ ಆತನ ಬಾಹುಗಳಿಂದ ತಪ್ಪಿಸಿಕೊಳ್ಳುವುದಾಗುವದಿಲ್ಲ. ಅವನ ಚುಂಬನದಿಂದ ಅವಳು ತನ್ನ ದೈಹಿಕ ಪರಿಶುದ್ಧತೆಯನ್ನು ಕಳೆದುಕೊಂಡಿನ್ನೇನೆಂದು ತಿಳಿದುಕೊಂಡು ಪಶ್ಚಾತ್ತಾಪ ಪಡುತ್ತಾಳೆ. ಅವಳಿಗೆ ತನ್ನ ಬಗೆಗೆ ಬಹಳ ಜುಗುಪ್ಸೆಯಾಗುತ್ತದೆ. ಅಂತರಂಗದಲ್ಲಿ ಅಣ್ಣಾಮಲೈನನ್ನು ಆರಾಧಿಸುತ್ತಿದ್ದ ಅವಳಿಗೆ ಈಗ ಅವನನ್ನು ಮದುವೆಯಾಗುವದು ಸಾಧ್ಯವಿಲ್ಲವೆಂದು ತೀರ್ಮಾನಿಸುತ್ತಾಳೆ. ತನ್ನ ದೈಹಿಕ ಪಾವಿತ್ರ್ಯವನ್ನು ಕಳೆದುಕೊಂಡ ನಂತರ ತಾನು ಆತನನ್ನು ಮದುವೆಯಾಗುವದೆಂದರೆ ಆತನಿಗೆ ಅಪಮಾನ ಮಾಡಿದಂತಾಗುತ್ತದೆ ಎಂದು ಅವಳು ಭಾವಿಸುತ್ತಾಳೆ. ಅವಳು ಆತನಿಗೆ ಮೋಸ ಮಾಡಬಯಸುವದಿಲ್ಲ. ಮುಂದೆ ಮಾಣಿಕಮ್‌ನು ಕದಿರೇಶನ್‌ನನ್ನು ಭೇಟಿಯಾಗಿ ಆತನ ಮಗಳನ್ನು ಮಾಡಿಕೊಳ್ಳಲು ಕೇಳಿದಾಗ, ಕದಿರೇಶನ್‌ನು ಅವಜ್ಞೊಪ್ಪುವದಿಲ್ಲ. ಆದರೂ ಆನಂದಿಯು ಮಾಣಿಕಮ್‌ನಿಗೆ ತನ್ನ ಪರಿಶುದ್ಧಿಯನ್ನು ಕಳೆದುಕೊಂಡುದರಿಂದ ಅವನನ್ನೇ ಮದುವೆಯಾಗುತ್ತೇನೆಂದು ಹೇಳುತ್ತಾಳೆ. ಪರಿಸ್ಥಿತಿಯ ಅನಿವಾರ್ಯತೆಯಿಂದಾಗಿ ಆನಂದಿ ಮತ್ತು ಮಾಣಿಕಮ್ ಅವರ ಮದುವೆ ಮುಗಿದುಹೋಗುತ್ತದೆ. ಆನಂದಿಯನ್ನು ಅಂತರಂಗದಲ್ಲಿಯೇ ಪ್ರೀತಿಸುತ್ತಿರುವ ಅಣ್ಣಾಮಲೈಗೆ ಆಘಾತವಾದಂತಾಗಿ ಆತ ಅವಳ ಮದುವೆಯಲ್ಲಿ ಪಾಲ್ಗೊಳ್ಳನೆ. ತನ್ನ ಕಾಲೇಜು ಸ್ನೇಹಿತರೊಂದಿಗೆ ಮಹಾಬಲಿಪುರಕ್ಕೆ ಚಿತ್ರಗಳನ್ನು ಬರೆಯಲು ಹೋಗುತ್ತಾನೆ. ಮುಂದೆ ಅಣ್ಣಾಮಲೈನಿಗೆ ದಂಡಪಾಣಿಯ

ತನ್ನ ಮಗಳಾದ ಸುಂದರಿಯನ್ನು ಕೊಟ್ಟು ಮದುವೆಯನ್ನು ಮಾಡುತ್ತಾನೆ. ಹೀಗೆ ಕಾದಂಬರಿಯಲ್ಲಿ ನಡೆದ ಎರಡೂ ಮದುವೆಗಳು ಇಜ್ಜೋಡುಗಳೆಂದು ಹೇಳಬಹುದು. ಅತ್ಯಂತ ಸೂಕ್ಷ್ಮಮನಸ್ಸಿನ ಆನಂದಿಯು ಅತ್ಯಂತ ನಿರ್ಲಜ್ಜ. ಭೌತಿಕವಾದಿಯಾದ ಮಾಣಿಕಮ್‌ನನ್ನು ಮಾಡಿಕೊಂಡರೆ, ಅತ್ಯಂತ ಭೌತಿಕವಾದಿಯಾದ ಸುಂದರಿಯನ್ನು ಅತ್ಯುತ್ತಮ ಕಲಾಕಾರನಾದ ಅಣ್ಣಾಮಲೈ ಮದುವೆ ಮಾಡಿಕೊಳ್ಳಬೇಕಾಗುತ್ತದೆ. ಈ ಇಜ್ಜೋಡಿನಿಂದಾಗಿ ಅವರ ಜೀವನದಲ್ಲಿ ಅನೇಕ ತೊಂದರೆಗಳುದ್ಭವಿಸುತ್ತವೆ.

ಉದಾಹರಣೆಗೆ ಆನಂದಿಯು ವೀಣೆಯನ್ನು ನುಡಿಸುವದನ್ನು ಅಥವಾ ಅವಳ ಕಲಾತ್ಮಕ ಜೀವನದೃಷ್ಟಿಯನ್ನು ಪಶುಸಮಾನನಾದ ಮಾಣಿಕಮ್‌ನು ಅರ್ಥಮಾಡಿಕೊಳ್ಳಲು ಸಮರ್ಥನಿರುವದಿಲ್ಲ. ಅವಳ ಮಾನಸಿಕ ಜೀವನವನ್ನು ತಿಳಿದುಕೊಳ್ಳುವ ಶಕ್ತಿ ಅಥವಾ ತಾಳ್ಮೆ ಅವನಿಗಿರುವದಿಲ್ಲ. ಆತ ಯಾವಾಗಲೂ ಹಣ ಸಂಪಾದಿಸುವ ಗುಂಗಿನಲ್ಲಿಯೇ ಇರುವುದರಿಂದ ಬೇರೆ ಯಾವ ಹವ್ಯಾಸಗಳೂ ಇರುವದಿಲ್ಲ. ಕೆಲಸದಿಂದ ದಣಿದುಬಂದ ಆತ ಊಟವಾದೊಡನೆ ಅವಳನ್ನು ತಬ್ಬಿಕೊಂಡು ಕಾಮಪಿಪಾಸೆ ತೀರಿಸಿಕೊಳ್ಳುವದೇ ಅವನಿಗೆ ಸಾಧ್ಯವಿರುವ ಕ್ರಿಯೆ. ಹೀಗಾಗಿ ಅವರಿಬ್ಬರಲ್ಲಿ ಅಭಿರುಚಿಗಳ ಸಮಪಾತಳಿ ಇರದೇ, ನಿಜವಾದ ಕೌಟುಂಬಿಕ ಸಾಮರಸ್ಯವಿರುವದಿಲ್ಲ. ವಿಶೇಷವಾಗಿ ಆನಂದಿಯ ಬದುಕು ಅತ್ಯಂತ ಯಾಂತ್ರಿಕವಾಗುತ್ತದೆ. ಹೀಗಾಗಿ ಅವಳಲ್ಲಿ ಗಂಡಿನ ಬಗೆಗೆ ಕ್ರಮೇಣವಾಗಿ ನಿರಾಶೆ ಮತ್ತು ಜುಗುಪ್ಸೆಗಳು ಬೆಳೆಯುತ್ತವೆ.

ಅವರಂತೆ ಅಣ್ಣಾಮಲೈ ಮತ್ತು ಸುಂದರಿಯರ ಜೀವನದಲ್ಲಿಯೂ ಸಾಮರಸ್ಯ ಕಂಡುಬರುವದಿಲ್ಲ. ಕಲಾಕಾರನಾದ ಅಣ್ಣಾಮಲೈ ಯಾವಾಗಲೂ ಚಿತ್ರ ಬಿಡಿಸುವುದರಲ್ಲಿಯೇ ತನ್ನ ಸಮಯ ಕಳೆಯುತ್ತಾನೆ. ಅದರಿಂದ ಅವನಿಗೆ ಸಾಕಷ್ಟು ಹಣ ಸಂಪಾದನೆಯಾಗುವದಿಲ್ಲವೆಂಬ ಕಾರಣದಿಂದ ಅವಳು ಆತನ ಕಲಾಸಾಧನೆಯನ್ನು ತಿರಸ್ಕಾರದಿಂದ ಕಾಣುತ್ತಾಳೆ. ಅಲ್ಲದೆ ಅವಳ ತಂದೆಯಾದ ದಂಡಪಾಣಿಯು ಅವನನ್ನು ಚಿತ್ರೋದ್ಯಮದ ಜಾಹಿರಾತುಗಳನ್ನು ಬರೆಯಲು ನಿಯಮಿಸುತ್ತಾನೆ. ಆದರೆ ಅಣ್ಣಾಮಲೈಯು ಚಿತ್ರಪ್ರಪಂಚದ ನಗ್ನ ಹೆಣ್ಣುಗಳ ಚಿತ್ರಗಳನ್ನು ಬರೆದು ಬರೆದು ಹೇಸಿಗೆ ಪಟ್ಟುಕೊಳ್ಳುತ್ತಾನೆ. ಹೀಗಾಗಿ ಆತ ಹಗಲು ಜಾಹೀರಾತುಗಳ ಚಿತ್ರ ಬರೆದು, ರಾತ್ರಿ ತನ್ನ ಕಲಾತ್ಮಕ ಚಿತ್ರಗಳನ್ನು ಬರೆಯುತ್ತ ಕುಳಿತುಬಿಡುವ ಪತಿಯಮೇಲೆ ಸುಂದರಿಗೆ ಬಹಳ ಸಿಟ್ಟು ಬರುತ್ತದೆ. ಏಕೆಂದರೆ ಅವಳು ತನ್ನ ಪತಿಯೂ ಅನೇಕರಂತೆ ಬಹಿರ್ಮುಖಿಯಾಗಿದ್ದು 'ಯಾವಾಗಲೂ ಪಿಕ್‌ನಿಕ್ಕು, ಹೋಟೆಲ್ ಊಟ, ಹರಟೆ ಮತ್ತು ಮನೋರಂಜನೆಗಳಲ್ಲಿಯೇ ಕಾಲಕಳೆಯಬೇಕೆಂದು ಬಯಸುತ್ತಾಳೆ. ತನ್ನ ಗಂಡನ ಉನ್ನತ ಕಲಾತ್ಮಕ ಸಾಧನೆಯನ್ನು ಅರಿಯುವ ಅಥವಾ ಮೆಚ್ಚಿಕೊಳ್ಳುವ ಸಾಮರ್ಥ್ಯ ಅವಳಲ್ಲಿ ಇಲ್ಲದ್ದರಿಂದ ಅವಳು ಅನೇಕ ಸಾಮಾನ್ಯ ಭೌತಿಕವಾದಿ, ಪಶುಸಮಾನವಾದ ಹೆಂಡಂದಿರಂತೆ ವರ್ತಿಸುತ್ತಾಳೆ. ಅವಳಿಗೆ ಗಂಡನೆಂದರೆ ಹಣ ಸಂಪಾದಿಸುವ ಯಂತ್ರವೇ ಹೊರತು ಮತ್ತೇನೂ ಅಲ್ಲ. ಹೀಗಾಗಿ ಅವರಿಬ್ಬರಲ್ಲಿ ನಿಜವಾದ ಕೌಟುಂಬಿಕ

ಸಾಮರಸ್ಯವೇರ್ಪಡಲು ಸಾಧ್ಯವಿಲ್ಲ. ಹೀಗೆ ಎರಡೂ ಜೋಡಿಗಳು ಅತೃಪ್ತರಾಗಿಯೇ ಕಾಲನೂಕಬೇಕಾಗುತ್ತದೆ.

ಹೀಗೆ ಇಬ್ಜೋಡಿನ ಜೀವನ ನಡೆದಾಗಲೇ ಮತ್ತೊಂದು ದುರಂತ ನಡೆಯುತ್ತದೆ. ಅದೇನೆಂದರೆ ಚಿದಂಬರಂ ಮೇಸ್ತ್ರಿ ಮತ್ತು ಮಾಣಿಕಮ್ ಇಬ್ಬರೂ ಕೂಡಿ ಒಮ್ಮೆಲೇ ಶ್ರೀಮಂತರಾಗಬೇಕೆಂಬ ಆಶೆಯಿಂದ ಒಬ್ಬ ಜಮೀನುದಾರನಿಂದ ಮದ್ರಾಸಿನಲ್ಲಿದ್ದ ಭೂಮಿಯನ್ನು ಕೊಂಡುಕೊಳ್ಳುತ್ತಾರೆ. ಆ ಭೂಮಿಯ ಹಣವನ್ನು ತಾವು ಮಾಲಿಕನಿಗೆ ಸಂದಾಯ ಮಾಡುವದಕ್ಕಿಂತ ಮೊದಲೇ ಅದನ್ನು ಉಪವಿಭಾಗಗಳನ್ನಾಗಿ ವಿಂಗಡಿಸಿ, ಜನರಿಗೆ ಮಾರಿ, ಮುಂಗಡ ಐವತ್ತು ಸಾವಿರ ರೂಪಾಯಿಗಳನ್ನು ಸಂಗ್ರಹಿಸುತ್ತಾರೆ. ಹೀಗೆ ಕಾಯಿದೆಯನ್ನು ಉಲ್ಲಂಘಿಸಿದುದರ ಪರಿಣಾಮವಾಗಿ ಅವರಿಗೆ ನ್ಯಾಯಾಲಯದಿಂದ ವಾರಂಟು ಬರುತ್ತದೆ. ಅದರ ಪ್ರಕಾರ ಅವರಿಬ್ಬರೂ ನ್ಯಾಯಾಲಯಕ್ಕೆ ಹೋದಾಗ ಅಲ್ಲಿ ನ್ಯಾಯಾಧೀಶರು ಅವರಿಗೆ ಛೀಮಾರಿ ಹಾಕಿ ಐವತ್ತು ಸಾವಿರ ರೂಪಾಯಿಗಳ ಪರಿಹಾರ ಧನವನ್ನು ತುಂಬಬೇಕೆಂದು ತಾಕೀತು ಮಾಡುತ್ತಾರೆ. ಅವತ್ತೇ ಅವರನ್ನು ಪೋಲೀಸರು ಬಂಧಿಸುತ್ತಾರೆ. ಏಕೆಂದರೆ ಅವರಿಗೆ ಜಾಗೆಯನ್ನು ಕೊಟ್ಟ ಜಮೀನುದಾರ ಅವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾನೆ. ಕೊನೆಗೆ ದಂಡಪಾಣಿಯು ಅವರನ್ನು ಜಾಮೀನಿನ ಮೇಲೆ ಬಿಡಿಸಿಕೊಂಡು ಬರುತ್ತಾನೆ. ಈ ಘಟನೆಯಿಂದ ಮರ್ಯಾದೆಯನ್ನೂ ಹಣವನ್ನೂ ಏಕಕಾಲಕ್ಕೆ ಕಳೆದುಕೊಳ್ಳುವ ನಾಚಿಕೆಯ ಪ್ರಸಂಗ ಬಂದುದಕ್ಕಾಗಿ ಚಿದಂಬರಂ ಮೇಸ್ತ್ರಿಯು ಮನೆಮುಟ್ಟುವ ಮೊದಲೇ ಕಾರಿನಲ್ಲಿ ಪ್ರಾಣಬಿಡುತ್ತಾನೆ. ಈ ಅನಿರೀಕ್ಷಿತ ಘಟನೆಯಿಂದ ಅಣ್ಣಾಮಲೈ ತತ್ತರಿಸಿಹೋಗುತ್ತಾನೆ. ಆತನ ತಂದೆಗೆ ಸಾಲಕೊಟ್ಟ ಸಾಲಗಾರನು ಆತನನ್ನು ಭೇಟಿ ಮಾಡಿ ಮೂವತ್ತು ಸಾವಿರ ರೂಪಾಯಿ ಸಾಲಕ್ಕೆ ಪ್ರತಿ ತಿಂಗಳು ಆರುನೂರು ರೂಪಾಯಿಯಂತೆ ಬಡ್ಡಿ ತುಂಬಲು ತಾಕೀತು ಮಾಡುತ್ತಾನೆ. ಆಗ ಅಣ್ಣಾಮಲೈಗೆ ದಿಕ್ಕು ತೋಚದಂತಾಗುತ್ತದೆ. ತಂದೆಯ ಅನಿರೀಕ್ಷಿತ ಸಾವು ಮತ್ತು ಆರ್ಥಿಕ ದುರಂತಗಳೆರಡೂ ಅವನನ್ನು ಹಿಂಡಿಹಿಪ್ಪಿ ಮಾಡುತ್ತವೆ. ಅದರಂತೆ ಮಾಣಿಕಮ್‌ನೂ ಚಿದಂಬರಂ ಮೇಸ್ತ್ರಿಯ ಸಾವಿನಿಂದಾಗಿ ತೊಂದರೆಯಲ್ಲಿ ಸಿಲುಕಿದ್ದೇನೆಂದು ಭಾವಿಸಿ ಅಧೀರನಾಗುತ್ತಾನೆ. ತಂದೆಯ ಸೇಡನ್ನು ಮಗನ ಮೇಲೆ ತೀರಿಸಿಕೊಳ್ಳಬೇಕೆಂದು ರಹಸ್ಯವಾಗಿ ತೀರ್ಮಾನಿಸುತ್ತಾನೆ. ಒಂದು ದಿನ ತನಗೆ ಒಂದು ಲಕ್ಷ ರೂಪಾಯಿಯ ಗುತ್ತಿಗೆ (contract) ಸಿಕ್ಕಿದೆಯೆಂದು ಹೇಳಿ, ಮೆತ್ತಗೆ ಮಾತನಾಡುತ್ತ ಅಣ್ಣಾಮಲೈಯನ್ನು ಭೋಜಾ (surety) ಎಂದು ಮಾಡಿ ತನ್ನ ಕಾಗದದ ಮೇಲೆ ಆತನ ಸಹಿ ಹಾಕಿಸುತ್ತಾನೆ. ಅಣ್ಣಾಮಲೈ ತಾನು ಸಹಿ ಮಾಡುವುದರ ಪರಿಣಾಮವೇನಾಗಬಹುದೆಂದು ಯೋಚಿಸುವುದಿಲ್ಲ. ಕೊನೆಗೆ ಮಾಣಿಕಮ್‌ನ ಕಪಟತನದಿಂದಾಗಿ ಅಣ್ಣಾಮಲೈಗೆ ವಕೀಲರ ನೋಟೀಸು ಬರುತ್ತದೆ. ಅದರ ಪ್ರಕಾರ ಮಾಣಿಕಮ್‌ನಿಗೆ ಸಾಲ ತೀರಿಸುವ ಶಕ್ತಿಯಿಲ್ಲದ್ದರಿಂದ ಅಣ್ಣಾಮಲೈ ಆತನ ಭೋಜಾ ಹೊತ್ತಿರುವುದರ ಪರಿಣಾಮವಾಗಿ, ಆತ ಮೂವತ್ತು ಸಾವಿರ ರೂಪಾಯಿಗಳನ್ನು ಸಂದಾಯ ಮಾಡಬೇಕೆಂದೂ, ಇಲ್ಲದಿದ್ದರೆ ತನ್ನ ಮನೆಯನ್ನು ಕಳೆದುಕೊಳ್ಳಬೇಕೆಂದೂ ಅದರಲ್ಲಿ ಎಚ್ಚರಿಸಲಾಗಿದೆ. ಈ ಸುದ್ದಿ ಕೇಳಿ ಅಣ್ಣಾಮಲೈಗೆ ಆಕಾಶವೇ ಕಳಚಿ

ಬಿದ್ದಂತಾಗುತ್ತದೆ. ಆತನಿಗಿಂತ ಆತನ ಪತ್ನಿಯಾದ ಸುಂದರಿಗೆ ದೊಡ್ಡ ಆಘಾತವಾಗುತ್ತದೆ. ಹೀಗಾಗಿ ಅವಳು ಅಣ್ಣಾಮಲೈಗೆ ಮರ್ಯಾದೆಯಿಲ್ಲವಂತೆ ಒದರಾಡಿ, ಅನಂತರ ಆನಂದಿಯ ಮನೆಗೆ ಹೋಗಿ ಅವಳಿಗೂ ಬಾಯಿಗೆ ಬಂದಂತೆ ಬಯ್ಯುತ್ತಾಳೆ. ಅಣ್ಣಾಮಲೈ ಅವಳ ಅಸಂಸ್ಕೃತ ವರ್ತನೆಯನ್ನು ನೋಡಿ ತಾಳಲಾರದೆ ಅವಳನ್ನು ಚೆನ್ನಾಗಿ ಥಳಿಸಿ ಮನೆಗೆ ಎಳೆದುಕೊಂಡು ಬರುತ್ತಾನೆ. ಜನರೆದುರು ತನಗಾದ ಅವಮಾನವನ್ನು ತಾಳಲಾರದೆ ಸುಂದರಿಯು ಮರುದಿನ ಸಮುದ್ರದಲ್ಲಿ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಹೀಗೆ ಅಣ್ಣಾಮಲೈಯ ಜೀವನದಲ್ಲಿ ಆಘಾತದ ಮೇಲೆ ಆಘಾತಗಳು ಬಂದು ಮುತ್ತುತ್ತವೆ.

ಅತ್ತ ಮಾಣಿಕಮ್‌ನು ತನ್ನ ಭೌತಿಕ ಸುಖಗಳನ್ನು ಸವಿಯುತ್ತ ಹೋಗುತ್ತಾನೆ. ಆನಂದಿಯಂಥ ಸೂಕ್ಷ್ಮಸಂವೇದನೆಯ ಪತ್ನಿಯೊಂದಿಗೆ ನಡೆಸುವ ಸಂಸಾರದಲ್ಲಿ ಆತನಿಗೆ ತೃಪ್ತಿ ಸಿಗುವುದಿಲ್ಲವೆಂದು ಕಾಣಿಸುತ್ತದೆ. ಏಕೆಂದರೆ ನಾಯಿಯು ನಾಯಿಯನ್ನು ಮೆಚ್ಚುವುದೇ ಹೊರತು ಆನೆಯನ್ನಲ್ಲ. ಅದೇ ಪ್ರಕಾರ ಕೀಳು ಅಭಿರುಚಿಯ ಮಾಣಿಕಮ್‌ನು ಮಾಲಿ ವೇಲಯ್ಯನ ಮಗಳಾದ ಮುತ್ತಮ್ಮನನ್ನು ಕಾರಿನಲ್ಲಿ ಕರೆದುಕೊಂಡು ಸಮುದ್ರದ ದಂಡೆಗೆ ಹೋಗಿ ಚಕ್ಕಂದ ಮಾಡಲು ಪ್ರಾರಂಭಿಸುತ್ತಾನೆ. ಈ ಸುದ್ದಿಯು ಶಾರದಾಳ ಮೂಲಕ ಆನಂದಿಗೆ ತಿಳಿದ ನಂತರ ಅವಳಿಗೆ ತೀವ್ರ ಆಘಾತವಾಗುತ್ತದೆ. ಒಂದು ರಾತ್ರಿ ತನ್ನ ಸಂಶಯವನ್ನು ಖಚಿತ ಪಡಿಸಿಕೊಳ್ಳಲು ಆನಂದಿ ಎಚ್ಚರವಾಗಿದ್ದು ಪರೀಕ್ಷಿಸಿದಾಗ ತನ್ನ ಗಂಡ ಮುತ್ತಮ್ಮನೊಂದಿಗೆ ರಾತ್ರಿ ತೋಟದಲ್ಲಿ ಕಾಮಕ್ರೀಡೆಯಲ್ಲಿ ತೊಡಗಿದುದನ್ನು ಕೇಳಿ, ನೋಡಿ, ಮತ್ತಷ್ಟು ಜುಗುಪ್ಸೆ ಪಟ್ಟುಕೊಳ್ಳುತ್ತಾಳೆ.

ಅಂದಿನಿಂದ ಅವಳು ಮಾಣಿಕಮ್‌ನನ್ನು ದೂರವಿರಿಸುತ್ತಾಳೆ. ಆತನೊಂದಿಗೆ ಸಂಸಾರ ಮಾಡಲು ಹೇಸಿಗೆ ಪಟ್ಟುಕೊಳ್ಳುತ್ತಾಳೆ. ಅವಳ ವರ್ತನೆಯಲ್ಲಾದ ಬದಲಾವಣೆಯನ್ನು ಮಾಣಿಕಮ್‌ನು ಗಮನಿಸಿದರೂ ಏನೂ ಮಾಡಲಾರದವನಾಗುತ್ತಾನೆ. ಆದರೂ ಆತನ ದುರಾಶೆ ಆತನನ್ನು ಸುಮ್ಮನಿರ ಗೊಡುವದಿಲ್ಲ. ಅಣ್ಣಾಮಲೈ ಜಲಪಾತವೊಂದರ ಹತ್ತಿರ ಜಾರಿಬಿದ್ದು ತನ್ನ ಹೆಗಲನ್ನು ಮುರಿದುಕೊಂಡಾಗ ಆತನನ್ನು ಆಸ್ಪತ್ರೆಗೆ ಕಳಿಸಲಾಗುತ್ತದೆ. ಮಾಣಿಕಮ್‌ನು ಅಲ್ಲಿಗೆ ಹೋಗಿ ಆತನ ಬಡತನದ ಬಗೆಗೆ ಅವಮಾನಕರವಾಗಿ ಮಾತನಾಡುತ್ತಾನೆ. ಕೊನೆಗೆ ಅಣ್ಣಾಮಲೈಗೆ ವಕೀಲರ ನೋಟಿಸು ಬಂದಾಗ ಕದಿರೇಶನ್‌ನು ತನ್ನ ಮಗಳ ಮೈಮೇಲಿನ ಬಂಗಾರದ ಒಡವೆಗಳವನ್ನು ಮಾರಿ ಆತನಿಗೆ ಸಹಾಯ ಮಾಡಲು ಮುಂದೆ ಬರುತ್ತಾನೆ. ಆದರೆ ಮಾಣಿಕಮ್‌ನು ಅದನ್ನೂ ತಪ್ಪಿಸುತ್ತಾನೆ. ಆನಂದಿಯು ತನ್ನ ಪತ್ನಿಯಾಗಿದ್ದುದರಿಂದ ಅವಳ ಒಡವೆಗಳೆಲ್ಲವೂ ತನಗೆ ಸೇರಿವೆಯೆಂದೂ, ಆದ್ದರಿಂದ ಅವನ್ನು ಮಾರಲಾಗದೆಂದೂ ವಾದಿಸಿ, ಕದಿರೇಶನ್‌ನ ಬಾಯಿ ಮುಚ್ಚಿಸುತ್ತಾನೆ. ಕೊನೆಗೆ ಪೋಲೀಸರು ಬಂದು ಅಣ್ಣಾಮಲೈಯ ಮನೆಯ ಕಬಜಾ ತೆಗೆದುಕೊಳ್ಳಲಿಕ್ಕೆ ಬಂದಾಗ, ಆತ ಮೇಲಂತಸ್ತಿನ ಕೋಣೆಯಲ್ಲಿ ಕುಳಿತು ಆನಂದಿಯ ಚಿತ್ರ ಬರೆಯುತ್ತಿರುತ್ತಾನೆ. ಅಲ್ಲಿಯ ವರೆಗೆ ಕೆಳಗಿನ ಕೋಣೆಗಳಲ್ಲಿಯ ಸಾಮಾನುಗಳನ್ನು ತೆಗೆದುಕೊಂಡು

ಹೋಗಿರೆಂದು ಪೋಲೀಸರಿಗೆ ಹೇಳುತ್ತಾನೆ. ಈ ಮಧ್ಯದಲ್ಲಿ ಅಣ್ಣಾಮಲೈಗೆ ಮೋಸ ಮಾಡುತ್ತಿದ್ದಿಯೆಂದು ಆನಂದಿಯು ಮಾಣಿಕಮ್‌ನನ್ನು ಆಪಾದಿಸಿದಾಗ, ಆತ ಸಿಟ್ಟಿನಿಂದ ಅವಳ ಕೊರಳಲ್ಲಿಯ ಮಂಗಳಸೂತ್ರವನ್ನು ಕಿತ್ತುಕೊಳ್ಳುತ್ತಾನೆ. ಅನಂತರ ತಾನು ಮಾಡಿದ ತಪ್ಪಿನ ಅರಿವಾದೊಡನೆ ಅದನ್ನು ಮತ್ತೆ ಅವಳ ಕೊರಳಿಗೆ ಹಾಕಲು ಹೋಗುತ್ತಾನೆ. ಆದರೆ ಆತನ ಪಾಶವೀ ವರ್ತನೆಯಿಂದ ರೋಸಿಹೋದ ಆನಂದಿಯು ಇಷ್ಟು ದಿನಗಳವರೆಗೆ ಸಾಂಪ್ರದಾಯಿಕ ಮೌಲ್ಯಗಳಿಗೆ ಕಟ್ಟುಬಿದ್ದು ಸಂಯಮದಿಂದ ವರ್ತಿಸಿದ್ದರೂ, ಈಗ ಜಾಗೃತಳಾಗಿಬಿಟ್ಟಿದ್ದಾಳೆ. ಹೀಗಾಗಿ ಅವಳು ಮಾಣಿಕಮ್‌ನ ತಾಳಿಯನ್ನು ಅವನ ಮುಖದ ಮೇಲೆ ಒಗೆದು ದಢದಢನೆ ಅಣ್ಣಾಮಲೈಯ ಕೋಣೆಗೆ ನಡೆಯುತ್ತಾಳೆ. ಅಣ್ಣಾಮಲೈ ಅವಳ ಚಿತ್ರವನ್ನೇ ಬಿಡಿಸುತ್ತಿರುತ್ತಾನೆ. ಆನಂದಿ ಅಲ್ಲಿ ಹೋದಾಗ ಆ ಚಿತ್ರವೇ ಸಜೀವವಾದಂತಾಗುತ್ತದೆ. ಅವಳು ಅಣ್ಣಾಮಲೈನನ್ನು ಪ್ರೀತಿಯಿಂದ ಆಲಂಗಿಸುತ್ತಾಳೆ. ಅನಂತರ ಆನಂದಿ, ಅಣ್ಣಾಮಲೈ, ಮೀನಾಕ್ಷಿ, ಕದಿರೇಶನ್ ಅವರೆಲ್ಲ ಕಾರಿನಲ್ಲಿ ಹತ್ತಿ ಆ ಮನೆಯನ್ನು ಬಿಟ್ಟು ಹೋಗುತ್ತಾರೆ. ಹಣ ಮತ್ತು ಹಣದ ಸಹಾಯದಿಂದ ಮನೆಯನ್ನು ಗಿಟ್ಟಿಸಿದ ಮಾಣಿಕಮ್‌ನು ತನ್ನ ದುರಾಶೆಯಿಂದಾಗಿ ಪತ್ನಿ ಮತ್ತು ಬಂಧುಗಳನ್ನು ಕಳೆದುಕೊಂಡು ಮ್ಲಾನವದನನಾಗಿ ನಿಲ್ಲುತ್ತಾನೆ.

ಹೀಗೆ ಈ ಕಾದಂಬರಿಯಲ್ಲಿ ಕೊನೆಗೆ ಭೌತಿಕ ಮತ್ತು ಆರ್ಥಿಕ ಮೌಲ್ಯಗಳು ಸೋತು, ಕಲಾತ್ಮಕ ಮತ್ತು ಆದರ್ಶವಾದದ ಮೌಲ್ಯಗಳು ವಿಜಯ ಸಾಧಿಸುತ್ತವೆ. ಮೊದಮೊದಲು ಮಾಣಿಕಮ್ ಮತ್ತು ಸುಂದರಿಯರಂಥ ಪಾತ್ರಗಳ ಮೂಲಕ ವ್ಯಕ್ತವಾದ ಮೌಲ್ಯಗಳು ಸಾಕಷ್ಟು ಮೆರೆದರೂ, ಕೊನೆಗೆ ಅವು ಕ್ರಮೇಣವಾಗಿ ಸೋಲತೊಡಗುತ್ತವೆ. ಜೀವನದ ಸೌಂದರ್ಯವನ್ನು ಸವಿಯಲಿಕ್ಕೆ ಕೇವಲ ಹಣ ಅಥವಾ ಭೌತಿಕ ಸಂಪತ್ತು ಸಾಲದೆಂದೂ, ಅದಕ್ಕೆ ಪ್ರೀತಿ, ಕಲಾತ್ಮಕ ಅಭಿರುಚಿ, ಮಾನವೀಯತೆ ಮುಂತಾದ ಮೌಲ್ಯಗಳು ಅತ್ಯವಶ್ಯವೆಂಬ ಸಾರ್ವಕಾಲಿಕ ಸತ್ಯವನ್ನು ಈ ಕಾದಂಬರಿ ಬಹು ಮನೋಜ್ಞವಾಗಿ ಚಿತ್ರಿಸುತ್ತದೆ. ಅದರಂತೆ ಈ ಕೃತಿಯು ಭಾರತೀಯ ಸಮಾಜದ ಚಿತ್ರಣವನ್ನೂ ಸೊಗಸಾಗಿ ಕೊಡುತ್ತದೆ. ಸಂಪ್ರದಾಯವಾದಿಯಾಗಿದ್ದರೂ ಆನಂದಿಯಂಥ ಹೆಣ್ಣು ಪತಿಯ ಪಾಶವೀಕೃತ್ಯ ಮಿತಿಮೀರಿದಾಗ ಕಟ್ಟಳೆಗಳನ್ನು ಕಿತ್ತೊಗೆದು ತಾನು ನಿಜವಾಗಿ ಪ್ರೀತಿಸುವವನನ್ನೇ ಮಾಡಿಕೊಳ್ಳುವ ಧೈರ್ಯವನ್ನು ತೋರಬಲ್ಲಳೆಂಬುದನ್ನು ಲೇಖಕರು ಈ ಕೃತಿಯ ಮೂಲಕ ಸ್ಪಷ್ಟವಾಗಿ ತೋರಿಸಿದ್ದಾರೆ. ಇಬ್ಸನ್‌ನ "ಗೊಂಬೆಯ ಮನೆ" (A Doll's House)ಯ ನೋರಾ ತನ್ನ ಗಂಡನನ್ನು ತಿರಸ್ಕರಿಸಿ ಮನೆ ಬಿಟ್ಟುಹೋದಳು. ಆದರೆ ಆವಳೆಲ್ಲಿ ಹೋದಳು, ಮುಂದೆ ಅವಳ ಗತಿ ಏನಾಯಿತೆಂಬುದು ಯಾರಿಗೂ ತಿಳಿದಿಲ್ಲ. ಆದರೆ ಭಾರತೀಯ ಸಾಮಾಜಿಕ ಪರಿಸರದಲ್ಲಿ ಆನಂದಿಯು ತನಗೆ ಬೇಡಾದ ಗಂಡನನ್ನು ತಿರಸ್ಕರಿಸಿ ತಾನು ಪ್ರೀತಿಸಿದ ವ್ಯಕ್ತಿಯನ್ನು ಮದುವೆಯಾಗುವುದು ಒಂದು ಅತ್ಯಂತ ಧೈರ್ಯದ ಕೆಲಸವೆಂದೇ ಹೇಳಬಹುದು. ಇದು ಮಹಿಳಾ ಸ್ವಾತಂತ್ರ್ಯದ ಮುನ್ಸೂಚನೆಯಂತೆ ತೋರುತ್ತದೆ.

ಈ ಕಾದಂಬರಿಯಲ್ಲಿ ಚಿತ್ರಿತವಾದ ಸಮಾಜದಲ್ಲಿ ಎರಡು ತೆರನಾದ ಜನರಿದ್ದಾರೆ. ಮಾಣಿಕ್ಕಮನು ಭಾರತದ ಲಕ್ಷೋಪಲಕ್ಷ ಬಡವರ ಮತ್ತು ಬಡವರು ಧಿಡೀರನೆ ಶ್ರೀಮಂತರಾಗುವ ಕನಸು ಮತ್ತು ದುರಾಶೆಗಳನ್ನು ಪ್ರತಿನಿಧಿಸುತ್ತಾನೆ. ಆಶೆಯು ಅತಿಯಾಗಿ ದುರಾಶೆಯಾದಾಗ, ಇಷ್ಟವಾದದ್ದು ಅನಿಷ್ಟವಾಗಿ, ಅನಿಷ್ಟವು ತನ್ನನ್ನೇ ತಾನು ನಾಶ ಮಾಡಿಕೊಳ್ಳುವ ಆದಿಭೌತಿಕ ನ್ಯಾಯ (metaphysical law)ವನ್ನು ಕಾದಂಬರಿಕಾರರು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ. ಇದರ ಮೂಲಕ ಅವರು ಭಾರತೀಯ ಸಮಾಜವಲ್ಲಿ ಕಂಡುಬರುವ ಅತಿಯಾದ ಭೌತಿಕವಾದ (materialism)ವನ್ನು ಕಲಾತ್ಮಕವಾಗಿಯೇ ಖಂಡಿಸಿದ್ದಾರೆ. ಆದರೊಂದಿಗೆ ಅದಕ್ಕೆ ಅತ್ಯಂತ ನಿಕಟವಾದ ಚಿತ್ರೋದ್ಯಮದ ಕೀಳು ಅಭಿರುಚಿಯನ್ನು ಕೆರಳಿಸಿ, ಬೆಳೆಸುವ ಜಾಟೀರಾತಿನ ಹಾವಳಿಯನ್ನೂ ಖಂಡಿಸಿದ್ದಾರೆ. ದಂಡಪಾಣಿಯು ಇಂಥ ಕಲೆಯ ಹಾದರದ ಮಾಧ್ಯಮವಾಗಿ ವರ್ತಿಸುತ್ತಾನೆ. ಅವನ ಮಗಳಾದ ಸುಂದರಿಯಂತೂ ಸಂಯಮವಿಲ್ಲದ ಹೆಣ್ಣಾಗಿದ್ದು ಜೀವನದ ಬಗೆಗೆ ಆಳವಾದ ಆಸಕ್ತಿಯಿಲ್ಲದೆ ಪಾತರಗಿತ್ತಿಯಂತೆ ಮಿಂಚಿ ಮಾಯವಾಗುವ ಜನರ ಪ್ರತಿನಿಧಿಯಾಗಿದ್ದಾಳೆ.

ಇನ್ನು ಕಲಾತಪಸ್ವಿಯಾದ ಅಣ್ಣಾಮಲೈ ತನ್ನ ಕಲೆಗಾಗಿ ತನ್ನ ಭೌತಿಕ ಜೀವನದ ಸುಖಗಳನ್ನೆಲ್ಲ ತೊರೆದು, ತ್ಯಾಗಮಾಡಿ, ಉನ್ನತ ಸಿದ್ಧಿಯನ್ನು ಸಾಧಿಸುತ್ತಾನೆ. ಆದರ್ಶವಾದಿಯೊಬ್ಬ ಕೆಳಮಟ್ಟದ ಸುಖಗಳನ್ನೆಲ್ಲ ತ್ಯಾಗ ಮಾಡಿದಾಗ, ಕೊನೆಗೆ ಆತ ಬಯಸಿದ ಉನ್ನತಮಟ್ಟದ ಸುಖ ದೊರೆತೇ ದೊರಕುವದೆಂಬ ನ್ಯಾಯವನ್ನು ಅಣ್ಣಾಮಲೈಯ ಜೀವನದಲ್ಲಿ ಕಾಣಬಹುದು. ತ್ಯಾಗವಿಲ್ಲದೆ ಸಾಧನೆ, ಸಿದ್ಧಿಗಳು ಸಾಧ್ಯವಿಲ್ಲವೆಂಬ ಮಾತು ಅವನ ಜೀವನದ ಮೂಲಕ ವಿದಿತವಾಗುತ್ತದೆ. ಅವನಂತೆ ಅವನ ಆದರ್ಶ ಗುರುಗಳಾದ ಕದಿರೇಶನ್‌ರ ಜೀವನಕ್ಕೂ ಈ ಮಾತು ಅನ್ವಯಿಸುತ್ತದೆ. 'ಜೀವನವನ್ನು ಸುಂದರಗೊಳಿಸದಿದ್ದರೂ ಪರವಾಯಿಲ್ಲ. ಆದರೆ ಅದನ್ನು ಕುರೂಪಗೊಳಿಸಬಾರದು' ಎಂಬ ಮಂತ್ರವನ್ನು ಅವರು ಪ್ರತ್ಯಕ್ಷ ಸಾಧಿಸಿ ತೋರಿಸುತ್ತಾರೆ.

ಒಟ್ಟಿನಲ್ಲಿ "ಚಿತ್ತಿರಪ್ಪಾವೈ" ಎಂಬ ಕಾದಂಬರಿಯು ತಮಿಳು ಸಾಹಿತ್ಯಕ್ಕೆ ಅದರಂತೆ ಭಾರತೀಯ ಸಾಹಿತ್ಯಕ್ಕೆ ಅಕಿಲಾಂಡನ್ ಅವರು ನೀಡಿದ ಮಹತ್ವದ ಕೊಡುಗೆಯಾಗಿದೆ. ಸಾಹಿತ್ಯಾಸಕ್ತರೆಲ್ಲ ಅದನ್ನು ಇತರ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವ ಕಾರ್ಯವನ್ನು ಕೈಕೊಳ್ಳಬೇಕು.*

* ಈ ಲೇಖನವನ್ನು ಸಿದ್ಧಪಡಿಸಲು ಈ ಕೆಳಗಿನ ಪುಸ್ತಕವನ್ನು ಉಪಯೋಗಿಸಲಾಗಿದೆ: Portriat of a Woman, by Akilon. Translated from the Tamil by Prema Nandakumar. published by Macmillan India Ltd, Madras. 1981

ಹಗರಟಗಿ ನಾಡು ಮತ್ತು ಹಗರಟಗಿಯ ಶಾಸನಗಳು

–ಹನುಮಾಕ್ಷಿ ಗೋಗಿ

ಇಂದಿನ ಕರ್ನಾಟಕ ರಾಜ್ಯದ ಉತ್ತರ ಬಹುಭಾಗಗಳನ್ನೊಳಗೊಂಡ ಪ್ರದೇಶ ಹಾಗೂ ಅದಕ್ಕೆ ಅಂಟಿದ ಮಹಾರಾಷ್ಟ್ರರಾಜ್ಯದ ಕೆಲಪ್ರದೇಶ ಪ್ರಾಚೀನಕಾಲದಲ್ಲಿ ಕುಂತಲದೇಶ, ಕುಂತಲನಾಡು ಎಂದು ಕರೆಯಿಸಿಕೊಂಡಿದ್ದಿತು. ಈ ವಿಷಯ ಈ ಭಾಗಗಳಲ್ಲಿ ದೊರೆತ ಶಾಸನಗಳಿಂದ ದೃಢಪಟ್ಟಿದೆ. "ಇಂದಿನ ಗುಲ್ಬರ್ಗ ಜಿಲ್ಲೆಯನ್ನೊಳಗೊಂಡಿದ್ದ ಅಲಂದೆ – ೧೦೦೦, ಸಗರ – ೫೦೦, ಅರಲು – ೩೦೦, ಮನ್ನೆದಡೆ – ೧೦೦೦, ಕರಹಾಡ – ೪೦೦೦"ಗಳು ಕುಂತಲದೇಶದಲ್ಲಿ ಸೇರಿದ್ದವು.[೧] "ಉತ್ತರದಲ್ಲಿ ಪೂರ್ವಕ್ಕೆ ಹಗರಟಗೆ– ೩೦೦ ಮತ್ತು ಸಗರ – ೫೦೦, ಉತ್ತರಕ್ಕೆ ಅಲಂದೆ – ೧೦೦೦ – ಹೀಗೆ ಬಾಹ್ಯಮೇರೆಗಳನ್ನು ಹೊಂದಿದ ತರ್ದವಾಡಿ ಸಾಸಿರವು ಕುಂತಲದ ಪ್ರಮುಖ ಆಡಳಿತ ಪ್ರದೇಶವಾಗಿದ್ದುದನ್ನು ಶಾಸನಗಳು ಸಾರಿವೆ".[೨] ಈ ಉಲ್ಲೇಖಗಳನ್ನು ಗಮನಿಸಿದಾಗ ಕುಂತಲನಾಡಿನ ಒಂದು ಪ್ರಮುಖ ವಿಭಾಗವಾಗಿತ್ತು, ಹಗರಟಗೆ – ೩೦೦ ಎಂಬುದು ಸ್ಪಷ್ಟ. ೩೦೦ ಹಳ್ಳಿಗಳಿಂದ ಕೂಡಿದ ಈ ವಿಭಾಗದಲ್ಲಿ ಇಂದಿನ ಗುಲ್ಬರ್ಗಜಿಲ್ಲೆಯ ಸುರಪುರ ತಾಲೂಕಿನ ನೈಋತ್ಯಭಾಗ, ವಿಜಾಪುರಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಉತ್ತರಭಾಗ, ಸಿಂದಗಿ ತಾಲೂಕಿನ ದಕ್ಷಿಣ ಭಾಗಗಳ ಭೂಪ್ರದೇಶ ಸೇರಿತ್ತೆಂದು ಕೆಳಗಿನ ಶಾಸನಾಧಾರಗಳ ಮೇಲೆ ಊಹಿಸಬಹುದಾಗಿದೆ.

ಹಗರಟಗೆ – ೩೦೦ ಎಂಬ ವಿಭಾಗ ಮತ್ತು ಅದರ ಕೇಂದ್ರಸ್ಥಾನವಾದ ಹಗರಟಗೆಗ್ರಾಮದ ಕುರಿತು ಹಲವಾರು ಶಾಸನಗಳು ಕೆಳಗಿನಂತೆ ಉಲ್ಲೇಖಿಸುತ್ತವೆ.

ಕಲ್ಯಾಣ ಚಾಲುಕ್ಯ ಅರಸು ಸತ್ಯಾಶ್ರಯನ ತುಂಬಿಗೆಯ ಶಾಸನವು "ಶ್ರೀಮತ್ ಸತ್ಯಾಶ್ರಯದೇವರ ಪಾದಪದ್ಮೋಪಜೀವಿ ಸೆಟ್ಟಿ ಬ್ರಹ್ಮಯ್ಯಂ ಪಗಲಟ್ಟಿ – ೩೦೦ಜಿಜಿ ಬಳಿಯ ತುಂಬಿಗೆ ಅಗ್ರಹಾರ"[೩] ವನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.

---

೧. ಕಲಬುರ್ಗಿ ಜಿಲ್ಲೆಯ ಶಾಸನಗಳು – ಎ.ಶಿವಾನಂದ ಪು. ೧೬-೧೮.

೨. ತರ್ದವಾಡಿ ನಾಡು: ಒಂದು ಅಧ್ಯಯನ – ಎಸ್.ಕೆ.ಕೊಪ್ಪ ಪು ೧೬.

೩. EI XVII ತುಂಬಗಿ. ಮುದ್ದೇಬಿಹಾಳ ತಾಲೂಕು. ಪು ೨೦೬-೧೦೦೮ ಎ.ಡಿ.

ತುಂಬಿಗೆಯ ಇನ್ನೊಂದು ಶಾಸನವು "ಪಗಲಟ್ಟಿ - ೩೦೦ ಅಟಿ ಬಳಿಯ ತುಂಬಿಗೆಯ[ಗ್ರ]ಹಾರದ ಊರೊಡೆಯ ನಾಗದೇವಯ್ಯಂಗಳ್ ತಮ್ಮ ಮಾನ್ಯದೊಳಗೆ ಪಡುವಣ ಕ[ಟ್ಟೆ]ಯಲು ಬಾಣರಾಸಿಯ ಮಠಕ್ಕೆ ಕೊಟ್ಟ ಕೆಯ್ಮತ್ತ ೩೮"[೪] ಎನ್ನುತ್ತದೆ.

ಕಲ್ಯಾಣ ಚಾಲುಕ್ಯ ಒಂದನೆಯ ಜಗದೇಕಮಲ್ಲನ ಬಾಪೂರಶಾಸನವು "ಮೈಲರಸಂ ಪಗಲಟ್ಟಿ [ಮುನ್ನೂರುಮಂ*]"[೫] ಆಳುತ್ತಿದ್ದನೆಂದು ಹೇಳುವಂತಿದೆ.

ಕಲ್ಯಾಣ ಚಾಲುಕ್ಯ ಎರಡನೆಯ ಜಯಸಿಂಹನ ಮಿರಜ ತಾಮ್ರಪಟಗಳು ವಾಸುದೇವಾರ್ಯಶರ್ಮನೆಂಬವನನ್ನು ಉಲ್ಲೇಖಿಸುತ್ತ ಅವನನ್ನು "ಪಗಲಟ್ಟಿ" ವಿಶಯಾಂತಃಪಾತಿ ಮುದುನೀರಗ್ರಾಮ ಜಾತಾಯ ಕೌಶಿಕಗೋತ್ರಾಯ . . . ."[೬] ಎಂದು ವರ್ಣಿಸುತ್ತದೆ.

ಇದೇ ಜಗದೇಕಮಲ್ಲ ಜಯಸಿಂಹನ ಇನ್ನೊಂದು ಶಾಸನವು "ಮೂಕರಸರ್ಪ್ಪಗರಿಟೆ ನಾಡ ಮೇಲಾಳ್ಕೆಯಂ"[೭] ಮಾಡುತ್ತಿದ್ದರೆಂದು ತಿಳಿಸುತ್ತದೆ. ಕಲ್ಯಾಣ ಚಾಲುಕ್ಯ ಎರಡನೆಯ ಜಗದೇಕಮಲ್ಲನ ಬೇಲೂರು ಶಾಸನವು "ಮಹಾಮಂಡಳೇಶ್ವರಂ ಪೆರ್ಮ್ಮಾಡಿದೇವರಸರ ಮಹಾಪಸಾಯತಂ ಸರ್ವ್ವಾಧಿಕಾರಿ ಓರಿಯ ಹೆಗ್ಗಡೆ ಪಂದೆಯನಾ[ಯ*]ಕಂ ಪಗಲಿಟ್ಟಗೆ ೩೦೦ಮಂ ತ್ರಿಭೋಗಾಭ್ಯಂತರದಿ[ನಾ]ಳುತ್ತಮಿರೆ (೮)ನೆಯ ಕ್ರೋಧಿಸಂವತ್ಸರದ ಪುಸ್ಯ ಶುದ್ಧ ೧೩ ಆದಿವಾರಮುತ್ತರಾ[ಯ]ಣ ಸಂಕ್ರಮಣ ನಿಮಿತವಾಗಿ ಹಗರಟ್ಟಗೆ ನಾಡ ಬಳಿಯ ಬಾಡ ಬೇಲೂರು [ಮೂ]ಲಸ್ತಾನ ದೇ[ವ]ರ್ಗ್ಗೆ . . . "[೮] ಬಿಟ್ಟ ದತ್ತಿಯೊಂದನ್ನು ವಿವರಿಸುವಂತಿದೆ.

ಕಲ್ಯಾಣ ಚಾಲುಕ್ಯ ಭೂಲೋಕಮಲ್ಲದೇವನ ಕಕ್ಕೇರಿ ಶಾಸನದಲ್ಲಿ "ಹಗರಿಟ್ಟಗೆಯ ಶ್ರೀಸ್ವಯಂಭುಯುಗ್ರಭೀಮೇಶ್ವರ ದೇವರ ಮುದಿನೀರ ಕುಮಾರೇಶ್ವರ ದೇವರ ಕಕ್ಕೇಶ್ವರ ದೇವರಯಂತಪ್ಪ ಮಹಾಸ್ಥಾನಂಗಳಾಚಾರ್ಯ ಸಿದ್ಧರೇವಣದೇವನ ಶಿಷ್ಯ ಬ್ರಹ್ಮರಾಸಿ ಪಂಡಿತರ ಕಾಲಂಕರ್ಚ್ಚಿ"[೯] ಬಿಟ್ಟ ದತ್ತಿಯೊಂದನ್ನು ತಿಳಿಸುತ್ತದೆ.

ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಚಿಕ್ಕಮುದ್ನೂರ ಶಾಸನವು "ಶ್ರೀ ಕೊ[ಮಾ]ರಸ್ವಾಮಿ ದಂಣ್ಡನಾಯಕರು ಪ್ರತಿಷ್ಠೆ ಮಾಡಿಸಿದ ಮೂಲಸ್ತಾನಂ ಶ್ರೀ ಕುಮಾರೇಶ್ವರದೇವರಂಗ್ಗಭೋಗ ನಿವೇದ್ಯಕ್ಕಂ ನಂದಾದೀವಿಗೆಗಂ ಜೀರ್ಣ್ನೋದ್ಧಾರಕ್ಕಂ ಪಗರಟಗೆಯ ಶ್ರೀಮದುಗ್ರಭೀಮೇಶ್ವರದೇವರ ಸ್ಥಾನದಾಚಾರ್ಯರು

---

೪. SII XV ೫೨೪. ತುಂಬಗಿ. ಮುದ್ದೇಬಿಹಾಳ ತಾಲೂಕು ಪು. ೨೬-೧೦-೧೧೧೪ ಎ.ಡಿ.

೫. SII XI-i, ೬೨. ಬಾಪೂರ. ಮುದ್ದೇಬಿಹಾಳ ತಾಲೂಕು. ೨೪-೧೨-೧೦೩೨ ಎ.ಡಿ.

೬. EI XI ಪು. ೩೧೩. ಲಿಯೊನೆಲ್ ಡಿ. ಬಾರ್ನೆಟ್

೭. SII XX ೨೬. ವಿಜಾಪೂರ ಮ್ಯೂಜಿಯಂ. ೨೪-೧೨-೧೦೪೦ ಎ.ಡಿ.

೮. SII XV ೩೦. ಬೇಲೂರು. ಮುದ್ದೇಬಿಹಾಳ ತಾಲೂಕು. ೧೧೪೫ ಎ.ಡಿ.

೯. ಸ್ವಂತ ಸಂಗ್ರಹ. ಅಪ್ರಕಟಿತಶಾಸನ. ಕಕ್ಕೇರಿ. ಸುರಪುರ ತಾಲೂಕು

ಬ್ರಹ್ಮರಾಶಿಪಂಡಿತರ ಕಾಲಂ ಕರ್ಚ್ಚಿ''[೧೦] ಬಿಟ್ಟ ಭೂದತ್ತಿಯನ್ನು ಉಲ್ಲೇಖಿಸುತ್ತದೆ. ಮುಂದೆ ಇದೇ ಶಾಸನದಲ್ಲಿ ''ಹಗರಟ್ಟಿಗೆಯ ಭೀಮೇಶ್ವರದೇವರ ಕಕ್ಕೇಜ್ಯಕ್ಕೆವೇಶ್ವರದೇವರ ಮುದಿನೀರ ಕುಮಾರೇಶ್ವರದೇವರ ಬೊಂಕೇಶ್ವರದೇವರ ಕುಂಬಿಗೆವೊಂದು॥''[೧೧] ಎಂದೂ ಹೇಳುತ್ತದೆ.

ಕಲ್ಯಾಣ ಚಕ್ರವರ್ತಿ ಭೂಲೋಕಮಲ್ಲ ಮೂರನೆಯ ಸೋಮೇಶ್ವರನ ಓರೇಮುದ್ದೂರಿನ ಶಾಸನದಲ್ಲಿ ''ಹಗರಟ್ಟಿಗೆ ನಾಡಸೆಟ್ಟಿ ಮೂಲಿಸೆಟ್ಟಿ ಎತ್ತಿ[ನೊಕ್ಕ*] ೧ಜಿ ಸೆಟ್ಟಿವೆಜೆಯಂ ಧಾರೆಯೆಱಿದು ಕೊಟ್ಟ ಹಗರಟ್ಟಿಗೆ ನಾಡ ಹೆರ್ಜ್ಜುಂಕದ ಸುಂಕವರ್ಗ್ಗಡೆ ನಾ[ಗೆಯ]ನಾಯಕಂ ಮಂಡಗೆಯ ರಾಮಿಸೆಟ್ಟಿಯ ಎತ್ತಿನೊಕ್ಕ ೧ ಜಿ ಕಾಪುಕಾಣಿಕೆ . . . . ಹೆರ್ಜ್ಜುಂಕ ಮೂಲೆಗ್ರಾಸವೊಳಗಾಗಿ ಹಗರಟ್ಟಿಗೆ ೩೦೦ಜಿ ಒಳಗಡ್ಡಂ ಬಾರದಂತಾಗಿ ಧಾರೆಯೆಱಿದು ಕೊಟ್ಟ''[೧೨] ಎಂದು ತೆರಿಗೆಯ ದತ್ತಿಗಳನ್ನು ವಿವರಿಸುತ್ತದೆ.

ಕಳಚೂರ್ಯ ರಾಯಮುರಾರಿ ಸೋವಿದೇವನ ಕಡಲೆವಾಡ ಶಾಸನವು ''ಶ್ರೀಮನ್ಮಹಾಪ್ರಚಣ್ಡದಂಡನಾಯಕಂ ಕುಮಾರಂ ಬಮ್ಮಿದೇವರಸರ್ ತ(ಂ)ಮ್ಮಾಳ್ಕೆಯ ಸಗರ ಹಗರಿಟ್ಟಿಗೆಯೆಳಮೇಲ ನಾಡುಮಂ ನೋಡುತ್ತಂ ಬನ್ದು॥''[೧೩] ನೀಡಿದ ದತ್ತಿಯೊಂದನ್ನು ತಿಳಿಸುತ್ತದೆ.

ಅದೇ ಅರಸನ ಆಳ್ವಿಕೆಯ ಗೋಟಖಿಂಡಕಿ ಶಾಸನವು ''ಬ(ಂ)ಮದೇವ ದಂಡನಾಯಕರುಮತದಿಂ ಹಗರಿಟ್ಟಿಗೆ ಮುಂನೂಱಱ ಬಳಿಯ ಬಾಡಂ ಶ್ರೀಮತು ಗೊಟ್ಟಖಿಂಡಿಕೆಯ ಪ್ರಭು ಮಹಾದೇವನಾಯಕರ ಮಗ ಬಂಧುಚಿಂತಾಮಣಿಯುಂ''[೧೪] ಎಂದು ಹೇಳುತ್ತ ದತ್ತಿಯೊಂದನ್ನು ಉಲ್ಲೇಖಿಸುತ್ತದೆ.

ಕಲ್ಯಾಣ ಚಾಲುಕ್ಯ ಆಹವಮಲ್ಲ ಸೋಮೇಶ್ವರನ ತಾಳೀಕೋಟೆಯ ಶಾಸನವು ''ಮಹಾಪ್ರಧಾನಂ ಹಗರಿಟ್ಟಿ(ಗೆ) ನಾಡಧಿಕಾರಿ ಪದ್ಮರಸ ದಂಡನಾಯಕರು ಬಿಂನಪಂ (ಗೆ)ಯ್ಯೆಸಲು ತಾಳಿಕೋಟೆಯ ಶ್ರೀಸ್ವಯಂಭು ಸಮಸ್ತದೇವನಿಸ್ತಾರಕಂ ಶ್ರೀಪಾರ್ವ್ವತೀ ಮನೋವಲ್ಲಭಂ ಮಂದಾಕಿನೀ ಮನೋರಂಜನ (ಸು)ಕಾರುಣ್ಯ ಸಂಭವನಪ್ಪ ಶ್ರೀ ಸೋಮನಾಥದೇವರಂಗಭೋಗ ನೈವೇದ್ಯ ನಂದಾದೀವಿಗೆ ಪಾತ್ರಪಾವುಳ ಚೈತ್ರಪವಿತ್ರ ದೇವಾಲ್ಯದ. ವೆಸಕ್ಕೆ ೩ನೆಯ ಪ್ಲವಸಂವತ್ಸರದ ವೈಶಾಖ ಸು ೩ ಸೋಮವಾರದಂದು ಧಾರೆಯೆಱಿದು ಹಗರಿಟ್ಟಗೆ ೩೦೦ ಜಿ ಗ್ರಾಮಾನುಗ್ರಾಮದಲು ಚಂದ್ರಾರ್ಕ್ಕತಾರಂಬರಂ ಸಲ್ವಂತಾಗಿ ಪ್ರತ್ಯೇಕವೊಂದೊಂದು ಹೊಂನಂ ಕೊಟ್ಟರು''[೧೫] ಎಂದು ಸವಿವರವಾಗಿ ಹೇಳುತ್ತದೆ.

---

೧೦. ಕರ್ನಾಟಕ ಭಾರತಿ ೧೮-೧. ಮುದನೂರ ಗ್ರಾಮದ ಶಾಸನಗಳು. ಪು ೮೫-೧೦೭

೧೧. ಕರ್ನಾಟಕ ಭಾರತಿ ೧೮-೧. ಮುದನೂರ ಗ್ರಾಮದ ಶಾಸನಗಳು ಪು ೮೫-೧೦೭

೧೨. ಕರ್ನಾಟಕ ಭಾರತಿ ೧೮-೧. ಮುದನೂರ ಗ್ರಾಮದ ಶಾಸನಗಳು ಪು ೮೫-೧೦೭

೧೩. SII XX ೧೫೩. ಕಡಲೇವಾಡ. ಸಿಂದಗಿ ತಾಲೂಕು ೨೪-೧೨-೧೧೭೨ ಎ.ಡಿ.

೧೪. SII XV ೧೨೬. ಗೋಟಖಿಂಡಕಿ. ಮುದ್ದೇಬಿಹಾಳ ತಾಲೂಕು ೮-೧೨-೧೧೭೪ ಎ.ಡಿ.

೧೫. SII XV ೧೪೩. ತಾಳೀಕೋಟೆ. ಮುದ್ದೇಬಿಹಾಳ ತಾಲೂಕು. ೧೮-೫-೧೦೬೧ ಎ.ಡಿ

ಅದೇ ಅರಸನ ಮಿಣಜಗಿ ಶಾಸನವು "ಶ್ರೀಮನುಮಹಾಪ್ರಧಾನಂ ಸೇನಾಧಿಪತಿಕುಮಾರಂ ನರನಾರಸಿಂಹದೇವರು ಹಗರಟ್ಟೆ ಮುನ್ನೂಱಂ ದುಷ್ಟನಿಗ್ರಹ ಶಿಷ್ಟಪ್ರತಿಪಾಲನದಿಂದಾಳುತ್ತಮಿರಲು ಮುದ್ರಹಸ್ತ ವಿಠ್ಠರಸದಂಡನಾಯಕರ ಬಿ(ನ್ನಪ)ದಿಂ ಪಗರಿಟ್ಟಗೆ ಮುನ್ನೂಱ ಬಳಿಯ ಬಾಡಂ ಮಹಾಗ್ರಾಮಂ ಮಿಣೆಂಜಿಗೆಯ ಪ್ರಭು ಮಾಚರಸಯ್ಯಂಗಳು ಮಾಡಿಸಿದ ತ್ರಿಕೂಟ"[೧೬] ವನ್ನು ಉಲ್ಲೇಖಿಸುತ್ತದೆ.

ಮೇಲಿನ ಎಲ್ಲ ಶಾಸನಗಳಿಂದ ಭಿನ್ನ ರೀತಿಯಲ್ಲಿ ಯಾದವ ವೀರನಾರಾಯಣ (ಭಿಲ್ಲಮ)ನ ಕಲ್ಕೇರಿಯ ಶಾಸನವು ಕಾವ್ಯಮಯವಾಗಿ ಹಗರಿಟ್ಟಗೆ ನಾಡನ್ನು ಕೆಳಗಿನಂತೆ ವರ್ಣಿಸುತ್ತದೆ :

"ಪಿರಿದುಂ ಗಂಭೀರನೀರಾಕರಮೆ ಬಳಸಿರಲು ಮಧ್ಯದೊಳು ತೋಱುತಿಕ್ಕುಂ
ವರಜಂಬೂದ್ವೀಪವಾ ದ್ವೀಪದ ನಡುವೆಸೆಗುಂ ಮೇರು ತದ್ದಕ್ಷಿಣಸ್ಥಂ
ಭರತಕ್ಷೋಣೀತಳಂ ಕುಂತಳ ವಿಷಯವದಾ ಕ್ಷೋಣಿಯೊಳು ನಾಡೆ ಶೋಭಾ
ಕರವಂತಾ ದೇಶದೊಳು ರಂಜಿಸಿ ಪಗರಿಟೆ ನಾಡೊಪ್ಪಿ ತೋಱು ತ್ತಲಿಕ್ಕು॥

ನೆಗಳ್ದಾ ಹಗರಿಟೆ ನಾಡಿಂ
ಗಗಣಿತ ಗುಣನಿಳಯನನ್ಯವನಿತಾದೂರಂ
ನಗರಾಜ ಧೈರ್ಯನೆನಿಸಿಯೆ
ಸೆಗಳ್ದಂ ಸಂಗ್ರಾಮವಿಜಯಿ ವಿರುಪಕ್ಷಿತಿಪಂ॥

ಎಂದು ಆಳುವ ಅರಸನ ಗುಣ-ಶೀಲ-ಚಾರಿತ್ರ್ಯ-ಧೈರ್ಯಗಳನ್ನು ಹೊಗಳುತ್ತ

ತುಱುಗಿದ್ದಾರವೆ ತೋಂಟ
ಕೆಱೆಬಾವಿಗಳೆಸೆವ ದೇವತಾಭವನಂ ಸಂ
ದಣಿವಟಿಗೆ ಸತ್ರವೆಲ್ಲಾ
ತೆಱದಿಂ ಪಗರಿಟಗೆ ನಾಡು ರಂಜಿಸಿ ತೋರ್ಕುಂ॥[೧೭]

ಎಂದು ಪಗರಿಟಗೆ ನಾಡಿನ ದಾನ-ಧರ್ಮ-ಕಾರ್ಯಗಳ ಹೆಗ್ಗಳಿಕೆಯನ್ನು ಹೇಳುತ್ತ ಆ ನಾಡಿನಲ್ಲಿಯ ಅಗ್ರಹಾರ ಆಶ್ರಿತ ತಟಾಕ"(ಕಲ್ಕೇರಿ)ವೆಂದು ತಿಳಿಸುತ್ತದೆ.

ಅದೇ ಯಾದವಭಿಲ್ಲಮನ ಬೀರಾಪುರ ಶಾಸನವು "ಪಗರ[ಟ್ಟೆ] ೩೦೦ರ ಸೆಟ್ಟಿಗುತ್ತ [ಮಿಟ್ಟಿ] ಮಾಚಿಸೆಟ್ಟಿ, ಪಗರಟೆಯ ಸ್ಥಳದ ಬೋರಿಸೆಟ್ಟಿ"[೧೮] ಯರಿಬ್ಬರೂ ಸೇರಿ ಬಿಟ್ಟ ವೃತ್ತಿಯೊಂದನ್ನು ಹೇಳುತ್ತದೆ.

---

೧೬. SII XV ೫೮. ಮಿಣಜಗಿ ಮುದ್ದೇಬಿಹಾಳ ತಾಲೂಕ. ೫-೧೧-೧೧೮೪ ಎ.ಡಿ.

೧೭. SII XX ೧೨೪. ಕಲ್ಕೇರಿ. ಸಿಂದಗಿ ತಾಲೂಕು. ೧೬-೧೦-೧೧೯೭ ಎ.ಡಿ.

೧೮. SII XV ೧೪೭. ಬೀರಾಪುರ. ಮುದ್ದೇಬಿಹಾಳ ತಾಲೂಕು. ೧೧೮೯-೯೦ ಎ.ಡಿ.

ಸವದತ್ತಿ ರಟ್ಟ ಕಾರ್ತವೀರ್ಯನ ಕಲ್ಹೊಳಿ ಶಾಸನವು

"ಶ್ರೀಕವಿ ವಿಬುಧ ಸ್ತ್ರೀರ
ತ್ನಾಕಳಿತಂ ಜಳಧಿಯಂದದಿಂ ಯದುಕುಳ ಲ
ಕ್ಷ್ಮೀಕಾಂತಂ ಕ್ರಿತ ಕಮಳಾ
ನೀಕಂ ಹಗರಟಗೆ ನಾಡು ಜಗದೊಳೆಸೆಗುಂ||"[೧೯]

ಎಂದು ಹಗರಟಗೆ ನಾಡನ್ನು ವರ್ಣಿಸುತ್ತ. ಈ ನಾಡನ್ನಾಳಿದ ಹೈಹಯವಂಶದ ಸಾಮಂತರ ವಂಶಾವಳಿಯನ್ನು ನೀಡುವುದರೊಂದಿಗೆ. ಆ ವಂಶದ ಅರಸು ಮೊದಲನೆಯ ರಾಜನ ಮಗಳು ಚಂದಲದೇವಿ (ಚಂದ್ರಿಕೆ ಅಥವಾ ಚಂದ್ರಿಕಾದೇವಿ) ಮಾಂಡಲಿಕನಾದ ಸೌಂದತ್ತಿ ರಟ್ಟ ಲಕ್ಷ್ಮಣ (ಲಕ್ಷ್ಮೀದೇವ I)ನನ್ನು ಮದುವೆಯಾದುದನ್ನು ರಟ್ಟರ ನಾಲ್ಕನೆಯ ಕಾರ್ತವೀರ್ಯ ಹಾಗೂ ಮಲ್ಲಿಕಾರ್ಜುನರಿಗೆ ತಾಯಿಯಾದುದನ್ನು ತನ್ನ ತಮ್ಮ ಸಿಂಗಿದೇವನ ಮಗ ಎರಡನೆಯ ರಾಜ ಕಟ್ಟಿಸಿದ ಬಸದಿಯೊಂದಕ್ಕೆ ದಾನವಿತ್ತುದನ್ನೂ[೨೦] ವಿವರವಾಗಿ ತಿಳಿಸುತ್ತದೆ. ಈ ಶಾಸನದ ಬಗ್ಗೆ. ಬರೆಯುತ್ತ ಲೇಖಕರು "The inscription mentions a family of Yadava chieftains who were governing at that time the district of Hagaritage. I have not been able to determine the locality of this district or to identify any modern town bearing the same name"[೨೧] ಎಂದು ಹೇಳುತ್ತಾರೆ. ಆ ಶಾಸನದಲ್ಲಿ ಬರುವ ಹಗರಟಗೆ ನಾಡು ಹಾಗೂ ಊರು ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಗ್ರಾಮ ಹಗರಟಗಿಯನ್ನು ಕೇಂದ್ರವಾಗಿ ಹೊಂದಿದ ನಾಡು ಎಂಬುದು ತದನಂತರ ದೊರೆತ ಈ ಶಾಸನಗಳ ಆಧಾರದಿಂದ ಸ್ಪಷ್ಟಪಡಿಸಬಹುದಾಗಿದೆ.

ಮಹಾಮಂಡಳೇಶ್ವರನಾದ ಕದಂಬ ವೀರವಜ್ರದೇವನ ಧಾರವಾಡ ಶಾಸನವು "ಸವಣೂರ ಮೈಲಾರಭಟ್ಟರ ಮಕ್ಕಳು ವಾಸುದೇ[ವ] ವುಪಾಧ್ಯಾಯರು ಮುರುಗದ ಪದುಮಯ್ಯ ಹಗರಟಗೆಯ ದೇವಣಭಟ್ಟರು ಇಂತಿವರು ಮುಖ್ಯವಾಗಿ ಸಮಸ್ತ ವೃತ್ತಿಮಂತರು"[೨೨] ಎಂದು ಹೆಸರಿಸುವಲ್ಲಿ ಹಗರಟಗೆ ಗ್ರಾಮದ ಉಲ್ಲೇಖವಿದೆ.

ಯಾದವ ಚಕ್ರವರ್ತಿ ಸಿಂಘಣನ ತಾಳಿಕೋಟೆ ಶಾಸನವು "ಶ್ರೀಮನುಮಹಾಮಂಡಳಿಕ ಮಗರ ಮುರಾರಿ ಜಯಿತಪಾಳ ದೇವನಾಯಕರು ಮಾಣಿಕಾದೇವಿಯರುಂ ಹಗರಟ್ಟಗೆ ನಾಡ ಹುಡಿಸಬಂವಲಿ ತಾಳಿಕೋಟೆಯ ಶ್ರೀ ಸ್ವಯಂಭು ಸೋಮನಾಥದೇವ"[೨೩]ರ ಪೂಜೆ ಪುನಸ್ಕಾರಗಳಿಗಾಗಿ ಬಿಟ್ಟ ದತ್ತಿಯನ್ನು ಹೇಳುತ್ತದೆ. ಇದೇ ಯಾದವ ಸಿಂಘಣನ ಕಲ್ಕೇರಿಯಲ್ಲಿ ದೊರೆತ ಶಾಸನವು.

---

೧೯. JBBRAS Vol X ಪು ೨೨೨. ಕಲ್ಹೊಳಿ. ಗೋಕಾಕ ತಾಲೂಕು. ೧೨೦೪ ಎ.ಡಿ.

೨೦. JBBRAS Vol X ಪು ೨೨೨. ಕಲ್ಹೊಳಿ. ಗೋಕಾಕ ತಾಲೂಕು. ೧೨೦೪ ಎ.ಡಿ.

೨೧. JBBRAS Vol X ಪು ೨೨೨. ಕಲ್ಹೊಳಿ. ಗೋಕಾಕ ತಾಲೂಕು. ೧೨೦೪ ಎ.ಡಿ.

೨೨. KIV. ೨೦ ಧಾರವಾಡ. ಧಾರವಾಡ ತಾಲೂಕು. ೧೩-೯-೧೧೨೮ ಎ.ಡಿ.

೨೩. SII XV, ೧೭೧. ತಾಳಿಕೋಟೆ. ಮುದ್ದೇಬಿಹಾಳ ತಾಲೂಕು. ೧೨೩೪-೧೨೨೫ ಎ.ಡಿ.

ಕ॥ ನೆಟ್ಟನೆ ಜಂಬೂದ್ವೀಪ
ಕ್ಕಿಟ್ಟಳ ಹಗರಟಗೆ ನಾಡು ನೊಸಲಾ ನೊಸಲಿಂ
ಗಿಟ್ಟಿಸೆವ ತಿಲಕದಂತಿರೆ
ಪಟ್ಟಣವಿದು ರಾಯಮಜಿಗೆ ಕಲುಕೆಱೆಯೆಸೆಗುಂ॥[೨೪]

ಎಂದು ಹಗರಟಗೆ ನಾಡನ್ನು ವರ್ಣಿಸುತ್ತದೆ.

ಯಾದವ ಕನ್ನರನ ಕಲ್ಕೇರಿಯ ಇನ್ನೊಂದು ಶಾಸನವು ಕಲುಕೆಱೆಯಶೇಷ ಮಹಾಜನಂಗಳ ಮುಂದಿಟ್ಟು, ಹಗರಿಟಗೆ ಮುಂನೂಱಜೊಳು ಹತ್ತೆತ್ತಿನ ಸುಂಕಸರ್ವಮಾನ್ಯವಾಗಿ ಕೊಟ್ಟ. .. . .. .[೨೫] ದತ್ತಿಯೊಂದನ್ನು ತಿಳಿಸುತ್ತದೆ.

ಇದೇ ಯಾದವ ಕನ್ನರನ ಸಾಲೋಟಗಿ ಶಾಸನವು "ಚವುಡಿಸೆಟ್ಟಿಯರ ಶ್ರೀಕರಣ ವಾಜಿವಂಸಲಲಾಮ ಹಗರಟ್ಟಗೆಯ ಹರಿಯಣ್ಣಂಗಳ ಮಗ ಸಿಂಪಯ್ಯ"[೨೬] ನೆಂಬವನನ್ನು ಉಲ್ಲೇಖಿಸುತ್ತದೆ.

ಹೀಗೆ ಮೇಲ್ಕಾಣಿಸಿದ ಅನೇಕ ಶಾಸನಗಳಲ್ಲಿ ಪಗಲಟ್ಟಿ – ೩೦೦, ಪಗಲಟ್ಟಿ, ಪಗರಿಟೆನಾಡು, ಪಗಲಟಿ ವಿಶಯ, ಹಗಲಿಟ್ಟಗೆ –೩೦೦, ಹಗರಟ್ಟಗೆ ನಾಡು, ಹಗರಿಟ್ಟಗೆ ನಾಡು, ಹಗರಿಟ್ಟಗೆ ಮುನ್ನೂಱು, ಹಗರಿಟ್ಟಗೆ –೩೦೦, ಹಗಟ್ಟಿ ಮುನ್ನೂಱು, ಹಗರಿಟ್ಟಗೆ ಮುನ್ನೂಱು, ಹಗರಿಟೆ ನಾಡು, ಹಗರಿಟಗೆ ನಾಡು, ಹಗರಟೆಯ ಸ್ಥಳ, ಹಗರಟಗೆ ನಾಡು, ಹಗರಟಗೆ, ಹಗರಿಟಗೆ ಮುಂನೂಱು, ಹಗರಟ್ಟಗೆ ಎಂದಿತ್ಯಾದಿಯಾಗಿ ವರ್ಣಿಸಿಕೊಂಡ, ಈಗ ಹಗರಟಗಿ ಎಂದು ಬರೆಯಿಸಿಕೊಳ್ಳುತ್ತಿರುವ, ಆಗಟಗಿ ಎಂದು ಶ್ರೀಸಾಮಾನ್ಯರಿಂದ ಕರೆಯಿಸಿಕೊಳ್ಳುತ್ತಿರುವ ಪ್ರಾಚೀನ ಕರ್ನಾಟಕದ ಹಗರಿಟಗೆ – ೩೦೦ ಎಂಬ ನಾಡಿನ ಕೇಂದ್ರಸ್ಥಾನವಾದ, ಶಾಸನಗಳಲ್ಲಿ ಸರ್ವನಮಸ್ಯದಗ್ರಹಾರ ಪಾಂಡವದತ್ತಿ ಎಂದು ಉಲ್ಲೇಖಗೊಂಡ ಇಂದಿನ ಗುಲ್ಬರ್ಗ ಜಿಲ್ಲೆಯ ಸುರಪುರ ತಾಲೂಕಿನ ಹಗರಿಟಗಿ ಗ್ರಾಮದಲ್ಲಿ ದೊರೆಯುವ ಶಾಸನಗಳ ಪಠ್ಯವನ್ನು ಪ್ರಕಟಿಸುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ಇಂದು ಚಿಕ್ಕ ಗ್ರಾಮವಾಗಿರುವ ಹಗರಟಗಿ, ೧೧ರಿಂದ ೧೩ನೆಯ ಶತಮಾನದ ಸುಮಾರಿಗೆ ಪ್ರಾಮುಖ್ಯಪ್ರದೇಶವಾಗಿತ್ತೆಂದು ಸೂಚಿಸುವಂತೆ ಈಗಲೂ ಅಲ್ಲಿ ಬಹುವಿಸ್ತಾರ ಪ್ರದೇಶದಲ್ಲಿ ಹರಡಿರುವ ಮಾನವವಸತಿಯ ಪಳೆಯುಳಿಕೆಗಳು, ಅವಶೇಷಗಳು, ಅನೇಕ ದೇವಾಲಯಗಳು, ಬಹುಸಂಖ್ಯಾತ ಶಾಸನಗಳು ಸಾಕ್ಷಿಯಾಗಿವೆ. ಇಲ್ಲಿಯ ದೇವಾಲಯಗಳ ಬಗ್ಗೆ ವಿವರವಾದ ಲೇಖನವನ್ನು ಡಾ. ಅ.ಸುಂದರ ಅವರು ಪ್ರಕಟಿಸಿದ್ದಾರೆ.[೨೭] ಡಾ॥ ವಿ.ಎಸ್. ಕುಲಕರ್ಣಿಯವರು ತಮ್ಮ ಸಂಶೋಧನಾ

೨೪. SII XX, ೨೦೨. ಕಲ್ಕೇರಿ. ಸಿಂದಗಿ ತಾಲೂಕು. ೧೮೮–೧೨೪೪ ಎ.ಡಿ.

೨೫. SII XX, ೨೧೬ ಕಲ್ಕೇರಿ. ಸಿಂದಗಿ ತಾಲೂಕು. ೧೨೫೦–೫೧ ಎ.ಡಿ.

೨೬. SII XV, ೧೮೮. ಸಾಲೊಡಗಿ. ಬ.ಬಾಗೋವಾಡಿ ತಾಲೂಕು. ೧೨೫೧ ಎ.ಡಿ.

೨೭. Journal of Karnatak University (Social Sciences)

ಪ್ರಬಂಧದಲ್ಲಿ ಹಗರಿಟಗೆಯ ಬಗ್ಗೆ ಸಂಕ್ಷಿಪ್ತ ಟಿಪ್ಪಣಿಯನ್ನು ನೀಡಿದ್ದಾರೆ.[೨೮] ಹಾಗೆಯೇ ಇಲ್ಲಿ ದೊರೆಯುವ ಶಾಸನಗಳ ಬಗೆಗಿನ ಸಂಕ್ಷಿಪ್ತ ವಿವರಣೆಯು ೧೯೫೯-೬೦ರಲ್ಲಿ ಪ್ರಕಟಣೆಗೊಂಡಿದೆ.[೨೯] ಆ ವರದಿಗಳಲ್ಲಿ ೪ ಸಂಪೂರ್ಣ ಅಳಿಸಿಹೋದ. ತ್ರುಟಿತ ಶಾಸನಗಳನ್ನೊಳಗೊಂಡು ೧೯ ಶಾಸನಗಳ ಸಂಕ್ಷಿಪ್ತ ವಿವರಣೆ ನೀಡಲಾಗಿದೆ. ಅವರೆ ಈ ಎಲ್ಲ ಉಲ್ಲೇಖಗಳ ಆಧಾರದ ಮೇಲಿಂದ ಆಡಳಿತ ವಿಭಾಗದ ಹಗರಿಟಗೆ - ೩೦೦ ರಲ್ಲಿ ತುಂಬಗಿ. ಬಾವೂರ. ಬೇಲೂರು. ಗೋಟಖಿಂಡಕಿ. ತಾಳೀಕೋಟೆ. ಮಿಣಜಗಿ. ಪೀರಾಪುರ. ಕಲ್ಕೇರಿ. ಕಕ್ಕೇರಿ. ಮುದನೂರು ಗ್ರಾಮಗಳನ್ನೊಳಗೊಂಡ ಮುದ್ದೇಬಿಹಾಳ. ಸಿಂದಗಿ. ಸುರಪುರ ತಾಲೂಕುಗಳ ಭಾಗಗಳು ಸೇರಿದ್ದವೆಂಬ ತೀರ್ಮಾನಕ್ಕೆ ಬರಬಹುದಾಗಿದೆ. ಈ ಹಳ್ಳಿಗಳನ್ನಿಟ್ಟುಕೊಂಡು ಹಗರಿಟಗೆ ನಾಡಿನ ಗಡಿಗಳನ್ನು ಗುರುತಿಸಬಹುದು.

ನಾನು ಪರಿವೀಕ್ಷಣೆ ಕೈಕೊಂಡಾಗ ದೊರೆತ ಶಾಸನಗಳು ಕೇವಲ ೮ ಎನ್ನುವುದನ್ನು ಗಮನಿಸಿದಾಗ. ಶಾಸನಗಳ ಬಗ್ಗೆ ನಮ್ಮ ಜನರಿಗಿರುವ ದಿವ್ಯನಿರ್ಲಕ್ಷ್ಯವು ಖೇದವನ್ನುಂಟು ಮಾಡುತ್ತದೆ.[೩೦] ಜೊತೆಯಲ್ಲಿಯೇ ಐಮತೇಕ ದೊಡ್ಡಶಾಸನಗಳು ಈಗಲೂ ಉಳಿದಿರುವುದು ಸ್ವಲ್ಪಮಟ್ಟಿಗೆ ಸಂತೋಷವನ್ನುಂಟು ಮಾಡುತ್ತದೆ. ನನಗೆ ದೊರೆಯದೇ ಇರುವ ಶಾಸನಗಳ ಬಗೆಗಿನ ವರದಿಗಳಲ್ಲಿಯ ಸಂಕ್ಷಿಪ್ತ ವಿವರಣೆಯನ್ನು ಯಥಾವತ್ತಾಗಿ ಲೇಖನದ ಕೊನೆಯಲ್ಲಿ ನೀಡಲಾಗಿದೆ. ಇಲ್ಲಿಯ ಶಾಸನಗಳಿಂದ ತಿಳಿದು ಬರುವ ವಿಷಯ ಹೀಗಿದೆ :

ರಾಜಕೀಯ:

ಪ್ರಕಟವಾಗುತ್ತಿರುವ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯ ಜಗದೇಕಮಲ್ಲನ ಒಂದು ಶಾಸನ (೧೧೪೪ ಎ.ಡಿ). ಕಳಚೂರ್ಯ ಸಂಕಮನಿಗೆ ಸಂಬಂಧಿಸಿದ ಒಂದು ಶಾಸನ (೧೧೭೯ ಎ.ಡಿ). ಯಾದವ ಎರಡನೆಯ ಸಿಂಘಣನ ಮೂರು ಶಾಸನಗಳು (೧೨೧೮. ೧೨೨೦. ೧೨೩೯ ಎ.ಡಿ) ಇರುವುದರಿಂದ ಈ ಪ್ರದೇಶ ಕಲ್ಯಾಣ ಚಾಲುಕ್ಯರು. ಕಳಚೂರ್ಯರು ಹಾಗೂ ಯಾದವ ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ.

ಯಾದವ ಸಿಂಘಣನ ಕಾಲದಲ್ಲಿ ಮಹಾಪ್ರಧಾನನಾದ ಜೈತಪಾಳದೇವನ ಕುರಿತು ಇಲ್ಲಿಯ ಶಾಸನವೊಂದು "ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನುಮಹಾಪ್ರಧಾನರ ಬಾತ್ತರ ನಿಯೋಗಾಧಿಪತಿ ರಸಲಪತಿ ನಿಯೋಗ ಯೋಗಂಧರ ಪ್ರತಿಕಾರ್ಯ್ಯ ಧುರಂಧರಂ ಮಂತ್ರಿ ಮಾಣಿಕ್ಯ ನೀತಿ ಚಾಳುಕ್ಯನು ಶ್ರೀಮತು ಮಗರ ಮುರಾರಿ ಜೆತಪಾಳದೇವ"ನೆಂದು

---

೨೮. Historical & cultural studies of the region around Basavakalyan ಅಪ್ರಕಟಿತ ಪು. ೨೦೬-೨೦೭

೨೯. Annual Reports of Indian Epigraphy ೧೯೫೯ ೬೦. ಪು. ೯೪-೯೬.

೩೦. ಆ ವರದಿಗಳಲ್ಲಿಲ್ಲದ ತ್ರುಟಿತ ಶಾಸನವೊಂದು ನನ್ನ ಗಮನಕ್ಕೆ ಬಂದಿದೆ. ಶಾಸನ ಸಂಖ್ಯೆ ೬.

ವರ್ಣಿಸುತ್ತದೆ. ಜೊತೆಗೆ ಚೈತಪಾಳನ ರಾಜ್ಯಾಭ್ಯುದಯಕ್ಕೆ ಕರಣಕಾರಣನೆಂದು ಹಗರಟ್ಟಿಗೆ ೩೦೦ಜ ಸರ್ವಾಧಿಕಾರಿ ಪಾರಿಸಸೆಟ್ಟಿಯರನ್ನೂ ಹೆಸರಿಸುತ್ತದೆ. ಇನ್ನೊಂದು ಶಾಸನ (೧೨೨೦ ಎ.ಡಿ.) ಚಾಳುಕ್ಯ ಚಕ್ರವರ್ತಿ ಪಿರಿಯ ಪೆರ್ಮಾಡಿರಾಯನ (ವಿಕ್ರಮಾದಿತ್ಯ VI) ಪರಮಾರಾಧ್ಯ ಆಹವಮಲ್ಲ ಚಟ್ಟಯ್ಯ ಬಿಟ್ಟ ದತ್ತಿ ಈ ಹಗರಿಟಗೆ ಎನ್ನುತ್ತವೆ. ಇದೇ ಶಾಸನವು "ಶ್ರೀಮನು ಮಹಾಮಂಡಳೇಶ್ವರಂ ಚಂಮಡಿಗ ದೇವರಸರು" ಎಂದು ಹೆಸರಿಸುತ್ತದೆ. ಈ ಮಂಡಲೇಶ್ವರರ ಬಗೆಗೆ ಹೆಚ್ಚಿನ ವಿವರಗಳು ಹಗರಿಟಗೆಯಲ್ಲಿ ದೊರತ ಶಾಸನಗಳಲ್ಲಿ ಲಭ್ಯವಿಲ್ಲ. ಆದರೆ ಸೌಂದತ್ತಿ ರಟ್ಟ ಕಾರ್ತವೀರ್ಯನ ಕಲ್ಹೊಳಿ ಶಾಸನವು ಹಗರಟಗೆ ೩೦೦ ರ ಮಹಾಮಂಡಳೇಶ್ವರರಾದ ಯಾದವವಂಶದವರ ವಂಶಾವಳಿಯನ್ನು ವಿವರವಾಗಿ ಕೆಳಗಿನಂತೆ ನೀಡುತ್ತದೆ :

ರೆಬ್ಬ ಪತ್ನಿ ಹೋಳಲದೇವಿ
↓
ಬ್ರಹ್ಮ ಪತ್ನಿ ಚಂದಲದೇವಿ
↓
ರಾಜ। ಪತ್ನಿ ಮೈಳಲದೇವಿ
↓

- ಚಂದಲದೇವಿ. ಚಂದ್ರಿಕೆ ಅಥವಾ ಚಂದ್ರಿಕಾದೇವಿ
- ಸಿಂಹ ಅಥವಾ ಸಿಂಗದೇವ ಪತ್ನಿ ಭಾಗಲದೇವಿ
  ↓
  ರಾಜ II ಪತ್ನಿ ಚಂದಲದೇವಿ ಮತ್ತು ಲಕ್ಷ್ಮೀದೇವಿಯರು

ಇದಲ್ಲದೆ ಡಾ॥ ಪಿ.ಬಿ. ದೇಸಾಯಿಯವರು ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಪಿರಿಯರಸಿ ಚಂದಲದೇವಿಯ ಬಗ್ಗೆ ಹೇಳುತ್ತ "chandaladevi was an ardent follower of the Jaina doctrine. She hailed from a family of chiefs who administered Hyderabad state" ಎಂದು ಹೇಳುತ್ತಾರೆ. ಪುಣಸೀ ಪಡಗಲಿ ಶಾಸನದಲ್ಲಿ ಉಕ್ತಳಾದ ಈಕೆ ಅಲಂದೆ ಸಾಸಿರ ಪ್ರಮುಖವಾದ ಅನೇಕ ಭತ್ತಗ್ರಾಮಗಳನ್ನು ಆಳುತ್ತಿದ್ದಳೆಂದು ಶಾಸನ ಹೇಳುತ್ತದೆ.

ಮೇಲ್ಕಾಣಿಸಿದ ಮಹಾಮಂಡಲೇಶ್ವರರ ಜೊತೆಯಲ್ಲಿ ಪ್ರಭು ಸಂಕರಸ, ಹೆಗ್ಗಡೆ ಬಾಚರಸ, ಸೇನಬೋವ ತಿಪ್ಪರಸರ ಮಗ ಸಿರಿಯಣ್ಣ, ಕೇತಗಾಮುಂಡನ ಮಕ್ಕಳು ರಾಮಗಾಮುಂಡ-ಸಿಂಗಗಾಮುಂಡರು. ಊರೊಡೆಯ ಬಾಚರಸ-ಇತ್ಯಾದಿಯರು ಇಲ್ಲಿಯ ಅಧಿಕಾರಿಗಳಾಗಿದ್ದುದು ಈ ಶಾಸನಗಳಿಂದ ತಿಳಿದುಬರುತ್ತದೆ.

ಧಾರ್ಮಿಕ:

ಮಧ್ಯಯುಗೀನ ಕರ್ನಾಟಕದ ಇತಿಹಾಸದಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳ ಕೇಂದ್ರಬಿಂದುವಾಗಿ ಗಮನ ಸೆಳೆಯುವವರು ಮಹಾಜನರು. ಇಲ್ಲಿಯ ಎರಡು ಶಾಸನಗಳಲ್ಲಿ ಸುದೀರ್ಘವಾಗಿ ಇವರ ವರ್ಣನೆ

ಬರುತ್ತದೆ. ಒಂದು ಶಾಸನ "ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣಮೌನಾನುಷ್ಠಾಣ ಜಪಸಮಾಧಿಸೀಲ ಗುಣಸಂಪನ್ನರೌಪಾಸನಾಗ್ನಿಹೋತ್ರ ದ್ವಿಜಗುರುದೇವತಾಪೂಜಾತತ್ವರುಂ ಮಾರ್ತಂಡೋಜ್ವಳ ಕೀರ್ತ್ತಿಯುತರುಂ ಸಕಲಸೂತ್ರ ವಿಷಾಲಿ[ಟಿ]ದರುಮಪ್ಪ ಶ್ರೀಮತು ಸರ್ವ್ವನಮಸ್ಯದಗ್ರಹಾರ ಹಗರಿಟಗೆಯಶೇಷ ಮಹಾಜನಂಗಳೈನೂರ್ಬ್ಬರುಂ"॥ ಎಂದು ವರ್ಣಿಸಿದರೆ, ಇನ್ನೊಂದು ಶಾಸನವು "ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾಣ ಜಪಸಮಾಧಿಶೀಲ ಗುಣಸಂಪಂನರೌಪಾಸನಾಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪರರುಂ ಮಾರ್ತ್ತಂಡೋಜ್ವಳಕೀರ್ತಿಯುತರುಂ ಅಶೇಷ ವೈಶೇಷಿಕ ನೈಯಾಯಿಕ ಲೋಕಾಯು ಸಮತಕೆ ಮೀಮಾಂಸಾದ್ಯನೇಕ ಶಾಸ್ತ್ರಪ್ರವೀಣರುಂ ವಿದ್ವಾಂಸಕದಂಬ ಹ್ರಿದ್ಧರ್ಮ್ಮಿನೀ ರಾಜಹಂಸರು ಭಾರಾವತಿ ಕರ್ನ್ನಾವತಂಕರುಂ ಸಕಲ ಲೋಕರ್ಕ್ಕೆ ಕಂಜ ಮಂಜರಿರಂಜಿತ ಬಾಲದಿವಾಕರರುಂ ಬ್ರಹ್ಮವಂಶವಾರ್ದ್ಧಿವರ್ಧನ ಸುಧಾಕರರುಂ ಹರಿಹರಖ್ಯಾತ ರಣಗರ್ವ್ವ ಪಾದಾಂಭೋಜರುಂ ಜಪಚರಿತರುಂ ಹತೌಕಾಶೌಕಾಶಾ ಗಂಗಾವಳತರತರಂಗಿತರಾರಾಧೀಶರುಂ॥ ದಿವಿಜವಿದಂದ ಡಿಂಡಿಮ ಪಾಂಡುರಂಗ ವಿಚಿಕಿಳ ಪಾಂಚಜನ್ಯರು . . . . ಪಪಾಕರುಂಮಪ್ಪ ಶ್ರೀಮತು ಸರ್ವ್ವ ನಮಸ್ಯದಗ್ರಹಾರಂ ಹಗರಿಟ್ಟಗೆಯ ಅಶೇಷ ಮಹಾಜನಂಗಳಯಿನೂರ್ವ್ವರ" ಎಂದು ಸುದೀರ್ಘವಾಗಿ ವರ್ಣಿಸುತ್ತದೆ.

ಈ ಕಾಲದ ಉತ್ತರ ಕರ್ನಾಟಕ ಭಾಗದಲ್ಲಿ ಸುಪ್ರಸಿದ್ಧವಾಗಿರುವ ಶೈವ ಸಿಂಹಪರ್ಷೆಯ ಮಲೆಯಾಳ ಪಂಡಿತನ ಶಿಷ್ಯಪರಂಪರೆಯವರಲ್ಲೊಬ್ಬನಾದ ಸೂರ್ಯರಾಶಿ ಪಂಡಿತ ಹಗರಿಟಗೆಯ ಗವಚೇಶ್ವರದೇವರ ಸ್ಥಾನಾಚಾರ್ಯನಾಗಿದ್ದನೆಂದು ಇಲ್ಲಿಯ ಒಂದು ಶಾಸನದಲ್ಲಿ ೩ ಬಾರಿ, ಇನ್ನೊಂದು ಶಾಸನದಲ್ಲಿ ಒಂದು ಬಾರಿ ಉಲ್ಲೇಖಗೊಂಡಿದೆ. ಇನ್ನೊಂದರಲ್ಲಿ ಹಗರಿಟಗೆಯ ಸ್ವಯಂಭು ಭೀಮೇಶ್ವರ ದೇವರ ಸ್ಥಾನಾಚಾರ್ಯನಾಗಿ ಬ್ರಹ್ಮರಾಶಿ ಪಂಡಿತನಿದ್ದನೆಂದು ತಿಳಿಸಿದರೆ, ಮತ್ತೊಂದು ಇನ್ನೊಬ್ಬ ಶಿಷ್ಯನಾಗಿರಬಹುದಾದ ಚಂದ್ರಶಿವ ಪಂಡಿತರ ಕಾಲ್ತೊಳಿದು ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ.

ಈಗಾಗಲೇ ಬೇರೆಡೆ ದೊರೆತ ಶಾಸನಗಳಲ್ಲಿ ಹಗರಿಟಗೆ ಉಗ್ರಭೀಮೇಶ್ವರದೇವರ ಉಲ್ಲೇಖವಿರುವಂತೆ ಇಲ್ಲಿಯ ಒಂದು ಶಾಸನದಲ್ಲಿ "ಸ್ವಯಂಭುತ ಭೀಮ . . " ಎನ್ನುವುದು ಅವನನ್ನೇ ಸೂಚಿಸುವಂತಿದೆ. ಅಲ್ಲದೆ ಗವಚೇಶ್ವರದೇವರು, ಮಲ್ಲಿಕಾರ್ಜುನದೇವರು, ತ್ರಿಕೂಟೇಶ್ವರದೇವರು, ಭೈರವದೇವರು, ಸಿಡಿಲಬಾವಿಯ ಶ್ರೀರಾಮನಾಥದೇವರು, ಅಯಿನೂರ್ವ್ವೇಶ್ವರದೇವರು, ಬಾಚೇಶ್ವರದೇವರು, ಕೇತೇಶ್ವರದೇವರು, ಶ್ರೀಚೌಡೇಶ್ವರಿದೇವಿ, ತ್ರಿಪುರಾಂತಕದೇವ, ಉಮಾಭವ, ಕೇಶವದೇವರ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿದ್ದರೂ ತ್ರಿಕೂಟೇಶ್ವರ ದೇವಸ್ಥಾನವೊಂದನ್ನು ಹೊರತುಪಡಿಸಿ ಇನ್ನುಳಿದ ದೇವಾಲಯಗಳ ಹೆಸರನ್ನೆಲ್ಲ ಬದಲಿಸಿ ಇಂದು ಧರ್ಮ, ಭೀಮ, ಅರ್ಜುನ, ನಕುಲ, ಸಹದೇವ, ಕುಂತಿ ಇತ್ಯಾದಿ ಮಹಾಭಾರತದ ಪಾತ್ರಗಳ ಹೆಸರಿನಲ್ಲಿ ಕರೆಯಲಾಗುತ್ತಿದೆ.

ಮೇಲ್ಕಾಣಿಸಿದ ದೇವಸ್ಥಾನಗಳ ಆರಾಧ್ಯ-ಉತ್ಸವಮೂರ್ತಿಗಳಾಗಿ ಮೆರೆದ ದೇವರುಗಳ ಅಂಗಭೋಗ-ರಂಗಭೋಗ, ನೈವೇದ್ಯ-ನಂದಾದೀವಿಗೆ, ಜೀರ್ಣೋದ್ಧಾರಗಳಿಗಾಗಿ ಚೈತ್ರ-ಪವಿತ್ರ-ನೂಲಪರ್ವಗಳಲ್ಲಿ ನಡೆಯುವ ಉತ್ಸವಗಳಿಗಾಗಿ ರಾಜವರ್ಗದವರು-ವರ್ತಕರು-ಶ್ರೀಸಾಮಾನ್ಯರು ಬಿಟ್ಟ ಭೂಮಿ-ಹೊನ್ನು-ಗಾಣ-ಸುಂಕದತ್ತಿಗಳನ್ನು ಈ ಶಾಸನಗಳಲ್ಲಿ ಕಾಣಬಹುದು. ದಾನಿಗಳಲ್ಲಿ ಕಾಳಗಾಮುಂಡ, ಮಾಚಿದೇವರಸ, ವೈಜರಸ ಇತ್ಯಾದಿ ಶ್ರೀಸಾಮಾನ್ಯರ ಹೆಸರುಗಳು ಬಂದಿವೆ.

ಭೂದತ್ತಿಗಳನ್ನು ಬಿಡುವಾಗ, ಮೇರೆ – ಸೀಮೆಗಳನ್ನು ಹೆಸರಿಸುವಾಗ ಕಳ್ಳಗೆಱೆ, ಬೋವಗೆಱೆ, ಬೋವರಕೆಱೆ, ಸಗರಸಂಕನಕೆಱೆ, ಸಂಪಗೆಯ ಮಡು ಇತ್ಯಾದಿಗಳು ಆ ಕಾಲದಲ್ಲಿದ್ದ ಕೆರೆಗಳ ಅಗಣಿತ ಸಂಖ್ಯೆಯನ್ನು ಸೂಚಿಸಿದರೆ 'ಆಯಿನೂರ್ವ್ವರ ಹಟ್ಟಿ' ಎಂಬುದು ಮಹಾಜನರು ಒಂದೆಡೆ ವಾಸವಾಗಿರುತ್ತಿದ್ದರು ಎಂಬುದನ್ನು ಸೂಚಿಸುವಂತಿದೆ. ಅಲ್ಲದೆ ಕೆಯಿ, ಮತ್ತರು, ಮಾಣಿಕೇಶ್ವರದ ಕೋಲು, ಮಾಣಿಕೇಶ್ವರ ಗಡಿಂಬದಲು ಮತ್ತರು ಎನ್ನುವ ಶಬ್ದಗಳು ಭೂಮಿಯ ಅಳತೆಯ ರೀತಿಯನ್ನು ಸೂಚಿಸುತ್ತವೆ.

ಆರ್ಥಿಕ:

ಹಗರಿಟಗೆ ಮುನ್ನೂರು ರಾಜಕೀಯ ಕೇಂದ್ರವಾಗಿದ್ದಂತೆ ವಾಣಿಜ್ಯಕೇಂದ್ರವೂ ಆಗಿದ್ದಿತು. ಇಲ್ಲಿ ಅಯ್ಯಾವೊಳೆಯ ಪುರವರಾಧೀಶ್ವರರು, ನಾಡುಗಳು, ನಖರರು, ಉಭಯನಾನಾದೇಶಿಗಳು, ಮುಂಮುರಿದಂಡರು, ಬಲ್ಲುಂಕೆದಂಡಹಸ್ತರು, ಹನ್ನವಣಿಗರು, ಎಂಟುನಾಡ ಪದಿನೞುವರು, ಗವಱೆಗಳು, ಗವಱೆ ಗಾತ್ರಿಗರು, ಬೀರರು, ಬೀರವಣಿಗರು, ಸೆಟ್ಟಿಯರು, ಸೆಟ್ಟಿಗುತ್ತರು, ಗಉಡುಗಳು, ಗಉಡಸ್ವಾಮಿಗಳು, ಉಪ್ಪಿನಿಕ ಗಉಡುಗಳು, ಮೂವತ್ತಾಱುಂಬೀಡು ಇತ್ಯಾದಿ ನಾನಾ ವರ್ತಕಪ್ರಕಾರದವರು ಇದ್ದರಲ್ಲದೆ ಆವರ ಜೊತೆ ಎಂಟುಗಾಮುಡು, ಎಂಟು ಹಾಗದ ಧಮ್ಮಶ್ರೇಣಿ, ಅಶೇಷ ಸರ್ವ್ವಾಯಂಗಳು, ಹಂನಿಚ್ಛಾಸಿರ ಬಿಲ್ಲಮೂನೂರ್ಬರು, ೯೨ ಜೇಡ ಹಟಗಾರರು, ಮಹಾಜನರು ಎಲ್ಲರೂ ಮಹಾನಾಡಾಗಿ ನೆರೆದು ದಾನ-ದತ್ತಿ-ಸುಂಕದತ್ತಿಗಳನ್ನು ಬಿಡುತ್ತಿದ್ದ ಉಲ್ಲೇಖ ಇಲ್ಲಿಯ ಶಾಸನಗಳಲ್ಲಿದೆ. ಈ ವರ್ತಕರನ್ನು ಇಲ್ಲಿಯ ಶಾಸನವೊಂದು ಹೀಗೆ ವರ್ಣಿಸಿದೆ : "ಸ್ವಸ್ತಿ ಸಮಸ್ತ ಭುವನವಿಖ್ಯಾತ ಪಂಚಸತ ವೀರಸಾಸನಲಬ್ಧ . . . ಚಾರುಚರಣ ನಯವಿನಯ ವಿಜ್ಞಾನವಿವ ಬಣಂಜಧರ್ಮ್ಮ ಪ್ರತಿಪಾಳನರುಂ ವಿಶುದ್ಧ ಗುಡ್ಡಧ್ವಜ . . . . ಲಿಂಗಿತ ಲಕ್ಷ್ಮೀವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ವಾಸುದೇವ ಖಂಡಳಿ ಮೂಳಭದ್ರ ವಂಶೋದ್ಭವರುಂ ದ್ವಾತ್ರಿಂಸತು ವೇಳಾಉರಮುಂ ಅಷ್ಟಾದಸ ಪಟ್ಟಣಮುಂ ಚೌಸಷ್ಟಿಯೋಗಪೀಠಮುಂ ಅಱುವತ್ತನಾಲ್ಕು ಪೂಜಾಸ್ಥಾ[ನ*]ಮುಂ ಗಂಗ ವಂಗ ಕಳಿಂಗ ಕಾಂಭೋಜ ಕೊಂಗು ಕೊಂಕಣ ಸೌ[ರಾ*]ಷ್ಟ್ರ ವರಾಳ ಮಘದ ಮಾಳವ ಲಾಳ ಪಾರ್ಯ್ಯಾತ್ರ ತುರಸ್ಕ ಕಾಷ್ಮೀರ ಚೀರ ಚೋಳ ಪಾಂಡ್ಯ ಆಂಧ್ರ ಕರ್ಣ್ಣಾಟ ಪೂರ್ಬ್ಬಾ ಪಶ್ಚಿಮ ಉತ್ತರದಕ್ಷಿಣೋಂನ್ನತ ನಾನಾ ದೇಶಾಂತರದೆಂಟುನಾಡ ಪದಿನೞುವರುಂ ಗವಱೆಗಳುಂ ಗವಱೆಗಾತ್ರಿಗರುಂ

ಬೀರರುಂ ಬೀರವಣಿಗರುಂ ಸೆಟ್ಟಿಯರುಂ ಸೆಟ್ಟಿಉತ್ತರುಂ ಗೌಂಡುಗಳುಂ ಗಲುಡಸ್ವಾಮಿಗಳುಂ ಬಲ್ಲುಂಕೆದಂಡಹಸ್ತರುಂ ಮಾಚಾರ ಕಲಿಗಳುಂ ಕಲಹ ಸಂಪೂರ್ಣ್ನರುಂ ಏಕೈಕವೀರರು ಅಸಹಾಯಸೌರ್ಯ್ಯರು ಸಮುಯಸಮುದ್ಧ[ರಣ*] ರುರಂ ಅಯ್ಯಾವೊಳೆಯ ಪುರವರಾಧೀಸ್ವರರ ಪ್ರತಾಪವೆಂತೆ[ಂ]ದಡೆ ಸಮುದ್ರವೇ ಭೇರಿಯಾಗಿ ಭೇರಿಯೆ ಮದ್ದಳೆಯಾಗಿ ಪ್ರಿಥಿವೇ ಕಳನಾಗಿ ದಿಸಾಗಜಂಗಳೆ ಕಂಭವಾಗಿ ಮೇರುಪರ್ಬ್ಬತವೆ ಮೇಳಿಯಮಾಗಿ ಚಂದ್ರನೆ ಚಂದ್ರಬಲವಾಗಿ ಆದಿತ್ಯನೆಬೆ[ಂ*] ಬಲಮಾಗಿ ಅಷ್ಟಲೋಕಪಾಳಕರೆ ಗಳೆಯಿಕ್ಕುವರಾಗಿ ದೇವರ ದಿಬ್ಯಾಯುಧಮೆ ಆಯುಧಮಾಗಿ ನವಗ್ರಿಹಂಗಳೇಕಾದಶಸ್ತ್ರರಾಗೆ ತೆತ್ರಿಂಸಾದಿಗಳೆ ನೋಟಕ್ಕರ್ಳಾಗಿ ಕಾದಿ ಗೆಲ್ದ ಭಗವತಿದೇವಿಯ ಮಕ್ಕಳಪ್ಪ ಶ್ರೀಮದೆಂಟುನಾಡ ಪದಿನಜುವರಯಿನೂರ್ವ್ವ ಸ್ವಾಮಿಗಳುಮಪ್ಪ" ಎಂದು ಸುದೀರ್ಘವಾಗಿ ವರ್ಣಿಸುತ್ತದೆ.

ಮೇಲ್ಕಾಣಿಸಿದ ಎಲ್ಲಂದದ ವರ್ತಕರು ಅರಿಷಿಣ, ಇಂಗು, ಮೆಣಸು, ಸಕ್ಕರೆ, ಬೆಲ್ಲ, ಜೀರಿಗೆ, ಅಡಿಕೆ, ಶುಂಠಿ, ಅಲ್ಲ ಮತ್ತು ಹತ್ತಿಗಳ 'ಪರದಿನ ವಿಕ್ರಯ' ಮಾಡುತ್ತಿದ್ದರಂತೆ. ಒಕ್ಕಲಲ್ಲಿ, ಹೆಗಲ ಗವಜಿಯಲ್ಲಿ ಅಲ್ಲದೆ ಎತ್ತು-ಕತ್ತೆ-ಕೋಣಗಳ ಮೇಲೆ ಸಾಮಾನು ಹೊರಿಸಿಕೊಂಡು ಸಂತೆಗೆ ತರುತ್ತಿದ್ದರು. ಹೇರು, ಅರೆಹೇರು, ಬಳ್ಳ, ಮಾನಗಳು ಅಳತೆಯ ಶಬ್ದಗಳಾಗಿದ್ದರೆ ಹಾಗ, ಹೊನ್ನು, ಅರವೀಸಗಳು ನಾಣ್ಯಗಳಾಗಿದ್ದವು. ಅರುವಣ, ವೀರವಣಗಳು ತೆರಿಗೆಗಳಾಗಿದ್ದವು. ಸುಂಕವರ್ಗಡೆಗಳು ತಮಗೆ ಬಂದ ಎಲೆಯಲ್ಲಿ ಹೇಜಿಂಗೆ ೧೦೦, ಹೊಜಿಗೆ ೫೦ ಹೊತ್ತಕ್ಕೆ ೨೫ರಷ್ಟನ್ನು ದೇವರ ತಾಂಬೂಲಕ್ಕಾಗಿ ಕೊಡುತ್ತಿದ್ದರೆ ಹನ್ನವಣಿಗರು ಹೇಜಿಂಗೆ ೫೦, ಹೊಜಿಗೆ ೨೫, ಹೊತ್ತಳಕ್ಕೆ ೧೨, ಕತ್ತೆವೊಕ್ಕಲಿಗೆ ೨ ರಂತೆ ಎಲೆಗಳನ್ನು ದೇವರಿಗೆ ನೀಡುತ್ತಿದ್ದರಂತೆ. ಸಂತೆಗಾಗಿ ಬರುವ ವರ್ತಕರು ಎತ್ತಿನ ಹೇರಿಗೆ ೧-೪, ಕತ್ತೆಯ ಹೇರಿಗೆ ೨-೨ ಪ್ರಮಾಣದಲ್ಲಿ ವೀಳಿಯದೆಲೆ-ಅಡಿಕೆಗಳನ್ನು ಕೊಡುತ್ತಿದ್ದರೆಂಬ ವಿಷಯವನ್ನು ಇಲ್ಲಿಯ ಶಾಸನಗಳು ಹೇಳುತ್ತವೆ.

ಈ ಹಗರಿಟಗೆ ಮುಂನೂರರ ಸೆಟ್ಟಿಗುತ್ತರ ಪ್ರಮುಖ ರಾಮಿಸೆಟ್ಟಿಯಾಗಿದ್ದನೆಂದು ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ದೇವರಿಗೆ ಭೂ-ಹಣ- ಸುಂಕದತ್ತಿಗಳನ್ನು ನೀಡಿದವರಲ್ಲಿ ಗಂಗರ ಮಲ್ಲಿಸೆಟ್ಟಿ, ದೀವಸೆಟ್ಟಿ, ಕೋರಿಸೆಟ್ಟಿ, ಸಾವಿರಕೊಳ್ಳಿಯ ಕೇಸವಸೆಟ್ಟಿ, ಚಾಮಿಸೆಟ್ಟಿ ಮಲ್ಲಿಸೆಟ್ಟಿ, ಹೆದ್ದಿಸೆಟ್ಟಿ, ಮಾಚಿಸೆಟ್ಟಿ, ಗಂಗರ ಹಲಿಸೆಟ್ಟಿ, ರೇಚಿಸೆಟ್ಟಿ ಇತ್ಯಾದಿ ವರ್ತಕರನ್ನು ಈ ಶಾಸನಗಳು ಹೆಸರಿಸುತ್ತವೆ.

ಸಾಂಸ್ಕೃತಿಕ:

ಹಗರಿಟಗೆಯಲ್ಲಿ ತುರುಗೋಳಿಗೆ ಸಂಬಂಧಿಸಿ ಉಬ್ಬು ಶಿಲ್ಪವಿರುವ ೬ ಕಲ್ಲುಗಳು ದೊರೆತಿದ್ದು, ಒಂದು ವೀರಗಲ್ಲಿನಲ್ಲಿ ಮಾತ್ರ ಶಾಸನವಿದ್ದು ಬಹುಶಃ ಯುದ್ಧದಲ್ಲಿ ಮಡಿದ ವೀರನೊಬ್ಬನ ಸ್ಮರಣಾರ್ಥ ಅತನ ತಮ್ಮ ರೇವಯ್ಯ ವೀರಕಲ್ಲನ್ನು ನಿಲ್ಲಿಸಿದಂತೆ ತೋರುತ್ತದೆ.

ಕೇವಲ ಶೈವಧರ್ಮವಷ್ಟೇ ಅಲ್ಲ ಜೈನಧರ್ಮವೂ ಹಗರಿಟಗೆಯಲ್ಲಿ ಪ್ರಚಲವಾಗಿತ್ತೆಂದು ಸೂಚಿಸುವಂತೆ ಒಂದು ನಿಷಧಿಕಲ್ಲು ದೊರೆತಿದ್ದು ದೇವಚಂದ್ರನೆಂಬ ಮುನಿಯ ಗಣ-ಗಚ್ಛ, ಅನ್ವಯಗಳ ಬಗ್ಗೆ ವಿವರವಾದ ವರ್ಣನೆಯನ್ನು ನೀಡುತ್ತದೆ. ಜೊತೆಗೆ ಆ ದೇವಚಂದ್ರನ ಪ್ರತಿಮೆಯನ್ನು ಬಬ್ಬರ ಕಾಳಿಸೆಟ್ಟಿ ಎಂಬಾತ ಮಾಡಿಸಿದನೆಂದೂ ಆ ಶಾಸನದಿಂದ ತಿಳಿದುಬರುತ್ತದೆ.

ಸಾಹಿತ್ಯಿಕ:

ಸಾಹಿತ್ಯಿಕವಾಗಿ ಪರಿಶೀಲಿಸಿದರೆ ಇಲ್ಲಿ ದೊರೆತ ಶಾಸನಗಳೆಲ್ಲ ಗದ್ಯದಲ್ಲಿಯೇ ಇವೆ ಎನ್ನುವುದನ್ನು ಗಮನಿಸಬಹುದು. ಮಹಾಜನರು, ವರ್ತಕರು, ಅರಸರುಗಳ ಪ್ರಶಸ್ತಿಗಳನ್ನು ಹೇಳುವಾಗ ಮಾತ್ರ ಸುಮಧುರವಾದ ಗದ್ಯ ಬಳಕೆಗೊಂಡುದು ಕಂಡುಬರುತ್ತದೆ.

ಶಾಸನಗಳ ಪಠ್ಯ

೧

ಬಸವಣ್ಣನ ಗುಡಿಯಲ್ಲಿರುವ ೨.೫" x ೪.೫" ಅಳತೆಯ ಸೇದಿಬಂಡಿಯ (ಶಹಬಾದ್ ಕಲ್ಲು) ಮೇಲೆ ಈ ಶಾಸನವಿದೆ. ಶಿವಲಿಂಗ, ಪೂಜಾರಿ, ಬಸವಣ್ಣ, ಆಕಳು-ಕರು, ಖಡ್ಗ, ಸೂರ್ಯ-ಚಂದ್ರರ ಚಿತ್ರಗಳಿವೆ. ಅಕ್ಷರಗಳನ್ನು ಆಳವಾಗಿ, ಸುಂದರವಾಗಿ ೩/೪" ಅಳತೆಯಲ್ಲಿ ಕೆತ್ತಲಾಗಿದೆ.

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲ ಕಲ್ಯಾಣವನ್ನು ರಾಜಧಾನಿಯಾಗಿಟ್ಟುಕೊಂಡು ಆಳಿದ ಕಾಲದ ಶಾಸನವಿದು. ಇದರ ೨೨- ೨೩ ಮತ್ತು ೩೩-೩೪ನೆಯ ಸಾಲುಗಳಲ್ಲಿ ಬರುವ "ಸ್ವಸ್ತಿ ಶ್ರೀಮತು ಜಗದೇಕಮಲ್ಲ ವರ್ಷದ ೮ನೆಯ ರಕ್ತಾಕ್ಷಿ ಸಂವತ್ಸರದ ಚೈತ್ರ ಸುದ್ಧ ಪಂಚಮೆ ಸೋಮವಾರ ಉತ್ತರಾಯಣ ಸಂಕ್ರಾಂತಿ ಬ್ಯತಿ ಪಾತ" ಎಂಬ ಮಿತಿಯು ಎಪ್ರಿಲ್ ೧ನೆಯ ತಾರೀಖು ೧೧೪೪ನೆಯ ವರ್ಷದ ಸೋಮವಾರಕ್ಕೆ ಸರಿಹೋಗುತ್ತದೆ.

ಚಾಕಲದೇವಿ, ಕೊಳಗದ ಮಲ್ಲಿದೇವರಸ, ಆದಿತ್ಯದೇವರಸರಿಂದ ಭೂಮಿಯನ್ನು ಕೊಂಡು ಗಂಗರ ಮಲ್ಲಿಸೆಟ್ಟಿಯು ಸೂರ್ಯರಾಶಿಪಂಡಿತರ ಕಾಲ್ತೊಳೆದು ಗವರೇಶ್ವರದೇವರಿಗೆ ಬಿಟ್ಟ ದತ್ತಿಯನ್ನು ತಿಳಿಸುತ್ತದೆ. ಹಗರಿಟಗೆಯ ೫೦೦ ಜನ ಮಹಾಜನರು ಮತ್ತು ಅಯ್ಯಾವೊಳೆಯ ೫೦೦ ಸ್ವಾಮಿಗಳನ್ನು ಪ್ರಶಸ್ತಿ ಸಹಿತವಾಗಿ ವರ್ಣಿಸುತ್ತದೆ.

ಇದೇ ಶಾಸನದ ಉತ್ತರಾರ್ಧದಲ್ಲಿ ಕೊಳಗದ ಮಲ್ಲಿಮಯ್ಯ ತಾನೇ ಪ್ರತಿಷ್ಠಗೆಯ್ದಿದ ಮಲ್ಲಿಕಾರ್ಜುನದೇವರಿಗೆ ಗವರೇಶ್ವರ ದೇವರ ಸ್ಥಾನದಾಚಾರ್ಯ ಸೂರ್ಯರಾಶಿ ಪಂಡಿತರ ಕಾಲ್ತೊಳೆದು ಬಿಟ್ಟ ಭೂದತ್ತಿ ಹಾಗೂ ಮನೆಯ ನಿವೇಶನಗಳನ್ನು

ಹೆಸರಿಸುತ್ತದೆ. ಅಲ್ಲದೆ ಮಹಾಜನರು ಮತ್ತು ಇತರರು ಬಿಟ್ಟ ದತ್ತಿಯನ್ನೂ ತಿಳಿಸುತ್ತದೆ. ಈ ಶಾಸನ ಮಲ್ಲೋಜನ ಶೀಘ್ರಲಿಖಿತವಂತೆ.

- ಗಮನಿಸಿ : ೫೦೮ ಜನ ಮಹಾಜನರು ಮತ್ತು ಅಯ್ಯಾವೊಳೆಯ ಐನೂರ್ವರ ಪ್ರಶಸ್ತಿ ಮತ್ತು ವರ್ತಕರು ಸಾಮಾನುಗಳನ್ನು ಸಂತೆಗೆ ತರುವ-ಮಾರುವ ಪರಿ. ಸಿಂಹಪರ್ಷೆಯ ಮಲೆಯಾಳ ಪಂಡಿತನ ಶಿಷ್ಯ ಸೂರ್ಯರಾಶಿ ಪಂಡಿತನ ಉಲ್ಲೇಖ.

೧. ನಮಸ್ತುಂಗ ಸಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂಲಸ್ತಂಭಾಯ ಸಂಭವೇ॥

೨. ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀಪ್ರಿಥ್ವೀವಲ್ಲಭಂ ಮಹಾರಾಜಾಧಿರಾಜ ಪರಮೇಶ್ವರ

೩. ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲ-

೪. ದೇವರ ವಿಜಯರಾಜ್ಯಮುತ್ತರೋತ್ತರಾಭಿವ್ರಿದ್ಧಿ [ಪ್ರವರ್ದ್ಧ*]ಮಾನ ಮಾಚಂದ್ರಾರ್ಕ್ಕ ತಾರಂಬರಂ ಕಲ್ಯಾಣದ ನೆಲೆವೀ-

೫. ಡಿನೊಳು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ॥ ಸ್ವಸ್ತಿ ಯಮನಿಯಮಸ್ವಾಧ್ಯಾಯ

೬. ಧ್ಯಾನಧಾರಣ ಮೌನಾನೂಷ್ಠಾಣ ಜಪಸಮಾಧಿಸೀಲಗುಣಸಂಪನ್ನ ರೌಪಾಸನ್ನಾಗ್ನಿಹೋತ್ರ ದ್ವಿಜಗುರು

೭. ದೇವತಾಪೂಜಾತತ್ಪರರುಂ ಮಾರ್ತ್ತಂಡೋಜ್ವಳಕೀರ್ತಿಯುತರುಂ ಸಕಲಸೂತ್ರವಿಷಾಲ[ಚಿ]ದರುಮಪ್ಪ ಶ್ರೀಮ-

೮. ತು ಸರ್ವನಮಸ್ಯದಗ್ರಹಾರ ಹಗರಿಟಗೆಯಶೇಷ ಮಹಾಜನಂಗಳೈನೂರ್ಬರುಂ॥ ಸ್ವಸ್ತಿ ಸಮಸ್ತ ಭು-

೯. ವನವಿಖ್ಯಾತ ಪಂಚಸತವೀರಸಾಸನಲ್ಧ . . . . . ಚಾರುಚರಣ ನಯವಿನಯ ವಿಜ್ಞಾ-

೧೦. ನವಿವ ಬಣಂಜಧರ್ಮ್ಮ ಪ್ರತಿಪಾಳನರುಂ ವಿಶುದ್ಧಗುಡ್ಡಧ್ವಜ. . . . . ಲಿಂಗಿ-

೧೧. ತ ಲಕ್ಷ್ಮೀವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ವಾಸುದೇವ ಖಂಡಳಿ ಮೂಳಭದ್ರ ವಂಶೋದ್ಭವರುಂ

೧೨. ದ್ವಾತ್ರಿಂಸತು ವೇಳಾಉರಮುಂ ಅಷ್ಟಾದಸ ಪಟ್ಟಣಮುಂ ಚೌಸಷ್ಟಿ ಯೋಗ ಪೀಠಮುಂ ಅಱುವತ್ತನಾಲ್ಕು ಪೂಜಾ-

೧೩. ಸ್ಥಾ[ನ*]ಮುಂ ಗಂಗವಂಗಕಳಿಂಗ ಕಾಂಭೋಜ ಕೊಂಗು ಕೊಂಕಣ ಸೌ[ರಾ*]ಷ್ಟ್ರ ವರಾಳ ಮಘದ ಮಾಳವ ಲಾಳ ಪಾ-

೧೪. ರ್ಯ್ಯಾತ್ರ ತುರಸ್ಕ ಕಾಶ್ಮೀರ ಚೇರ ಚೋಳ ಪಾಂಡ್ಯ ಆಂಧ್ರ ಕರ್ಣ್ನಾಟ ಪೂರ್ಬ್ಬ ಪಶ್ಚಿಮ ಉತ್ತರದಕ್ಷಿಣೋಂನ್ನತ ನಾನಾದೇ-

೧೫. ಶಾಂತರದೆಂಟುನಾಡ ಪದಿನಱುವರುಂ ಗವಱೆಗಳುಂ ಗವಱೆ ಗಾತ್ರಿಗುರುಂ ಬೀರರುಂ ಬೀರವಣಿಗರುಂ ಸೆಟ್ಟಿಯರುಂ

೧೬. ಸೆಟ್ಟಿಉತ್ತರುಂ ಗೌಉಡುಗಳುಂ ಗೌಉಡಸ್ವಾಮಿಗಳುಂ ಬಲ್ಲುಂಕೆದಂಡ ಹಸ್ತರುಂಮಾಚಾರ ಕಲಿಗಳುಂ ಕಲಹ

೧೭. ಸಂಪೂರ್ಣ್ನರುಂ ಏಕೈಕವೀರರು ಅಸಹಾಯಸೌರ್ಯ್ಯರುಂ ಸಮಯ ಸಮುದ್ಧ[ರಣ*]ರುಂ ಅಯ್ಯಾವೊಳೆಯ ಪು-

೧೮. ರವರಾಧೀಸ್ವರರ ಪ್ರತಾಪವೆಂತೆ[ಂ]ದಡೆ ಸಮುದ್ರವೆ ಭೇರಿಯಾಗಿ ಭೇರಿಯೆ ಮದ್ದಳೆಯಾಗಿ ಪ್ರಿಥಿವೇ ಕಳನಾ-

೧೯. ಗಿ ದಿಸಾಗಜಂಗಳೆ ಕಂಭಮಾಗಿ ಮೇರು ಪರ್ಬ್ಬತವೆ ಮೇಳಿಯಮಾಗಿ ಚಂದ್ರನೆ ಚಂದ್ರಬಲವಾಗಿ ಆದಿತ್ಯನೆ ಬೆ[ಂ*]ಬ-

೨೦. ಲಮಾಗಿ ಅಷ್ಟಲೋಕಪಾಳಕರೆ ಗಳೆಯಿಕ್ಕುವರಾಗಿ ದೇವರ ದಿಬ್ಯಾಯುಧಮೆ ಆಯುಧಮಾಗಿ ನವಗ್ರಿಹಂ-

೨೧. ಗಳೇಕಾವಶಸ್ತ್ರರಾಗೆ ತೆತ್ರಿಂಸಾದಿಗಳೆ ನೋಟರ್ಕ್ಕಳಾಗಿ ಕಾದಿ ಗೆಲ್ದ ಭಗವತಿದೇವಿಯ ಮಕ್ಕಳಪ್ಪ ಶ್ರೀಮ-

೨೨. ದೆಂಟುನಾಡಪದಿನಱುವರಯಿನೂರ್ವ್ವ ಸ್ವಾಮಿಗಳುಮಪ್ಪ ॥ ಸ್ವಸ್ತಿ ಶ್ರೀಮತು ಜಗದೇಕಮಲ್ಲವರ್ಸದ

೨೩. ಅನೆಯ ರಕ್ತಾಕ್ಷಿ ಸಂವತ್ಸರದ ಚೈತ್ರ ಸುದ್ಧ ಪಂಚಮೆ ಸೋಮವಾರ ಉತ್ತರಾಯಣ ಸಂಕ್ರಾಂತಿ ಬ್ಯತೀಪಾತದಂ-

೨೪. ದು ಗಂಗರ ಮಲ್ಲಿಸೆಟ್ಟಿ ಚಾಕಲದೇವಿಯ ಕಂಗಳ ಮಲ್ಲಿದೇವರಸನ ಆದಿತ್ಯದೇವರಸನ ಕೈಯಲು ಕ್ರಯಮಂ ಕೊಂ-

೨೫. ಡು ಅವರ ಅಱುವತ್ತರಸ್ಥಳದೊಳಗೆ ಶ್ರೀ ಗವಱೇಸ್ವರದೇವರಂಗಭೋಗಕಂ ಸೂರ್ಯ್ಯರಾಸಿ ಪಂಡಿತರ ಕಾಲಂ

೨೬. ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿಕೆಂಡು ಕೊಟ್ಟ ಕೆಯಿ ಮಾಣೆಕೇಸ್ವರ ಗಡಿಂಬದಲು ಮತ್ತರು ೫ ಮಹಾಜನಂ-

೨೭. ಗಳು ದೇವರ ಪೂಜೆಗೆ ಬೋವರಕೆಱೆಯಿಂ ಬಡಗಲು ಕೊಟ್ಟ ತೋಂಟ ಆರವತ್ತರು / ದೇವಮಾನ ರಸಭಂಡ ಸಹಿತ

೨೮. ಹೊಂಗೆ ಕೊಟ್ಟಲ್ಲಿ ಮಾನ ೧ ಅರಿಸಿನವಿಂಗು ಮೆಣಸು ಸಕ್ಕರೆ ಬೆಲ್ಲಂ ಜೀರಗೆ ಅಡಿಕೆ ಸೂ[ಂ*] (ಠಿ) ಅಲ್ಲ ಹತ್ತಿ ದಸರಿ

೨೯. ಎಂಬ ಪರದಿನ ವಿಕ್ರಯಮಂ ಕೊಟ್ಟರಲ್ಲಿ ಹೊಂಗೆ ಆರವೀಸ ಸತ್ರದಿ ಎತ್ತುವ ಅರೆವಾನದ ಸಟ್ಟುಗ ೧ ನೂಲ ಪ-

೩೦. ರ್ಬ್ಬದಲು ಅರೆಹೇರ ಎನ್ನದೆ ಎತ್ತು ಕತ್ತೆ ಕೋಣನಕ್ಕುಪೊಂದುಳ್ಳದಂ ಪೊಕ್ಕಲಲು ಹಾಗ ೧ ಹೆಗಲ ಗವಜೆಯಲು

೩೧. ಹಾಗ ೧ ದೇವರ ವೀಳೆಯಕ್ಕೆ ಸುಂಕವೆರ್ಗ್ಗಡೆಗಳು ತಮ್ಮ ಮೇಲಿಲೆಯೊಳಗೆ ಹೇಱಿಂಗೆ ೧೦೦ ಹೊಱೆಗೆ ೫೦ ಹೊತ್ತಕ್ಕೆ ೨೫

೩೨. ಹನ್ನವಣಿಗರು ಬಿಟ್ಟ ಎಲೆಯಾಯ ಹೇಱಿಂಗೆ ೫೦ ಹೊಱಗೆ ೨೫ ಪೊತ್ತಳಕ್ಕೆ ೧೨ ಕತ್ತೆಯವೊಕಲು ೨ ಕಂ ಸರ್ಬ್ಬಾಬಾಧೆ ಪರಿಹಾ॥

೩೩. ಸ್ವಸ್ತಿ ಶ್ರೀಮತು ಜಗದೇಕಮಲ್ಲವರ್ಷದ ೮ನೆಯ ರಕ್ತಾಕ್ಷಿ ಸಂವತ್ಸರ ಚೈತ್ರ ಸುದ್ಧ ಪಂಚಮಿ ಸೋಮವಾರ ಉತ್ತರಾಯಣ ಸಂಕ್ರಾಂತಿ ವಿತಿ-

೩೪. ಪಾತನಿಮಿತ್ತವಾಗಿ ಕೊಳಗದ ಮಲ್ಲಿಮಯ್ಯನು ತಾ ಮಾಡಿಸಿದ ಮಲ್ಲಿಕಾರ್ಜುನ ದೇವರ್ಗ್ಗೆ ಚಾಕಲದೇವಿಯ ಮಲ್ಲಿದೇವರಸನ ಆದಿತ್ಯದೇವರಸ-

೩೫. ನ ಕೈಯಲು ಕ್ರಯಮಂ ಕೊಂಡು ಶ್ರೀ ಗವಱೇಶ್ವರದೇವರ ಸ್ಥಾನವಾಚಾರ್ಯ ಸೂರ್ಯರಾಸಿ ಪಂಡಿತರ ಕಾಲಂ ಕಚ್ಚಿ ಧಾರಾಪೂರ್ವ್ವಕಂ ಮಾಡಿ ಸರ್ವ್ವನಮ-

೩೬. ಸ್ಯ ಕೊಟ್ಟ ಕೆಯಿ ಮಾಣಿಕೇಶ್ವರ ಗದ್ದಿಂಬದಲು ಮತ್ತರು ೩॥ ಮನೆಯು ನಿವೇಶನ ೧ ದೇವರ ನಿವೇದ್ಯಕೆ ಕಳ್ಳಗೆಱೆಯ ಕೆಳಗೆ ಮಹಾಜನಂಗಳು

೩೭. ಕೊಟ್ಟ ತೋಂಟ ಮತ್ತರು ೧ ದೇವರ ಪೂವಿಂಗೆ ಬೋವಗೆಱೆಯಿಂ ಮೂಡಲು ಮಹಾಜನಂಗಳು ತೋಂಟ ಅರೆವತ್ತರು ಉಪ್ಪಿನಿಕ ಗಾಣಿಗಗಳು ದೇವ-

೩೮. ರ್ಗ್ಗೆ ಬಿಟ್ಟ ಆಯ ಹೊಂಗೆ ಕೊಟ್ಟಲ್ಲಿ ಬಳ್ಳ ೧ ಕೊಂಡಲ್ಲಿ ಬಳ್ಳ ೧॥ ಯೀ ಧರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ ಕೋಟಿ ಕಪಿಲೆಯುಂ ಚತುರ್ವ್ವೇದ ಪಾರಗರಪ್ಪ

೩೯. ಬ್ರಾಹ್ಮಣರ್ಗ್ಗೆ ದಾನವಂ ಕೊಟ್ಟ ಫಲಮಕ್ಕು ಯೀ ಧರ್ಮ್ಮಕ್ಕಾವನೊರ್ವ್ವನ ನ್ಯಾಯಮಂ ಚಿಂತಿಸಿದವಂಗೆ ವಾರಣಾಸಿಯಲು ಕೋಟಿ ಕಪಿ-

೪೦. ಲೆಯುಂ ಚತುರ್ವ್ವೇದಪಾರಗರಪ್ಪ ಬ್ರಾಹ್ಮಣರ್ಮ್ಮಂ ವಧಿಯಿಸಿದವರು॥ ಸ್ವದತ್ತಾಂ ಪರದತ್ತಾಂ ವಾಯೋ ಹರೇತಿ ವಸುಂಧರಾ ಷಷ್ಟಿರ್ವ್ವರ್ಷ

೪೧. ಸಹಸ್ರಾಣಿ ಮ್ರಿಷ್ಟಾಯಾಂ ಜಾಯತೇ ಕ್ರಿಮಿ॥ ಮಲ್ಲೋಜನ ಸೀಘ್ರಲಿಕಿತ॥ ನಾಡುಗಳುಂ ನಖರಂಗಳುಂ ಉಭಯನಾನಾದೇಸಿ ಮುಂಮು-

೪೨. ರಿದಂಡಮುಂ ಮಹಾಜನಂಗಳು ಮುಖ್ಯವಾಗಿ ತಳಸಹಿತ । ಶ್ರೀ ಗವಱೇಶ್ವರ ದೇವರ್ಗ್ಗೆ ಬಿಟ್ಟ ಆಯ ಹೊಂಗೆ ಕೊಂಡಲ್ಲಿ ಮಾನ ೧

೪೩. ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಅಸೇಷ ಮಹಾಜನಂಗಳು ಮುಮ್ಮುರಿ ದಂಡಂಗಳ ಸನ್ನಿಧಾನದಲು ಮುಂದಿನ ಬೋವನ್ನಬಾವಿಯ ಕೇರಿಯಲು ನಾ-

೪೪. ಗರ ಮಾದಯ್ಯನ ಮನೆಯಿರೆ ಪಡವಲು ತನ್ನ ನಿವೇಶಣವಂ ಶ್ರೀ ಗವಱೇಶ್ವರದೇವರ ಸ್ಥಾನದಾಚಾರ್ಯ್ಯಂ ಸೂರ್ಯ್ಯರಾಸಿ ಪಂಡಿತರ ಕಾಲಂ

೪೫. ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಜರೆಯ ಶಂಖ ಪರೆಗಿರೆ ಪಾದಾರಾಧಕನಪ್ಪ ದೀವಸೆಟ್ಟಿ ಕ್ರಮವಂ ಕೊಂಡು ಕೊಟ್ಟ ಮನೆಯ ನಿವೇ-

೪೬. ಷಣ ೧

ಇದೇ ಕಲ್ಲಿನ ಮೇಲ್ಭಾಗದಲ್ಲಿ ನಂದಿಯ ಚಿತ್ರದ ಮೇಲೆ ಕೆಳಗಿನಂತಿದೆ :

೧. ಸುಂಕವೆರ್ಗ್ಗಡೆಗಳು ದೇವ-

೨. ರಿಗೆ ವೊಂದು ಗಾಣದ ಬೀರವ-

೩. ಣವಂ ಬಿಟ್ಟರು.

೨

ಸ್ಥಳ: ಬಸವಣ್ಣನ ಗುಡಿಯಲ್ಲಿಯೇ ಇರುವ ೨'x೩' ಅಳತೆಯ ಇನ್ನೊಂದು ಸೇದಿಬಂಡಿ (ಶಹಬಾದ್ ಕಲ್ಲು)ಯ ಮೇಲೆ ಈ ಶಾಸನವಿದೆ. ಶಿವಲಿಂಗ. ನಂದಿ. ಪೂಜಾರಿ. ಸೂರ್ಯ-ಚಂದ್ರ. ಆಕಳು-ಕರುವಿನ ಶಿಲ್ಪಗಳಿವೆ.ಅಷ್ಟೇನು ಆಳವಲ್ಲದ ೩/೪'' ಅಳತೆಯ ಅಕ್ಷರಗಳಲ್ಲಿ ಕೊರೆಯಲಾಗಿದೆ.

ಕಳಚೂರ್ಯ ಸಂಕಮದೇವನ ಆಳ್ವಿಕೆಯ ಕಾಲದ ಶಾಸನವಿದಾಗಿದ್ದು. ಸಾಲು ೨-೩ರಲ್ಲಿ ಬರುವ "ಕಳಚೂರ್ಯ್ಯ ಚಕ್ರವರ್ತ್ತಿ ರಾಯನಾರಾಯಣ ಸಂಕಮದೇ[ವ*]ವರಿಷದ ೩ನೆಯ ವಿಕೃತಿ ಸಂವತ್ಸರದ ಪುಷ್ಯ ಸು ೧೪ ಸೋಮವಾರದಂದು" ಎಂಬ ಮಿತಿಯು ೧೧೭೯ನೆಯ ಕ್ರಿಸ್ತಶಕ ಡಿಸೆಂಬರ್ ೧೪ನೆಯ ತಾರೀಖಿಗೆ ಸರಿಹೊಂದುತ್ತದೆ. ಆದರೆ ಶಾಸನದಲ್ಲಿ ಹೇಳಿದಂತೆ ಅಂದು ಸೋಮವಾರವಲ್ಲ, ಶುಕ್ರವಾರ.

ಸರ್ವನಮಸ್ಯದಗ್ರಹಾರ ಹಗರಿಟ್ಟಿಗೆಯ ಅಶೇಷ ಮಹಾಜನರು ಮತ್ತು ವರ್ತಕರು ಈ ಪರಡ್ಯೆನೂರ್ವರ ಸಮಕ್ಷಮದಲ್ಲಿ ಸೋಮೇಶ್ವರ ಪ್ಯೆಸರು ಚಾಕಲದೇವಿ ಮಲ್ಲದೇವರಸರಿಂದ ಇಪ್ಪತ್ತು ಮತ್ತರು ಭೂಮಿಯನ್ನು ಕೊಂಡು ತ್ರಿಕೂಟೇಶ್ವರ ದೇವರಿಗೆ ಭೈರವದೇವರಿಗೆ ಹಾಗೂ ಗವಱೇಶ್ವರದೇವರ ಅಂಗಭೋಗ

ನೈವೇದ್ಯಗಳಿಗಾಗಿ ಸೂರ್ಯರಾಶಿ ಪಂಡಿತರ ಕಾಲ್ತೊಳೆದು ದತ್ತಿ ಬಿಟ್ಟುದನ್ನು ಈ ಶಾಸನ ತಿಳಿಸುತ್ತದೆ. ಇದೇ ತಿಥಿಯಲ್ಲಿ ಮೂವತ್ತಾಱುಂಬೀಡು ಮುಂಮುರಿದಂಡರು. ಉಭಯ ನಾನಾದೇಸಿಗಳು ಸೇರಿ ಎತ್ತು, ಕತ್ತೆ, ಕೋಣಗಳ ಮೇಲೆ ಹೇರನ್ನು ತಂದಾಗ ದೇವರಿಗಾಗಿ ನೀಡುವ ವೀಳೆಯದೆಲೆ ಅಡಕೆ ಪ್ರಮಾಣಗಳನ್ನು ನಿಗದಿಪಡಿಸಿ ದತ್ತಿಬಿಟ್ಟುದನ್ನೂ ತಿಳಿಸುತ್ತದೆ.

● ಗಮನಿಸಿ: ಮಾಣಿಕೇಶ್ವರ ಗಡಿಂಬದಲು ಮತ್ತರು. ಮೂವತ್ತಾಱುಂ ಬೀಡು ಮುಂಮುರಿದಂಡಂಗಳು, ಉಭಯ ನಾನಾದೇಶಿಗಳು.

ಸಂತೆಗಾಗಿ ಬರುವ ವರ್ತಕರು ಎತ್ತಿನ ಹೇರಿಗೆ ೧-೪, ಕತ್ತೆಯ ಹೇರಿಗೆ ೨-೨ ಪ್ರಮಾಣದಲ್ಲಿ ವೀಳೆಯದೆಲೆ ಅಡಕೆಗಳನ್ನು ಕೋಣನ ಹೇರಿಗೆ ೪ ಅಡಕೆಗಳನ್ನು ದೇವರಿಗಾಗಿ ನೀಡುವುದನ್ನು ತಿಳಿಸುತ್ತದೆ.

೧. ನಮಃಸ್ತುಗ ಸಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯನಗರಾರಂಭ ಮೂ-

೨. ಲಸ್ತಂಭಾಯ ಸಂಭವೇ॥ @ಸ್ವಸ್ತಿ ಶ್ರೀಮತು ಕಳಚೂರ್ಯ್ಯ ಚಕ್ರವರ್ತ್ತಿ ರಾಯನಾರಾಯ-

೩. ಣ ಸಂಕಮದೇ[ವ*] ವರಿಷದ ೩ಜೆನೆಯ ವಿಕ್ರುತಿ ಸಂವತ್ಸರದ ಪುಷ್ಯ ಸು ೧೪ ಸೋಮವಾರದಂದು॥

೪. ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ಮೌನಾನುಷ್ಠಾಣ ಜಪಸಮಾಧಿಶೀಲ

೫. ಗುಣಸಂಪಂನರೌಪಾಸನಾಗ್ನಿಹೋತ್ರ ದ್ವಿಜಗುರು ದೇವಪೂಜಾತತ್ಪರರುಂ

೬. ಮಾರ್ತ್ತಂಡೋಜ್ವಳಕೀರ್ತ್ತಿಯುತರುಂ ಅಶೇಷ ವೈಶೇಷಿಕ ನೈಯಾಯಿಕ ಲೋಕಾಯತಮತಕೆ

೭. ಮೀಮಾಂಸಾದ್ಯನೇಕ ಶಾಸ್ತ್ರ ಪ್ರವೀಣರುಂ ವಿದ್ವಾಂಸಕವಂಬ ಪ್ರಿವ್ಯ ರ್ಮಿನೀ ರಾಜಹಂಸರು

೮. ಭಾರಾವತಿ ಕರ್ನ್ನಾವತಂಶರುಂ ಶಕಲಲೋಕರ್ಕ್ಕೆ ಕಂಜಮಂಜರಿ ರಂಜಿತ ಬಾಲದಿವಾಕರರುಂ

೯. ಬ್ರಹ್ಮವಂಶವಾರ್ದ್ಧಿವರ್ದ್ಧನ ಸುಧಾಕರರುಂ ಪರಿಪರಖ್ಯಾತ ರಣಗರ್ವ್ವ ಪಾದಾಂಭೋಜರುಂ ಜಪ

೧೦. ಚರಿತರುಂ ಪತೌಕಾಪೌಕಾಶಾ ಗಂಗಾವಳಿ ತರತರಂಗಿತರಾರಾಧೀಶರುಂ॥ ದಿವಿಜವಿದಂದ

೧೧. ಡಿಂಡಿಮ ಪಾಂಡುರಂಗ ವಿಚಿಳ ಪಾಂಚಜನ್ಯರು . . . . .ವಶಾಕರುಂಮಪ್ಪ ಶ್ರೀಮತು ಸ-

೧೨. ರ್ವ್ವನಮಸ್ಯದಗ್ರಹಾರಂ ಹಗರಿಟ್ಟಗೆಯ ಆಶೇಷ ಮಹಾಜನಂಗಳಯಿನೂರ್ವ್ವರ ಸಂ-

೧೩. ನಿಧಾನದಲು॥ ಸ್ವಸ್ತಿ ಸಮಸ್ತ ಭುವನ ವಿಖ್ಯಾತ ಪಂಚಸತ ವೀರಸಾಸನ ಲಬ್ಧಾನೇಕ ಗುಣ-

೧೪. ಗಣಾಲಂಕ್ರಿತ ಚಾರುಚರಿತ್ರನಯವಿನಯ ವಿಜ್ಞಾನ ವೀರಬಣಂಜಧರ್ಮ್ಮ ಪ್ರತಿಪಾಳ-

೧೫. ನರುಮಪ್ಪ ಎರಡಯಿನೂರ್ವ್ವರುಂ ನೆರೆದಿದ್ದಲ್ಲಿ ಸೋಮೇಶ್ವರ ಘೈಸರು ಚಾಕಲದೇವಿಯ

೧೬. ಮಲ್ಲದೇವರಸರ ಆಱುವತ್ತಱ ಸ್ತಳದೊಳಗೆ ಅವರ ಕೈಯ್ಯಲು ತಮಗೆ ಕ್ರಯವಾಗಿ ಬಂದ ಯಿರ್ಪ್ಪ-

೧೭. ತ್ತು ಮತ್ತರ ಸ್ತಳದೊಳಗೆ ಶತ್ರದ ತ್ರಿಕೂಟೇಶ್ವರದೇವರ ಕೆಯ್ಯ ಮರ್ಯ್ಯಾದಲು ಹೂವೊಸಗೆಯಿ ಮಾರರಸ ಮತ್ತರೊಂದು। ಕೋರಿಸೆಟ್ಟಿ ಮತ್ತರೊಂದು ಸಾವಿರ ಕೊಳ್ಳಿಯ ಕೇಸವ ಸೆಟ್ಟಿಗೆ ಮ-

೧೮. ತ್ತರೊಂದು। ಚಾಮಿಸೆಟ್ಟಿಯ ಮಲ್ಲಿಸೆಟ್ಟಿಗೆ ಮತ್ತರೊಂದು। ಹೆದ್ದಿಸೆಟ್ಟಿಯ ಮಾಚಿಸೆಟ್ಟಿಗೆ ಮತ್ತ-

೧೯. ರೊಂದು। ಗಂಗರ ಹಲಿಸೆಟ್ಟಿಯವಂ ರೇಚಿಸೆಟ್ಟಿ ಭೈರವದೇವರ ನಿವೇದ್ಯಕಂ ಕೊಂಡುಕೊಟ್ಟ ಮತ್ತರೊಂದು . . .

೨೦. ಗೆಯ ರೇಚಿಸೆಟ್ಟಿ ಮತ್ತರೊಂದು। ಅನ್ತು ಹತ್ತು. ತಳಮುಂ ಭಕ್ತರುಮರ... ಸೋಮೇ-

೨೧. ಸ್ವರ ಘೈಸರ ಕೈಯಲು ಕ್ರಯಮಂ ಕೊಂಡು ಶ್ರೀ ಗವಚೇಶ್ವರ ದೇವರ ಅಂಗಭೋಗಕ್ಕಂ ನಿವೇದ್ಯಕ್ಕಂ ಆ

೨೨. ಸ್ಥಾನದಾಚಾರ್ಯ್ಯ ಸೂರ್ಯ್ಯರಾಸಿ ಪಂಡಿತರ ಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ ಮಾಡಿ ಕೊಟ್ಟ ಕೆ-

೨೩. ಯಿ ಮಾಣಿಕೇಸ್ವರ ಗಡಿಂಬದಲು ಮತ್ತರು ೧೦। ಇನ್ತೀ ಧರ್ಮ್ಮಮಂ ಎರಡಯಿನೂರ್ವ್ವರುಂ ಪ್ರ-

೨೪. ತಿಪಾಳಿಸುವರು। ಆ ತಿಥಿಯಲೆ ಹಗರಿಟ್ಟಗೆಯ . . . . .

೨೫. ಕೆರೆಯೊಳಗೆ ದೇವರ ವೀಳೆಯಕ್ಕೆ ಎತ್ತಿನ ಹೇಱಂಗೆ ೧ ಕತ್ತೆಯ ಹೇಱಂಗೆರಡು ಇನ್ತಿನಿ-

೨೬. ತುಮಂ ಬಿಟ್ಟರು। ಮೂವತ್ತಾಱುಂ ಬೀಡು ಮುಂಮುರಿದಂಡಂಗಳುಂ ಉಭಯನಾನಾದೇಸಿಗಳುಂ ಪಗರಿಟ್ಟಗೆಯ ತಳ ಮುಖ್ಯವಾಗಿ

೨೭. ದೇವರ ವೀಳೆಯಕ್ಕೆ ಎತ್ತಿನ ಹೇಱಿಂಗೆ ಅಡಕೆ ೪ ಕೋಣನ ಹೇಱಿಂಗೆ ೪ ಕತ್ತೆಯ ಹೇಱಿಂಗೆ ಅಡಕೆ ೨ ಇನ್ತಿನಿತುಮಂ ಬಿಟ್ಟರು

೨೮. ಈ ಧರ್ಮ್ಮವಂ ಪ್ರತಿಪಾಳಿಸಿದವರ್ಗ್ಗೆ ದಾನವಾಗಿ ಕೊ-

೨೯. ಟ್ಟ ಫಳಮಕ್ಕುಂ ಯೀ ಧರ್ಮ್ಮಪಂ ವಕ್ರಿಸಿದಂಗೆ ವಾರಣಾಸಿಯಲು ಸಹಸ್ರ ಕವಿಲೆಯಂ ಸಹಸ್ರ ಬ್ರಾಹ್ಮಣ-

೩೦. ರನಳಿದ ದೋಸಂ ಸಾಗ್ಗು। ಸ್ವದತಾಂ ಪರದತಾಂ ವಾಯೋ ಹರೇತಿ ವಸುಂಧರಾಂ ಸಸ್ಟಿರ್ವ್ವರ್ಷ ಸಹಸ್ರಾಣೆ ಮಿಷ್ಟಾ-

೩೧. ಯಾಂ ಜಾಯತೇ ಕ್ರಿಮಿ॥

೩

ಸ್ಥಳ: ಹನುಮಾನ್‌ದೇವರ ಗುಡಿಯ ಮುಖಮಂಟಪದಲ್ಲಿ ನಿಲ್ಲಿಸಿದ ಕಲ್ಲಿನ ಮೇಲೆ ಈ ಶಾಸನವಿದೆ. ಶಿವಲಿಂಗ, ನಂದಿ, ಪೂಜಾರಿ, ಆಕಳು-ಕರು, ಖಡ್ಗ, ಸೂರ್ಯ-ಚಂದ್ರರ ಶಿಲ್ಪಗಳಿವೆ. ಈ ಭಾಗದಲ್ಲಿ ಅಪರೂಪವಾಗಿ ಸಿಗುವ ಕರಿಕಲ್ಲಿನ ಮೇಲೆ ಶಾಸನವನ್ನು ಕೆತ್ತಲಾಗಿದೆ. ೨'x೪' ಅಳತೆಯ ಕಲ್ಲಿನಲ್ಲಿ ಸುಮಾರು ೨'x೩.೫' ಭಾಗದಲ್ಲಿ ಶಾಸನಾಕ್ಷರಗಳಿವೆ. ಕರಿಕಲ್ಲಿನ ಮೇಲ್ಭಾಗವನ್ನು ನುಣುಪಾಗಿ ಮಾಡಿಕೊಂಡು ೧" ಆಳತೆಯ ಅಕ್ಷರಗಳನ್ನು ಆಳವಾಗಿ ಕೊರೆಯಲಾಗಿದ್ದು, ಜನ ಎಣ್ಣೆಯನ್ನು ಶಾಸನದ ಮೇಲೆ ಸುರಿದಿರುವವರಿಂದ ಅಕ್ಷರಗಳು ಮಸುಕಾಗಿವೆ.

ಯಾದವ ಚಕ್ರವರ್ತಿ ಸಿಂಗಣದೇವನ(II) ಕಾಲದ ಶಾಸನವಿದಾಗಿದ್ದು ೩-೫ನೆಯ ಸಾಲುಗಳಲ್ಲಿ ಬರುವ "ಶ್ರೀಮತು ಯಾದವನಾರಾಯಣಂ ಪ್ರತಾಪ ಚಕ್ರವರ್ತ್ತಿ ಸಿಗಣದೇವರಾಜ್ಯದ ೨೯ನೆಯ ಸರ್ವ್ವ[ಧಾ*]ರಿ ಸೌತ್ಸರದ ಹಲುಗುಣ ಸು ೧೦ ಸೋ" ಎಂಬ ಮಿತಿಯು ಕ್ರಿಸ್ತಶಕ ೧೨೨೯ನೆಯ ಫೆಬ್ರುವರಿ ೫ನೆಯ ತಾರೀಖು ಸೋಮವಾರಕ್ಕೆ ಸರಿಹೊಂದುತ್ತದೆ.

ಪಗರಿಟಗೆಯ ಮಹಾಜನರು, ಸರ್ವಾಧಿಕಾರಿ ಪಾರಿಸಸೆಟ್ಟಿ, ಪಗರಟಗೆ - ೩೦೦ ರ ಸೆಟ್ಟಿಗುತ್ತ ರಾಮಿಸೆಟ್ಟಿ, ಮುಮ್ಮುರಿದಂಡರು, ಸರ್ವಾಯಂಗಳು, ಎಂಟು ಗಾಮುಂಡರು ಇವರೆಲ್ಲರೂ ಮಹಾಸಭೆಯಾಗಿ ನೆರೆದಿದ್ದಾಗ, ಕೇತಗಾಮುಂಡನ ಮಕ್ಕಳಾದ ರಾಮಗಾಮುಂಡ - ಸಿಂಗಗಾಮುಂಡರು ತಾವು ಪ್ರತಿಷ್ಠಾಪಿಸಿದ ರಾಮನಾಥದೇವರು, ಅಯಿನೂರ್ವ್ವೇಶ್ವರದೇವರು, ಬಾಚೇಶ್ವರದೇವರು, ಕೇತೇಶ್ವರದೇವರು ಹಾಗೂ ಚೌಡೇಶ್ವರಿದೇವಿ - ಈ ಐದು ದೇವರಿಗೆ ಮಹಾಜನರು ಬಿಟ್ಟ ಭೂದತ್ತಿ, ಗಾಣ, ಮನೆಯ ನಿವೇಶನಗಳನ್ನು ವಿವರಿಸುತ್ತದೆ.

● ಪಗರಟ್ಟಗೆ ಸರ್ವನಮಸ್ಯದುತ್ತಮ ಅಗ್ರಹಾರ ಪಾಂಡವವತ್ತಿ ಎಂದು ಕರೆಸಿಕೊಂಡಿದೆ. ಮಹಾಸಭೆ, ಸಿಡಿಲಬಾವಿ, ಎಂಟುಗಾಮುಡು, ಎಂಟು ಹಾಗವ

ಧರ್ಮಶ್ರೇಣಿ. ಅಸೇಸ ಸರ್ವ್ವಾಯಂಗಳು. ಮಾಣಿಕೇಶ್ವರದ ಕೋಲು. ಆಯಿನೂರ್ವ್ವರ ಹಟ್ಟಿ. ಜೇಡ ಹಟಗಾರಿರು – ಈ ಶಬ್ದಗಳನ್ನು ಗಮನಿಸಿ.

೧. ನಮಸ್ತುಂಗ ಸಿರಸ್ತುಂಗ ಚಂದ್ರಚಾಮರ ಸಂಭವೇ ತ್ರೈ-
೨. ಳೋಕ್ಯ ಸಂಭವೇ ಸ್ರೀ ಮೂಲಸ್ತಂಭಾಯ ಸಂಭಮವೇ॥ @ ಸ್ವಸ್ತಿ
೩. ಶ್ರೀಮತು ಯಾದವನಾರಾಯಣಂ ಪ್ರತಾಪಚಕ್ರವರ್ತ್ತಿ ಸಿ-
೪. ಗಣದೇವರಾಜ್ಯದ ೨೯ನೆಯ ಸರ್ವ್ವರಿ ಸೌತ್ಸರದ ಹಲು-
೫. ಗುಣ ಸು ೧೦ ಸೋ ಸ್ವಸ್ತಿಯಮನಿಯಮ ಸ್ವಾಧ್ಯಾ ಧನ ಧಾರ-
೬. ಣ ಮೋನಾನುಷ್ಠಾನ ಜಪಸಮಾಧಿಸೀಲಗುಣ ಸಂಪನರೌ-
೭. ಪಾಸನ್ನಾಗ್ನಿಹೋತ್ರ ದ್ವಿಜಗುರು ದೇವತಾ ಪೂಜಾತತ್ಪರ-
೮. ರು ಸರ್ವ್ವನಮಸ್ಕದುತ್ತಮ ಅಗ್ರಹಾರಂ ಪಾಂಡವ ದ-
೯. ತ್ತಿ ಹಗರಟ್ಟಗೆಯ ಅಸೇಸ ಮಹಾಜನಂಗಳುಂ ಸ್ವಸ್ತಿ
೧೦. ಸಮಸ್ತ ಪ್ರಸ್ತಿ ಸಹಿತಂ ಶ್ರೀಮನು ಮಹಾಪ್ರಧಾನರ ಬಾ-
೧೧. ತ್ತರ ನಿಯೋಗಾಧಿಪತಿ ರಸಲಪಸಿ ನಿಯೋಗಯೋಗಂಧರ
೧೨. ಪ್ರತಿಕಾರ್ಯ್ಯ ದುರಂಧರಂ ಮಂತ್ರಿಮಾಣಿಕ್ಯ ಸೀತಿ ಚಾ-
೧೩. ಉಕ್ಕನು ಶ್ರೀಮತು ಮಗರ ಮುರಾರಿ ಜಿಣತಪಳದೇ-
೧೪. ವನ ರಾಜ್ಯಭ್ಯುದೆಯ ಕರಣಕಾರಣನುಮಪ್ಪ ಹಗ-
೧೫. ರಟ್ಟಿಗೆ ೩೦೦ ಱ ಸರ್ವ್ವಾಧಿಕಾರಿ ಪಾರಿಸಸೆಟ್ಟಿಯುರುಂ@
೧೬. ಸ್ವಸ್ತಿ ಸಮಸ್ತ ವಸ್ತು ವಿಸ್ತೀರ್ಣ್ನಘೂರ್ಣ್ನವ ಪ್ರಣುತಾನೂತ ಭು-
೧೭. ವನಜನ ವಿಖ್ಯಾತ ಪಂಚಸತ ವೀರಸಾಸನ ಲಬ್ಧಾನೇಕ
೧೮. ಗುಣಗಣಾಲಂಕ್ರಿತ ಸೆತ್ಯ ಸೌಚ ಚಾರುಚಾರಿತ್ರ ನ-
೧೯. ಯ ವಿನಯ ವಿಜ್ಞಾನ ವೀರಾಪತಾರ ವೀರಬಣಂಬು ಸವ್ವಾ-
೨೦. ಯ ಧರ್ಮ್ಮ ಪ್ರತಿಪಾಳನ ವಿಸುದಗುಡ ಗರುಡಧ್ವಜ ವಿ-
೨೧. ರಾಜಮಾನೋನತ ಸಹಸ ಸತ್ಯಬಳ ವೀರಲಕ್ಷ್ಮೀ ಸಮಾ-
೨೨. ಲಿಂಗಿತ ವಕ್ಷಸ್ತಳ ತ್ರಿಭುವನ ಪರಾಕ್ರಮ್ಯಾನತರು-
೨೩. ಮಪ್ಪ ಹಗರಟಗೆ ೩೦೦ ಸೆಟ್ಟಿಗುತ್ತ ರಾಮಿಸೆಟ್ಟಿಯು-

೨೪. ರು ಸ್ತಳ ಸಮಸ್ತ ಮುಂಮುರಿದಡಂಗಳುಂ ಅಂನ್ತು ಮ-
೨೫. ಹಾಸಭೆಗಳು ಸಿಡಿಲಬಾವಿಯ ಶ್ರೀ ರಾಮನಾಥದೇವ-
೨೬. ರಲ್ಲಿ ತಮ್ಮೊಳೀಕಸ್ತರಾಗಿ ಸಿಹ್ವಾಸನಾಧಿಪತಿಗಳಾಗಿ ಕು-
೨೭. ಳಿದಲ್ಲಿ ಸಗರ ಸಂಕನಕೆಜಿ ಮೇರೆ ಹೆಬ್ಬಟ್ಟೆಗಾಜಿ ಎಂಟು
೨೮. ಗಾಮುಡು ಎಂಟು ಹಾಗದೆ ಧರ್ಮಶ್ರೇಣಿ ಮುಖ್ಯ-
೨೯. ವಾಗಿ ಹಗರಟಗೆಯ ಸ್ತಳದ ಕಾಳಗಮುಡ ಮುಖ್ಯ
೩೦. ಆಸೇಸ ಸರ್ವ್ವಾಯಂಗಳು ಅಂನ್ತು ಮಹಾಸಭೆಗಳ ಸಂ-
೩೧. ನಿಧಾನದಲು ಕೇತಗಾಮುಡನ ಮಕಳು ರಾಮಗಾಮು
೩೨. ಡ ಸಿಂಗಗಾಮುಡಂಗಳು ತಾಮು ಮಾಡಿಸಿದ ಪ್ರತಿಷ್ಟೆ ಶ್ರೀರಾ-
೩೩. ಮನಾಥದೇವರುಂ ಆಯಿನೊರ್ವ್ವೇಶ್ವರದೇವರುಂ ಬಾಚೇಶ್ವ-
೩೪. ರದೇವರುಂ ಕೇತೇಶ್ವರದೇವರುಂ ಶ್ರೀಚೌಡೇಶ್ವರಿದೇವಿಯ-
೩೫. ರುಂ ಅನ್ತು ಅಯ್ದುಸ್ಥಾನ ಮುಖ್ಯ ಎಲ್ಲಾ ದೇವರಿಗಂ ಅಂಗ-
೩೬. ಭೋಗ ರಂಗಭೋಗ ಜೀರ್ನ್ನೋದ್ಧಾರ ನಂದಾದೀವಿಗೆ ನಯವೇದ್ಯ ಪ.
೩೭. ಸರ್ವ್ವಂ ಮುಖ್ಯವಾಗಿ ಶ್ರೀಕಾರ್ಯ್ಯಕೆ ಮಹಾಜನಂಗಳು
೩೮. ಕೊಟ್ಟ ಕೆಯಿ ವೂರೊಡೆಯ ಬಾಚರಸನ ಮಾನ್ಯದ ಕೆಯಿಂ
೩೯. ಪಡುವಣ ದಂಡಿಗೆಯಲು ನೆಟ್ಟ ಲಿಂಗಮುದ್ರೆಯ ಕಲಿಂ
೪೦. ಪಡುವಲು ಮಾಣಿಕೇಶ್ವರದ ಕೋಲಲು ಮತ್ತ ೬ ಸಂಪಿಗೆಯ ಮ-
೪೧. ಡುವಿಂ ತೆಂಕಲು ತೋಟ ಮಾಣಿಕೇಶ್ವರದ ಮತ್ತ ಕಾವಣ್ಣನಂ
೪೨. ನದಿಯ ಮೂಡಲು ನಂದಾದೀವಿಗೆಗೆ ಗಾಣ ೧ ಆ ಗಾ-
೪೩. ಣದಿಂ ತೆಂಕಲು ಮನೆ ೧ ಆಯಿನೂರ್ವ್ವರ ಪಟ್ಟಿಯಿಂ ಪಡುವಲು
೪೪. ಗರನಿಯಿಂ ಬಡಗಲು ಪನಿಕೆಯು ಆಗಲ ನೀಳ ಪನಿಕಮ್ಮಮ
೪೫. ಮ ೧ ರಾಮನಾಥದೇವರಿಗೆ ಮೂಡಲು ತೋಂಟ ಮ ೧॥ ಇಂನ್ತಿನಿತಂ ಕುಂಜು-
೪೬. ಧಾರನವಾಗಿ ಮಹಾಜನಂಗಳಿಗೆ ಶೋತ್ರದಿರ ತಿಙುವ ೯೨ ಜೇಡ ಪಟಗಾ-
೪೭. ಜಿರು ದೇವರಿಗೆ ಬಟ್ಟಮು ಚಯಿತ್ರದಲು ಒಕ್ಕಲಲು ಹಾಗ ೧ ಪಯಿತ್ರನಲು

೪೮. ೨ ಕೈಲಲು ಹಾಗ ೧ ದಸರಿಯ ಮೊರನಲು ಕೊಟ ಲಾಭ ದಸರಿ.

೪

ಸದ್ಯ ಪರಿಜನಕೇರಿಯಲ್ಲಿರುವ ವೆಂಕಟರಮಣನ ಗುಡಿಯ ಮುಂದೆ ನಿಂತಿರುವ ಕಲ್ಲಿನಲ್ಲಿ ಈ ಶಾಸನವಿದೆ. ೧'x ೫' ಅಳತೆಯ ಸೇದಿಬಂಡಿಯಲ್ಲಿ ಮೇಲಿನ ಭಾಗದಲ್ಲಿ ಸೂರ್ಯ-ಚಂದ್ರ, ಶಿವಲಿಂಗ, ಆಕಳು-ಕರುಗಳ ಶಿಲ್ಪಗಳಿವೆ. ೧/೨'' ಗಾತ್ರದ ಅಷ್ಟೇನೂ ಆಳವಲ್ಲದ ಅಕ್ಷರಗಳನ್ನು ಕೆತ್ತಲಾಗಿದ್ದು, ಅಲ್ಲಲ್ಲಿ ಚಕ್ಕಳಿ ಹಾರಿಹೋಗಿದೆ.

ಯಾದವ ಚಕ್ರವರ್ತಿ ಸಿಂಘಣದೇವನ(II) ಆಳ್ವಿಕೆಯ ಕಾಲದ ಶಾಸನವಿದಾಗಿದ್ದು, ೧೭-೨೦ ಸಾಲುಗಳಲ್ಲಿರುವ '' ಯಾದವನಾರಾಯಣ ಪ್ರತಾಪ ಚಕ್ರವರ್ತಿ ಸಿಂಗಳದೇವರುಶದ ೨೧ನೆಯ ವಿಕ್ರಮ ಸಂವತ್ಸರದ ಆಶಾಡದಮವಾಸೆ ಆದಿವಾರದಂದು ಸೂರಿಯ ಗ್ರಹಣ'' ಎಂಬ ಮಿತಿಯು ಕ್ರಿಸ್ತಶಕ ೧೨೨೦ನೆಯ ಜೂನ್ ೨ನೆಯ ತಾರೀಖು ಮಂಗಳವಾರಕ್ಕೆ ಸರಿಹೊಂದುತ್ತಿದ್ದು, ಅಂದು ಸೂರ್ಯಗ್ರಹಣವಿರುವುದೂ ನಿಜವಿರುತ್ತದೆ.

ಚಾಳುಕ್ಯ ಚಕ್ರವರ್ತಿ ಹಿರಿಯ ಪೆರ್ಮಾಡಿರಾಯನ ಪರಮಾರಾಧ್ಯನಾದ ಅಹುಮಲ ಚಟ್ಟಯ್ಯನ ದತ್ತಿ ಈ ಹಗರಿಟಗೆ ಎಂದು ಹೇಳುತ್ತದೆ. ಸೇನಬೋವ ತಿಪ್ಪರಸ ಮತ್ತು ಚಾಮಿಕಬ್ಬೆಯರ ಮಗನಾದ ಸಿರಿಯಣ್ಣನು ಹಗರಿಟಗೆಯ ಮಹಾಜನರು ೫೦೦, ಹಗರಿಟಗಿ ೩೦೦ ಐ ಸೆಟ್ಟಿಗುತ್ತ ರಾಮಿಸೆಟ್ಟಿ, ಮುಂಮುರಿದಂಡಂಗಳು ಮತ್ತು ಇನ್ನಿತರರ ಸಮ್ಮುಖದಲ್ಲಿ ತ್ರಿಪುರಾಂತಕದೇವ, ಉಮಾಭವ, ಕೇಶವದೇವರಿಗೆ ಚಂದ್ರಶಿವ ಪಂಡಿತರ ಕಾಲ್ತೊಳೆದು ಬಿಟ್ಟ ಭೂದತ್ತಿಯನ್ನು ವಿವರಿಸುತ್ತದೆ.

೧. ಣೆ ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈ-

೨. ಲೋಕ್ಯ ನಗರಾರಂಭ ಮೂಲಸ್ತಂಭಾಯ ಶಂಭುವೇ ಗಣಪ್ರ

೩. ಶಸ್ತಿ॥ ಶ್ರೀಮಚಾಳುಕ್ಯ ಚಕ್ರವರ್ತ್ತಿ ಹಿರಿಯ ಪೆರ್ಮ್ಮಾಡಿ-

೪. ರಾಯನ ಪರಮಾರಾಧ್ಯ ಅಹುಮಲ ಚಟ್ಟಯ್ಯ-

೫. ಂಗಳ ಬಿಟ ದತ್ತಿ ಹಗರಿಟಗೆಯಲು॥ ಯಲ್ಲಿ-

೬. ಯ ಸೇನಬೋವ ಸುಜನಾಗ್ರಣಿ ತಿಪ್ಪರಸಂಗೆ ತಾಂ

೭. ಮನೋವಲ್ಲಭೆ ಚಾಮಿಕಬ್ಬೆಗೆ ಮನೋತ್ಸವ-

೮. ದಿಂದಮೆ ಪುಟ್ಟಿ ಜೇಷ್ಟ ವಾಗುವಲ್ಲಭೆಯ ಪ್ರ-

೯. ಸಾದದೊಳಿ ಧರ್ಮ್ಮವ ಮಾಡಿದನಿಂತು ಮಂದಾರ

೧೦. ಭೂವಲ್ಲಭೆಯೆಂದು ಬಂಣ್ಣಿಸಲು ತಾಂ ನೆಗಳ್ದಂ ಸಿರಿಯ-

೧೧. ಣನುತ್ತಮ॥ಯಲ್ಲಿರುವ ಅಯನೂರ್ವ್ವರು ತಾ-.

೧೨. .ಮ ಮಹೋತ್ಸವದೆ ಬಂದು ವುಂನತಸ್ಥಳದೊಳು ಶ್ರೀವಲ್ಲಭೆ
೧೩. ಮಾಡಿದ ಮ . . ರಿಗೆಲ್ಲರಿಗಂತಾ ಗವಿಗ ತ್ರಿಪುರಾಂನ್ತಕನೊಳು
೧೪. ಕಿಂನ್ನರ ಕೇಶವನೆಂಬರುಮುಂನ್ನತಿಯಂ ಮಾಡಲಿಂದು ನೆ-
೧೫. ಸಿದರಿಗಳುಮುಂನ್ನತಿಯ ಮಾಡಿ ಅವಮಮುಂನ್ನತಿ-
೧೬. ಯಂ ಮಾಡು ಸಿರಿಷಧರ್ಮಮಾಗೆ॥ @ಸ್ವಸ್ತಿ ಶ್ರೀ-
೧೭. ಮತು ಯಾದವ ನಾರಾಯಣ ಪ್ರತಾಪ ಚ-
೧೮. ಕ್ರವರ್ತ್ತಿ ಸಿಂಗಳದೇವವರುಶದ ೨೧ನೆಯ ವಿಕ್ರಮಸಂ-
೧೯. ವತ್ಸರದ ಆಶಾಡದಮವಾಸೆ ಆದಿವಾರದಂದು
೨೦. ಸೂರಿಯ ಗ್ರಹಣದಲ್ಲು ಶ್ರೀಮತು ಸರ್ವ್ವ-
೨೧. ನಮಶ್ಯದಗ್ರಹಾರಂ ಹಗರಿಟಗೆಯ-
೨೨. ಶೇಷ ಮಹಾಜನಂಗಳೈಯಿನೂರ್ವ್ವರುಂ ಹಗರಿ-
೨೩. ಟಗಿ ೩೩೦೦ ನೂಱ ಸೆಟ್ಟಿಗುತ್ತ ರಾಮಿಸೆಟಿ ಮುಖ್ಯವಾ-
೨೪. ಗಿ ಸ್ತಳ ಸಮಸ್ತ ಮುಂಮುರಿದಂಡಂಗಳುಂ ಶ್ರೀ-
೨೫. ಮನುಮಹಾಮಂಡಳೇಶ್ವರಂ ಚಂಮಡಿಗ ದೇವರಸ-
೨೬. ರ ರಾಯಭಾರಿ ಆಚಯ್ಯನುಂ ಶ್ರೀಮತು
೨೭. . . . ಯರ ಹೆಗಡೆ ಬಾಚರಸನು ಅಂನ್ತು
೨೮. . . . ಸಭೆಗಳ ಮುಂದೆ ಮಾಚಿದೇವರ ಸಂಕ-
೨೯. . . . ಪ್ರಭು ಸಂಕರಸ ಬಾಚರಸರ ತಂದೆ
೩೦. . . ಮತ್ತವೊಳಗೆ ಚಂದ್ರಸಿವ ಪಂಡಿತರ ಕಾಲ
೩೧. . . ಬಡಗಲು ಮೂಡಲು ಬಾಚರಸನ ಸೋ-
೩೨. . . ಮನೆ ಬಡಗಲು ತಿಪಿಸೆಟಿಯ ಸೋಮನ
೩೩. . . ಪಡುವಲು ಮತಸೀಮೆ ವಲನ್ತು ಆ ಸರವ-
೩೪. ಯುರೊಳಗೆ ಅಸತು ಅನ್ಯಾಯ ಒಸಗೆ ಊರಾ
೩೫. . . . . ಅರುವಣ ಏನು ಕೊಟ್ಟದಂ ತಾಶಿ-

೩೬. ವ್ಯ ಕೊಡೆಯ ಸಂಕರಸ ಬಾಚರಸಂಗಳ ಕೈ-

೩೭. ಯಲು ಸೇನಬೋವ ಸಿರಿವಣ್ಣನು ತ್ರಿಪು-

೩೮. ರಾಂತಕದೇವರಿಗಂ ಉಮಭವ ಕೇಶವದೇವ-

೩೯. ರ ನಿವೇದ್ಯ ಚೈಯಿತ್ರ ಪವಿತ್ರಕೆ ಕ್ರಯಂ-

೪೦. ಕೊಂಡು ಸರ್ವ್ವನಮಶ್ಯವಾಗಿ ಬಿಟ್ಟ ಮತ್ತರು ೪ ಮತ್ತಂ

೪೧. ಆ ೨೦೦ ಜೊಜಿಳೊಗೆ ಆ ಸಂಕರಸ ಮತ್ತು

೪೨. ಮಾನು ಭಾಯಕೆ ಬಂದ ಕೆಯೊಳಗೆ ಬಿಟ್ಟ

೪೩. ಮತ್ತರು ೫ ಇಮತವಯಿದಿಚಿ ಅರುವಣವ

೪೪. ಲಾರುಂ ವೈಜರಸನ ಬಳ

೫

ಅಗಸೆ ಬಾಗಿಲಿನ ಗೋಡೆಯಲ್ಲಿ ಈ ನಿಷಿಧಿ ಶಾಸನವನ್ನು ಸೇರಿಸಿ ಕಟ್ಟಲಾಗಿದೆ. ೧'x೨' ಅಳತೆಯ ಕರಿಕಲ್ಲಿನ ಮೇಲ್ಭಾಗದಲ್ಲಿ ಶಿಲ್ಪವಿದ್ದು, ಕೆಳಭಾಗದಲ್ಲಿ ಚಿಕ್ಕ ಅಳತೆಯಲ್ಲಿ ಸುಂದರವಾದ ಅಕ್ಷರಗಳನ್ನು ಆಳವಾಗಿ ಕೆತ್ತಲಾಗಿದೆ.

ಶಾಸನದ ಸಾಲು ೭-೯ರಲ್ಲಿ ಬರುವ "ಗಿರಿಪಾರಾವಾರ ರುದ್ರಪ್ರಮೆ ಶಕಂ|| ಶ್ರೀ ತಾರಣ ಸಂವತ್ಸರದೊಳು|| ಆಷಾಢಮೇಕಾದಶಿ ಶಿದವಾದಂತಾ ದಿನ ಶುಕ್ರವಾರ" ಎಂಬ ಮಿತಿಯು ೨೮ ಜೂನ್ ೧೨೨೪ನೆಯ ಕ್ರಿಸ್ತಶಕಕ್ಕೆ ಸರಿಹೊಂದುತ್ತದೆ.

ಮೂಲಸಂಘ ಪುಸ್ತಕಗಚ್ಛ ದೇಸಿಯಗಣ ಗೋಮಿನಿ ಅನ್ವಯಕ್ಕೆ ಸಂಬಂಧಿಸಿದ ಕೊಂಡಕುಂದಯಾದ್ರಿಯ ದೇವಚಂದ್ರನೆಂಬ ಜೈನಗುರುವು ಸನ್ನಸನ ವಿಧಿಯಿಂದ ಮರಣ ಹೊಂದಿದುದನ್ನು ಹಾಗೂ ಅವರ ಪ್ರತಿಮೆಯನ್ನು ಬಬ್ಬರ ಕಾಳಿಸೆಟ್ಟಿ ಮಾಡಿಸಿದುದನ್ನು ತಿಳಿಸುತ್ತದೆ.

೧. ಶ್ರೀ ನಮಃ ಸಿದ್ಧಾಯ ಶ್ರೀಮತ್ಪರಮಗಂಭೀರ ಸ್ಯಾದ್ವಾದಾಮೋ-

೨. ಘ ಲಾಂಛನಂ ಜೀಯಾತ್ತ್ರೈಳೋಕ್ಯನಾಥಸ್ಯ ಸಾಸನಂ

೩. ಜಿನಸಾಸನಂ ಶ್ರೀಯುತ ಮೂಲಸಂಘ ಸರಸಿಸ್ತಿತ ಪೊಸ್ತಕ-

೪. ಗಚ್ಛಮೆ ದೇಸಿಯ ಗಣಾಬ್ಜ ಕರ್ಣಿಕ ಗೋಮಿನಿಯಾನ್ವಾ-

೫. ಯ ಕೊಂಡಕುದ್ರಿಯಾದ್ರಿಯ . . ಯಿಂಗಳೇಸ್ವರ ಪು-

೬. ರ ಪ್ರತಿಬದ್ಧ ವಿಳಾಸಮೆಂಬ ಓಪಾಯದ ದೇವಚಂದ್ರರೆನೆ

೭. ಕೂರಿಸಿ ಕ್ಷಮೆಯುನಾಂತಳು . . ಯೊಳು|| ಗಿರಿಪಾರಾ-

೮. ವಾರ ರುದ್ರಪ್ರಮೆ ಶಕಂ॥ ಶ್ರೀತಾರಣಸಂವತ್ಸರದೊಳು॥ ಆ-

೯. ಷಾಢಮೇಕಾದಶಿ ಶಿದವಾದಂತಾ ದಿನ ಶುಕ್ರವಾರ . . . ತಿರೆ.

೧೦. ಮಳೋಗದ್ಯದ್ವಿನ ಸಂನ್ಯಸನ ಮಾಡಿಸಿದ ಧರ್ಮದಾಚಾರ ಸ್ಥಿರ-

೧೧. ಮಾಗಲು ಸ್ವರ್ಗಮಂ ಪೊರ್ದ್ದಿದನೆಲ್ಲ ಮಹಾಗುಣಂ

೧೨. ದೇವಚಂದ್ರ ಬ್ರತೀಂದ್ರಂ॥ ಬಬ್ಬರ ಕಾಳಿಸೆಟ್ಟಿಯರು ಮಾ

೧೩. ಡಿಸಿದ ಪ್ರತಿಮೆ॥

೬

ಭೀಮನಗುಡಿಯ ಮುಂದೆ ಬಿದ್ದಿರುವ ೧'x ೧.೫' ಅಳತೆಯ ಕರಿಕಲ್ಲಿನಲ್ಲಿ ಈ ಶಾಸನವಿದೆ. ಶಾಸನದ ಮೂರು ಭಾಗಗಳು ಒಡೆದು, ಕಳೆದುಹೋಗಿವೆ. ಸುಂದರವಾಗಿ ಆಳವಾಗಿ ಕೆತ್ತಿದ ೩/೪". ಗಾತ್ರದ ಅಕ್ಷರಗಳನ್ನೊಳಗೊಂಡಿದೆ.

ಯಾದವ ಚಕ್ರವರ್ತಿ ಸಿಂಘಣದೇವನ(II) ಕಾಲದ ಶಾಸನ ಇದಾಗಿದ್ದು, ಶಾಸನದ ೨-೫ ಸಾಲುಗಳಲ್ಲಿ ಬರುವ "ಯಾದವ ನಾರಾಯಣಂ . ತಾಪ ಚಕ್ರವರ್ತ್ತಿ ಸಿಂಗಣದೇವರ್ಸ್ಸಿದ ೧೯ನೆ. ಬಹುಧಾಂನ್ಯ ಸಂವತ್ಸರದ ಸೋಮ . ಹುಳ ೨ ಆದಿವಾರದಂದು" ಎಂಬ ಮಿತಿಯು ಕ್ರಿಸ್ತಶಕ ೧೨೧೮ನೆಯ ಅಕ್ಟೋಬರ್ ೭ಕ್ಕೆ ಸರಿಹೊಂದುತ್ತದೆ.

ಹಗರಿಟಗೆಯ ಮಹಾಜನರು, ಸೆಟ್ಟಿಗುತ್ತ ರಾಮಿಸೆಟ್ಟಿ, ಮುಂಮುರಿದಂಡರು, ಹಂನ್ನಿಚ್ಛಾಸಿರ ಬಿಲ್ಲಮೂನೂರ್ವರು ಮಹಾಸಭೆಯಾಗಿ ನೆರೆದಿದ್ದಾಗ ಶ್ರೀ ಸ್ವಯಂಭು ಉಗ್ರಭೀಮೇಶ್ವರ ಸ್ಥಾನದಾಚಾರ್ಯ ಬ್ರಹ್ಮರಾಸಿ ಪಂಡಿತರ ಕಾಲ್ತೊಳೆದು ಬಿಟ್ಟ ದತ್ತಿಯೊಂದನ್ನು ಉಲ್ಲೇಖಿಸುವಂತಿದೆ.

ಗಮನಿಸಿ: ಹಂನ್ನಿಚ್ಛಾಸಿರ ಬಿಲ್ಲಮೂನೂರ್ಬ್ಬರು.

೧. ಸ್ವಸ್ತಿ ಶ್ರೀಮತು ಪ್ರಸಸ್ತಿ ಸಹಿತಂ ಶ್ರೀ-

೨. ಮತು ಯಾದವನಾರಾಯಣಂ

೩. ತಾಪ ಚಕ್ರವರ್ತ್ತಿ ಸಿಂಗಣದೇವರ್ಸ್ಸಿದ ೧೯ನೇ

೪. ಬಹುಧಾಂನ್ಯ ಸಂವತ್ಸರದ ಸೋಮ

೫. . ಹುಳ ೨ ಆದಿವಾರದಂದು ಸ್ರೀಮತು

೬. . ಗರಟಗೆಯಶೇಷ ಮಹಾಜನಂಗಳುಂ

೭. . . ಟಗೆ ೩೦೦ ಱ ಸೆಟ್ಟಿಗುತ್ತ ರಾಮಿ-

೮. . ಖ್ಯವಾಗಿ ಸ್ತಳ ಸಮಸ್ತ ಮುಂಮುರಿ-

೯. . . ಗಳುಂ ಸಂಗಮದೇವನ ರಾಜ್ಯಾಧ್ಯ-

೧೦. . . ಹಂನ್ನಿಚ್ಛಾಸಿರ ಬಿಲ್ಲಮೂನೂರ್ಬ್ಬ-

೧೧. . . ಮಹಾಸಭೆಗಳ ಸಂ . .

೧೨. . . . ಲು ಸ್ರೀ ಸ್ವಯಂಭು ಸ್ರೀ ಭೀಮ-

೧೩. . . . . . ಚಾರ್‍ಯ್ಯ ಬ್ರಹ್ಮರಾಸಿ

೧೪. . . . . . ಅಯ್ಯರು॥ . . . .

೧೫. . . . . . . ರು ಅ . . . .

೭

ಭೀಮನ ಗುಡಿಯ ಮುಂದೆ ಬಿದ್ದಿರುವ ವೀರಗಲ್ಲಿನಲ್ಲಿ ಈ ಶಾಸನದ ತುಣುಕಿದೆ. ೨'x೨' ಗಾತ್ರದ ಕಲ್ಲಿನಲ್ಲಿ ಮೇಲ್ಭಾಗದಲ್ಲಿ ವೀರ ಬಿದ್ದಿರುವ. ೨ನೆಯ ಹಂತದಲ್ಲಿ ವೀರರಿಬ್ಬರಿರುವ. ೩ನೆಯ ಹಂತದ ಕೆಳಭಾಗದಲ್ಲಿ ೨''ನ ಭಾಗದಲ್ಲಿ ಮಾತ್ರ ಶಾಸನವಿದೆ. ಸುಮಾರು ೧೩ನೆಯ ಶತಮಾನದ ಸುಂದರವಾದ ಅಕ್ಷರಗಳನ್ನು ಹೊಂದಿದೆ. ಇಲ್ಲಿಯೇ ತುರುಗೋಳಿಗೆ ಸಂಬಂಧಿಸಿದ ಇನ್ನೂ ಆರು ವೀರಗಲ್ಲುಗಳಿದ್ದು. ಶಾಸನವನ್ನು ಹೊಂದಿರುವದಿಲ್ಲ.

ಯುದ್ಧದಲ್ಲಿ ಮರಣ ಹೊಂದಿದ ವೀರನ ಬಗ್ಗೆ ಹೇಳುತ್ತ. ಬಹುಶಃ ಆತನ ತಮ್ಮ ರೇವಯ್ಯ ಈ ವೀರಗಲ್ಲನ್ನು ಮಾಡಿಸಿದನೆಂದು ಹೇಳುವಂತಿದೆ.

೧. . . . . ಸನ ಮಗ ದೇ-

೨. . . ಕದನದಿ ಗೆಲ್ದನು ಕೊಂದ

೩. ಆತನ ತಂಮ ರೇವಯ್ಯ.

ARSIE 1959-60

ಹಗರಿಟಗೆ ಶಾಸನಗಳು ಸಂಖ್ಯೆ ೪೬೧ರಿಂದ ೪೭೯ [ಸಂಕ್ಷಿಪ್ತ ವಿವರಣೆ]

೪೬೧ ಪ್ರಾಥಮಿಕ ಶಾಲೆಯಲ್ಲಿ ಇಟ್ಟಿರುವ ತ್ರುಟಿತ ಕಲ್ಲು.

ಶಕ ೯[೦೦]. ಅರಸನ ಹೆಸರಿನಲ್ಲ. ತ್ರುಟಿತ. ಸು. ೧೨ನೆಯ ಶತಮಾನ. ಸುವರ್ಣಪುರವನ್ನು ಹೆಸರಿಸುತ್ತದೆ.

೪೬೨ ಅದೇ ಸ್ಥಳ. ಕಲ್ಯಾಣ ಚಾಲುಕ್ಯ ಜಗದೇಕಮಲ್ಲ[II] ಕಲ್ಯಾಣದಿಂದ ಆಳುವುದನ್ನು ಉಲ್ಲೇಖಿಸುತ್ತದೆ. ಮಿತಿಯಿಲ್ಲ. ತ್ರುಟಿತ.

೪೬೩ ಅದೇ ಸ್ಥಳ. ಹೆಸರಿಲ್ಲ. ಮಿತಿಯಿಲ್ಲ. ತ್ರುಟಿತ. ಸು. ೧೨ನೆಯ ಶತಮಾನ. ಮಹಾಜನರನ್ನು ಹೆಸರಿಸಿ, ಭೂದತ್ತಿಯನ್ನು ತಿಳಿಸುತ್ತದೆ.

೪೬೪ ಭೀಮನ ಗುಡಿಯ ಪಕ್ಕದ ಭಾವಿಯ ಹತ್ತಿರದಲ್ಲಿ ಬಿದ್ದ ಕಲ್ಲಿನ ತುಣುಕು. ಅರಸನ ಹೆಸರಿಲ್ಲ, ಮಿತಿಯಿಲ್ಲ, ತ್ರುಟಿತ.

೪೬೫. ಈ ಲೇಖನದೊಂದಿಗೆ ಪ್ರಕಟಗೊಂಡ ಶಾಸನ ಸಂಖ್ಯೆ ೫.

೪೬೬. ಬಸವಣ್ಣನ ಗುಡಿಯ ಕಳಸದ ಸುತ್ತಲೂ ಕೆತ್ತಿದೆ. ಕಲ್ಯಾಣ ಚಾಲುಕ್ಯ ಜಗದೇಕಮಲ್ಲ ವರ್ಷ ೧೦ ಪ್ರಭವ, ಫಾಲ್ಗುಣ, ಆದಿತ್ಯವಾರ. ದೇವಸ್ಥಾನದ ಮಂಟಪ ಮತ್ತು ಕಳಸ ಕಟ್ಟಿಸುವದಕ್ಕಾಗಿ ૩೦೦ ಗದ್ಯಾಣಗಳನ್ನು ದಾನವಾಗಿ ನೀಡಿದುದನ್ನು ತಿಳಿಸುತ್ತದೆ.

೪೬೭ ಅದೇ ಸ್ಥಳ. ಅರಸನ ಹೆಸರಿಲ್ಲ. ಕೀಲಕ, ಆಷಾಢ ಶುದ್ಧ. ವಡ್ಡವಾರ. ತ್ರುಟಿತ. ಸು ೧೨ನೆಯ ಶತಮಾನದ ಅಕ್ಷರಗಳಲ್ಲಿ ಮನೆಯ ನಿವೇಶನ ಮತ್ತು ಭೂದತ್ತಿ ನೀಡಿದುದನ್ನು ದಾಖಲಿಸುತ್ತದೆ.

೪೬೮ ಹನುಮಾನ್ ದೇವಾಲಯದ ಗೋಡೆಗೆ ಒರಗಿಸಿರುವ ನಾಗಪ್ರತಿಮೆ ಕೆತ್ತಿದ ಕಲ್ಲು. ಅರಸನ ಹೆಸರಿಲ್ಲ. ಮಿತಿಯಿಲ್ಲ. ತುಣುಕು. ಅಳಿಸಿ ಹೋಗಿದೆ. ಶಾಸನಕಲ್ಲಿನ ಮೇಲೆ ನಾಗ ಪ್ರತಿಮೆಯನ್ನು ಕೆತ್ತಲಾಗಿದೆ. ಸು ೧೫ನೆಯ ಶತಮಾನದ ಅಕ್ಷರಗಳು.

೪೬೯. ಈ ಲೇಖನದೊಂದಿಗೆ ಪ್ರಕಟಗೊಂಡ ಶಾಸನಸಂಖ್ಯೆ ೭.

೪೭೦. ಭೀಮನಗುಡಿಯ ಪಕ್ಕದ ಬಾವಿಯ ಹತ್ತಿರ ಬಿದ್ದಿರುವ ಕಲ್ಲು. ಚಾಲುಕ್ಯತ್ರಿಭುವನಮಲ್ಲ. ಮಿತಿಯಿಲ್ಲ. ಒಡೆದು ಹೋಗಿವೆ. ಶಾಸನದ ಮೊದಲ ಭಾಗ ಮಾತ್ರ ಉಳಿದಿದೆ.

೪೭೧. ಅಗಸಿಯ ಹತ್ತಿರ ಇಟ್ಟಿರುವ ಕಲ್ಲು. ಚಾಲುಕ್ಯ ತ್ರಿಭುವನಮಲ್ಲ ವರ್ಷ ಕ್ರೋಧಿ. ಬಹುಭಾಗ ಒಡೆದುಹೋಗಿದೆ. ವ್ಯಕ್ತಿಯೊಬ್ಬನನ್ನು ಹೊಗಳುತ್ತ ರತ್ನಶಿವನಿಗೆ ನೀಡಿದ ದತ್ತಿಯನ್ನು ಹೇಳುತ್ತದೆ. ಹಲವಾರು ಸುಂಕಗಳಿಂದ ಬರುವ ಆದಾಯವನ್ನು ಉಲ್ಲೇಖಿಸುತ್ತದೆ.

೪೭೨ ದ್ಯಾಮವ್ವನ ಕಟ್ಟೆಯ ಹತ್ತಿರ ಬಿದ್ದಿರುವ ಕಲ್ಲು. ಕಳಚೂರ್ಯ . . . . ಪುಷ್ಯ ಸು ೧೪. ಸೋಮವಾರ. ಉತ್ತರಾಯಣ ಸಂಕ್ರಾಂತಿ. ಒಡೆದಿದೆ. ಸೂರ್ಯಗ್ರಹಣ ನಿಮಿತ್ತವಾಗಿ ತ್ರಿಕೂಟೇಶ್ವರದೇವರ ಪೂಜೆ ನೈವೇದ್ಯಗಳಿಗಾಗಿ ಭೂದತ್ತಿ ನೀಡಿದುದನ್ನು ಹೇಳುತ್ತದೆ. ದತ್ತಿಯನ್ನು ಚಿಕ್ಕಜೀಯ ಪಂಡಿತನ ಕಾಲ್ತೊಳೆದು ಬಿಡಲಾಯಿತು. ಪಗರಿಟ್ಟಿಗೆ ಮಹಾಜನರ ಪ್ರಶಸ್ತಿಯನ್ನು ಹೇಳುತ್ತದೆ. ಅರಸನಿಗೆ ರಾಯನಾರಾಯಣ ಎಂಬ ಬಿರುದಿದೆ.

೪೭೩ ಇದೇ ಲೇಖನದೊಂದಿಗೆ ಪ್ರಕಟವಾದ ಶಾಸನಸಂಖ್ಯೆ ೪.

೪೭೪ ಇದೇ ಲೇಖನದೊಂದಿಗೆ ಪ್ರಕಟವಾದ ಶಾಸನಸಂಖ್ಯೆ ೩.

೪೭೫ ಇದೇ ಲೇಖನದೊಂದಿಗೆ ಪ್ರಕಟವಾದ ಶಾಸನಸಂಖ್ಯೆ ೧.

೪೭೬ ಇದೇ ಲೇಖನದೊಂದಿಗೆ ಪ್ರಕಟವಾದ ಶಾಸನಸಂಖ್ಯೆ ೧.

೪೭೭ ಇದೇ ಲೇಖನದೊಂದಿಗೆ ಪ್ರಕಟವಾದ ಶಾಸನಸಂಖ್ಯೆ ೨.

೪೭೮ ಭೀಮನ ಗುಡಿಯ ಹತ್ತಿರ ಬಿದ್ದಿರುವ ಕಲ್ಲು. ಕಲ್ಯಾಣ ಚಾಲುಕ್ಯ ತ್ರಿಭುವನಮಲ್ಲ ಕಲ್ಯಾಣದಿಂದ ಆಳುವಾಗ ರಚಿತಗೊಂಡಿದೆ. ಚಾಲುಕ್ಯ ವಿಕ್ರಮವರ್ಷ[೩೭] ನಂದನ. ಸಂಪೂರ್ಣ ಅಳಿಸಿಹೋಗಿದೆ. ಭೂದತ್ತಿಯನ್ನು ಉಲ್ಲೇಖಿಸುತ್ತದೆ. ಬ್ರಹ್ಮರಾಶಿ ಮತ್ತು ಹಗರಿಟ್ಟಗೆಗಳನ್ನು ಹೆಸರಿಸುತ್ತದೆ. ಮಲ್ಲೋಜ ಬರೆದನಂತೆ.

೪೭೯ ಅದೇ ಕಲ್ಲು. ಸಂಪೂರ್ಣ ಅಳಿಸಿಹೋಗಿದೆ.

ರಾಘವಾಂಕನ ಮೇಲೆ ನೇಮಿಚಂದ್ರ - ಜನ್ನರ ಪ್ರಭಾವ

– ಅನಂತ ಬುರ್ಲಿ

ಕವಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ರಾಜ್ಯ ಸಮರ್ಪಣೆಯ ಸಂದರ್ಭದಲ್ಲಿ ಹರಿಶ್ಚಂದ್ರ ವಿಶ್ವಾಮಿತ್ರಮುನಿಗೆ ಈ ರೀತಿ ಕೇಳುತ್ತಾನೆ :

'ಹೆತ್ತ ತಾಯಂ ಮಾರಿ ತೊತ್ತಕೊಂಬರೆ ಮೂಗ
ನಿತ್ತು ಕನ್ನಡಿಯ ನೋಡುವರೆ ಮಾಣಿಕದೊಡವೆ
ವೊತ್ತೆಯಿಟ್ಟು ಒಡೆದ ಗಾಜಂ ಪಿಡಿವರೆ ಕೋಪದಿಂ ಸತ್ತು ಮದುವೆಯಪರೆ!
ಕತ್ತುರಿಯ ಸುಟ್ಟರಳ ಕುರಕಲನು ಗೆಯ್ವರೇ
ಮತ್ತೆ ಮುನಿನಾಥ ಕೇಳ್ ಪೊಲತಿಯರ ಕೂಡಿ ಇ
ಪ್ಪತ್ತೊಂದು ತಲೆವೆರಸಿ ನರಕಕ್ಕೆ ಹೋಹೆನೇ ವಿಶ್ವಾಮಿತ್ರ ಪೇಳೆಂದನು!

ಈ ಪದ್ಯಭಾಗ ಕ್ರಿ.ಶ. ೧೯೫೫ರ ಉತ್ತರ ಕರ್ನಾಟಕ ಭಾಗದ S.S.L.C. ಪಠ್ಯಪುಸ್ತಕದಲ್ಲಿತ್ತು. ಆಗ ಆದೇ ಶಿಕ್ಷಕ ವೃತ್ತಿಯಲ್ಲಿ ಕಾಲಿಟ್ಟ ನನಗೆ 'ಕೋಪದಿಂ ಸತ್ತು ಮದುವೆಯಪರೆ' ಎಂಬ ಮಾತಿಗೆ ಸ್ಪಷ್ಟ ಅರ್ಥವಾಗಲಿಲ್ಲ. 'ಹೆತ್ತ ತಾಯಂ ಮಾರಿ ತೊತ್ತಕೊಂಬರೆ, ಮೂಗನಿತ್ತು ಕನ್ನಡಿಯ ನೋಡುವರೆ . . .' ಮೊದಲಾದ ದೃಷ್ಟಾಂತಗಳ ಭಾವದಂತೆ ಇದು ಸಂದರ್ಭಕ್ಕೆ ಹೊಂದುವಂತೆಯೂ ಕಾಣಲಿಲ್ಲ. ಉಳಿದ ಅಪ್ರಸ್ತುತಗಳಲ್ಲಿ ಅಭಿವ್ಯಕ್ತವಾಗುವ ಭಾವವು 'ಕೋಪದಿಂ ಸತ್ತು ಮದುವೆಯಪರೆ' ಎಂಬಲ್ಲಿ ದಾರಿತಪ್ಪಿ ನಿಂತಂತೆ ಎನಿಸಿತು. ಇದಕ್ಕೆ ಬೇರೆ ಅರ್ಥವನ್ನು ಮಾಡುವಂತೆಯೂ ಇರಲಿಲ್ಲ. ಕುಲದ ಕೀರ್ತಿಯನ್ನು ಕಳೆದುಕೊಂಡು ಪೊಲತಿಯರನ್ನು ಮದುವೆಯಾಗುವದು ಸಾಧ್ಯವಿಲ್ಲವೆಂಬ ಸ್ಪಷ್ಟ ಅಭಿಪ್ರಾಯ ಈ ಎಲ್ಲ ಮಾತುಗಳಲ್ಲಿ ಸ್ಫುಟವಾಗಿ ಮೂಡಿನಿಂತಿದ್ದರಿಂದ ಈ ಸಂದರ್ಭವಲ್ಲಿ ಅದಕ್ಕೆ 'ಅಭಿಮಾನವನ್ನು ಬಿಟ್ಟು ಮದುವೆಯಾಗುವರೆ' ಎಂದು ಆಗ ನಾನು ಬೋಧಿಸಿದ ನೆನಪು. ಆದರೆ ಇದರಿಂದ ನನ್ನ ಮನಸ್ಸಿಗೇನೂ ಪೂರ್ಣ ಸಮಾಧಾನವಾಗಿರಲಿಲ್ಲ.

ಕ್ರಿ. ಶ. ೧೯೬೬ರಲ್ಲಿ ಪ್ರೌಢ ವ್ಯಾಸಂಗಕ್ಕಾಗಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಯಾಗಿ ಬಂದಾಗ ಜೈನಕವಿ ನೇಮಿಚಂದ್ರನ ' ನೇಮಿನಾಥ ಪುರಾಣ'ವನ್ನು ಅಭ್ಯಾಸ ಮಾಡುವ ಸಂದರ್ಭ ಒದಗಿತು. ಅಷ್ಟಮಾಶ್ವಾಸದ ಒಂದು ಸನ್ನಿವೇಶದಲ್ಲಿ ಕಂಸನು, 'ನಾಗಶಯ್ಯೆಯೇರಿ, ಶಾರ್ಙ್ಗಚಾಪವನ್ನು ಹೆದೆಯೇರಿಸಿ ಪಾಂಚಜನ್ಯವನ್ನು ಮಾಡುವವನಿಗೆ ತನ್ನ ಮಗಳನ್ನು ಕೊಡುವೆ'ನೆಂದು ಡಂಗುರ ಹೊಯ್ಸುತ್ತಾನೆ. ಅದನ್ನು

ಕೇಳಿದ ಶೂರರಾಜಪುತ್ರರು ' . . . . ಪಸೆಯಲ್ಲಿ ಪಾವು ಕೊಳ್ವ ಒಸಗೆ. ಓವೋವೊ ಪುಸಿ ಮದುವೆ. ಮೊದಲೊಳ್ ಸಾವು ದಿಟಂ. ಸತ್ತು ಮದುವೆಯಪ್ಪರುಮೊಳರೇ'ಎಂದು ಕಿವಿ ಮುಚ್ಚಿಕೊಂಡು ಹೋದರೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ನನಗೆ ತಟ್ಟನೆ ರಾಘವಾಂಕ ಕವಿಯ 'ಕೋಪದಿಂ ಸತ್ತು ಮದುವೆಯಹರೆ' ಎಂಬ ಮಾತು ನೆನಪಿಗೆ ಬಂದಿತು. ಹಾಗೂ ಒಂದು ದೊಡ್ಡ ನಿಧಿ ದೊರೆತ ಸಂತೋಷ ಉತ್ಸಾಹ ನನಗಾಯಿತು. ನೇಮಿನಾಥ ಪುರಾಣದಲ್ಲಿ ಸಂದರ್ಭಕ್ಕೆ ಉಚಿತವಾದ ರೀತಿಯಲ್ಲಿ ಪ್ರಯೋಗವಾದ ಮಾತನ್ನು ಸಂದರ್ಭತಪ್ಪಿ ರಾಘವಾಂಕನು ಬಳಸಿದುದರಿಂದ ಗೊಂದಲದ ಅರ್ಥವಾಯಿತು. ನಾಗಶಯ್ಯೆಯೇರಿ ಬದುಕಿ ಉಳಿದರೆ ತಾನೆ ರಾಜಪುತ್ರಿಯನ್ನು ಮದುವೆಯಾಗಬೇಕು. ಅದು ಸಾಧ್ಯವಿಲ್ಲವೆಂದೇ ರಾಜಪುತ್ರರು 'ಮೊದಲೊಳ್ ಸಾವು ದಿಟಂ. ಸತ್ತು ಮದುವೆಯಪ್ಪರುಮೊಳರೆ' ಎಂದುಕೊಂಡಿರಬೇಕು.

ಇವೇ ವಿಚಾರವನ್ನು ಮೆಲುಕು ಹಾಕುತ್ತಿರುವಾಗ, ರಾಘವಾಂಕ ಕವಿ ನೇಮಿಚಂದ್ರನ 'ನೇಮಿನಾಥ ಪುರಾಣ'ವನ್ನು ಚೆನ್ನಾಗಿ ನೋಡಿರಬಾರದೇಕೆ? ಎಂಬ ಪ್ರಶ್ನೆ ಹಾಕಿಕೊಂಡೆ. ನೇಮಿಚಂದ್ರನ ಪ್ರಭಾವದ ಗುರುತು ರಾಘವಾಂಕನ ಕಾವ್ಯಗಳಲ್ಲಿ ಎಲ್ಲಿಯಾದರೂ ಕಂಡು ಬರುವದೇ? ಎಂದು ಆಲೋಚಿಸಹತ್ತಿದೆ. ಕವಿ ನೇಮಿಚಂದ್ರನು ವೀರಬಲ್ಲಾಳನ ಮಹಾಪ್ರಧಾನ ಸೆಜ್ಜೆವಳ ಪದ್ಮನಾಭನನ್ನು ಪ್ರತಿ ಆಶ್ವಾಸದ ಕೊನೆಯಲ್ಲೂ ಸ್ಮರಿಸಿದ್ದಾನೆ. ವೀರಬಲ್ಲಾಳನು ಕ್ರಿ.ಶ. ೧೧೭೩ರಿಂದ ೧೨೨೦ರವರೆಗೆ ಆಳಿದನೆಂದು ಇತಿಹಾಸದಿಂದ ತಿಳಿದುಬರುತ್ತದೆ. ಹಾಗೂ ಕವಿ ಪಾರ್ಶ್ವನಾಥ (ಕ್ರಿ.ಶ. ೧೨೦೫) ಮತ್ತು ಕವಿಜನ್ನ(ಕ್ರಿ.ಶ ೧೨೦೯)ರು ನೇಮಿಚಂದ್ರನನ್ನು ಸ್ತುತಿಸಿರುವದರಿಂದ ಬಿ.ಎಸ್. ಸಣ್ಣಯ್ಯನವರ ಅಭಿಪ್ರಾಯದಂತೆ ನೇಮಿಚಂದ್ರನ ಕಾಲವನ್ನು ಕ್ರಿ.ಶ. ೧೧೯೦ ಎಂದು ಸ್ವೀಕರಿಸಲಡ್ಡಿಯಿಲ್ಲ. ಡಾ. ಮುಗಳಿಯವರ ಅಭಿಪ್ರಾಯದಂತೆ ಕ್ರಿ.ಶ. ೧೨೦೦ ಎಂದಿಟ್ಟುಕೊಂಡರೂ ಬಾಧಕವಿಲ್ಲ.

ಕವಿ ಹರಿಹರ, ರಾಘವಾಂಕರ ಕಾಲ ನಿರ್ಣಯ ಸಾಕಷ್ಟು ಚರ್ಚೆಗೆ ಸಿಲುಕಿ ಕೆಲವರು ಕ್ರಿ.ಶ ೧೨೧೬ ಎಂದೂ, ಇನ್ನು ಕೆಲವರು ಕ್ರಿ.ಶ ೧೨೮೦ ಎಂದೂ ಅಭಿಪ್ರಾಯಪಟ್ಟಿದ್ದಾರೆ. ಪದ್ಮರಾಜಪುರಾಣದಲ್ಲಿ ನರಸಿಂಹ ಬಲ್ಲಾಳನಲ್ಲಿ ಕೆರೆಯ ಪದ್ಮರಸನು ಮಂತ್ರಿಯಾಗಿದ್ದನೆಂದೂ ಹರಿಹರನು ಕರಣಿಕನಾಗಿದ್ದನೆಂದೂ ಉಕ್ತವಾಗಿದೆ. ನರಸಿಂಹ ಬಲ್ಲಾಳ ಎಂಬುದಕ್ಕೆ ನರಸಿಂಹ ಸುತಬಲ್ಲಾಳನೆಂದು ಅರ್ಥಹಚ್ಚಿ ವೀರಬಲ್ಲಾಳನಲ್ಲಿ ಕೆರೆಯ ಪದ್ಮರಸ, ಹರಿಹರರಿದ್ದರೆಂಮೂ ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇದು ನಿಜವಾಗಿದ್ದ ಪಕ್ಷದಲ್ಲಿ ಹರಿಹರಕವಿಗೆ ವೀರಬಲ್ಲಾಳನ ಆಸ್ಥಾನದಲ್ಲಿಯೇ ಇದ್ದ ಕವಿ ನೇಮಿಚಂದ್ರ - ಜನ್ನರ ಕಾವ್ಯಗಳ ಪರಿಚಯವಿರಬಹುದೇ? ಹರಿಹರನ ಶಿಷ್ಯನಾದ ರಾಘವಾಂಕನು ಕೂಡ ನೇಮಿಚಂದ್ರ ಜನ್ನರ ಕಾವ್ಯಗಳನ್ನು ಪರಿಶೀಲಿಸಿರಬಹುದೇ? ಎಂಬುದು ವಿಚಾರರ್ಹ ವಿಷಯವೆನಿಸಿತು. ಈ ದಿಶೆಯಲ್ಲಿ ಅಭ್ಯಾಸ ಮಾಡುತ್ತ ನಡೆದಾಗ ನನ್ನ ಲಕ್ಷ್ಯಕ್ಕೆ ಬಂದ ವಿಷಯಗಳನ್ನು ಗುರುತು ಮಾಡಿ ಇಟ್ಟಿದ್ದೆ. ಅವನ್ನಿಲ್ಲಿ ವಿದ್ವಾಂಸ - ವಿಮರ್ಶಕರ ಅವಗಾಹನೆಗೆ ತರಬಯಸುತ್ತೇನೆ.

೧. ಕವಿ ಕಾಂಚನ ಕಣಿಕೆಗೆ ಮಾ
ಱುವನೇಕೆಯೊ ಮರುಳನಳಿಗೆ ಮಾಣಿಕಮಂ ಮಾ।
ಱುವ ತೆರದಿನೀ ಚತುರ್ದಶ
ಭುವನಮೆ ಬೆಲೆಯೆನಿಪ ಕೃತಿಯನಮಳಾಕೃತಿಯಂ॥

(ನೇಮಿನಾಥ ಪುರಾಣ ೧-೪೬)

ನಿಧಿ ದೊರೆಕೊಂಡಡಂ ಜರಗುಗಚ್ಚುವರೇ ಮಿಗೆ ಮುಗ್ಧರುಂ ಸುಧಾಂ
ಬುಧಿ ದೊರೆಕೊಂಡೊಡೇನೊಱಪುದೋಡುವರೇ ಸಕಲಾರ್ಥ ಸಂಭವಾ
ವಧಿ ಜಿನರಾಜ ರಾಜಿತಕಥಾಕಥನಂ ದೊರೆಕೊಂಡೊಡಂ ಪಣ
ಕ್ಕಧಮರನಣ್ಣ ಬಣ್ಣಿಪರೆ ಚಾರುವಿಚಾರಪರರ್ ಕವೀಶ್ವರರ್।

(ನೇ.ನಾ.ಪು. ೧-೪೯)

ಚತುರ್ದಶ ಭುವನಮೆ ಬೆಲೆಯೆನಿಪ ಕಾವ್ಯವನ್ನು ಮರುಳನು ಅಳಿಗೆ ಮಾಣಿಕವನ್ನು ಮಾರುವಂತೆ ಕವಿ ಕಾಂಚನಕಣಿಕೆಗೆ ಏಕೆ ಮಾರುವನು ? ಎಂದು ಕವಿ ನೇಮಿಚಂದ್ರನು ಪ್ರಶ್ನಿಸಿದ್ದಾನೆ. ಹಾಗೂ ಸಕಲಾರ್ಥಸಂಭವಾವಧಿ ಜಿನರಾಜ ಕಥಾಕಥನವಿರಲು ಹಣಕ್ಕಾಗಿ ಅಧಮರನ್ನು ವಿಚಾರಪರರಾದ ಕವೀಶ್ವರರು ಬಣ್ಣಿಸುವರೇ? ಎಂದು ಕೇಳಿದ್ದಾನೆ. ಇಂಥ ಸ್ವತಂತ್ರ ವಿಚಾರ ನೇಮಿಯಲ್ಲಿ ಉದಿಸಲು ಮಹಾಕವಿ ಪಂಪನ 'ಭುವನಸ್ತುತಮಪ್ಪ ನೆಗಱ್ತೆ ಮುಕ್ತಿಸಂಭವಿಸುವ ಲಾಭಮೆಂಬಿವು ಜಿನೇಂದ್ರ ಗುಣಸ್ತುತಿಯಿಂದ ತಾಮೆ ಸಾರವೇ? ಪೆಱರೀವುದೇಂ ಪೆಱರ್ ಮಾಡುವವೇಂ ಪೆಱರಿಂದಪ್ಪುದೇಂ' ಎಂಬ ಘೋಷಣೆಯು ಬಹುಮಟ್ಟಿಗೆ ಕಾರಣವಾಗಿರಬೇಕು.

ಕವಿ ಪಂಪ. ನೇಮಿಚಂದ್ರರ ಈ ಭಾವವೆ ಇನ್ನೊಂದು ಬಗೆಯಲ್ಲಿ ಕವಿ ಹರಿಹರ ರಾಘವಾಂಕರ ಕಾವ್ಯಗಳಲ್ಲಿ ಮೂಡಿಬಂದುದನ್ನು ಇಲ್ಲಿ ನೋಡಬಹುದು.

ಮನುಜರ ಮೇಲೆ ಸಾವವರ ಮೇಲೆ ಕನಿಷ್ಠರ ಮೇಲೆ ಪದ್ಯಮಂ
ತನತನಗಿಂದ್ರ ಚಂದ್ರ ರವಿ ಕರ್ಣ ದಧೀಚಿ ಬಲೀಂದ್ರನೆಂದು ನೀ
ನನವರತಂ ಪೊಗಳ್ದು ಕೆಡಬೇಡಲೆ ಮಾನವ ನೀನಪರ್ಣಿಶಂ
ನೆನೆ ಪೊಗಳರ್ಚಿಸೆಮ್ಮ ಕುಸುಸೊಂಪಿನ ಪೆಂಪಿನ ಹಂಪೆಯಾಳ್ದನಂ॥

(ಪಂಪಾಶತಕ)

ಮಾನವರನ್ನು ಇಂದ್ರಚಂದ್ರ ಕರ್ಣಬಲೀಂದ್ರರೆಂದು ಹಗಲಿರುಳು ಹೊಗಳಿ ಕೆಡದೆ ಹಂಪೆಯೊಡೆಯನನ್ನು ಸದಾ ಹೊಗಳು. ಪೂಜಿಸು ಎಂದು ಕವಿ ಹರಿಹರ ಹೇಳಿದ ಮಾತನ್ನು ಕವಿ ನೇಮಿಚಂದ್ರನ ಮಾತಿನೊಂದಿಗೆ ಹೋಲಿಸಿ ನೋಡಬಹುದು. ಅವರಿಬ್ಬರ ಒಟ್ಟಾಭಿಪ್ರಾಯ ಒಂದೇ. ಕವಿ ಹರಿಹರನ ಮಾರ್ಗವನ್ನೇ ಅನುಸರಿಸಿದ ಕವಿ ರಾಘವಾಂಕನು ಕೂಡ 'ಹಂಪೆಯರಸನ ಪೊಗಳ್ವ ನಾಲಿಗೆಯೊಳನ್ಯದೈವವ ಭವಿಗಳಂ ಕೀರ್ತಿಸಿದೆನಾದೊಡೆ ಮನಸಿಜಾರಿಯ ಭಕ್ತನಲ್ಲ' ಎಂದು ಸಾರಿದ್ದಾನೆ. 'ಕ್ಷಿತಿಯೊಳು ಶಿವಭಕ್ತರ್ಗೆ ಶಿವಂಗಾಂ ಮಾಱಿದೆ ಮತಿಯ'ನೆಂದು ಹೇಳಿಕೊಂಡಿದ್ದಾನೆ.

ಕಾರಣ ಕವಿ ಹರಿಹರ ರಾಘವಾಂಕರ ಕ್ರಾಂತಿಕಾರಿ ನೂತನ ಮಾರ್ಗಕ್ಕೆ ದಿಕ್ಕು ತೋರಿದ, ಪ್ರೇರೇಪಿಸಿದ ಕವಿ ನೇಮಿಚಂದ್ರನೆಂದೇ ಹೇಳಬೇಕಾಗುತ್ತದೆ. ಮಹಾಕವಿ ಪಂಪನು ಬಹು ಪ್ರಾಚೀನನಾದುದರಿಂದ ಸಮೀಪದವನಾದ ಕವಿ ನೇಮಿಚಂದ್ರನ ಮಾತೇ ಕವಿ ಹರಿಹರ ರಾಘವಾಂಕರ ಮೇಲೆ ಪ್ರಭಾವ ಬೀರಿರುವದು ಹೆಚ್ಚು ಸಾಧ್ಯ.

೨. ಎನಿತೊಜಿಲ್ದು ಪೇಳ್ವ ಕವಿಯೇವನದಂ ಪೆಸರಿಟ್ಟು ಮೆಚ್ಚಬ
ಲ್ಲನನಜಿಸಲ್ಕೆವೇಟ್ಟುದವನಂ, ಜಗದೊಳ್ ಪಡೆಯಲ್ಕೆ ಬಾರದಾ।
ತನ ಮುಖದಿಂದಮಲ್ಲದುದು ಸಲ್ಲದು, ಕಟ್ಟಿಯುಮೇನೊ ಮಾಲೆಗಾ
ಜಿನ ಪೊಸ ಬಾಸಿಗಂ ಮುಡಿವ ಭೋಗಿಗಳಿಲ್ಲದೆ ಬಾಡಿ ಪೋಗದೆ॥ (೧-೪೫)

ಎಂಬ ಜನ್ನಕವಿಯ 'ಅನಂತನಾಥ ಪುರಾಣ'ದಲ್ಲಿಯ ಪದ್ಯದ ಭಾವವು ಕವಿ ರಾಘವಾಂಕನ 'ಸೋಮನಾಥ ಚಾರಿತ್ರ'ದಲ್ಲಿಯ ಈ ಕೆಳಗಿನ ಪದ್ಯದಲ್ಲಿ ಹೇಗೆ ಮೂಡಿ ಬಂದಿದೆಯೆಂಬುದನ್ನು ನೋಡಬಹುದು.

ಕವಿಯಧಿಕನಿರ್ದೊಡೇಂ ಕೇಳ್ವರಿಲ್ಲದೊಡೆ ಗಾ
ನವಿನೋದಿಯಿರ್ದೊಡೇಂ ಜಾಣರಿಲ್ಲದೊಡೆ ಜಾ
ತಿವಿದಗ್ಧೆಯಿರ್ದೊಡೇಂ ಸುವಿತರಿಲ್ಲದೊಡೆ ಪೊಸಪೂಮಾಲೆಯಿರ್ದೊಡೇನು॥
ತವೆ ಮುಡಿವರಿಲ್ಲದೊಡೆ . . . (೧-೧೯)

೩. ಕುವಳಯದಲರಂ ಕೌಮುದಿ
ಯ ವಿಭವಮಂ ಕಂಡುಕೊಂಡು ಕೊನೆವಂ ಕವಿಯೊ।
ರವಿಯೋ ಕವಿ ಕಾಣದುದಂ
ಕವಿ ಕಾಣ್ಬನೆನಿಪ್ಪ ವಚನಮೇಂ ತಪ್ಪುಗುಮೇ॥ (ನೇ.ನಾ.ಪು. ೧-೩೩)

ಕವಿ ನೇಮಿಚಂದ್ರನ ಈ ಪದ್ಯದ ಭಾವವು ಕವಿ ರಾಘವಾಂಕನ 'ಸೋಮನಾಥ ಚಾರಿತ್ರ'ದ ಕೆಳಗಿನ ಪದ್ಯದಲ್ಲಿ ಹೇಗೆ ಧ್ವನಿಸಿದೆಯೆಂಬುದನ್ನು ಗುರುತಿಸಿರಿ-

ಹೊಸ ಬನದೊಳಿಪ್ಪಬಲೆಯರ ತೊಡಿಗೆವೆಳಗು ಹೊಂ
ಬಿಸಿಲಂತಿರಲ್ಕಂಡು ಕಮಲವರಳುವವರ
ನಸುನಗೆಯ ಬೆಳಗು ಬೆಳದಿಂಗಳಂತಿರೆ ಕಂಡು ಕುಮುದವರಳುವವಲ್ಲದೆ।
ಶಶಿರವಿಗಳೆಡೆಯಾಟವಿಲ್ಲವಾ ವನದಿ ಭಾ
ವಿಸಲು ರವಿ ಕಾಣದುದ ಕವಿ ಕಂಡನೆಂಬ ನುಡಿ
ಮಸಿಯಲ್ಲ ಸುಕವಿ ಹಂಪೆಯ ರಾಘವಾಂಕನಪಜೆರವ ಬಣ್ಣಿಸಿದನಾಗ॥(೨-೭೮)

ಕುವಳಯದಲರು ಕೌಮುದಿಯ ವೈಭವವನ್ನು ಕಂಡು ಕೊನೆವವನು ರವಿಯಲ್ಲ, ಕವಿಯೇ ಎಂಬ ಅಭಿಪ್ರಾಯವೇ ರಾಘವಾಂಕನ 'ಶಶಿರವಿಗಳ ಎಡೆಯಾಟವಿಲ್ಲದ ವನದಲ್ಲಿಯೂ ಕವಿ ಅಬಲೆಯರ ತೊಡಿಗೆಗಳ ಬೆಳಗಿನಲ್ಲಿ ನಸುನಗೆಯ ಬೆಳದಿಂಗಳಲ್ಲಿ ಕಾಣುತ್ತಾನೆಂ'ದು ಹೇಳುವಲ್ಲಿ ವ್ಯಕ್ತವಾಗಿದೆ. 'ರವಿ ಕಾಣದುದಂ ಕವಿ ಕಾಣ್ಬನೆನಿಪ್ಪ

ವಚನಮೇಂ ತಪ್ಪುಗುಮೇ' ಎಂಬುದನ್ನೇ ರಾಘವಾಂಕ ಕವಿ 'ರವಿ ಕಾಣದುದ ಕವಿ ಕಂಡನೆಂಬ ನುಡಿ ಹುಸಿಯಲ್ಲ'ವೆನ್ನುತ್ತಾನೆ.

೪. ಅಭಿನವ ಜಲಧರ ತತಿಗಳ್
ನಭಕ್ಕೆ ನೆಗೆವುವು ಖಗಾದ್ರಿಯಣೆಯಿಂ ಸೂರ್ಯಗ
ಪ್ರಭತನಯನತುಳ ಭುಜಬಲ
ವಿಭವಂ ಪೊಡೆಸೆಂಡುವೊಯ್ವ ಬೆಟ್ಟಂಗಳವೋಲ್॥

(ನೇ.ನಾ.ಪು.೨-೯೧)

ಈ ಪದ್ಯದಲ್ಲಿ ನೇಮಿಚಂದ್ರಕವಿ ಸೂರ್ಯಪ್ರಭ ತನಯನ ಭುಜಬಲ ಸಾಮರ್ಥ್ಯದ ಭವ್ಯಚಿತ್ರವನ್ನು ಉತ್ಪ್ರೇಕ್ಷೆಯ ಮೂಲಕ ಸೊಗಸಾಗಿ ನಿರೂಪಿಸಿರುವುದನ್ನು ಕಾಣಬಹುದು. ಬೆಟ್ಟಗಳನ್ನು ಹೊಡೆಚೆಂಡನ್ನಾಗಿ ಹೊಡೆಯುವ ಕಲ್ಪನೆ ಭವ್ಯವಾಗಿದೆಯೆಂಬಲ್ಲಿ ಸಂಶಯವೇ ಇಲ್ಲ. ಚಿಂತಾಗತಿಯನ್ನು ಕುರಿತು 'ಅಮೃತಾರ್ಣವಕ್ಕೆ ಕಲ್ಪದ್ರುಮಮೆನಿಸಿದರಾ ಖಗೇಂದ್ರನುಂ ತತ್ಸುತನುಂ' ಎಂದು ವರ್ಣಿಸಿರುವಲ್ಲಿಯೂ ಭವ್ಯತೆಯೇ ಇದೆ.

ಕವಿ ರಾಘವಾಂಕನು 'ವೀರೇಶ ಚರಿತೆ'ಯಲ್ಲಿ ವೀರೇಶನ ಹಿಂದೆ ನಡೆದ ಗಣಕುಲದ ದೃಶ್ಯವನ್ನು ಹೀಗೆ ವರ್ಣಿಸಿದ್ದಾನೆ :

ಕುಲಗಿರಿಗಳ ಕೈಗುಂಡುಗಳ, ಬ್ರಹ್ಮಾಂಡಂ
ಗಳ ಪೊಡೆಸೆಂಡುಗಳ, ದಿಶಾಕರಿಗಳ ದಂತ
ಗಳ . . . ಧರೆಗಗನಂಗಳ ಪಲ್ಲಟಿಸುವ ಬಲಯುತ।
ಬಲದಿಂ ಗಣಕುಲ ನಡೆದುದು . . .

ನೇಮಿಚಂದ್ರನ ವರ್ಣನೆಯಲ್ಲಿ ಬೆಟ್ಟಗಳನ್ನು ಹೊಡೆಚೆಂಡಾಗಿ ಹೊಡೆವನೆಂದು ವರ್ಣಿಸಿದ್ದರೆ, ರಾಘವಾಂಕನ ವರ್ಣನೆಯಲ್ಲಿ ಬ್ರಹ್ಮಾಂಡಗಳೇ ಹೊಡೆಚೆಂಡುಗಳಾಗಿ ವರ್ಣಿತವಾಗಿವೆ. ರಾಘವಾಂಕನ ಕಲ್ಪನೆಯ ಭವ್ಯತೆ ನೇಮಿಚಂದ್ರನ ಭವ್ಯತೆಯ ಬೃಹದ್‌ರೂಪವೆಂದು ಹೇಳಬಹುದು.

೫. 'ನೀಲ ಶಲಾಕೆಗೆ ಜೀವಂ ಬೊಯ್ದಂತಿರ್ದ ಕೃಷ್ಣನ ಮೂರ್ತಿಯಂ ಕಣ್ಣೆವಿ ಕಾಣಲ್ಪಡೆದು ಕುರುಡಂ ಕಣ್ಪಡೆದಂತಾಗಿ ನಿಧಾನವನೆತ್ತಿಕೊಳ್ವವೋಲಿರುಳುಮೆಯ್ಯೊಳ್ ಬೇಗಮೆತ್ತಿಕೊಂಡು . . . .' ವಸುದೇವನು ನಂದಗೋಕುಲಕ್ಕೆ ಪೋದನೆಂದು ಕವಿ ನೇಮಿಚಂದ್ರನು ವರ್ಣಿಸಿದ್ದಾನೆ. ಇಲ್ಲಿ ದೇವಕಿಗೆ ಜನಿಸಿದ ಕೃಷ್ಣನನ್ನು ಕಣ್ತುಂಬ ನೋಡಿದ ವಸುದೇವನ ಸ್ಥಿತಿಯನ್ನು ಕುರುಡಂ ಕಣ್ಪಡೆದಂತಾಗಿದೆಯೆಂದು ನೇಮಿಚಂದ್ರನು ಹೇಳಿರುವುದನ್ನು ಗಮನಿಸಬೇಕು.

ಕವಿ ರಾಘವಾಂಕನ 'ಸೋಮನಾಥ ಚಾರಿತ್ರ'ದಲ್ಲಿ ಆದಯ್ಯನು ತಂದೆತಾಯಿಗಳೆದುರು, 'ಮುತ್ತು ಮಾಣಿಕವೆರಸಿ ಪೋಪೆನಾಂ ತೆಂಕನಾಡತ್ತ ಬಣಜಿಗ ಧನಂಬಡೆದು ಬಂದಪೆಂ' ಎಂದು ನುಡಿದಾಗ, ಆತನ ತಾಯಿ 'ಕುರುಡ ಕಣ್ಪಡೆದಂತೆ .

. . . ಅತಿರೋಗಿ ಅಮೃತಮಂ ಧರಿಸಿದಂತೆ ಎಂತಕ್ಕೆ ಪಡೆದೆವಲೆ ಮಗನೆ . . . . ನಿನ್ನಗಲ್ದಿರಲಾರೆ' ಎನ್ನುವದನ್ನು ನೇಮಿನಾಥ ಪುರಾಣದಲ್ಲಿಯ ಮೇಲಿನ ಸಂದರ್ಭಕ್ಕೆ ಹೋಲಿಸಿ ನೋಡಬೇಕು.

೬. ಜನ್ನನ 'ಯಶೋಧರ ಚರಿತೆ'ಯ ಮೂರನೆಯವತಾರದಲ್ಲಿ ಬರುವ ಈ ಪದ್ಯ ಅವಲೋಕಿಸಿರಿ:

ಕಡೆಯೊಳ್ ಕೋಣನ ಪೊರ್ಕುನಳಿ
ಗಿಡುವಿಗೆ ಮಿತ್ತೆಂಬ ತೆಱದೆ ಪರದನ ಬೀಡಂ
ಬಿಡೆ ಸೂಱೆಗೊಂಡು ತನ್ನಂ
ಪಿಡಿ ತರಿಸಿ ವಿಚಿತ್ರಮಪ್ಪ ಕೊಲೆಯಂ ಕೊಂದಂ||

ಕೋಣನ ಹೋರಾಟವು ಗಿಡಕ್ಕೆ ಮೃತ್ಯು ಎಂಬಂತೆ ಪರದನ ಸ್ಥಿತಿಯಾಯಿತೆಂದು ಕವಿ ಹೇಳಿದ್ದಾನೆ. ಯಶೋಧರನ ತಾಯಿ ಐದನೆಯ ಜನ್ಮದಲ್ಲಿ ಕಳಿಂಗದಲ್ಲಿ ಕೋಣನಾಗಿ ಜನಿಸಿದ್ದಳು. ಆ ಕೋಣವೇ ಸಿಂಪಾನದಿಯಲ್ಲಿ ನೀರು ಕುಡಿಯುತ್ತಿರಲು ಅಲ್ಲಿಗೆ ಬಂದ ಅರಸನ ಪ್ರೀತಿಯ ಕುದುರೆಯನ್ನು ಕೊಲ್ಲುತ್ತದೆ. ಇದನ್ನು ತಿಳಿದ ಅರಸನು ಕೋಪಗೊಂಡು ಕೋಣನ ಒಡೆಯನಾದ ವ್ಯಾಪಾರಿಯ ಸಂಪದವನ್ನೆಲ್ಲ ಸೂರೆಗೊಂಡು ಕೋಣನನ್ನು ಕೊಲ್ಲಿಸುತ್ತಾನೆ. ಕೋಣನ ಹೋರಾಟದ ಪರಿಣಾಮವನ್ನು ಪಾರದನು ಅನುಭವಿಸಬೇಕಾಯಿತು. ನೇಮಿಚಂದ್ರನಗಿಂತ ಹೆಚ್ಚು ಪರಿಣಾಮಕಾರಿಯಾಗಿ ರಾಘವಾಂಕನು ಇದೇ ನಾಣ್ಣುಡಿಯನ್ನು ಬಳಸಿರುವದನ್ನು ಇಲ್ಲಿ ನೋಡಬಹುದು.

'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತೆಂಬ
ಕ್ಷೋಣಿಯಾಡುವ ಗಾದೆಯಂ ದಿಟಂ ಮಾಳ್ಪಂತೆ
ಹೂಣೆಸಿ ವಸಿಷ್ಠಂಗೆ ಕೌಶಿಕಂ ನುಡಿದ ಪ್ರತಿಜ್ಞೆಯಂ, ಗೆಲುವಡಿನ್ನು||
ಜಾಣಿಂ ಹರಿಶ್ಚಂದ್ರರಾಯನುನ್ನತಿಯಳಿವ
ಕಾಣಬೇಕೆಂದು . . . .

(ಹರಿಶ್ಚಂದ್ರಕಾವ್ಯ)

ಇಂದ್ರನೋಲಗ್ಗದಲ್ಲಿ ನಡೆದ ವಸಿಷ್ಠ-ವಿಶ್ವಾಮಿತ್ರರ ವಾಗ್ವಾದದ ಪರಿಣಾಮವೇ ವಿಶ್ವಾಮಿತ್ರನ 'ಹರಿಶ್ಚಂದ್ರನಂ ಅಸತ್ಯನಂ ಮಾಡಿಸುವೆಂ' ಎಂಬ ಪ್ರತಿಜ್ಞೆ. ಈ ಪ್ರತಿಜ್ಞೆಯ ಪರಿಣಾಮವಾಗಿ ಹರಿಶ್ಚಂದ್ರನೃಪನು ರಾಜ್ಯ ಸತಿ ಸುತರನ್ನು ಕಳೆದುಕೊಂಡು ಹೊಲೆಯನಾಳಾಗಿ ಬಾಳಬೇಕಾಗುವದು. ಈ ಸಂದರ್ಭದಲ್ಲಿ ರಾಘವಾಂಕನು ಬಳಸಿದ 'ಕೋಣನೆರಡುಂ ಹೋರೆ ಗಿಡುವಿಂಗ ಮಿತ್ತು' ಎಂಬ ಗಾದೆ ಮಾತು ಸಂದರ್ಭಕ್ಕೆ ಅತ್ಯಂತ ಉಚಿತವಾಗಿದೆ

೭. ವೀರಬಲ್ಲಾಳನಿಂದ ಕವಿ ಚಕ್ರವರ್ತಿಯೆಂದು ಬಿರುದು ಪಡೆದ ಕವಿ ಜನ್ನನ ಬಗೆಗೆ ಕವಿ ರಾಘವಾಂಕನಿಗೆ ಅಷ್ಟೊಂದು ಗೌರವಾದರಗಳಿಲ್ಲವೆಂಬುದರ, ಬದಲು

ದ್ವೇಷ ಮಾತ್ಸರ್ಯಗಳಿದ್ದಂತೆ ಸೋಮನಾಥ ಚಾರಿತ್ರದಲ್ಲಿರುವ ಈ ಕೆಳಗಿನ ಪದ್ಯದಿಂದ ತಿಳಿಯಬಹುದಾಗಿದೆ :

ಕೆಳತನದ ಬಂಧುವಿಷಯದ ನೆಂಟುವೆಱಕೆಗಳ
ಬಲದೊಳಾಂ ಕವಿಯೆಂದು ಕವಿರಾಯನೆಂದು ವೆ
ಗ್ಗಳಿಸಿ ಕಾಳ್ಗೆಡೆದಡಾಂ ಸೈರಿಸುವೆನಲ್ಲದಾ ನಂಜನೀಡಾಡಿ ಮಲೆತ।
ಬಳಿಕ ನಾಂ ಕವಿಯೆಂದು ವೈಯಾಕರಣಿಯೆಂದು
ಗಳಹಿ ಧ್ವನಿಗೆಯ್ವ ದುಷ್ಕವಿಯ ಗರ್ವದ ಮೂಗ
ನಿಳುಹದಿರನುಭಯ ಕವಿ ಶರಭ ಭೇರುಂಡ ಹಂಪೆಯ ರಾಘವಂ ಸಭೆಯೊಳು॥
(ಹರಿ. ಕಾವ್ಯ)

ಜನ್ನನ ತಂದೆಯಾದ ಸುಮನೋಬಾಣ ಬಿರುದಾಂಕಿತ ಶಂಕರನು ಹೊಯ್ಸಳ ನಾರಸಿಂಹನಲ್ಲಿ ಕಟಕೋಪಾಧ್ಯಾಯ. ಜನ್ನನ ಪತ್ನಿ ಲಕುಮಾದೇವಿ ದಂಡನಾಯಕ ರೇಚಯನ ಪುತ್ರಿ. 'ಸೂಕ್ತಿ ಸುಧಾರ್ಣ'ಪ್ರಸಿದ್ಧಿಯ ಮಲ್ಲಿಕಾರ್ಜುನ ಸಹೋದರಿಯ ಪತಿ. 'ಶಬ್ದಮಣಿದರ್ಪಣ'ದ ಖ್ಯಾತಿಯ ಕೇಶರಾಜನು ಸೋದರಳಿಯ. ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದ ನಾಗವರ್ಮ ಗುರು. ಇದನ್ನೆಲ್ಲ ಜನ್ನನೇ ತನ್ನ ಕಾವ್ಯದಲ್ಲಿ ವಿವರವಾಗಿ ಹೇಳಿದ್ದಾನೆ. ಕಾರಣ ರಾಘವಾಂಕನು 'ಕೆಳತನದ ಬಂಧುವಿಷಯದ ನಂಟುವೆರಕೆಗಳ ಬಲದೊಳಾಂ ಕವಿಯಂದು ಕವಿರಾಯನೆಂದುಂ' ಹೇಳಿಕೊಂಡರೆ ಹೇಳಿಕೊಳ್ಳಲಿ ಎಂದು ಮೂದಲಿಸಿ, 'ನಂಜನೀಡಾಗಿ ಮರೆತ ಬಳಿಕ ನಾಂ ಕವಿಯೆಂದು ವೈಯಾಕರಣಿಯೆಂದು ಗಳಹಿ ಧ್ವನಿಗೆಯ್ವ ದುಷ್ಕವಿಯ ಗರ್ವದ ಮೂಗನಿಳುಹದಿರೆನು ಎಂದು ಘೋಷಿಸುತ್ತಾನೆ. ಬಹುಶಃ ಜನ್ನನ 'ರನ್ನನ್ ವೈಯಾಕರಣನ್ ಜನ್ನನ್ ಮೇಣ್ ಕವಿಗಳೊಳ್ ವೈಯಾಕರಣನ್‌ಹೊನ್ನನ್ ಅಸಹಾಯಕವಿ ಮೇಣ್ ಜನ್ನನ್ ಅಸಹಾಯಕವಿ ಕವಿ ಚಕ್ರಿಗಳೊಳ್' ಎಂಬ ಮಾತಿಗೆ ಪ್ರತಿಕ್ರಿಯೆಯಾಗಿ ರಾಘವಾಂಕನು ಇಂಥ ದುಷ್ಕವಿಯ ಗರ್ವದ ಮೂಗನಿಳುಹದಿರೆನೆಂದು ಹೇಳಿರಬೇಕು. 'ಸಭೆಯೊಳು'ಎಂಬ ಪದವನ್ನು ವಿಶೇಷವಾಗಿ ಗಮನಿಸಬೇಕು. ಈ ಮಾತು ಅವರಿಬ್ಬರೂ ಸಮಕಾಲೀನರು. ಒಂದೇ ಸಭೆಯಲ್ಲಿದ್ದರೆಂಬುದನ್ನು ಸೂಚಿಸುವದೇ? ಎಂಬುವನ್ನು ವಿದ್ವಾಂಸರು ನಿರ್ಧರಿಸಬೇಕು. 'ಗಳಹಿ ಧ್ವನಿಗೆಯ್ವ ದುಷ್ಕವಿ ಎಂಬ ಮಾತು ರಾಘವಾಂಕನಲ್ಲಿ ಜನ್ನನ ಬಗೆಗಿರುವ ಭಾವನೆ ಎಂತಹವೆಂಬುದನ್ನು ಸ್ಪಷ್ಟಗೊಳಿಸುತ್ತದೆ.

೮. 'ಸೋಮನಾಥ ಚಾರಿತ್ರ'ದಲ್ಲಿ ಆದಯ್ಯನು ಕೋಪಗೊಂಡು 'ನೇಮಿಯಂ ಕೆಡೆಕುತ್ತಿ, ಮಲಧಾರಿಗಳಿಗಿಱಿದು, ಹೇಮಚಂದ್ರನನೊರಸಿ, ಮಾಘನಂದಿಯ ಕೊಂದು . . . ಮೂಲ ಸಂಘವಾ ಪುಲಿಸಂಘವೆಂಬುಭಯ ಸಂಘಮಂ ಭಂಗಿಸಿವನು' ಎಂದು ರಾಘವಾಂಕನು ವರ್ಣಿಸುತ್ತಾನೆ. ಇಲ್ಲಿ ಹೆಸರಿಸಲ್ಪಟ್ಟ ನೇಮಿಯು ಯಾರೆಂಬುದು ತಿಳಿಯದು. 'ಮಲಧಾರಿ' ಮಾತ್ರ ಅರಸು ಚಂದ್ರಾದಿತ್ಯನ ಗುರುವೆಂದು ರಾಘವಾಂಕನೇ ಬೇರೆಡೆ ಹೇಳಿದ್ದಾನೆ.

ನೇಮಿಚಂದ್ರನ 'ನೇಮಿನಾಥ ಪುರಾಣ'ದಲ್ಲಿ ಬರುವ ಮಲಧಾರಿಯು 'ಕಲಿಕಾಲದ ಜಿನ'ನೆಂದು ವರ್ಣಿಸಲ್ಪಟ್ಟಿದ್ದಾನೆ. ನೇಮಿಚಂದ್ರನಿಗೆ ಮಲಧಾರಿಗಳ ಬಗೆಗೆ ಅತ್ಯಂತ ಗೌರವವಿತ್ತೆಂಬ ಬಗೆಗೆ ನೇಮಿನಾಥ ಪುರಾಣದಲ್ಲಿ ಸಾಕಷ್ಟು ಆಧಾರಗಳಿವೆ. ಮಲಧಾರಿ ಮುನಿಚರ್ಯೆಗೆ ಬರುವ ಸಂದರ್ಭವನ್ನು ಕವಿ ವಿವರವಾಗಿ ವರ್ಣಿಸಿದ್ದಾನೆ. 'ಹರಿಯುಂ ಕರಿಯುಂ ಪುಲಿಯುಂ ಹರಿಣೆಯುಂ ಒಂದಾಗಿ ಮಚ್ಚಿಬೆಚ್ಚದೆ ಬೆನ್ನೊಳು ಬಂದ'ವಂತೆ ಚಂದ್ರವತಿಯಲ್ಲಿ ಬರುವ ಮುನಿಯ ಹಿಂದೆ. 'ಬರಿಯೆಲ್ವಿನ ಪುದುವಿಂ ಬೂದಿವಾರುತಿರ್ಪ ಇರವಿಂ' ಮಲಧಾರಿಯು 'ಕಾಮನ ಸುಟ್ಟ ಕಡಿದು' ಎಂಬಂತೆ ಕಂಡನಂತೆ. 'ಉಲಿವ ದಯಾ ತರಂಗಿಣಿ ಪಾವಸೆ, ಕರ್ಪೂರಕಾಯ ದೀಪ ಕಜ್ಜಲ, ಅಮರ್ದಪ್ಪಿಕೊಂಡ ಸಮಲಕ್ಷ್ಮಿಯ ಮಯ್ಯ ಮೃಗೋದ್ಭವಂ . . . . ಧೃತಿ ಪರ್ವತ ಲಗ್ನಘನಾಳಿ ಪಾಚಿ ಪೋಗಲೆ ಪೊಱಮೊಟ್ಟ ಪಾಪಮೆನಿಸಿತ್ತು ಮಲಂ ಮಲಧಾರಿ ದೇವನಾ' ಎಂದು ಮನದುಂಬಿ ವರ್ಣಿಸಿದ್ದಾನೆ. 'ತನ್ನ ಪುಣ್ಯಮೆ ಬರ್ಪಂತೆ' ಬರುವ ಮುನಿಯನ್ನು ಕಂಡು 'ಎಳ್ತರ್ಪ ನಿಧಾನಮಂ ಕಂಡಂತೆ' ಜಿನದತ್ತೆ ಕೃತಾರ್ಥಳಾದಳಂತೆ

ಇಷ್ಟೆಲ್ಲ ವಿವರವಾಗಿ ಹೇಳುವ ಕಾರಣವಿಷ್ಟೆ. ಮಲಧಾರಿಯ ಮುನಿಯ ಬಗೆಗೆ ನೇಮಿಚಂದ್ರನಲ್ಲಿ ಅಸಾಧಾರಣ ಗೌರವವಿದೆ. ಇದನ್ನು ತಿಳಿದೇ ರಾಘವಾಂಕನು ತನ್ನ ಸೋಮನಾಥ ಚರಿತ್ರವಲ್ಲಿ ಮಲಧಾರಿಯ ಬಗೆಗೆ ಅವಹೇಳನಕರ ಮಾತುಗಳನ್ನು ಹೇಳಿದಂತೆ ಕಾಣುತ್ತದೆ. ಇದಕ್ಕೆ ಉಪಷ್ಟಂಭಕವಾಗಿ ರಾಘವಾಂಕನ ಈ ಕೆಳಗಿನ ಮಾತುಗಳನ್ನು ಗಮನಿಸಬೇಕು:

> ನಡೆಯೆನಲನಂತ ತಂಡದ ಜೈನರೆಲ್ಲ ಪೊಱ
> ಮಡೆ ಗಾಳುಮೇಳೆಂದು ಗೂಳಿಯಂಗೊಂಡು ಬರೆ
> ನಡೆವ ಮಲಧಾರಿಗಳು ಕೋಪದಿಂದುರಿಯನುಗುಳುತ್ತವತಿ ಸಂಭ್ರಮಿಸುತ।
> ಎಡೆಗೋಲು ಸಮಯಾಸಮಯವೆಂಬುದಿಲ್ಲದಾ
> ಪೊಡವಿಪತಿಯರಮನೆಯ ಪೊಕ್ಕರಸನೋಲಗಕೆ
> ಸಿಡಿಲು ಬಪ್ಪಂತೆ ಬುಂದರ್ . . . .॥
>
> (ಸೋ.ನಾ.ಚಾ ೪-೯೪)

ಓರಿಯ ಗುರುಗಳಾದ ಮಲಧಾರಿಗಳನ್ನು ನಡುವಿಟ್ಟುಕೊಂಡು ಅರಮನೆಗೆ ಹೊರಟ ಜನರ ತಂಡವನ್ನು ವರ್ಣಿಸುವಲ್ಲಿ ರಾಘವಾಂಕ ಕವಿಯು ಮಲಧಾರಿ ಮುನಿಯನ್ನು ಗೂಳಿಯೆಂದು ಹೀಯಾಳಿಸಿದುದನ್ನು ಕಾಣಬಹುದು. ನೇಮಿನಾಥ ಪುರಾಣದಲ್ಲಿ ಚಂದ್ರಗತಿಯಲ್ಲಿ ಬರುವ ಮಲಧಾರಿಗೂ ಸೋಮನಾಥ ಚಾರಿತ್ರದಲ್ಲಿ ಅರಮನೆಗೆ ಹೊರಟ ಗುರು ಮಲಧಾರಿಗೂ ಯಾವ ಸಾಮ್ಯವೂ ಇಲ್ಲ. ಬದಲು ತೀರ ವಿರುದ್ಧ ಚಿತ್ರವಿದೆ. ಇದಕ್ಕೆ ಕಾರಣ ರಾಘವಾಂಕನಿಗೆ ನೇಮಿಚಂದ್ರ ಹಾಗೂ ಮಲಧಾರಿ ಮುನಿಯ ಬಗೆಗೆ ಇರುವ ಅಸಹನೆಯೇ ಬಹುಮಟ್ಟಿಗೆ ಕಾರಣವಾಗಿರಬಹುದೇ? ಅವರನ್ನು ಬಯ್ದುಕೊಳ್ಳುವ ಸುಪ್ತ ಆಸೆಯನ್ನು ಕವಿ ರಾಘವಾಂಕ ಹೀಗೆ ಪೂರೈಸಿಕೊಂಡಿರಬಹುದೇ? ಎಂಬುದನ್ನು ವಿದ್ವಾಂಸರು ಪರಿಶೀಲಿಸಬೇಕು.

೯. ನೇಮಿಚಂದ್ರನ 'ನೇಮಿನಾಥ ಪುರಾಣ'ದ ನಾಲ್ಕನೆಯ ಆಶ್ವಾಸದ ೧೨೭ನೆಯ ಪದ್ಯವು ಚಿತ್ರಲತಿಕಾ ಛಂದಸ್ಸಿನಲ್ಲಿದೆ. ಇದು ಅಕ್ಷರಗಣದ ಸಂಸ್ಕೃತ ಛಂದಸ್ಸು. ಈ ಪದ್ಯದ ಒಂದು ಪಾದವನ್ನು ಅಕ್ಷರಗಣವಾಗಿ ವಿಂಗಡಿಸದೆ ೪ ಮಾತ್ರೆಗಳ ಗಣಗಳಲ್ಲಿ ವಿಂಗಡಿಸಲು ಆಗುವ ಪರಿಣಾಮವನ್ನು ನೋಡಿರಿ:

ಕೇದಗೆ। ಪೂವಂ। ಚಾದಗೆ। ಬಾಯಂ। ಬಿಡೆಬಿಡು। ತಿರೆ ಬಿಡು। ಪನಿ ಕಡು। ವಿಸಿಲಿಂ।

ಇದು ಉದ್ದಂಡ ಷಟ್ಪದಿಯ ೩ ಹಾಗೂ ೬ನೆಯ ಪಾದಗಳಿಗೆ ಸರಿಹೋಗುತ್ತದೆ. ಉದ್ದಂಡ ಷಟ್ಪದಿಯಲ್ಲಿ ೧.೨.೪ ಹಾಗೂ ೫ನೆಯ ಪಾದಗಳಲ್ಲಿ ೪ ಮಾತ್ರೆಗಳ ೫ ಗಣಗಳೂ ೩ ಹಾಗೂ ೬ನೆಯ ಪಾದಗಳಲ್ಲಿ ೪ ಮಾತ್ರೆಯ ಎಂಟೆಂಟು ಗಣಗಳೂ ಬರುತ್ತವೆ.

ಕಾರಣ 'ನೇಮಿನಾಥ ಪುರಾಣ'ದಲ್ಲಿಯ ಈ ಪದ್ಯದ ಗತಿ. ಲಯ ರಾಘವಾಂಕನಿಗೆ ವೀರೇಶ ಚರಿತೆಯನ್ನು ಉದ್ದಂಡ ಷಟ್ಪದಿಯಲ್ಲಿ ರಚಿಸಲು ಪ್ರೇರಣೆ ಇತ್ತಿರಬಾರದೇಕೆ? ಎಂಬುದನ್ನು ವಿದ್ವಾಂಸರು ಆಲೋಚಿಸಬೇಕು. ಈ ಲೇಖನದಿಂದ ಕವಿ ರಾಘವಾಂಕ ಹರಿಹರರ ಕಾಲನಿರ್ಣಯಕ್ಕೂ ಒಂದು ನಿಶ್ಚಿತದಾರಿ ದೊರೆಯಬಹುದೆಂದೂ ನನ್ನ ಭಾವನೆ.

ಬಲ್ಲಾಳರ ‘ಬಂಡಾಯ’ದ ಯಾಮಿನಿ : ಪ್ರಾತಿನಿಧಿಕ ಮಹಿಳಾಪಾತ್ರ

–ಮಲ್ಲಿಕಾ ಘಂಟಿ

ಭಾರತದಂತಹ ದೇಶ ವರ್ಗ.ವರ್ಣ. ಭಾಷೆ. ಪ್ರದೇಶ. ಲಿಂಗ. ತಾರತಮ್ಯತೆಗಳನ್ನೆಲ್ಲ ಗರ್ಭೀಕರಿಸಿಕೊಂಡು ಏಕತೆಯ ಮಂತ್ರಕ್ಕೆ ಮನದೆರೆದು ನಿಂತಿದೆ. ಪುರುಷಪ್ರಧಾನ ಸಮಾಜರಚನೆಯ ಬುನಾದಿಯಲ್ಲಿಯ ಆರ್ಥಿಕ ಒಳಸ್ತರಗಳು ಸೂಕ್ಷ್ಮವಾಗಿ ಕೆಲಸ ಮಾಡುವುದರಿಂದ ಅದರ ಮೇಲ್ ರಚನೆಯಲ್ಲಿಯೂ ಆಂತರಿಕ ಭಿನ್ನತೆಗಳಿರುವ ಶೋಷಣೆಯ ಎಳೆಗಳು ಹುರಿಗೊಂಡಿರುತ್ತವೆ. ಹೀಗೆ ಹುರಿಗೊಂಡ ಸಾಮಾಜಿಕ ಶೋಷಣೆ ಮಹಿಳೆಯರನ್ನು ಹಲವಾರು ರೀತಿಯಲ್ಲಿ ಉರುಳಾಗಿ ಬಿಗಿಯುತ್ತಲೇ ಬಂದಿದ್ದರೂ. ನಮ್ಮ ಧರ್ಮಬೀರು ಮನಸ್ಸುಗಳು ಸ್ತ್ರೀಯನ್ನು ಶಕ್ತಿಸ್ವರೂಪಿಣಿಯೆಂದು; ದೇವತೆಯ ಪಟ್ಟಕ್ಕೆಕಟ್ಟು ವಾಸ್ತವವಾಗಿ ಚಟ್ಟಕ್ಕೇರಿಸುತ್ತಲೇ ನಡೆದಿವೆ. ಜಾತಿ. ವರ್ಗ ವೈರುಧ್ಯಗಳು ಮಹಿಳೆಯರನ್ನು ಶೋಷಣೆಗೆ ಒಳಪಡಿಸುವಾಗ ತಮ್ಮ ತಮ್ಮ ಶಕ್ತಿಸಾಮರ್ಥ್ಯಕ್ಕನುಗುಣವಾಗಿಯೆ ಬೆಳೆದು ಬಂದಿವೆ. ಹೀಗೆ ಶೋಷಣೆಯ ನಿರ್ದಿಷ್ಟಸ್ವರೂಪವನ್ನು, ಅದರ ತೀವ್ರತೆಯನ್ನು ಆಂದರೆ ದಿನಕಾಲದ. ಆಯಾ ಸಮಾಜದ ಆಂತರಿಕ ರಚನೆಯನ್ನು ಅರ್ಥೈಸಿಕೊಳ್ಳುವುದರ ಮೂಲಕ ಪರಿಹಾರ ಕಂಡುಕೊಳ್ಳಬೇಕಾಗುತ್ತದೆ.

ಭಾರತೀಯ ಸಮಾಜ ಶ್ರೇಣೀಕರಣಕ್ಕೊಳಪಟ್ಟಿರುವಾಗ ಅದರ ಒಂದೊಂದು ಮೆಟ್ಟಲಿನ. ಸಮಾಜದ ಸ್ವರೂಪವೂ ಅಲ್ಲಿಯ ಮಹಿಳೆಯರ ಜೀವನ ಧೋರಣೆ. ಬದುಕಿನಕ್ರಮ ಹಾಗೂ ಸ್ಥಾನಮಾನಗಳನ್ನು ನಿರ್ದೇಶಿಸುತ್ತಿರುತ್ತವೆ ಮತ್ತು ನಿರ್ಣಯಿಸಿರುತ್ತವೆ. ಪರಿಸ್ಥಿತಿ ಹೀಗಿರುವಾಗ ನಾವು ಸಾರಾಸಗಟಾಗಿ ಪುರುಷಪ್ರಧಾನ ಸಮಾಜವೆಂದಷ್ಟೇ ಭಾವಿಸಿ ಮಹಿಳೆಯರ ಸಮಸ್ಯೆಗಳನ್ನು ಸರಳೀಕರಿಸಿ ನೋಡುವಾಗ ನಮ್ಮ ದೃಷ್ಟಿ ದೂರಗ್ರಾಹಿತ್ವ ಮತ್ತು ಸೂಕ್ಷ್ಮಗ್ರಹಿಕೆಯನ್ನು ಕಳೆದುಕೊಳ್ಳುತ್ತದೆ. ಜೊತೆಗೆ ಪುರುಷ ವಿರೋಧಿ. ಮನೋಭಾವ ಬೆಳೆಯುವ ಅಪಾಯಕಾರಿ ವಾತಾವರಣ ನಿರ್ಮಾಣದ ಸಾಧ್ಯತೆಯೂ ಇರುತ್ತದೆ.

ಕನ್ನಡ ಸಾಹಿತ್ಯದಲ್ಲಿ ಮಹಿಳೆಯರನ್ನು ಕುರಿತಂತೆ ಪುರುಷರು ಬರೆಯುವಾಗ ಮತ್ತು ಮಹಿಳೆಯರು ಬರೆಯುವಾಗಲೂ ಸಹಿತ ಒಪ್ಪಿತ ಮೌಲ್ಯಗಳ ಸುತ್ತಲೆ ಗಿರಕಿ ಹೊಡೆಯುತ್ತಿರುವಂತೆ ಭಾಸವಾಗದೆ ಇರದು. ಹೀಗಿಲ್ಲದಿದ್ದರೂ ಅತ್ಯಂತ ಉದಾರ ಮನದವರಾಗಿದ್ದರೆ ಔದಾರ್ಯದ ಉರುಳಿನಲ್ಲಿ ಸಿಕ್ಕು ಸ್ವಲ್ಪ ಸ್ಥಾನಪಲ್ಲಟವನ್ನು ಮಾಡಿರುವುದುಂಟು. ಔದಾರ್ಯ ಮತ್ತು ಉದಾಸೀನತೆಗಳೆರಡನ್ನೂ ಮಹಿಳೆಯರ

ಕುರಿತಂತೆ ಬರೆಯುವಾಗ, ಮಾತನಾಡುವಾಗ ನಮ್ಮ ಬಹುಪಾಲು ಬರಹಗಾರರು ಅನುಸರಿಸಿದ ನೀತಿ. ಒಂದು ಕೃತಿಯ ಹಿಂದೆ ಕೃತಿಕಾರನ ಮನಸ್ಸು ವೈಚಾರಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸರ ಕೆಲಸ ಮಾಡುತ್ತಿರುತ್ತವೆ. ಬೇರೆ ಬೇರೆ ಜಾತಿ, ಸಮಾಜವರ್ಗದಿಂದ ಬಂದ ಬರಹಗಾರರು ಇಂದು ಭಿನ್ನ ಭಿನ್ನ ಜನಸಾಮುದಾಯದ ಸಾಮಾಜಿಕ, ಸಾಂಸ್ಕೃತಿಕ ಒಳರಚನೆಗಳ ಬಗ್ಗೆ ಬರೆಯುತ್ತಿರುವಾಗಲೂ ಸಹಿತ ಆಯಾ ಸಮಾಜದಲ್ಲಿರುವ ಸ್ತ್ರೀಯರನ್ನು ಕುರಿತಂತೆ ಬರೆಯುವಾಗ, ಸಾಮಾಜಿಕ ಒಳತೋಟಗಳು ಮಹಿಳೆಯರ ಬದುಕಿನ ರೀತಿ ರಿವಾಜುಗಳನ್ನು ರೂಪಿಸಿರುತ್ತವೆ ಎಂಬುದನ್ನು ಬಿಂಬಿಸುವಲ್ಲಿ ಪೂರ್ಣತೆಯನ್ನು ಗ್ರಹಿಸದೆ ಪೂರ್ವಾಪರವಾದ ಸಾಮಾಜಿಕ ಪರಿಕಲ್ಪನೆಯ ಸರಳೀಕರಣಕ್ಕೆ ಒಳಗಾಗಿದ್ದು ಕಂಡುಬರುತ್ತದೆ.

ಒಂದು ಕಡೆ ಔದ್ಯೋಗಿಕರಣದ ದಾಪುಗಾಲಿನ ಬೆಳವಣಿಗೆ, ನಗರ ಜೀವನದ ಸಂಸ್ಕೃತಿ, ಇನ್ನೊಂದು ಕಡೆ ಇದೇ ಸಂದರ್ಭದಲ್ಲಿ ಯುಗಾಂತರದ ಹಿಂದಿರುವ ಗ್ರಾಮೀಣ ಜನರ ಮುಗ್ಧ ಬದುಕು. ಈ ಎರಡು ಸಂಸ್ಕೃತಿಯ ಆಂತರಿಕ ರಚನೆಯ ಬಗ್ಗೆ ಬರಹಗಾರರಾದವರಿಗೆ ಸೂಕ್ಷ್ಮಗ್ರಹಿಕೆಯ ಗುಣವಿರಬೇಕಾಗುತ್ತದೆ. ಇಲ್ಲದಿದ್ದರೆ ವಾಸ್ತವತೆಯನ್ನು ಕೃತಿಯಲ್ಲಿ ಮೂರ್ತೀಕರಿಸುವಾಗ ಬಳಲಬೇಕಾಗುತ್ತದೆ. ಇಂದು ಜಮೀನ್ದಾರಿ ಸಂಸ್ಕೃತಿಯ ಅಸ್ತಮಾನದ ಸಂದರ್ಭದಲ್ಲಿಯ ಪಳಿಯುಳಿಕೆಯ ವಾರಸುದಾರರು ತಮ್ಮ ಅಸ್ತಿತ್ವಕ್ಕಾಗಿ ನಡೆಸುವ ಹೋರಾಟ. ಅದೇ ಸಂದರ್ಭದಲ್ಲಿ ಬಂಡವಾಳಶಾಹಿ, ಆರೆಬಂಡವಾಳಶಾಹಿಯೂ ಸಾಮಾಜಿಕ ಜೀವನದ ಮೇಲೆ ತನ್ನ ಹಿಡಿತವನ್ನಿಟ್ಟುಕೊಳ್ಳುವ ಹಂಬಲ. ಇಂತಹ ಸಂಕ್ರಮಣ ಸಂದರ್ಭ ಮಹಿಳೆಯರ ಬದುಕನ್ನು, ಜೀವನ ವಿಧಾನ, ಮೌಲ್ಯಪ್ರತಿಪಾದನೆಯ ರೀತಿ ನೀತಿ ಸಾಮಾಜಿಕ ರೀತಿ ರಿವಾಜುಗಳು ಹಿಗ್ಗಾಮುಗ್ಗಾ ಜಗ್ಗುತ್ತಿರುತ್ತವೆ. ಇದು ಗ್ರಾಮೀಣ ಪ್ರದೇಶದ ಸಂಗತಿಯಾದರೆ, ನಗರ ಪ್ರದೇಶದ್ದು ತದ್ವಿರುದ್ಧವಾಗಿರುತ್ತದೆ. ನಗರಗಳಲ್ಲಿ ಮಹಿಳೆಯರಿಗೆ ಕಲಿಕೆಯ, ಉದ್ಯೋಗದ ಹೆಬ್ಬಾಗಿಲು ತೆರೆದಂತೆ ಅನಿಸಿದರೂ ಸನಾತನ ಪುರುಷ ಮನಸ್ಸುಗಳು ತೆರೆಯದೆ ಸಂಕ್ರಮಣ ಸ್ಥಿತಿಯಲ್ಲಿವೆ.

ಅನೇಕ ಅಸಮಾನ ನೆಲೆಗಳಿಂದೊಡಗೂಡಿದ ಸಮಾಜದಲ್ಲಿ ಲಿಂಗಾಧಾರಿತ ಅಸಮಾನತೆಯ ಸಿಕ್ಕನ್ನು, ಅದರ ಕ್ರೌರ್ಯ, ವಂಚನೆ, ನೋವು ಬದುಕಿನ ಅವಿಭಾಜ್ಯ ಅಂಗವಾಗಿಯೆ ಬೆಳೆದುಬಂದಿರುವಾಗಲೂ ಸಹಿತ ನಮ್ಮ ಪ್ರಾಚೀನ ಸಾಹಿತ್ಯ ಇವಕ್ಕೆ ಸ್ಪಂದಿಸಿರುವ ರೀತಿಯಲ್ಲಿ ಅಭೂತಪೂರ್ವವಾದದ್ದೇನನ್ನೂ ಸಾಧಿಸಲು ಸಾಧ್ಯವಾಗಿಲ್ಲ. ಈ ಸಾಧ್ಯತೆಗಳಿಗೆ ಅಂದಿನ ಮಿತಿಗಳು, ಸಾಧ್ಯತೆಗಳು ಕಣ್ಣೆದುರಿಗೆ ನಿಚ್ಚಳವಾಗಿದ್ದಾಗಲೂ ಸಹಿತ ಅದೇ ಪರಂಪರೆಯ ಹಿತಾಸಕ್ತಿಗಳು ಮುಂದುವರಿಯುತ್ತಿರುವಲ್ಲಿಯ ಒತ್ತಡಗಳ ಮೇಲೆ ನಿಚ್ಚಳ ಬೆಳಕು ಬೀರಬೇಕಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿಯೂ ಮೇಲಿನ ಮಾತುಗಳು ಉಳಿದುಕೊಂಡಿವೆ. ಪ್ರಾರಂಭಿಕ ಹಂತದಲ್ಲಿ ಇಂಗ್ಲೀಷ ಸಾಹಿತ್ಯದ ರೋಮ್ಯಾಂಟಿಕ್ ವಾಸನೆಯ ಸೆಳೆತ, ಈ ನೆಲದ ಬುದ್ಧ, ಬಸವ, ಗಾಂಧಿ, ಪರಮಹಂಸ, ರಾಜಾರಾಮ ಮೋಹನರಾಯರ ಆದರ್ಶದ ಪ್ರಭಾವದಿಂದ ಮೂಡಿಬಂದ ಸಾಹಿತ್ಯದಲ್ಲಿ ಹೆಣ್ಣು

ಭೂಮಿತೂಕದ, ತಾರೆ, ಚಂದ್ರ ನಿಹಾರಿಕೆಯರ ಮೈಸಿರಿ ಉಳಿಸಿಕೊಂಡು ಸುಧಾರಣೆಯ ಪರಿಧಿಯಲ್ಲಿ ಹೆಜ್ಜೆ ಇಟ್ಟಳು. ನಂತರ ಬಂದ ಪ್ರಗತಿಶೀಲರ ಕಾಲದಲ್ಲಿ ಈ ಪರಿಧಿಯಿಂದ ಆಚೆಗೆ ಬಂದಂತೆ ಅನಿಸಿ ಹೊಸ ಬದುಕಿನ ದಿಕ್ಕಿನೆಡೆಗೆ ಆಶೆಯಿಂದ ಮುಖತಿರುಗಿಸಿದ್ದೇನೋ ನಿಜ. ಆದರೆ ಮುನ್ನಡೆಯಲು ಸ್ಪಷ್ಟ ದಾರಿಯೇ ಕಾಣಿಸಲಿಲ್ಲ. ಇದಕ್ಕೆ ಕಾರಣ ಪ್ರಗತಿಶೀಲ ಬರಹಗಾರರಿಗೆ ಸಮಾನತೆಯನ್ನು ಪರ್ಯಾಯವಾಗಿ ಪ್ರತಿಷ್ಠಾಪಿಸುವಲ್ಲಿ ಗೊಂದಲಗಳಿದ್ದವು. ಪ್ರಗತಿಶೀಲ ಲೇಖಕರ ಸಮಗ್ರಚಿಂತನಪರತೆ, ಪ್ರಗತಿಪರ ಮತ್ತು ಆರೋಗ್ಯಕಾರಿ, ವೈಜ್ಞಾನಿಕ ಸತ್ವದ್ದಾಗಿರಲಿಲ್ಲ. ಇದರ ಪರಿಣಾಮದಿಂದ ಪ್ರಗತಿಶೀಲ ಲೇಖಕರಿಂದಲೂ ಮಹಿಳೆಯರ ಕುರಿತಂತೆ ಆರೋಗ್ಯಕರವಾದ ಸಾಮಾಜಿಕ ಸ್ಥಾನಮಾನಗಳ ಬಗ್ಗೆ ಹೇಳುವ ಕೃತಿಗಳು ಬರದೆ ಹೋದವು. ಆದಾಗ್ಯೂ ಮಹಿಳೆಯರ ಕುರಿತಂತೆ ಒಂದು ದೃಷ್ಟಿಕೋನ ದೊರೆತದ್ದಂತೂ ನಿಜ. ಮಣ್ಣಿನ ವಾಸನೆಯನ್ನು ಮೈಗೂಡಿಸಿಕೊಂಡು ನೆಲದೆದೆಯಲ್ಲಿ ಕಾಲೂರಿದ ಭ್ರಮೆಯಲ್ಲಿ ಹೊರಟ ನವ್ಯದ ಸಂದರ್ಭದಲ್ಲಂತೂ ಮೈವಾಸನೆ (ಲೈಂಗಿಕತೆ) ವಿಜೃಂಭಿಸಿದ್ದು ಅದರ ಮಿತಿ. ಈ ಸಂದರ್ಭದಲ್ಲಿ ಹೆಣ್ಣನ್ನು ಮಡಿವಂತಿಕೆಯ ಲಕ್ಷ್ಮಣರೇಖೆ ದಾಟಿಸಿದ್ದೇನೋ ನಿಜ. ಆದರೆ ಪರ್ಯಾಯ ವ್ಯವಸ್ಥೆಯ ಪರಿಕಲ್ಪನೆಯನ್ನು ಬಿಂಬಿಸುವಲ್ಲಿ ಮುಗ್ಗರಿಸಿದರು. ಹಾಗೇನೇ ದಲಿತ-ಬಂಡಾಯದ ಸಂದರ್ಭದಲ್ಲಿಯೂ ಸಹಿತ ಹೆಣ್ಣನ್ನು ಆಕೆಯ ವ್ಯಕ್ತಿತ್ವವನ್ನು ಚಿತ್ರಿಸುವಾಗ ವ್ಯವಸ್ಥೆಯ ವಿರುದ್ಧ ನಡೆಯುವ ಸಂಘರ್ಷದಲ್ಲಿ ಗಂಡಿನ ಸರಿದೊರೆಯಾಗಿ, ಮುಖಾಮುಖಿಯಾಗಿ ನಿಲ್ಲಿಸುವ, ಆಯ್ಕೆಯ ಹಕ್ಕನ್ನು ಚಲಾಯಿಸುವ, ಯಾವುದೇ ಸೈದ್ಧಾಂತಿಕ, ವೈಚಾರಿಕ ಪಾತಳಿಯ ಮೇಲೆ ಮಹಿಳೆಯರನ್ನು ತರುವ ಹಂಬಲ ಇನ್ನು ಕಾಯ್ದು ನೋಡುವುದೇ ಆಗಿದೆ. ಬೌದ್ಧಿಕ, ಚಾರಿತ್ರಿಕ, ಸಾಮಾಜಿಕ ಚಿಂತನಪರತೆಯ ವ್ಯಕ್ತಿತ್ವವನ್ನು ಆಕೆಯಲ್ಲಿ ಗುರುತಿಸದೆ, ತುಂಬದೆ ಪ್ರತಿಭಟನೆಯನ್ನೇ ಬಂಡವಾಳವಾಗಿರಿಸಿ ಅವಳನ್ನು ಬೆಳೆಸುವುದು, ಚಿತ್ರಿಸುವುದು ಅಷ್ಟೊಂದು ಆರೋಗ್ಯಕಾರಿ, ಗುರಿಗಮ್ಯವಾದ ಸಂಗತಿಯಲ್ಲ.

ನವೋದಯದ ಆರಾಧನೆಯನ್ನು ಮೀರಿ, ಪ್ರಗತಿಶೀಲರಲ್ಲಿ ಜೀವದುಂಬಿ, ನವ್ಯರಲ್ಲಿ ಪೊರೆಬಿಚ್ಚಿ, ಬಂಡಾಯ ದಲಿತದಲ್ಲಿ ಧ್ವನಿ ಪಡೆದುಕೊಂಡಲ್ಲಷ್ಟೇ ನಿಂತು ವಿರಮಿಸದೆ, ಸಂಘರ್ಷಮಯವಾದ ಬದುಕಿನಲ್ಲಿ ಪುರುಷನ ಸರಿದೊರೆಯಾಗಿ ಹೆಜ್ಜೆಹಾಕುವಂತವಳಾಗಬೇಕಾಗಿದೆ. ಸಾಮಾಜಿಕ ಅಸಮಾನತೆ, ವರ್ಗ, ವರ್ಣ, ವ್ಯವಸ್ಥೆಯ ವಿರುದ್ಧ ಸಂಘರ್ಷಕ್ಕೆ ಇಳಿಯುವಾಗ, ಮಹಿಳೆ ಇಂದು ಶ್ರಮಿಕವರ್ಗ, ದಲಿತವರ್ಗ ಪರವಾಗಿ ನಿಲ್ಲುವದರ ಮೂಲಕ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಲ್ಲಿ ಎಲ್ಲ ಪುರುಷ ಮನೋಭಾವದ ಕ್ರೌರ್ಯದ ವಿರುದ್ಧವೂ ಬಂಡೇಳಬೇಕಾಗಿದೆ.

ಬಹುತೇಕ ಕನ್ನಡ ಕಾದಂಬರಿಕಾರರು ಈ ನೆಲೆಯಲ್ಲಿ ಸಂಪೂರ್ಣವಾಗಿ ಹೆಣ್ಣಿನ ಚಿತ್ರಣವನ್ನು ಇದುವರೆಗೂ ಚಿತ್ರಿಸಿಲ್ಲ. ನಿರಂಜನರೇನೋ ಲಿಂಗಾಧಾರಿತ ಸಮಾಜದ ವಿರುದ್ಧ ತಳೆದ ನಿಲುವಿಗನುಗುಣವಾಗಿ ಪ್ರಾರಂಭದಿಂದ ಇಲ್ಲಿಯವರೆಗೂ ಬರೆಯುತ್ತ ಬಂದಿರುವರು. ಯಶಪಾಲರ ಕೃತಿಗಳಲ್ಲಿಯೂ ಈ ಆಶಯ ಸ್ಥಾಯಿಯಾಗಿ ಕೆಲಸ

ಮಾಡಿದ್ದನ್ನು ನೋಡಬಹುದು [ದಾದ ಕಾಮ್ರೇಡ್, ಪಾರ್ಟಿಕಾಮ್ರೇಡ್ ಗೀತಾ ಕಾದಂಬರಿಗಳು]. ಆ ನಿಟ್ಟಿನಲ್ಲಿ ವ್ಯಾಸರಾಯ ಬಲ್ಲಾಳರ ಬಂಡಾಯ ಕಾದಂಬರಿಯಲ್ಲಿಯ 'ಯಾಮಿನಿ', ಮೇಲಿನ ಆಶೋತ್ತರಗಳ ಹೋರಾಟದ ಹಾದಿಯಲ್ಲಿ ಪುರುಷ ಸರಿದೊರೆಯಾಗಿ ಹೆಜ್ಜೆ ಹಾಕಿದ್ದಂತೂ ಆಶಾದಾಯಕ ಬೆಳವಣಿಗೆ.

ಸಾಹಿತ್ಯದ ಉಳಿದ ಪ್ರಕಾರಗಳ ಕ್ಷೇತ್ರಕ್ಕಿಂತಲೂ ಕಾದಂಬರಿ ಕ್ಷೇತ್ರ ವೈಚಾರಿಕ, ಸೈದ್ಧಾಂತಿಕ, ಬೌದ್ಧಿಕ, ಭಾವನಾತ್ಮಕ ಬೀಜಗಳನ್ನು ಬಿತ್ತಿ ಬೆಳೆಯಲು ಅತ್ಯಂತ ಪ್ರಶಸ್ತವಾದ ಸ್ಥಳ. ಸೈದ್ಧಾಂತಿಕ, ವೈಚಾರಿಕ ಪಾತಳಿಯ ಮೇಲಿಂದ ಸೃಷ್ಟಿಕಾರ್ಯಕ್ಕೆ ತೊಡಗುವ ಸಾಹಿತಿಗೆ ಕೆಲವು ತೊಂದರೆಗಳು ಎದುರಾಗುವದುಂಟು. ಯಾವುದೇ ಸೈದ್ಧಾಂತಿಕ ಸಂಗತಿಗಳನ್ನು ಮೈಗೂಡಿಸಿಕೊಂಡಿರುವ ವ್ಯಕ್ತಿ, ನಿಷ್ಠೆಯಿರುವ ವ್ಯಕ್ತಿ, ಆ ಸಿದ್ಧಾಂತದ ದೇಹವಾದ ಜನಪರ ಚಳುವಳಿಯ ಜೊತೆಗೆ ತಾದಾತ್ಮ್ಯ ಸಂಬಂಧ ಹೊಂದುವುದರ ಮೂಲಕ ಹತ್ತಿರದಿಂದ ಪಡೆದ ಅನುಭವದ ಅಭಿವ್ಯಕ್ತಿ ಪ್ರಥಮ ಹಂತದ್ದು. ಸಿದ್ಧಾಂತ, ಜನಪರ ಚಳುವಳಿಯ ಬಗ್ಗೆ ಕಳಕಳಿಯಿಂದ ಅವಲೋಕಿಸುವ, ಅಷ್ಟರಮಟ್ಟಿಗೆ ಅದರ ಬಗ್ಗೆ ಅನುಕಂಪವಿರುವ ವ್ಯಕ್ತಿಯ ಅನುಭವದ ಅಭಿವ್ಯಕ್ತಿ ದ್ವಿತೀಯ ಹಂತದ್ದಾಗಿರುತ್ತದೆ. ಈ ಹಂತದಲ್ಲಿರುವವರು 'ಬಂಡಾಯದ' ವ್ಯಾಸರಾಯರು. ಕಾರಣ ನಿರಂಜನರ ಹಾಗೆ ಚಳುವಳಿಯ ಒಳತೋಟಿಯನ್ನು ಬಿಚ್ಚುವುದು ಅವರಿಗೆ ಆಗಿಲ್ಲ.

ಬಂಡಾಯ ಕಾದಂಬರಿಯ ಕೇಂದ್ರ ಪಾತ್ರಗಳಲ್ಲಿ 'ಯಾಮಿನಿ'ಯೂ ಒಬ್ಬಳು. 'ಬಂಡಾಯ'ಹೀಗಿದೆ : ಮುಂಬೈಯ ನಗರದ ಒಡಲಲ್ಲಿರುವ ಹಲವಾರು ವೈರುಧ್ಯಗಳಲ್ಲಿ ವರ್ಗ ವೈರುಧ್ಯವೂ ಒಂದು. ಸಾಗರೋಪಾದಿಯಲ್ಲಿರುವ ಶ್ರಮಿಕ ಶಕ್ತಿ, ಅದರ ಬದುಕಿನ ಹಲವು ಮುಖಗಳು, ಇತ್ತೀಚಿಗೆ ಕಾರ್ಮಿಕ-ಮಾಲೀಕರ ಸಂಬಂಧಗಳು ತೆಗೆದುಕೊಂಡ ತಿರುವುಗಳು, ಶೋಷಣೆಯ ಆಧಾರಿತ ವ್ಯವಸ್ಥೆಯನ್ನೇ ಬುಡಮೇಲು ಮಾಡಬೇಕು ಎನ್ನುವ ಹಂಬಲದಿಂದ ಶ್ರಮಜೀವಿಗಳ ಸಂಘಟನೆಗೆ ತೊಡಗುವ ಸೈದ್ಧಾಂತಿಕ ಹಿನ್ನಲೆಯಲ್ಲಿ ಸಂಘಟನೆ ಚಳುವಳಿಗೆ ತೊಡಗುವ ಯುವಕರು ಒಂದುಕಡೆ. ಶ್ರಮಿಕ ಶಕ್ತಿಯು ಒಂದಾಗದಂತೆ ಹಗಲಿರುಳು ಪಿತೂರಿ ನಡೆಸುವ ಬಂಡವಾಳಶಾಹಿ ಪುರೋಹಿತರು ಇನ್ನೊಂದು ಕಡೆ. ಇವರಿಬ್ಬರ ನಡುವೆ ನಿತ್ಯ ನಡೆಯುವ ಸಂಘರ್ಷ, ತನ್ಮೂಲಕ ಹೊರಹೊಮ್ಮುವ ಹಿಂಸೆ ಕ್ರೌರ್ಯ. ಹೀಗೆ ಬುಗಿಲೆದ್ದ ಜ್ವಾಲಾಮುಖಿಗಳನ್ನೆಲ್ಲ ಒಳಗೊಂಡ ಮುಂಬೈ ಸಹಸ್ರಕಣ್ಣಿನ ಇಂದ್ರನಂತೆ ಮಿನುಗುತ್ತಲೇ ಇರುತ್ತದೆ.

'ಯಾಮಿನಿ' ಮುಂಬೈಯಂತಹ ಊರಲ್ಲಿ ದುಡಿಯುವ ಮಧ್ಯಮ ವರ್ಗದಿಂದ ಬಂದ ಪಾತ್ರ. ಭ್ರಮಾತ್ಮಕತೆಯನ್ನೇ ಬದುಕಿನ ಬಂಡವಾಳವಾಗಿರಿಸಿಕೊಂಡಿರುವ ಈ ವರ್ಗದ ಮಹಿಳೆಯರಿಗಿಂತಲೂ ಭಿನ್ನವಾದ ಆಲೋಚನಾ ವಿಧಾನ, ವೈಚಾರಿಕ, ಬೌದ್ಧಿಕ, ಸೈದ್ಧಾಂತಿಕ ಪಾತಳಿಯ ಮೇಲೆ ಮೇಲಕ್ಕೇರುವ ಆಶಾದಾಯಕ ಪಾತ್ರ. ಹೊರಗೆ ದುಡಿಯುವ ಮಹಿಳೆಯರನ್ನು ಶೋಷಣೆಗೊಳಪಡಿಸುವ ವಿಧಿವಿಧಾನಗಳು ಇಂದು ಅತ್ಯಂತ ನಯನಾಜೂಕಿನಿಂದ ಹೊಳಪುಗೊಂಡು ಬಂದವುಗಳು.

ಲೆನಿನ್, ಮಾರ್ಕ್ಸ್, ಮಾವೋ ಅವರ ವರ್ಗಸಿದ್ಧಾಂತದ ಹಿನ್ನೆಲೆಯಲ್ಲಿ ರಾಜಕೀಯ ಯಂತ್ರದ ಚಾಲಕತ್ವವನ್ನು ಹಿಡಿದುಕೊಂಡು ಶ್ರಮಿಕ ವರ್ಗ, ಇಂದು ಬೇರೆ ಬೇರೆ ರಾಷ್ಟ್ರಗಳಲ್ಲಿ ಉಜ್ವಲವಾದ ಬದುಕನ್ನು ರೂಪಿಸಿಕೊಂಡಿದೆ. ಈ ದೇಶದ ವ್ಯವಸ್ಥೆಯ ಅನಾರೋಗ್ಯಕರವಾದ ನೆಲೆಯಲ್ಲಿದೆ ಎಂಬುದನ್ನು ಮನಗಂಡ ಯುವಶಕ್ತಿ ಅದರ ಪಲ್ಲಟಕ್ಕಾಗಿ, ಬದಲಾವಣೆಗಾಗಿ ಹಂಬಲಿಸಿ ಶ್ರಮಿಕರನ್ನು ಸಂಘಟಿಸುವಲ್ಲಿ ಮುಂದಾದಾಗ ಹಲವಾರು ಬಿಕ್ಕಟ್ಟುಗಳು ಎದುರಾಗುವುದು ಸಹಜ. ಬೇರೆ ಬೇರೆ ತತ್ವ-ಸಿದ್ಧಾಂತಗಳ ಹಿನ್ನೆಲೆಯಲ್ಲಿ ಸಂಘಟನೆಗೆ ತೊಡಗಿದಾಗ ಭಿನ್ನಾಭಿಪ್ರಾಯಗಳು ಉಂಟಾದಾಗ್ಯೂ, ಒಂದೇ ಗುರಿಗಮ್ಯತೆ ಹೊಂದಿರುವರು, ಬೇರೆ ಬೇರೆ ಹೆಸರಿನಲ್ಲಿ ಅಸ್ತಿತ್ವಕ್ಕೆ ಬಂದ ಸಂಘಟನೆಗಳಲ್ಲಿ ನೆಕ್ಸಲೈಟ್ ಗುಂಪು ಒಂದು. ಇಂತಹ ವರ್ಗ ಹೋರಾಟದ ವಸ್ತುವುಳ್ಳ ಕಾದಂಬರಿಯಲ್ಲಿ ಮಹಿಳಾ ಪಾತ್ರಗಳ ಬೆಳವಣಿಗೆ ಯಾವ ರೀತಿಯಾಗಿರಬಹುದು? ಕಾದಂಬರಿಯ ಕೇಂದ್ರಸ್ಥಾನದಲ್ಲಿರುವ 'ಯಾಮಿನಿ' ಕಾದಂಬರಿಯುದ್ದಕ್ಕೂ ಬಿಚ್ಚಿಕೊಳ್ಳುವಲ್ಲಿ, ಚಾಚಿಕೊಳ್ಳುವಲ್ಲಿ ಈ ಹಿಂದಿನ ಹೆಣ್ತನದ ಹೇಡಿತನಕ್ಕೆ (ಆರೋಪಿಸಲ್ಪಟ್ಟದ್ದು) ವಿದಾಯ ಹೇಳಿ ವೈಚಾರಿಕ, ಸಂಘಟನಾತ್ಮಕ ಶಕ್ತಿ-ಯುಕ್ತಿಯಿರುವ, ಬೌದ್ಧಿಕ ಪಾತ್ರವಾಗಿ ಬೆಳೆಯುತ್ತಾಳೆ.

ಮಹಿಳೆಯ ಕ್ಷೇತ್ರವನ್ನು (ಮನೆ) ಸೃಷ್ಟಿಸಿಕೊಟ್ಟ ಪುರುಷ ಅದರ ಮೇಲೆ ತನ್ನ ಯಜಮಾನ ಸಂಸ್ಕೃತಿಯನ್ನು ಹೇರಿ, ಅದು ಹಿಗ್ಗದಂತೆ ಕುಗ್ಗದಂತೆ, ವಿಸ್ತರಿಸದಂತೆ ಧರ್ಮಕರ್ಮಗಳ ಲಕ್ಷ್ಮಣಗೆರೆ ಕೊರೆದು ತಾನು ಸೀಮಾತೀತನಾಗಿ ಬೆಳೆದ. ಶತಮಾನಗಳಿಂದ ಪುರುಷ ಸೃಷ್ಟಿಯ ನೆಲೆಯಲ್ಲಿಯೂ ಮಹಿಳೆ ನಿರಂತರವಾಗಿ ಅಭದ್ರತೆಯ ಭಯದಲ್ಲಿ ಬದುಕುವುದು ತಪ್ಪಲಿಲ್ಲ. ಆದರೆ ಔದ್ಯೋಗಿಕರಣದ ಗದಾಪ್ರಹಾರದಿಂದ ಪುರುಷ ಸೃಷ್ಟಿಸಿದ ಕ್ಷೇತ್ರದಿಂದ ಆತನ ಅಪೇಕ್ಷೆಯಂತೆಯೇ ದುಡಿಮೆಯ ಬೇರೆ ಬೇರೆ ಕ್ಷೇತ್ರಕ್ಕೆ ಪರಿಚಯಿಸಲ್ಪಟ್ಟಳು. ಹೀಗೆ ಪರಿಚಯಿಸಲ್ಪಟ್ಟ ಮಹಿಳೆ ಅಧಿಕಾರಶಾಹಿ, ಯಜಮಾನಗಿರಿಗಳನ್ನೆಲ್ಲ ಏಕಕಾಲದಲ್ಲಿಯೆ ಎದುರಿಸುವ ಸ್ಥಿತಿಯ ಜೊತೆಗೆ ಬಂಡವಾಳಶಾಹಿಯ ಸೂಕ್ಷ್ಮವಾದ ಲೈಂಗಿಕ ಶೋಷಣೆ ಮಾನಸಿಕ ಹಿಂಸೆಯನ್ನು ಅನುಭವಿಸುವ ಸ್ಥಿತಿ ಮೊದಲಿಗಿಂತಲೂ ತೀವ್ರವಾಯಿತು. ಹೀಗೆ ದುಡಿಯುವ ಕ್ಷೇತ್ರದಲ್ಲಿ ಮೊದಮೊದಲು ವೈಯಕ್ತಿಕ ನೆಲೆಯಲ್ಲಿ ಪುರುಷಕ್ರೌರ್ಯವನ್ನು ಎದುರಿಸುತ್ತಿದ್ದ ಮಹಿಳೆಯರು ಸಂಘಟನೆ, ಹೋರಾಟ ಎನ್ನುವಂಥವುಗಳ ಕಡೆಗೆ ತಡವಾಗಿಯಾದರೂ ಗಮನಹರಿಸಿದರು. ಅದಕ್ಕೆಂದೇ ಯಾಮಿನಿಯಂಥವರು ವೈಯಕ್ತಿಕ ನೆಲೆಯಿಂದ ಸಾಮಾಜಿಕ, ಸಂಘಟನಾತ್ಮಕ ನೆಲೆಯನ್ನು ಮುಟ್ಟುವುದು ಆಕಸ್ಮಿಕ ಎನಿಸುವುದರ ಜೊತೆಗೆ ಅನಿವಾರ್ಯವೂ ಆಗಿತ್ತು. ಈ ವಿಷಯವನ್ನು ಕಾದಂಬರಿಯಲ್ಲಿ ಬಲ್ಲಾಳರು ಯಾಮಿನಿಯನ್ನು ಕುರಿತಂತೆ "ಯಾವುದು ಮೊದಲಿಗೆ ಕ್ಷಣಿಕ ಆಸಕ್ತಿಯ, ಕುತೂಹಲ ಬೆರೆತ ಕಾರ್ಯಾಸಕ್ತಿಯ ಸಾಧನವೆನಿಸಿತ್ತೋ, ಅದೇ ಈಗ ಜೀವನಧರ್ಮವೆನಿಸುತ್ತಿದೆ; ಜೀವದ ಜೀವವೆನಿಸಿದ್ದ ರಾಜೀವನ ಜತೆಗೆ ಜೀವನಧರ್ಮ . . . ."(ಬಂಡಾಯ-ವ್ಯಾಸರಾಯ ಬಲ್ಲಾಳ, ಪು. ೩೧೯). ಹೀಗೆ ಕ್ಷಣಿಕ ಆಸಕ್ತಿಯ

ಕ್ಷೇತ್ರದಲ್ಲಿ ಯಾಮಿನಿ ಕಾಲಿಟ್ಟವಳು ಚಳುವಳಿಯ. ಸಂಘಟನೆಯ ಅವಿಭಾಜ್ಯ ಅಂಗವಾಗಿ ಬೆರೆಯುತ್ತಾಳೆ ಮತ್ತು ಬೆಳೆಯುತ್ತಾಳೆ.

ಬದುಕಿನ ವಸಂತದ ಬಾಗಿಲನ್ನು ನೂಕಿ ಬಂದ ಶ್ರೀಕಾಂತನಿಗೆ ಕಂಡದ್ದು (ಶಕುಂತಲೆ) ಯಾಮಿನಿ. ಯಾಮಿನಿಯ ಕೈಹಿಡಿದ ಶ್ರೀಕಾಂತನಿಗೆ ಅನಿರೀಕ್ಷಿತವಾಗಿ ತಗುಲಿದ ಪೋಲಿಯೋದಿಂದ ಯಾಮಿನಿಯ ಬದುಕಿನ ದೋಣಿ ಬೇರೆ ದಾರಿಗೆ ತಿರುಗಿಕೊಳ್ಳುತ್ತದೆ. ದುಡಿಯುವ ಕ್ಷೇತ್ರದಲ್ಲಿಯ ಪುರುಷರ ಹಿಪಾಕ್ರಸಿತನದ ವಿರುದ್ಧ ಬಂಡೆದ್ದ ಯಾಮಿನಿಯ ಮನಸ್ಸು ವ್ಯವಸ್ಥೆಯ ಪಲ್ಲಟಕ್ಕಾಗಿ ಸಂಘಟಿತವಾಗುತ್ತಿದ್ದ ಶ್ರಮಿಕರ ಚಳುವಳಿಯಲ್ಲಿ ಸೇರಿಕೊಳ್ಳುವ ಮುಂಚೆ ಕ್ಷಣಿಕ ಆಸಕ್ತಿಯಾಗಿ ವೈಯಕ್ತಿಕ ಬದುಕಿನ ದುಗುಡ-ದುಮ್ಮಾನಗಳನ್ನು ಮರೆಯಲು ಒಂದು ಆಧಾರವೆಂದು ಬಗೆದದ್ದು ನಂತರ ಜೀವನ ವಿಧಾನವಾಗುವಲ್ಲಿ ಮಹಿಳೆಯರ ಸಾಮಾಜಿಕ ಜವಾಬ್ದಾರಿಯ ಅರಿವಿದೆ. . . . ." ಶಕ್ತಿ ಪ್ರವಹಿಸುವುದೆ ಬಂದೂಕಿನ ನಳಿಕೆಯ ಮೂಲಕ (ಬಂಡಾಯ-ವ್ಯಾಸರಾಯ ಬಲ್ಲಾಳ ಪು. ೧೫೩) ಎನ್ನುಂತಹ ಮಾವೋನ ವ್ಯಾಖ್ಯಾನಕ್ಕೆ. ಸಿದ್ಧಾಂತಕ್ಕೆ ಸೇರಿಕೊಳ್ಳುವ ಯಾಮಿನಿಯಲ್ಲಿ ಚಾರಿತ್ರಿಕ ಗಟ್ಟಿತನ ಮತ್ತು ಐತಿಹಾಸಿಕ ದೃಷ್ಟಿಕೋನವಿದೆ.

'ಕ್ರಾಂತಿಯ ಹರಿಕಾರನಾಗಬೇಕಿದ್ದ ಕಾರ್ಮಿಕ. ವ್ಯವಸ್ಥೆಯ ವಿರುದ್ಧ ಬಂಡಾಯವೆದ್ದು ಹೊಸ ಬಾಳಿಗೆ ನಾಂದಿ ಹಾಡಬೇಕಾಗಿದ್ದ ಕಾರ್ಮಿಕ. ತನ್ನನ್ನೇ ಅರಿತುಕೊಳ್ಳಲು ಪ್ರಯತ್ನಿಸುತ್ತಿದ್ದಾನೆಯೆ' (ಬಂಡಾಯ– ಪು.೧೧೯). ಇಂತಹ ಪ್ರಯತ್ನವನ್ನು ಹೆಣ್ಣು ಮಾಡುವುದು ಇಂದು ತುರ್ತಿನದು ಎಂಬುದನ್ನು ಯಾಮಿನಿ ತೋರಿಸಿಕೊಡುವ ಪ್ರಯತ್ನ ಮಾಡುತ್ತಾಳೆ. ಅಂಗವಿಕಲ ಗಂಡ ಅಸಹಾಯಕತೆಯಿಂದ ಯಾಮಿನಿಯ ಮೇಲೆ ಹರಿಹಾಯುತ್ತಿರುವಂತೆ ಅನಿಸಿದರೂ ಅದರ ಹಿಂದೆ ಪುರುಷ ಸಂಸ್ಕೃತಿಯ ಜಬರು ಇದೆ. 'ಎಲ್ಲಾ ದೌರ್ಬಲ್ಯಗಳೊಂದಿಗೂ ಮನುಷ್ಯನನ್ನು ಪ್ರೀತಿಸು' ಎನ್ನುವ ಮಾನವೀಯ ಮಿಡಿತದ ನುಡಿಗೆ ಬದ್ಧಳಾದ ಯಾಮಿನಿಯ ವ್ಯಕ್ತಿತ್ವ ಬುದ್ಧನನ್ನು ನೆನಪಿಸುತ್ತದೆ. ದುಡಿದು ಬೆಂಡಾಗಿ ಬಂದ ಯಾಮಿನಿಗೆ ಮನೆಯ ಬಾಗಿಲು ತೆಗೆದ ತಕ್ಷಣ ಸಿಗುವ ಗಂಡನ ಸ್ವಾಗತ ' ಬೋಸುಡಿ. ರಂಡೇ . . . . ಎಲ್ಲಿಗೆ ಹೋಗಿದ್ದೆ ಇಷ್ಟು ಹೊತ್ತು? ಯಾವ ಮಿಂಡನ ಜತೆ ಹೋಗಿದ್ದೆ'' ಇಂತಹ ಗುಂಡಿನಂತಹ ಮಾತುಗಳನ್ನು ಸಹಿಸಿಕೊಳ್ಳುವ. ಗುಣ ಭಾರತೀಯ ನಾರಿಯ ಪತಿಯೆ ದೈವ ಎನ್ನುವ ವೇದಾಂತವಲ್ಲ. ಅವಳ ಕರ್ತೃತ್ವಕ್ಕೆ ಸಹನೆಯನ್ನು ತುಂಬಿದೆ.

''ಇತಿಹಾಸದ ಗತಿಯನ್ನು ವಿವೇಚಿಸುವಾಗ. ವೈಯಕ್ತಿಕ ಸ್ವಾರ್ಥ. ಶೋಷಣೆಗಳೇ ಪ್ರಧಾನವಾಗಿರುವ ಈ ಸಮಾಜದ ಸ್ವರೂಪವನ್ನು ಅದರ ಒಟ್ಟಂದವಲ್ಲಿ ಗುರುತಿಸು . . . ಬಿಡಿಬಿಡಿಯಾಗಿ ಅಲ್ಲ . . . . ಯಾವುದು ಸತ್ಯ. ಯಾವುದು ಅಸತ್ಯ ಎಂಬುವನ್ನು ನಿರ್ಧರಿಸುವುದು ನಿನ್ನ ಗುರಿ. ಪರಿಸರವಲ್ಲ . . . . (ಬಂಡಾಯ– ಪು.೧೨೮) ಎನ್ನುವುದನ್ನು ಪುರುಷ ಕಾರ್ಮಿಕರಿಗಷ್ಟೇ ಅಲ್ಲ ಸ್ತ್ರೀಯರಿಗೂ ತಿಳಿಸಬೇಕಾಗಿದೆ. ಇತಿಹಾಸದ ಗತಿಯನ್ನು ವಿವೇಚಿಸುವುದರ ಜೊತೆಗೆ. ಮಹಿಳೆಯರ ಸಮಸ್ಯೆಗಳಿಗೆಲ್ಲ

ಕಾರಣರು ಗಂಡಸರು ಎನ್ನುವ ಅಸ್ವಾಭಾವಿಕ ಸಾಮಾಜಿಕ ಸ್ವರೂಪವನ್ನು ಭೇದಿಸಿ ಅದರ ಒಟ್ಟು ಆಕಾರವನ್ನು ಗುರುತಿಸುವುದನ್ನು ಇಂದು ಮಹಿಳೆಯರು ಮಾಡಬೇಕಾದ ಪ್ರಾಥಮಿಕ ಕಾರ್ಯ. ಅಂದಿಗೆ ಮಾತ್ರ ಸತ್ಯಾಸತ್ಯಗಳ ವಿವೇಚನಾತ್ಮಕ ಬೌದ್ಧಿಕ ಶ್ರೀಮಂತಿಕೆ ಬೆಳೆಯುತ್ತದೆ.

ಕರ್ತವ್ಯಪ್ರಜ್ಞೆ. ಕಾರ್ಯಶ್ರದ್ಧೆ; ಸಾಹಸದಂತಹ ಗುಣಗಳೆಲ್ಲ ಪುರುಷ ಸ್ವತ್ತಾಗಿಸಿದ ಸಮಾಜದಲ್ಲಿ ಮಹಿಳೆಯರಲ್ಲಿಯೂ ಇದ್ದ ಇಂತಹ ಗುಣಗಳೆಲ್ಲ ತ್ಯಾಗದ ಮುಸುಕಿನಲ್ಲಿ ಮರೆಮಾಡಲ್ಪಡುತ್ತವೆ. ಆದರೆ ಕಾದಂಬರಿಕಾರರು ಮಹಿಳೆಯರಲ್ಲಿಯೂ ಈ ಗುಣಸ್ವಭಾವವಗಳನ್ನು ಗುರುತಿಸಿದ್ದಾರೆ. ಅದಕ್ಕೆಂದೆ ಯಾಮಿನಿಯಂತಹ ಪಾತ್ರ ಸದೃಢವಾಗಿ ಬೆಳೆಯಲು ಸಾಧ್ಯವಾಗಿದೆ. ಯಾಮಿನಿ ತನ್ನ ಬದುಕಿನ ಕೌಟುಂಬಿಕ ಸಂಬಂಧದ ಕೊಂಡಿಯಾದ ಗಂಡ ಶ್ರೀಕಾಂತನನ್ನು ಕಳೆದುಕೊಂಡಾಗಲೂ ಸಹಿತ ವಿಚಲಿತಳಾಗದೆ. ಅತ್ಯಂತ ಸಂಯಮದಿಂದ. ವಿವೇಕದಿಂದ ವರ್ತಿಸುತ್ತಾಳೆ. ಸಾರ್ವತ್ರಿಕವೆನಿಸುವ ಕಾರ್ಯಕರ್ತರ ಅನ್ಯೋನ್ಯ ಸಂಬಂಧದಲ್ಲಿ ವೈಯಕ್ತಿಕ ನೋವನ್ನು ಮರೆಯುತ್ತಾಳೆ. ಗಂಡನ ಅಂತಿಮ ಸಂಸ್ಕಾರಗಳೆಲ್ಲ ಮುಗಿದ ಮೇಲೆ ಯಾಮಿನಿ ಅಂದು ನಡೆಯಲಿರುವ ಕಾರ್ಮಿಕ ಸಭೆಗೆ ಹೊರಡಲು ಸಿದ್ಧಳಾದಾಗ "ಇಂಥ ದುರಂತ ಸಂಭವಿಸಿದ ಸಂದರ್ಭದಲ್ಲೂ ವೈಯಕ್ತಿಕ ನೋವನ್ನು ಹತ್ತಿಕ್ಕಿ ತನ್ನ ಕಾರ್ಯಕ್ಷೇತ್ರದ ಕಡೆ ಗಮನ ಕೊಡುವಂಥ ಗಟ್ಟಿಹೃದಯ ಯಾಮಿನಿಯದು" (ಬಂಡಾಯ ಪು ೧೯೬) ಎನ್ನುವ ರಾಜೀವನ ಮಾತಿನಲ್ಲಿ ಮುಂದಿನ ಹೋರಾಟದ ನಾಯಕತ್ವಕ್ಕೆ ವಾರಸುದಾರಿಕೆ ದೊರೆತ ತೃಪ್ತಿಯಿದೆ.

ಗಟ್ಟಿಗೊಳ್ಳುತ್ತಿರುವ ಶ್ರಮಿಕ ಸಂಘಟನೆಯನ್ನು ಛಿದ್ರಛಿದ್ರಗೊಳಿಸುವುದರಲ್ಲಿಯೆ ಮಾಲೀಕರ ಉಳಿವಿರುತ್ತದೆ. ಇಂತಹ ಕುಟಿಲತೆ ಅರಿಯದ. ಅಥವಾ ವೈಯಕ್ತಿಕ ಆಶೆ ಆಕಾಂಕ್ಷೆಯನ್ನು ಹತ್ತಿಕ್ಕುವ ಸಾಮರ್ಥ್ಯವಿಲ್ಲದ ಮನಸ್ಸುಗಳು ಸಂಘಟನೆಯನ್ನೆ ಒಡೆಯುವುದಕ್ಕೆ ಮುಂದಾಗುತ್ತವೆ. ಆಗ ಸಂಘಟನೆಗಾಗಿ ಹಗಲಿರುಳು ಶ್ರಮಿಸಿದ ಮನಸ್ಸಿಗೆ ನಿರಾಶೆಯಾಗಿ. ಹತಾಶೆಯದ ಆಚೆಗೆ ನೂಕಲ್ಪಟ್ಟಾಗ ಇಚ್ಛಾಶಕ್ತಿಯ ಅಂತಃಸ್ಫುರಣ ಬೇಕಾಗುತ್ತದೆ. ಇಂತಹ ಒಂದು ಸಂದರ್ಭದಲ್ಲಿ ಯಾಮಿನಿ ರಾಜೀವನನ್ನು ಉದ್ದೇಶಿಸಿ ಆಡುವ ಮಾತು "ಹೌದು ನಮ್ಮ ಶಕ್ತಿಯಲ್ಲೇ ನಮಗೆ ಅಪನಂಬಿಕೆ ಬಂದಾಗ ಯಾವ ಕೆಲಸವೂ ಸಾಧ್ಯವಾಗುವುದಿಲ್ಲ"ಎನ್ನುವುದು ಹೋರಾಟದ ಸಾಗರಕ್ಕೆ ಸೇರಲು ಹೊರಟ ನದಿಗೆ ಅಡ್ಡವಾದ ಹೆಬ್ಬಂಡೆಯನ್ನು ಹೊರಳಿಸುವ ಸಾಮರ್ಥ್ಯ ಹೊಂದಿದೆ. ಯಾಮಿನಿಯ ಮಾತು ಇಚ್ಛಾಶಕ್ತಿಯ ಸಂಚಿತ ಫಲ ಪಕ್ವತೆಯನ್ನು, ವಾಸ್ತವಿಕತೆಯನ್ನು ದಕ್ಕಿಸಿಕೊಳ್ಳಲು ಮುಂದಾಗಲೂ ಸೂಚಿಸಿದಂತಿದೆ.

ವ್ಯವಸ್ಥೆಯ ನಿರ್ನಾಮಕ್ಕಾಗಿ ಬಳಸುವ "ಬುಲ್‌ಡೋಜರ್ ಯಂತ್ರ ಕೆಲಸ ಮಾಡದೆ ಹೋಗುವಾಗ ಅದನ್ನು ದೂಡಲು ಎಷ್ಟು ಕೈಗಳಿದ್ದರೂ ಸಾಲದು" ಎನ್ನುವಲ್ಲಿ ರಾಜೀವ (ಕಾದಂಬರಿ ನಾಯಕ) ಕಂಡ ಕನಸು ಯಾಮಿನಿಯ ಕಣ್ಣಲ್ಲಿ

ಪ್ರತಿಬಿಂಬಿಸುತ್ತದೆ. ವೈರುಧ್ಯಗಳ ಆಗರವಾದ ವ್ಯವಸ್ಥೆಯ ನಿರ್ಮೂಲನೆಗಾಗಿ ಹೆಣ್ಣುಕೈಗಳು, ಗಂಡುಕೈಗಳು ಎನ್ನುವುದನ್ನು ಮರೆತು ಮುಂದೆ ಬರಬೇಕಾಗಿದೆ ಎಂಬುದನ್ನು ಅರಗಿಸಿಕೊಂಡಿರುವ ಲೇಖಕರು ಯಾಮಿನಿಯನ್ನು ಅತ್ಯಂತ ವೈಚಾರಿಕವಾಗಿ ಕಾದಂಬರಿಯುದ್ದಕ್ಕೂ ಬೆಳೆಸುತ್ತಾರೆ.

ಈ ಸಂದರ್ಭದಲ್ಲಿ ಬಂಡಾಯದ ಯಾಮಿನಿಯನ್ನು ನೆಪಮಾತ್ರವಾಗಿಟ್ಟುಕೊಂಡು ಒಟ್ಟು ಸಾಹಿತ್ಯದಲ್ಲಿ ಮಹಿಳೆಯರನ್ನು ಕುರಿತಂತೆ ಬರೆಯುವಲ್ಲಿ, ಮಾತನಾಡುವಲ್ಲಿ, ಆಲೋಚಿಸುವಲ್ಲಿ ಈ ಲೇಖನ ಸಹಕಾರಿಯಾಗುವುದೆಂಬ ಆಶಯ ಹೊಂದಿದ್ದೇನೆ.

ನೆಹರು : ಅದಮ್ಯ ಚೇತನದ ಮಹಾಶಕ್ತಿ

—ಎಸ್.ಆರ್. ಬಾಳಿಕಾಯಿ

ಪಂಡಿತ ಜವಾಹರಲಾಲ್ ನೆಹರು ದೇಶದ ಒಳಗೆ ಹಾಗೂ ಹೊರಗೆ ಉನ್ನತ ಶಿಕ್ಷಣವನ್ನು ಪಡೆದು ಪಾಶ್ಚಾತ್ಯ ಹಾಗೂ ಪೌರಾತ್ಯ ಸಂಸ್ಕೃತಿಯ ಸಮನ್ವಯತೆಯನ್ನು ಸಾಧಿಸಿಕೊಂಡಿದ್ದರು. ರಾಷ್ಟ್ರಪಿತ ಮಹಾತ್ಮಾಗಾಂಧೀಜಿಗೆ ತಾಯಿ ಬದುಕನ್ನು ರೂಪಿಸುವಲ್ಲಿ ಪ್ರಭಾವ ಬೀರಿದರೆ ಪಂಡಿತ ನೆಹರೂರವರಿಗೆ ತಂದೆಯವರು ಬದುಕಿನುದ್ದಕ್ಕೂ ಪ್ರಭಾವ ಬೀರಿದರು.

ನೆಹರೂರವರ ಪ್ರತಿಭೆ ಬಹುಮುಖ ವ್ಯಕ್ತಿತ್ವದಿಂದ ಕೂಡಿದ್ದು, ಬ್ಯಾರಿಸ್ಟರ್ ಆಗಿ ಸ್ವಾತಂತ್ರ್ಯ ಹೋರಾಟಗಾರರಾಗಿ, ಸಾಹಿತಿಯಾಗಿ, ದಾರ್ಶನಿಕರಾಗಿ, ಅಲಿಪ್ತ ಚಳುವಳಿಯ ನೇತಾರರಾಗಿ ಹಾಗೂ ಭಾರತದ ಪ್ರಥಮ ಪ್ರಧಾನಿಯಾಗಿ ವರ್ಣರಂಜಿತ ವ್ಯಕ್ತಿತ್ವವನ್ನು ತಮ್ಮದಾಗಿಸಿಕೊಂಡವರು. ನೆಹರೂ ಒಬ್ಬ ವ್ಯಕ್ತಿಯೆಂದು ನಾವಿಲ್ಲಿ ಹೇಳುವುದಕ್ಕಿಂತ ಅದಮ್ಯ ಚೇತನದ ಒಂದು ಮಹಾಶಕ್ತಿ ಎನ್ನುವದೇ ಸಮಂಜಸ. ನೆಹರೂರವರ ಸಂಪೂರ್ಣ ವ್ಯಕ್ತಿತ್ವದ ಅರಿವು ಉಂಟಾಗಬೇಕಾದರೆ ನಾವು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ವತಂತ್ರ ಹೋರಾಟದ ಚರಿತ್ರೆಯ ಪುಟಗಳನ್ನು ನೋಡಲೇಬೇಕಾಗುತ್ತದೆ.

ನೆಹರು ಜನಿಸಿದ್ದು ಆಗರ್ಭ ಶ್ರೀಮಂತ ಮನೆತನವಾದರೂ ಅವರು ಸಜ್ಜನಿಕೆಯ ಸಾಕಾರ ಮೂರ್ತಿ. ಸ್ವಾತಂತ್ರ್ಯ ಹೋರಾಟಕ್ಕೆಂದೇ ತಮ್ಮೆಲ್ಲ ಭವಿಷ್ಯದ ಬದುಕನ್ನು ಮೀಸಲಿಟ್ಟ ನೆಹರು ದೂರದೃಷ್ಟಿಗಾರ. ಹಾಗೆಂದೂ ವಾಸ್ತವಿಕ ಬದುಕಿನ ನೆಲಗಟ್ಟಿನಿಂದ ಎಂದೂ ಕದಲದೆ ಬಂದದ್ದನ್ನೆಲ್ಲ ಅನುಭವಿಸಿದವರು. ಆಧುನಿಕ ಭಾರತದ ನಿರ್ಮಾಪಕರನೇಕರಲ್ಲಿ ನೆಹರೂಗೆ ಮೊದಲ ಸ್ಥಾನ. ನೆಹರೂರವರ ಸಮಗ್ರ ಬದುಕಿನ ಮೇಲೆ ಗಾಂಧೀಜಿ ಬೀರಿದ ಪ್ರಭಾವದಂತೆಯೇ 'ಎಡ್ವಿನ್ ಅರ್ನಾಲ್ಡ್' ಅವರ ವೈತ್ ಮಿಡ್‌ಏಶಿಯಾ ಗ್ರಂಥ ಕೂಡಾ ಬಹಳಷ್ಟು ಪ್ರಭಾವ ಬೀರಿತು. ಅವರ ದೀರ್ಘಕಾಲದ ತುರಂಗವಾಸ ಅವರನ್ನು ಅಪ್ಪಟ ಹೋರಾಟಗಾರ, ಸಾಹಿತಿಯನ್ನಾಗಿ ರೂಢಿಸಿತು. ನೆಹರು ರಚಿಸಿದ ಗ್ರಂಥಗಳಲ್ಲಿ ೩ ಅತ್ಯಂತ ಪ್ರಮುಖವಾಗಿವೆ. ಇವು ಅವರನ್ನು ಅರ್ಥಮಾಡಿಕೊಳ್ಳಲು ತುಂಬಾ ನೆರವಾಗುತ್ತವೆ.

ತಮ್ಮನ್ನು ಅರಿತುಕೊಳ್ಳಲು'ಆತ್ಮಕಥೆ' (ಆ್ಯನ್ ಆಟೊಬೈಗ್ರಾಫಿ)ಯನ್ನು, ಮಾತೃಭೂಮಿಯ ಪಾರಮ್ಯವನ್ನು ತಿಳಿಸಲು ''ಭಾರತ ದರ್ಶನ '' (ದಿ ಡಿಸ್ಕವರಿ ಆಫ್

ಇಂಡಿಯಾ)ವನ್ನು, ಪ್ರಪಂಚವನ್ನು ಗ್ರಹಿಸಲು 'ಜಗತ್ ಕಥಾವಲ್ಲರಿ'' (ಗ್ಲಿಂಪ್ಸಸ್ ಆಫ್ ಹಿಸ್ಟ್ರಿ)ಯನ್ನು ಬರೆದರು. ಇವು ಅವರ ಉದ್ಗ್ರಂಥಗಳು. ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ಈ ಮೂರು ಗ್ರಂಥಗಳು ಅವಶ್ಯಕ. ಅಕ್ಷರ ಸಹ ಅರ್ಥದಲ್ಲಿ ನೆಹರು ಒಬ್ಬ ಅಪ್ಪಟ ರಾಜನೀತಿ ವಿವೇಚಕರಲ್ಲ. ಆದರೂ ಸ್ಪಷ್ಟವಾಗಿ ಅವರೊಬ್ಬ ಉನ್ನತ ವಿಚಾರ ಅಭಿಪ್ರಾಯ ಕಲ್ಪನೆಗಳನ್ನೊಳಗೊಂಡ ಪರಿಪೂರ್ಣ ಚಿಂತಕ. ಗಾಂಧೀಜಿಯವರ ಅಚ್ಚುಮೆಚ್ಚಿನ ಶಿಷ್ಯರಾಗಿದ್ದ ನೆಹರು ಕೊನೆಯವರೆಗೂ ಆ ದಟ್ಟವನ್ನು ತಮ್ಮದಾಗಿಸಿಕೊಂಡಿದ್ದರು.

ಮಕ್ಕಳ ಮೇಲೆ ನೆಹರು ತೋರಿದ, ತೋರುತ್ತಿದ್ದ ಅಕ್ಕರೆ ಅವರಿಗೆ ಚಾಚಾ ನೆಹರೂ ಎಂಬ ಪಟ್ಟವನ್ನೇ ನೀಡಿತು. ಸಹಜವಾದ ಮನುಷ್ಯ ಸ್ವಭಾವಕ್ಕೆ ನೆಹರು ಹೊರತಾಗಿರಲಿಲ್ಲ ಎನ್ನುವದಕ್ಕೆ ಅವರು ಆಗಾಗ್ಗೆ ತೋರುತ್ತಿದ್ದ ಸಿಟ್ಟು, ಉದ್ವೇಗ ಹಾಗೂ ಅಪ್ಪಟಹಾಸ್ಯಪ್ರಿಯತೆಯೇ ಸಾಕ್ಷಿಯೆನಿಸಿದ್ದವು. ಒಳಸಂಚು, ಮೋಸ, ಗುಂಪುಗಾರಿಕೆ ಇಂತಹ ಗುಣಗಳು ಅವರಲ್ಲಿ ಮನೆ ಮಾಡಿಕೊಂಡಿರಲಿಲ್ಲ.

ರಾಜಕೀಯ ಧೋರಣೆಯ ಯಶಸ್ಸಿನಲ್ಲಿ

ಬಾಲ್ಯದಿಂದಲೇ ತಂದೆಯವರ ಸಾನಿಧ್ಯದಿಂದ, ಅನೇಕ ರಾಜಕೀಯ ಮುಂದಾಳುಗಳ ಸಂಪರ್ಕದಿಂದ ಹಲವಷ್ಟು ವಿಚಾರಗಳನ್ನು ಅರಿತುಕೊಂಡು, ನೆಹರು ಪ್ರತಿಪಾದಿಸಿದಂತಹ ರಾಜಕೀಯ ತತ್ವಗಳು, ಧೋರಣೆಗಳು ಇಂದಿಗೂ ಕೂಡಾ ವಿನೂತನವೆನಿಸಿವೆ. ಪ್ರಜಾಪ್ರಭುತ್ವವಾದಿ ಸ್ವಾತಂತ್ರ್ಯ ನಿಷ್ಠೆ, ಸಮಾಜವಾದದ ಒಲವು, ಯೋಜನೆಗಳ ನೇತಾರ, ವೈಜ್ಞಾನಿಕ ಮನೋಭಾವನೆ, ಔದ್ಯೋಗೀಕರಣದ ದೂರದೃಷ್ಟಿ, ಪಂಚಶೀಲ ತತ್ವಗಳು, ಅಲಿಪ್ತ ಮತ್ತು ತಟಸ್ಥ ಧೋರಣೆ - ಇವೆಲ್ಲವನ್ನು ತಮ್ಮ ರಾಜಕೀಯದುದ್ದಕ್ಕೂ ನೆಹರು ರೂಢಿಸಿಕೊಂಡ ನಿಲುವುಗಳು.

ನೆಹರು ಬಯಸಿದ್ದರೆ ಭಾರತದ ಸರ್ವಾಧಿಕಾರಿಯಾಗಲೂ ಯಾವ ಅಡ್ಡಿ ಆತಂಕಗಳೂ ಇರಲಿಲ್ಲ. ಅಂದು ಗಾಂಧೀಜಿಯವರನ್ನು ಹೊರತುಪಡಿಸಿದರೆ ನೆಹರೂರವರೇ ಜನಪ್ರಿಯ ನಾಯಕರಾಗಿದ್ದರೂ ಅಷ್ಟೇ ಪ್ರಭಾವಶಾಲಿಯೂ ಆಗಿದ್ದರು. ಆದರೆ ಇದಾವ ಅಂಶಗಳು ಅವರನ್ನು ದಾರಿ ತಪ್ಪಿಸಲಿಲ್ಲ. ಕೊನೆಯವರೆಗೂ ಪ್ರಜಾಪ್ರಭುತ್ವಪ್ರೇಮಿಯಾಗಿಯೇ ಉಳಿದರು. ಅಂದು ದೇಶದ ಸೈನ್ಯದ ಹತೋಟಿಯನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದ ನೆಹರೂರವರಲ್ಲಿ ಭಾರತ ಪ್ರಜಾಪ್ರಭುತ್ವದಿಂದ ದೂರಹೋಗದಂತೆ ತಡೆಗಟ್ಟುವ ದೂರದೃಷ್ಟಿಯನ್ನು ಗುರುತಿಸಬಹುದು. ನಾಗರಿಕ ಹಕ್ಕುಗಳ ಬಗ್ಗೆ ಜವಾಹರ ಭಾವನೆ ವಿಶಾಲಗೊಳ್ಳಲು ಹಿಂದಿನ ಸಮಾಜಕ್ಕಾಗಿ ಅಡಳಿತ ಅನುಭವ - ನೋವು ಮತ್ತು ಹೋರಾಟವೆ ಕಾರಣೀಭೂತವೆನಿಸಿವೆ.

ವ್ಯಕ್ತಿ ಸ್ವಾತಂತ್ರ್ಯ ಮತ್ತು ಗೌರವಗಳ ಬಗ್ಗೆ ಕಟ್ಟುನಿಟ್ಟಾದ ನಿಷ್ಠೆಹೊಂದಿದ ನೆಹರೂ ಮೂಲಭೂತ ಹಕ್ಕುಗಳ ಮತ್ತು ನ್ಯಾಯಾಂಗ ಸ್ವಾತಂತ್ರ್ಯದ ಬಗ್ಗೆ ವಿಶೇಷ ಮನ್ನಣೆ ಇತ್ತಿದ್ದರು. ಅವನ್ನು ಮೊಟಕುಗೊಳಿಸುವ ಯಾವುದೇ ಕ್ರಮವನ್ನು ಅವರು

ಕೈಕೊಳ್ಳಲಿಲ್ಲ. ಬಲವಂತದ ಕ್ರಮಗಳು ತ್ವರಿತವಾಗಿ ಪರಿಣಾಮ ಬೀರಬಲ್ಲ ಹಂತವಾದರೂ ಅವು ವ್ಯಕ್ತಿ ಸ್ವಾತಂತ್ರ್ಯಕ್ಕೆ ಅಪಾಯಕಾರಿ ಎಂಬ ಅರಿವು ಅವರಲ್ಲಿತ್ತು.

೧೯೧೯-೧೯೨೧ರ ಅವಧಿಯಲ್ಲಿಯೇ ನೆಹರು ಪೆಬಿಯನ್ ಸಮಾಜದತ್ತ ಒಲವು ತೋರಿದರು. ಇದರ ಜೊತೆಗೆ ಅವರು ಬಯಸುತ್ತಿದ್ದುದ್ದು ಪ್ರಜಾಪ್ರಭುತ್ವವಾದಿ ಸಮಾಜವಾದ. ಪ್ರಜಾಪ್ರಭುತ್ವದ ಸಂಸ್ಥೆಗಳ ಮೂಲಕ ಸಾಮಾಜಿಕ ಪರಿವರ್ತನೆ ಆಗಬೇಕೆನ್ನುತ್ತಿದ್ದರು. ಸಮಾಜವಾದ ಅವರಿಗೆ ಒಂದು ಜೀವನದ ತತ್ವವಾಗಿತ್ತು. ಸಮಾಜವಾದ ಆರ್ಥಿಕ ಬದಲಾವಣೆಯ ಮೂಲ ಮಂತ್ರವಾಗಿತ್ತು. ಅಸಂಖ್ಯಾತ ಜನರ ವಿಮುಕ್ತಿ ಆಗಬೇಕಾದರೆ ಸಮಾಜವಾದ ಒಂದು ಸಾಧನವಾಗಿತ್ತು. ಮಿತವಾದ ಭಾಷೆಯಲ್ಲಿ ಸಮಾಜವಾದದ ತತ್ವವನ್ನು ಜವಾಹರ ಪ್ರತಿಪಾದಿಸಿದರು.

ಪಾಶ್ಚಿಮಾತ್ಯ ರಾಷ್ಟ್ರವಾದ ಇಂಗ್ಲೆಂಡ ಸಂಸದೀಯ ಪ್ರಜಾಪ್ರಭುತ್ವವನ್ನು ಜಗತ್ತಿಗೆ ಕಾಣಿಕೆಯನ್ನಾಗಿ ನೀಡಿದಂತೆ ಪೌರಾತ್ಯ ರಾಷ್ಟ್ರವಾದ ಸೋವಿಯತ್ ರಷ್ಯಾವು ಜಗತ್ತಿಗೆ "ಪಂಚವಾರ್ಷಿಕ ಯೋಜನೆಗಳನ್ನು" ಪರಿಚಯಿಸಿಕೊಟ್ಟಿತು. ತನ್ನ ಪ್ರತಿಯೊಬ್ಬ ಪ್ರಜೆಗೂ ಅವರವರ ಅವಶ್ಯಕತೆಗೆ ಅನುಗುಣವಾಗಿ ಅವರಿಗೆ ಬೇಕಾದುದನ್ನು ಒದಗಿಸಲು ಪಂಚವಾರ್ಷಿಕ ಯೋಜನೆಗಳನ್ನು ರಷ್ಯಾದಲ್ಲಿ ಸಿದ್ಧಪಡಿಸಲಾಗಿತ್ತು. ತಂದೆ ಮೋತಿಲಾಲ ನೆಹರು ಜವಾಹರಲಾಲ ನೆಹರೂರ ಇಂತಹ ಆರ್ಥಿಕ ಯೋಜನೆಗಳಿಂದ ಮಾತ್ರ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವೆಂದೂ ಬಲವಾಗಿ ನಂಬಿದ್ದರು. ಇದರ ಅರ್ಥ ಸಮತಾವಾದವನ್ನು ಅಂಗೀಕಾರ ಮಾಡಿಕೊಂಡಂತಲ್ಲ. ಆದರೆ ಸೈದ್ಧಾಂತಿಕವಾಗಿ ಅದರ ಒಪ್ಪಿಗೆಯಿಂದೆ ನೆಹರು ವಿವರಿಸಿದರು. ಅವರ ವಿದೇಶಿ ಪ್ರವಾಸ ಈ ಯೋಜನೆಗಳನ್ನು ರೂಢಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿತು ಎಂಬ ಅಂಶ ಗಮನಾರ್ಹವಾದುದು.

ಪಂಚವಾರ್ಷಿಕ ಯೋಜನೆಗಳಿಂದ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವದು ನೆಹರೂರವರ ಉದ್ದೇಶವಾಗಿತ್ತು. ರಾಜಕೀಯ ಪ್ರಜಾಪ್ರಭುತ್ವದಷ್ಟೇ ಆರ್ಥಿಕ ಪ್ರಜಾಪ್ರಭುತ್ವ ಮಹತ್ವವಾದುದು ಎಂದು ನೆಹರು ಭಾವಿಸಿದ್ದರು. ಭಾನಾ ಪ್ರದೀಪ ವ್ಯಕ್ತಿ ನೆಹರು ಸ್ವತಂತ್ರ ಯೋಜನಾ ಆಯೋಗಕ್ಕೆ ಅನುವು ಮಾಡಿಕೊಟ್ಟರು. ನೆಹರೂರವರ ಅಧಿಕಾರಾವಧಿಯಲ್ಲಿ ರೂಪಿತಗೊಂಡ ಪಂಚವಾರ್ಷಿಕ ಯೋಜನೆಯ ಅನುಷ್ಠಾನದ ಕಾರ್ಯಕ್ರಮ ಸತತವಾಗಿ ಸಾಗುತ್ತ ಬಂದು ಸಧ್ಯ ಎಂಟನೆಯ ಪಂಚವಾರ್ಷಿಕ ಯೋಜನೆಯ ಸಿದ್ಧತೆಯಲ್ಲಿದ್ದೇವೆ.

ನೆಹರು ವೇದಿಕೆಗಳಲ್ಲಿ ಕೃತಿಗಳಲ್ಲಿ ತಮ್ಮ ಜೀವನದುದ್ದಕ್ಕೂ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಯನ್ನು ಬೆಳಿಸಿಕೊಳ್ಳಬೇಕೆಂದು ಮಹಾಜನತೆಗೆ ಮನವಿ ಮಾಡುತ್ತಿದ್ದರು. ಆದರೆ ವೈಜ್ಞಾನಿಕತೆ ಮತ್ತು ವೈಚಾರಿಕತೆ ಅವರ ವೈಯಕ್ತಿಕ ಬಾವಿಯ ಆಳಕ್ಕೆ ಇಳಿದಿರಲಿಲ್ಲ ಎನ್ನುವದು ದೊಡ್ಡ ವ್ಯಂಗ್ಯ. ತಾವು ಆಧುನಿಕ ಪ್ರಜ್ಞೆಯುಳ್ಳ ಮನುಷ್ಯನೆಂದು ತೋರಿಸಿಕೊಳ್ಳುವ ಗೀಳು ಅವರಿಗಿದ್ದದ್ದರಿಂದ ಆ ಬಗ್ಗೆ ಮಾತನಾಡುತ್ತಿದ್ದರೆಂದು ತೋರುತ್ತದೆ.

ಅದು ಅವರ ವೈಯಕ್ತಿಕ ಬದುಕಿನ ಮಾತಾದರೂ ಭಾರತ ಆಧುನಿಕತೆಯತ್ತ ಸಾಗಬೇಕೆಂಬ ಹಂಬಲದಿಂದ ಔದ್ಯೋಗೀಕರಣದಂತಹ ನಿರ್ಧಾರಗಳಿಗೆ ಒತ್ತು ಕೊಟ್ಟರು. ಔದ್ಯೋಗಿಕರಣ ಇಲ್ಲವೆ ಮರಣ, ಎಂದು ಬಲವಾಗಿ ನಂಬಿದ ನೆಹರು ಭಾರತದ ಮೂರು ಮೂಲಭೂತ ಅವಶ್ಯಕತೆಗಳಲ್ಲಿ ಶಿಕ್ಷಣ, ದೇಶರಕ್ಷಣೆ ಹಾಗೂ ಕೈಗಾರಿಕೆಗೆ ಪ್ರಾಮುಖ್ಯತೆ ನೀಡಿದರು. "ದೇಶದ ಆಧುನಿಕ ದೇವಾಲಯಗಳೆಂದರೆ ಔದ್ಯೋಗೀಕರಣ" ಎನ್ನುತ್ತಿದ್ದ. ನೆಹರು ದೇಶದಲ್ಲಿ ದೊಡ್ಡ ದೊಡ್ಡ ಆಣೇಕಟ್ಟುಗಳನ್ನು ಕಟ್ಟಿ ಕೈಗಾರಿಕೆಯನ್ನು ಸ್ಥಾಪಿಸುವ ಯತ್ನವನ್ನು ನಡೆಸಿದರು.

ಕೈಗಾರಿಕೆಯಲ್ಲಿ ಭಾರತ ಮುಂದುವರಿಯುವದು ನೆಹರೂಗೆ ಬೇಕಾಗಿತ್ತು. ನಮ್ಮ ಜನರನ್ನು ಹಸಿವಿನ ಬಾಧೆಯಿಂದ ತಪ್ಪಿಸಲು ಕೈಗಾರಿಕೆಗಳು ಅಗತ್ಯ ಎಂದು ನಂಬಿದ್ದರು. ದೇಶವನ್ನು ಪರರ ದಾಳಿಯಿಂದ ರಕ್ಷಿಸಲು ಕೈಗಾರಿಕೆಗಳು ಬೇಕು ಎನ್ನುತ್ತಿದ್ದರು. ಅದರ ಜೊತೆಗೆ ನಾಗರಿಕತೆಯಲ್ಲಿ ಮುಂದುವರಿಯುತ್ತಿರುವ ಪ್ರಪಂಚದೊಡನೆ ಹೆಜ್ಜೆ ಹಾಕಲು ಕೈಗಾರಿಕೆ ಅವಶ್ಯಕ ಎಂದು ಭಾವಿಸಿದ್ದರು.

ಅಂತರ್‌ರಾಷ್ಟ್ರೀಯ ನಿಲುವಿನತ್ತ

'ಪಂಚಶೀಲ ತತ್ವದ ರೂವಾರಿ ಪಂಡಿತ ಜವಾಹರಲಾಲ ನೆಹರು. ಇದು ಅವರ ಅಂತರಾಷ್ಟ್ರೀಯ ವಾದವನ್ನು ತೋರಿಸುತ್ತದೆ. ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳ ಹಿತಾಸಕ್ತಿಗಳ ಬಗ್ಗೆ ನೆಹರು ತುಂಬಾ ಯೋಚಿಸುತ್ತಿದ್ದರು. ನಿರಂಕುಶವಾದವನ್ನು ಅವರು ಎಂದೂ ಬೆಂಬಲಿಸಲಿಲ್ಲ.

ಚೀನಾದ ಪ್ರಧಾನಮಂತ್ರಿ ಚೌ.ಎನ್.ಲಾಯ್ ಮತ್ತು ಪಂಡಿತ ಜವಾಹರಲಾಲ್ ನೆಹರು ಸಂಯುಕ್ತನಾಗಿ "ಪಂಚಶೀಲತತ್ವವನ್ನು "ರೂಪಿಸಿದರು. ಈ ಘೋಷಣೆ ಟಿಬೇಟಿನ ಬಗೆಗಿನ ಭಾರತ ಮತ್ತು ಚೀನಗಳ ಧೋರಣೆಗೆ ಸಂಬಂಧಿಸಿತ್ತು. ಪಂಚಶೀಲವೆಂದರೆ ಪರಸ್ಪರ ರಾಷ್ಟ್ರಗಳ ಪಾದೇಶಿಕ ಭದ್ರತೆ ಮತ್ತು ಸಾರ್ವಭೌಮತ್ವದ ಬಗೆಗೆ ಗೌರವ, ಆಕ್ರಮಣ ವಿರೋಧಕ ನೀತಿ, ಪರಸ್ಪರ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪವನ್ನು ಮಾಡದೇ ಇರುವದು, ಪರಸ್ಪರ ಸಮಾನತೆ ಮತ್ತು ಪರಸ್ಪರ ಪ್ರಯೋಜನೆ, ಶಾಂತಿಯುತ ಸಹಜೀವನ ಇವೇ ಮುಖ್ಯವಾದ ಐದು ತತ್ವಗಳು.

ಅಂತರ್‌ರಾಷ್ಟ್ರೀಯ ಶಕ್ತ ರಾಜಕಾರಣದಲ್ಲಿ ನೆಹರು ಅಪ್ಪಟ ಭಾರತೀಯತೆಯ ಮೆರುಗನ್ನು ತೋರ್ಪಡಿಸಿದ್ದಾರೆ. ಪಂಚಶೀಲ ತತ್ವಗಳು ಭಾರತ ಜಗತ್ತಿಗೆ ಕೊಟ್ಟ ಕಾಣಿಕೆ ಎಂದು ಹೇಳಬಹುದು. ಪಂಚಶೀಲ ತತ್ವಗಳು ಅಂತರ್‌ರಾಷ್ಟ್ರೀಯ ರಾಜಕಾರಣಕ್ಕೆ ಹೊಸ ತಿರುವನ್ನು ತಂದು ಕೊಟ್ಟವೆಂದು ಹೇಳಬಹುದಾದರೂ ಚೀನಾ ನಮ್ಮ ಮೇಲೆ ಯುದ್ಧ ಮಾಡಿದ್ದು ನಿಜವಾಗಿಯೂ ದುರದೃಷ್ಟಕರ.

ಅಲಿಪ್ತತೆಯು ಭಾರತ ವಿದೇಶಿ ನೀತಿಯ ಮೂಲಭೂತ ತತ್ವಗಳಲ್ಲಿ ಒಂದಾಗಿದೆ. ಇದರ ಅರ್ಥವೆಂದರೆ ಭಾರತವು ಯಾವುದೇ ಒಂದು ಶಕ್ತಿ ಬಣಕ್ಕೆ ಸೇರಿಕೊಂಡಿಲ್ಲ. ಅಂದರೆ ಅದು ರಷ್ಯಾದ ಪರವಾಗಿಯೂ ಇಲ್ಲ, ಅಮೇರಿಕಾದ

ಪರವಾಗಿಯೂ ಇಲ್ಲ. ಆ ಎರಡೂ ಬಣ್ಣಗಳಿಂದ ಅದು ದೂರವಾಗಿದೆ. ಅಂದರೆ ಅಲಿಪ್ತವಾಗಿದೆ. ಆದರೆ ಎರಡೂ ಬಣಗಳೊಂದಿಗೆ ಅದಕ್ಕೆ ವೈರತ್ವವಿಲ್ಲ. ಭಾರತದ ಈ ಅಲಿಪ್ತನೀತಿಯನ್ನು ಸೈದ್ಧಾಂತಿಕವಾಗಿ ರೂಪಿಸಿದವರು ನೆಹರು ಹಾಗೂ ಕೃಷ್ಣ ಮೆನನ್.

ಈಗ ಅಲಿಪ್ತ ರಾಷ್ಟ್ರಗಳ ಸಂಖ್ಯೆ ನೂರಾ ಎರಡಕ್ಕೆ ಏರಿ. ಅದೊಂದು ಚಳುವಳಿಯೇ ಆಗಿದೆ. ಈ ಚಳುವಳಿಯ ತ್ರಿಮೂರ್ತಿಗಳೆಂದರೆ ಭಾರತದಿಂದ ನೆಹರೂ ಯುಗೋಸ್ಲೋವಿಯಾದ ಮಾರ್ಷಲ್ ಟಿಟೋ ಹಾಗೂ ಇಜಿಪ್ತದ ಕರ್ನಲ್ ನಾಸೆರ್ ಸಧ್ಯೆ. ಇದೊಂದು ತೃತೀಯ ಶಕ್ತಿಯಾಗಿ ಬೆಳೆದಿದೆ. ಇದಕ್ಕೆಲ್ಲ ಕಾರಣೀಭೂತರು ನೆಹರು ಎನ್ನಬಹುದು. ಈ ದಿಶೆಯಲ್ಲಿ ನೆಹರೂರವರ ಕರ್ತೃತ್ವಶಕ್ತಿ ಮೆಚ್ಚುವಂತಹದು.

ಭಾರತದ ವಿದೇಶಿ ನೀತಿಯ ಮತ್ತೊಂದು ಮುಖ ತಾಟಸ್ಥ ನೀತಿ ತಾಟಸ್ಥ್ಯರ ನೀತಿಯು ಬಹಳಷ್ಟು ವೇಳೆಯಲ್ಲಿ ತಪ್ಪು ಅರ್ಥಕ್ಕೆ ಎಡೆ ಮಾಡಿಕೊಟ್ಟಿದೆ. ಭಾರತ ಕ್ರಿಯಾಶೀಲ ತಾಟಸ್ಥ ನೀತಿಯನ್ನು ಹೊಂದಿದೆ. ಚೈತನ್ಯಪೂರ್ಣ ತಾಟಸ್ಥ ನೀತಿಯು ಭಾರತನ ವಿದೇಶಿ ಧೋರಣೆಯ ಬೀಜಮಂತ್ರವಾಗಿದೆ. ಭಾರತದ ಕಣ್ಣೆದುರಿಗೆ ಎಲ್ಲಿಯಾದರೂ ಸ್ವಾತಂತ್ರ್ಯಕ್ಕೆ ಧಕ್ಕೆಯಾಗದಿದ್ದಲ್ಲಿ ಅಥವಾ ನ್ಯಾಯಕ್ಕೆ ಬೆದರಿಕೆಯುಂಟಾದಲ್ಲಿ ಅಥವಾ ಅತಿಕ್ರಮಣ ಕಂಡುಬಂದಲ್ಲಿ ಆಗ ನಾವು ತಟಸ್ಥರಾಗಬೇಕಿಲ್ಲ ಹಾಗೂ ತಟಸ್ಥರಾಗಿರಕೂಡದು ಎಂದು ಎಂದು ಹೇಳಿ. ನೆಹರು ತಾಟಸ್ಥ ನೀತಿಯನ್ನು ಸುಸ್ಪಷ್ಟಗೊಳಿಸಿದರು.

ಆಗಿನ್ನೂ ಶೈಶಾವಸ್ಥೆಯಲ್ಲಿದ್ದ ಭಾರತವು ಪ್ರಪಂಚದ ಪ್ರಮುಖ ಆಗುಹೋಗುಗಳಿಗೆ ತೀವ್ರವಾಗಿ ಸ್ಪಂದಿಸುತ್ತಿತ್ತು. ತನ್ನ ಕಣ್ಣೆದುರಿಗೆ ನಡೆದಂತಹ ಯಾವುದೇ ಅನ್ಯಾಯವನ್ನು ಖಂಡಿಸುವಂತಹ ದಿಟ್ಟನಿಲುವನ್ನು ತೋರಿಸುತ್ತಿತ್ತು. ಇದು ಭಾರತದ ತಾಟಸ್ಥ ಧೋರಣೆಯ ನೀತಿಯನ್ನು ಪ್ರತಿಬಿಂಬಿಸುತ್ತದೆ. ಪ್ರಪಂಚದಲ್ಲಿ ಅಲಿಪ್ತ ರಾಷ್ಟ್ರಗಳ ಸಂಘಟನೆಯಾಗಲು ಇವರ ವಿಚಾರಗಳು ಪೀಠಿಕೆಯಾದವು. ಅವರು ಸ್ವಭಾವತಃ ಯುದ್ಧ ವಿರೋಧಿ. ಶಾಂತಿ ಸಾಧಕ. ವಿಶ್ವಭ್ರಾತೃತ್ವದಲ್ಲಿ ಅವರಿಗೆ ಅಚಲ ವಿಶ್ವಾಸವಿತ್ತು. ವಿವಿಧ ರಾಷ್ಟ್ರಗಳೊಡನೆ ಉತ್ತಮ ರಾಯಭಾರ ಬೆಳೆಸುವಲ್ಲಿ ನೆಹರೂರ ವ್ಯಕ್ತಿತ್ವದ ಪ್ರಭಾವವನ್ನು ನಾವು ಕಾಣಬಹುದು.

ಅಂತರ್‌ರಾಷ್ಟ್ರೀಯ ಸಂಘಟನೆಯಲ್ಲಿ ಬರುವ ಮತ್ತೊಂದು ಪ್ರಮುಖ ಹೆಸರು ರಾಷ್ಟ್ರಕೂಟ (ಕಾಮನ್‌ವೆಲ್ತ್ ಆಫ್ ನೇಶನ್ಸ್). ಮೊದಲು ಇದು 'ಬ್ರಿಟೀಶ ಕಾಮನ್‌ವೆಲ್ತ್ ಆಫ್ ನೇಶನ್ಸ್'' ಎಂದು ಕರೆಯಲ್ಪಡುತ್ತಿತ್ತು. ಭಾರತ ಸ್ವತಂತ್ರವಾದ ಮೇಲೆ ನೆಹರೂರವರ ಸಲಹೆ ಮೇರೆಗೆ ಬ್ರಿಟೀಶ್ ಎಂಬ ಪದವನ್ನು ತೆಗೆದು ಹಾಕಲಾಯಿತು. ಅದು ಈಗ ಕೇವಲ ''ರಾಷ್ಟ್ರಕೂಟ'' – ಕಾಮನ್‌ವೆಲ್ತ್ ಆಫ್ ನೇಶನ್ಸ್''ಎಂದು ಕರೆಯಲ್ಪಡುತ್ತದೆ. ಇಂತಹ ಬದಲಾವಣೆಗೆ ನೆಹರೂರವರೇ ಕಾರಣರಾಗಿದ್ದಾರೆ. ಹಿಂದಿನ ಸಾಮ್ರಾಜ್ಯಶಾಹಿಯ ಕಹಿ ನೆನಪುಗಳನ್ನು ಮರೆತು ಅದರಲ್ಲಿ ಮುಂದುವರಿಯಲೂ ನೆಹರು ನಿರ್ಧರಿಸಿದರು. ಅವರ ಪ್ರಗತಿಪರ ಮಿತ್ರರು ರಾಷ್ಟ್ರಕೂಟವನ್ನು ಬಿಟ್ಟು ಬರಬೇಕೆಂದು ಸಲಹೆ ಮಾಡಿದರು. ಆದರೆ ನೆಹರೂರವರ

ವಿಚಾರವೇ ಬೇರೆ ರೀತಿಯದಾಗಿತ್ತು. ರಾಷ್ಟ್ರಕೂಟದಲ್ಲಿ ಮುಂದುವರಿಯುವದರ ಮೂಲಕ ಭಾರತಕ್ಕೆ ಅನೇಕ ಅನುಕೂಲಗಳಿವೆ ಎಂದು ನೆಹರೂ ತಿಳಿದಿದ್ದರು. ಇದು ಅವರ ಮುಂದಾಲೋಚನೆ ಅಥವಾ ದೂರದೃಷ್ಟಿಯನ್ನು ತೋರುತ್ತದೆ.

ಹುಸಿಯಾದ ನಿರೀಕ್ಷೆಗಳು

ಪಂಚಶೀಲ ತತ್ತ್ವಗಳು. ತಾಟಸ್ಥ ಧೋರಣೆ. ಅಲಿಪ್ತ ನೀತಿಯ ಹರಿಕಾರ ನೆಹರು ಹಲವಷ್ಟು ವಿದೇಶಾಂಗ ಧೋರಣೆಗಳಲ್ಲಿ ಸೋಲನ್ನು ಕಾಣಬೇಕಾಗಿ ಬಂದುದೂ ಒಂದು ದುರಂತವೇ ಸರಿ. ಗಂಭೀರ ಸಮಸ್ಯೆಗಳು ತಲೆದೋರಿದಾಗ ಯೋಗ್ಯ ನಿರ್ಣಯಗಳನ್ನು ತೆಗೆದುಕೊಳ್ಳಲು ನೆಹರು ಅಸಮರ್ಥರಾಗುತ್ತಿದ್ದರು ಎನ್ನುವುದಕ್ಕೆ ನಾವು ಕಾಶ್ಮೀರ ಮತ್ತು ಟಿಬೇಟ್ ಸಮಸ್ಯೆಯ ಉದಾಹರಣೆ ಕೊಡಬಹುದು. ತಾವು ನಂಬಿದ ತತ್ತ್ವಗಳ ಗುಂಗಿನಲ್ಲಿಯೇ ಸಾಕಷ್ಟು ರಕ್ಷಣಾ ಸಿದ್ಧತೆಯನ್ನು ಕಡೆಗಣಿಸಿದ್ದರಿಂದ ೧೯೬೨ರ ಚೀನಾ ಯುದ್ಧದಲ್ಲಿ ಅಪಮಾನಕರ ಸೋಲನ್ನು ಭಾರತ ಅನುಭವಿಸಬೇಕಾಯಿತು.

ಚೀನಾ ಭಾರತದ ಮೇಲೆ ಆಕ್ರಮಣ ಮಾಡಿದ ನಂತರವೂ ನೆಹರು ವಿಶ್ವಸಂಸ್ಥೆಯಲ್ಲಿ ಚೀನದ ಸದಸ್ಯತ್ವವನ್ನು ಪ್ರತಿಪಾದಿಸಿದ್ದು ಸರಿಯಲ್ಲ ಎನ್ನುವವರಿದ್ದಾರೆ. ಗೋವಾ ವಿಮೋಚನೆಯಲ್ಲಿಯೂ ಕೂಡಾ ಅನವಶ್ಯಕ ವಿಳಂಬವನ್ನು ತೋರಿದರು. ರಷ್ಯದ ಸೇನೆ ಹಂಗರಿಯ ಮೇಲೆ ದಾಳಿ ಮಾಡಿ ಅದನ್ನು ಮಣಿಸಿದಾಗ ಪ್ರತಿಭಟಿಸದ ನೆಹರೂರವರ ಅಲಿಪ್ತತೆಯನ್ನು ಅನೇಕರು ಟೀಕಿಸಿದರು. ದೀರ್ಘಕಾಲ ಪ್ರಧಾನಿ ಪಟ್ಟವನ್ನು ಅಲಂಕರಿಸಿದರೂ ನೆಹರು ತಮ್ಮ ಉತ್ತರಾಧಿಕಾರಿಯನ್ನು ಬೆಳೆಸಲು ಆಸ್ಥೆವಹಿಸಲೇ ಇಲ್ಲ. ಹೀಗೆ ಹಲವಾರು ಘಟನೆಗಳಲ್ಲಿ ನೆಹರು ಟೀಕೆಯ ಸರಣಿಯನ್ನು ಎದುರಿಸುತ್ತ ಇರಿಸುಮುರಿಸು ಅನುಭವಿಸಿದರು. ಹೀಗೆ ಒಂದೊಂದಾಗಿ ಅವರು ನಂಬಿಕೊಂಡಿದ್ದ ನಿರೀಕ್ಷೆಗಳೆಲ್ಲ ಹುಸಿಯಾಗುತ್ತ ಬಂದವು. ಗಾಂಧೀಜಿಯವರಿಂದ ಪ್ರಭಾವಿತರಾಗಿದ್ದ ನೆಹರು ಗಾಂಧೀಜಿಯವರ ವಿಶೇಷ ಒಲವಿನಿಂದ ಪ್ರಧಾನಿ ಪಟ್ಟಕ್ಕೇರಿದರು. ಆರ್ಥಿಕ ಧೋರಣೆಯಲ್ಲಿ ಸಂಪೂರ್ಣವಾಗಿ ಗಾಂಧೀಜಿಯವರ ವಿಚಾರಗಳಿಂದ ದೂರ ಸರಿದು ತಮ್ಮದೇ ಆದ ಆರ್ಥಿಕ ನೀತಿಗಳನ್ನು ರೂಪಿಸಿದರು. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಪ್ರೋತ್ಸಾಹವಿತ್ತರು. ಸ್ವಾತಂತ್ರ್ಯ ಹೋರಾಟದೊಂದಿಗೆ ಪ್ರಾರಂಭಗೊಂಡ "ಗಾಂಧಿಯುಗ" ನೆಹರು ಅಧಿಕಾರ ಗದ್ದುಗೆಯನ್ನು ಏರುವದರೊಂದಿಗೆ ಅಂತ್ಯಗೊಂಡಿತು. ೧೭ ವರ್ಷಗಳವರೆಗೂ ನಿರಂತರವಾಗಿ ಸಾಗಿಬಂದ ನೆಹರು ಯುಗ ಏಷ್ಯಾ ಆಫ್ರಿಕಾದಲ್ಲೆಲ್ಲ ಖ್ಯಾತಿಗೊಂಡಿತು. ಹೆಚ್ಚು ಕಡಿಮೆ ನೆಹರೂರವರು ಚುನಾಯಿತ ಸರ್ವಾಧಿಕಾರಿಯಂತೆ ಕೆಲಸ ನಿರ್ವಹಿಸಿದರು. ಕಾಂಗ್ರೆಸಿನ ಒಳಗೂ ಹಾಗೂ ಹೊರಗೂ ಅವರಿಗೆ ಅಪಾರ ಬೆಂಬಲ ಇದ್ದದ್ದು ನಿಜ ಇದರ ಜೊತೆಗೆ ವಿರೋಧವೂ ಸಾಕಷ್ಟಿತ್ತು ಎಂಬ ಅಂಶವನ್ನು ಗಮನಿಸಬೇಕು.

ಎಂತಹ ವಿರೋಧವಿದ್ದರೂ ಅಂತಿಮ ನಿರ್ಣಯ ನೆಹರು ಪಾಲಾಗುತ್ತಿತ್ತು ಎಂಬ ಸಂಗತಿ ನೆಹರು ತೋರುತ್ತಿದ್ದ ರಾಜಕೀಯ ತಂತ್ರ. ಪ್ರಭಾವಕ್ಕೆ ಸಾಕ್ಷಿಯೆನಿಸಿದೆ.

ನೆಹರು ಅಂದಿನ ಅನಿವಾರ್ಯತೆಯೆನಿಸಿದ್ದರೂ ಆಧುನಿಕ ಭಾರತದ ನಿರ್ಮಾಪಕರಲ್ಲಿ ನೆಹರೂರವರಿಗೆ ಅಗ್ರಸ್ಥಾನ ನಿಸ್ಸಂದೇಹವಾಗಿ ಸಲ್ಲುತ್ತದೆ. ಮೂಲತಃ ಕಾಂಗ್ರೆಸಿಗರಾಗಿದ್ದಂತಹ ಸಿ. ರಾಜಗೋಪಾಲಾಚಾರಿ, ಜಯಪ್ರಕಾಶ ನಾರಾಯಣ, ಡಾ। ರಾಮಮನೋಹರ ಲೋಹಿಯಾ ಮುಂತಾದ ತೀವ್ರಗಾಮಿಗಳು ಕಾಂಗ್ರೆಸ್ ಬಿಟ್ಟು ಹೋಗಬೇಕಾದಂತಹ ಪ್ರಸಂಗ ಬಂದಿತು. ಪ್ರಥಮ ರಾಷ್ಟ್ರಪತಿ ಬಾಬು ರಾಜೇಂದ್ರಪ್ರಸಾದರೊಡನೆ ನೆಹರೂರವರ ಸಂಬಂಧ ತೃಪ್ತಿಕರವಾಗಿರಲಿಲ್ಲ. ಅವರ ನಿರಂಕುಶ ಅಧಿಕಾರದ ವಿಧಾನ ಅವರು ಮಂತ್ರಿಮಂಡಳದ ಸದಸ್ಯರನ್ನು ನಡೆಸಿಕೊಳ್ಳುತ್ತಿದ ಬಗ್ಗೆ ಕಟುವಾಗಿ ಟೀಕಿಸಿದ್ದಾರೆ. ಕೊನೆಕೊನೆಗೆ ಜವಾಹರರನ್ನು ಕೇವಲ ಸ್ತುತಿಪಾಠಕರ ಗುಂಪೊಂದು ಸುತ್ತುವರೆದಿತ್ತು ಎನ್ನುವವರೂ ಉಂಟು.

ನೆಹರು ಅಧಿಕಾರ ಗದ್ದುಗೆ ಏರಿದಾಗಿನಿಂದ ಸಾಕಷ್ಟು ತೊಂದರೆಯಲ್ಲಿಯೇ ಸರಳಿದರು. ಭಾರತದ ವಿಭಜನೆ, ಜಾತಿಗಲಭೆ, ವಿದೇಶಿ ದಾಳಿ, ಸಹಚರರ ಅಸಹಕಾರ, ಜನತೆಯಲ್ಲಿ ತುಂಬಿದ್ದ ಬಡತನ, ಅಜ್ಞಾನ, ಅಂಧಕಾರ ಹೀಗೆ ಹಲವು ಅಡೆತಡೆಗಳಲ್ಲಿಯೂ ಭಾರತದ ಪ್ರಥಮ ಯಶಸ್ವಿ ಪ್ರಧಾನಿಯಾಗಿ ಹಗಲು ರಾತ್ರಿಯೆನ್ನದೆ ೧೭ ವರ್ಷಗಳ ಕಾಲ ಜೀವ ತೆಯ್ದ ನೆಹರು ಒಬ್ಬ ವ್ಯಕ್ತಿ ಎನ್ನುವುದಕ್ಕಿಂತ ಗಾಂಧಿಯುಗದ ನಂತರ ಜಗತ್ತು ಕಂಡ ಅದಮ್ಯ ಚೇತನದ ಮಹಾಶಕ್ತಿ ಎಂದು ಧಾರಾಳವಾಗಿ ಹೇಳಬಹುದು.

ಸಂಗೀತದಲ್ಲಿಯ ತ್ರಿಕರಣಗಳು

—ಮೀರಾ ಶಿವಶಂಕರ ಗುಂಡಿ

ತ್ರಿಕರಣಗಳು:

'ತ್ರಿಕರಣ' ಪದದ ಅರ್ಥ ಬಹುಸೂಕ್ಷ್ಮ ಹಾಗೂ ಗಂಭೀರ; ಸಾಧನೆಯ ಗುರಿಯಿಂದ ಕ್ಲಿಷ್ಟಕರ. ಕಾಯಾ. ವಾಚಾ. ಮನಸಾ - ಇವು ತ್ರಿಕರಣದಲ್ಲಿ ಬರುವ ಬಹುಮುಖ್ಯ ಅಂಗಗಳು. ಈ ಮೂರರಲ್ಲಿ ಪರಿಶುದ್ಧತೆ ಹೊಂದಿದವರು ಮೋಕ್ಷಕ್ಕೆ ಪ್ರಾಪ್ತರಾಗುವರು ಎಂಬುದು ಪ್ರತೀತಿ. ಆದಿಕಾಲದಿಂದಲೂ ಮಾನವನು ತನ್ನ ಜೀವನವನ್ನು ಮೋಕ್ಷದತ್ತ ಒಯ್ಯಬೇಕೆಂದು ಸಾಕಷ್ಟು ಕಠಿಣತಮ ಮಾರ್ಗಗಳನ್ನು ಅನುಸರಿಸುತ್ತಾ ಬಂದಿರುವದನ್ನು ವೇದ. ಪುರಾಣಗಳಿಂದ ಅರಿತುಕೊಳ್ಳಬಹುದಾಗಿದೆ. ತಪೋನಿಧಿಗಳು ತ್ರಿಕರಣಶುದ್ಧಿಗಾಗಿ ಏಕಮನೋಭಾವದಿಂದ ಯೋಗಸಮಾಧಿಯಲ್ಲಿ ಮಗ್ನರಾಗುತ್ತಿದ್ದರು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಸಪ್ತಸ್ವರಗಳಲ್ಲಿಯ ಷಡ್ಜ ಸ್ವರದ ಆಧಾರದ ಮೇಲೆಯೇ ಋಷಿಮುನಿಗಳು "ಓಂಕಾರ" ಮಂತ್ರವನ್ನು ಜಪಿಸಿ ತಪಗೈದು. ಪರಶಿವನನ್ನು ಪ್ರತ್ಯಕ್ಷ ಕಂಡು ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿರುವದನ್ನು ವೇದ. ಪುರಾಣಗಳಿಂದ ಅರಿತುಕೊಳ್ಳಬಹುದಾಗಿದೆ. ಹೀಗೆಯೇ. ಕಾಯಾ ವಾಚಾ. ಮನಸಾ ಇವು ತ್ರಿಕರಣದ ಅದ್ಭುತ ಶಕ್ತಿಗಳು ಎಂದು ಹೇಳಬಹುದು. ಅದರಂತೆ ಸಂಗೀತದಲ್ಲಿ ಮತ್ತು ಸಾಮಾನ್ಯ ಜನಜೀವನದಲ್ಲಿ ಈ ಮೂರರ ಸಂಖ್ಯೆಯ ಮಹತಿ ಮತ್ತು ಮಹತ್ತರಗಳು ಹೇಗಿವೆ ಎಂಬುದನ್ನು ಸೂಕ್ಷ್ಮವಾಗಿ ನೋಡಿದಾಗ. ಪ್ರತಿಯೊಂದರಲ್ಲಿಯೂ "ಮೂರು"- ಈ ಸಂಖ್ಯೆಯು ಅತ್ಯಂತ ಪ್ರಮುಖವಾಗಿ ಬಳಕೆಯಾಗುತ್ತಿರುವುದು ಕಂಡುಬರುತ್ತದೆ.

ಸಂಗೀತದಲ್ಲಿ ಸಂಖ್ಯೆ ಮೂರರ ಮಹತಿ ಮತ್ತು ಮಹತ್ತರಗಳು:

ಮಾನವನ ಜೀವನಕ್ಕೂ ಸಂಗೀತಕ್ಕೂ ಅತ್ಯಂತ ನಿಕಟವಾದ ಸಂಬಂಧವಿದೆ. ಹುಟ್ಟಿನಿಂದ ಮೊದಲುಗೊಂಡು ಆತನ ಮರಣದ ಪರಿಯಂತ ಬಾಳಿನಲ್ಲಿ ಹಾಸು-ಹೊಕ್ಕಾಗಿದೆ ಎಂದು ಹೇಳಬಹುದು. ಹಾಡು ಹಾಡದ ಮಾನವನಿಲ್ಲ. ಸಂಗೀತವಿಲ್ಲದ ದೇಶವಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸಂಗೀತಶಾಸ್ತ್ರವನ್ನು ಕುರಿತು ಚಿಂತಿಸುವಾಗ. ಮೂರರ ಸಂಖ್ಯೆಯು ಮಾನವ ಜೀವನದಲ್ಲಿಯೂ ಎಷ್ಟೊಂದು ಪ್ರಭಾವ ಬೀರಿದೆ ಎಂಬುದು ಗಮನಕ್ಕೆ ಬರುತ್ತದೆ.

ಆತನ ಜೀವನದುದ್ದಕ್ಕೂ ಇದು ಅಳಿಸಲಾರದ ಮಸಿಯಿಂದ ಬರೆದಂತಿದೆ. ಮಾನವನ ಜೀವನವು ಶೈಶವಾವಸ್ಥೆ, ಯೌವನಾವಸ್ಥೆ ಹಾಗೂ ವೃದ್ಧಾಪ್ಯಾವಸ್ಥೆ ಈ ಮೂರು ಹಂತಗಳಲ್ಲಿ ಜೀವನದ ಮುಕ್ತಾಯವನ್ನು ಹಾಡುತ್ತಿದೆ.

ವ್ಯಾವಹಾರಿಕವಾಗಿ ಅವಲೋಕಿಸಿದರೆ ನಮ್ಮ ಬದುಕು ಅಷ್ಟೊಂದು ಸರಳವಾದುದಲ್ಲ, ಅದು ಸಂಕೀರ್ಣವಾದದ್ದು ಮತ್ತು ಆದು ಒಂದು ಸ್ತರದದ್ದಲ್ಲ: ಬಹುಸ್ತರಗಳಿಂದ ಕೂಡಿದ್ದು. ಒಬ್ಬೊಬ್ಬರು ಒಂದೊಂದು ಸ್ತರದಲ್ಲಿ ಅನುಭವಿಸುತ್ತಾರೆ. ಅದನ್ನು ಮುಖ್ಯವಾಗಿ ಮೂರು ಭೂಮಿಕೆಗಳಲ್ಲಿ ಪ್ರವರ್ತಿಸಲಾಗುತ್ತದೆ. ಮೊದಲನೆಯದು "ಪ್ರಕೃತಿಸ್ತರ", ಎರಡನೆಯದು ಸಂಸ್ಕೃತಿಸ್ತರ, ಮೂರನೆಯದು "ಸುಕೃತಿ ಸ್ತರ". ಬಹುಸಂಖ್ಯಾತರ ನಡೆ ಮತ್ತು ನುಡಿ "ಸಂಸ್ಕೃತಿಸ್ತರ"ದಲ್ಲಿ ಸಮಾವೇಶಗೊಳ್ಳುತ್ತವೆ.

ಇದಕ್ಕೆ ಸೇರಿದವರ ಸಂಖ್ಯೆ ಅಲ್ಪ. ಕಾವ್ಯ ಆರಾಧನ ಮುಂತಾದ ಅನುಸಂಧಾನಗಳು ಈ ಸ್ತರದ ಲಕ್ಷಣಗಳು. ಈ ಎರಡೂ ಸ್ತರಗಳಿಗೆ ಅತೀತವಾದ ಸ್ತರ "ಸುಕೃತಿ ಸ್ತರ". ಇದರಲ್ಲಿ ಆಸಕ್ತರಾದವರು ಅತಿ ವಿರಳ. ಪ್ರಕೃತಿ ಅಥವಾ ಸಂಸ್ಕೃತಿ ಸ್ತರದಲ್ಲೇ ವಿರಮಿಸದೆ, ಸಂಸ್ಕೃತಿ ಸ್ತರಕ್ಕೇರಿದರೆ ಮಾತ್ರ ಬಾಳು ಅರ್ಥವತ್ತಾಗುತ್ತದೆ. ಇನ್ನೂ ಮುಂದುವರಿದು ಸುಕೃತಿ ಸ್ತರಕ್ಕೇರಿದರೆ ಪರಿಪೂರ್ಣತೆ ಸಿದ್ಧಿಸುತ್ತದೆ." ತರಂಗ" (ಜುಲೈ ೧೯, ೧೯೯೨ ಪುಟ ೫೩.)ದ "ಮಿಂಚುಗೊಂಚಲು" ಅಂಕಣದಲ್ಲಿ ಡಾ. ಸಿ.ಪಿ.ಕೆ. ಅವರು ಮಾನವನ ಇಡೀ ಜೀವನವನ್ನು ಹೀಗೆ ಪ್ರಮುಖವಾಗಿ ಮೂರು ಸ್ತರಗಳಲ್ಲಿ ವಿವೇಚಿಸಿದ್ದಾರೆ.

ಸಮಾಜದಲ್ಲಿ ಪ್ರತಿಯೊಂದು ಜಾತಿ ಮತ ಪಂಥ ಹಾಗೂ ಧಾರ್ಮಿಕ, ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಈ "ಮೂರು" ಸಂಖ್ಯೆಯು ತನ್ನತನವನ್ನು ಮೆರೆದುದು ಕಂಡುಬರುತ್ತದೆ.

ಮೂರರ ಮಹತ್ವ:

ಮುಕ್ಕಣ್ಣನಿಗೆ ಕಣ್ಣುಗಳು ಮೂರು. ಈ ಮೂರು ಕಣ್ಣುಗಳನ್ನು ವಿಶ್ವ ಜೀವನದಲ್ಲಿ ಸೃಷ್ಟಿ, ಸ್ಥಿತಿ, ಲಯಗಳಿಗೆ ಹೋಲಿಸಲಾಗುತ್ತದೆ. ಅಲ್ಲದೆ ಕೋಟ್ಯಾನುಕೋಟಿ ದೇವತೆಗಳಲ್ಲಿ ಸೃಷ್ಟಿಕರ್ತ-ಬ್ರಹ್ಮ, ರಕ್ಷಣಾಕರ್ತ ವಿಷ್ಣು ಹಾಗೂ ಲಯಕರ್ತ ಶಿವ ಪ್ರಮುಖರೆನಿಸಿದ್ದು ಇವರ ಸಂಖ್ಯೆಯೂ "ಮೂರು" ಇರುತ್ತದೆ.

ಅನಸೂಯಾದೇವಿಯ ಪತಿವ್ರತಾ ಪ್ರಭಾವದಿಂದ ಬ್ರಹ್ಮ, ವಿಷ್ಣು, ಮಹೇಶ್ವರರು ಶಿಶುಗಳಾದ ಸಂದರ್ಭದಲ್ಲಿ ಪುನರಾವತಾರ ಹೊಂದಲು ದಿವ್ಯದರ್ಶನ ನೀಡಿದ ದತ್ತಾತ್ರೇಯನಿಗೆ ಇರುವ ಮುಖಗಳು ಮೂರು. ಸ್ವರ್ಗ, ಮರ್ತ್ಯ ಹಾಗೂ ಪಾತಾಳ ಈ ಮೂರು ಲೋಕಗಳನ್ನು ಮೂರರ ಸಂಖ್ಯೆಯು ತನ್ನ ಮುಷ್ಟಿಯಲ್ಲಿ ಬಂಧಿಸಿದೆ. ಪೂಜೆ-ಪುನಸ್ಕಾರಾದಿಗಳಲ್ಲಿ ಸಮರ್ಪಿಸುವ ಪತ್ರಿ, ಫಲ, ಪುಷ್ಪಗಳೂ ಮೂರು. ಪರಶಿವನಿಗೆ ಅತ್ಯಂತ ಪ್ರಿಯವಾದ ತುಂಬಿ ಹೂಗಳ ಪಕಳೆಗಳೂ ಮೂರು. ಪತ್ರಿಯ

ದಳಗಳೂ ಮೂರು, ಹಣೆಯಲ್ಲಿ ಧರಿಸುವ ವಿಭೂತಿ, ನಾಮಗಳೂ ಮೂರು. ಮಠಮಾನ್ಯಗಳಲ್ಲಿ ನಡೆಯುವ "ದಾಸೋಹ" ಕಾರ್ಯದಲ್ಲಿಯೂ ಊಟ, ವಸತಿ, ವಿದ್ಯೆ- ಇವು ಮೂರು ಮುಖ್ಯ ಅಂಶಗಳು.

೧) ನಿಸರ್ಗದಲ್ಲಿರುವ ಕಾಲಗಳು ಮೂರು: ವರ್ತಮಾನ ಕಾಲ, ಭೂತಕಾಲ ಮತ್ತು ಭವಿಷತ್‌ಕಾಲ. ೨) ಋತುಗಳು ಮೂರು: ಮಳೆಗಾಲ, ಚಳಿಗಾಲ ಹಾಗೂ ಬೇಸಿಗೆಕಾಲ. ಮೂರು ಹೊತ್ತುಗಳು: ಬೆಳಗಿನ ಹೊತ್ತು, ಮಧ್ಯಾಹ್ನದೊತ್ತು, ರಾತ್ರಿಹೊತ್ತು; ತೆಂಗಿನ ಫಲಕ್ಕೆ ಕಣ್ಣುಗಳು ಮೂರು. ಪ್ರಕೃತಿಯಲ್ಲಿ ಮೂಲವಾದ ಬಣ್ಣಗಳು ಮೂರು: ಕೆಂಪು, ಹಳದಿ ಮತ್ತು ನೀಲಿ. ವೈವಿಧ್ಯಪೂರ್ಣ ಸಂಯೋಗದಿಂದ ವಿವಿಧ ಪ್ರಕಾರದ ಬಣ್ಣಗಳನ್ನು ತಯಾರಿಸಬಹುದು. ಗತಕಾಲದಲ್ಲಿ ದೇಶದ ರಕ್ಷಣೆಯಾಗುತ್ತಿದ್ದುದು ರಾಜ್ಯ, ಮಂತ್ರಿ ಮತ್ತು ಸೇನಾಪತಿಗಳೆಂಬ ಅಧಿಕಾರ ತ್ರಯರಿಂದ.

ಆಧುನಿಕ ಕಾಲದಲ್ಲಿ ಸಂಘ-ಸಂಸ್ಥೆಗಳಲ್ಲಿ ಪ್ರಮುಖವಾಗಿ ಅಧ್ಯಕ್ಷ, ಉಪಾಧ್ಯಕ್ಷ ಕಾರ್ಯದರ್ಶಿ, ಸರಕಾರದಲ್ಲಿ ರಾಷ್ಟ್ರಪತಿ ಉಪರಾಷ್ಟ್ರಪತಿ, ಪ್ರಧಾನಮಂತ್ರಿ- ಹೀಗೆ ತ್ರಯರಿಂದ ನಡೆದ ನಿದರ್ಶನಗಳು ಅನೇಕ.

ವ್ಯಾವಹಾರಿಕ ಜೀವನದಲ್ಲಿ ಮೂರರ ಬಳಕೆ ಹೇಳಬೇಕಾಗಿಲ್ಲ. ಒಂದು, ಎರಡು, ಮೂರು ಎಂದಾಗಲೇ ಪಂದ್ಯಾಟಗಳು ಪ್ರಾರಂಭ. ಇದರಲ್ಲಿ ವಿಜೇತರಿಗೆ ಕೊಡಮಾಡುವ ಪಾರಿತೋಷಕಗಳೂ ಮೂರು- ಪ್ರಥಮ, ದ್ವಿತೀಯ ಹಾಗೂ ತೃತೀಯ. ನಾಟಕದ ಅಂಕ ತೆರೆಯುವದು ಮೂರನೆಯ ಗಂಟೆ ಬಾರಿಸಿದಾಗಲೇ. ಚಿತ್ರಮಂದಿರದಲ್ಲಿ ಮೂರನೆಯ ಬೆಲ್ಲಿಗೇ ದೀಪಗಳು ಆರಿ ಚಿತ್ರ ಪ್ರಾರಂಭವಾಗುವುದು. ವಿದ್ಯಾರ್ಥಿ ತಪ್ಪು ಮಾಡಿದಾಗ, ಇನ್ನೊಬ್ಬನ ಬೆನ್ನ ಮೇಲೆ ಬೀಳುವ ಗುದುಕೆಗಳು ಮೂರು. ಜನಸಾಮಾನ್ಯರಲ್ಲಿ ಬೆಳೆದ ಕೆಟ್ಟ ಸಂಪ್ರದಾಯದ ವಿಧಾನಗಳು ಮೂರು. ಅವು : ಮಾಟ-ಮಂತ್ರ-ತಂತ್ರ. ಮಾಡಿಕೆಯ ತಂತ್ರಗಳನ್ನು ಇಡುವುದು ಮೂರು ಹಾದಿಗಳು ಕೂಡಿದಲ್ಲಿ. ಹಾಡಿನ "ಮುಕ್ತಾಯ"ವಾಗುವುದು ಹಾಡಿನ ಮೊದಲ ಪಂಕ್ತಿಯ ಮೂರು ಸಲದ ಪುನರಾವೃತ್ತಿಯ ನಂತರ. ಸಂಗೀತದಲ್ಲಿ ಇದಕ್ಕೆ "ತಿಹಾಯಿ" ಎನ್ನುವರು. 'ತಿಹಾಯಿ' ಎಂದರೆ ಸಂಗೀತದ ಮುಕ್ತಾಯ ಎಂಬುದೇನೂ ಅಲ್ಲ. ಲಯದ ಲೆಕ್ಕಾಚಾರಕ್ಕನುಗುಣವಾಗಿ ಕಲಾವಿದನು ತಾನು ಲಯದಲ್ಲಿ "ಪಕ್ಕಾ" ಇದ್ದೇನೆ ಎಂದು ತೋರುವುದಾಗಿದೆ. ಆದರೂ ಸಂಗೀತದ ಮುಕ್ತಾಯವಾಗುವುದು ಜೀವನ ಮೊದಲ ಪಂಕ್ತಿಯ, ಗತ್ತಿನ ಅಥವಾ ಬೋಲ್‌ಗಳ ಮೂರುಸಲ ವಾದನದ ಪ್ರಕ್ರಿಯೆಯ ನಂತರ. ಇದರಂತೆ ಕಲಾಕ್ಷೇತ್ರದಲ್ಲಿಯೂ, ಸಾಮಾಜಿಕ ಜೀವನದ ವ್ಯವಹಾರದಲ್ಲಿಯೂ ಇಂಥ ತ್ರಿಕರಣಗಳನ್ನು ಕಾಣಬಹುದಾಗಿದೆ.

ಸಂಗೀತ, ಸಾಹಿತ್ಯದ ಅವಿಭಾಜ್ಯ ಅಂಗವಾಗಿದೆ. ಕನ್ನಡ ಸಾಹಿತ್ಯದಲ್ಲಿ ಮೂರು ಸಾಲಿನ "ತ್ರಿಪದಿ"ಗಳು ಅತ್ಯಂತ ಚಿತ್ತಾಕರ್ಷಕ, ಸ್ವಾರಸ್ಯವಾಗಿ, ಅರ್ಥಪೂರ್ಣವಾಗಿ ಧ್ವನಿಸುವಲ್ಲಿ ಹೆಚ್ಚು ಸಹಾಯಕ ಹಾಗೂ ಜನಪ್ರಿಯವಾಗಿವೆ.

ಸರ್ವಜ್ಞನ ತ್ರಿಪದಿಗಳಂತೂ ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನಮಾನಗಳನ್ನು ಹೊಂದಿವೆ. ಜೀವನದಲ್ಲಿಯ ಸಮಗ್ರ ಘಟನೆಗಳನ್ನು ಪರಿಣಾಮಕಾರಕವಾಗಿ ಚಿತ್ರಿಸುವಲ್ಲಿ, ಇನ್ನಾವ ಮಹಾಕಾವ್ಯಕ್ಕಿಂತಲೂ ಕಡಿಮೆಯಾಗಿಲ್ಲ. ಜನಪದ ಸಾಹಿತ್ಯವಂತೂ ತ್ರಿಪದಿಗಳ ಮಹಾಸಾಗರವೇ ಆಗಿದೆ. ಜನಪದ ಕಥನಕಾವ್ಯಗಳಾದ ಲಾವಣಿ, ಗೀಗೀಪದ ಮುಂತಾದವುಗಳಿಗಿಂತ ತ್ರಿಪದಿಗಳು ವಿಶೇಷ ರೀತಿಯಲ್ಲಿ ಪ್ರಭಾವಶಾಲಿ "ಅನುಭವಪೂರ್ಣ" ಆಣಿಮುತ್ತುಗಳಾಗಿವೆ. ಒಂದು ಮಹಾಕಾವ್ಯವು ಹೇಳಬೇಕಾದ ಒಂದು ಸನ್ನಿವೇಶವನ್ನು ಜೀವನದ ಸಮಗ್ರ ಅನುಭವಜನ್ಯ ಸನ್ನಿವೇಶಗಳನ್ನು ಈ ತ್ರಿಪದಿಗಳು ಮೂರೇ ಮೂರು ಸಾಲುಗಳಲ್ಲಿ ಚಿತ್ತಾಕರ್ಷಕವಾಗಿ ಬಿಂಬಿಸುತ್ತವೆ. ತ್ರಿಪದಿಯನ್ನು ಅವಲೋಕಿಸಿದಾಗ, "ಜನಪದ ಸಂಗೀತವು, ನಿರಾಭರಣ ಸುಂದರಿಯಂತೆ ಎಷ್ಟೊಂದು ಮನೋಹರವಾಗಿ ನಿಸರ್ಗದ ಸೌಂದರ್ಯವನ್ನು ಚಿತ್ರಿಸುವುದರ ಜೊತೆಗೆ, ಓದು ಬರಹ ಬಾರದ ಹಳ್ಳಿಯ ಜನಗಳ ಮುಗ್ಧಮನಸ್ಸಿನ ನಿರ್ಮಲತೆಯ ಅರಿವನ್ನು ನಮಗೆ ಮಾಡಿಕೊಡುತ್ತದೆ" ಎಂಬುದನ್ನು ನಾವು ನೋಡಬಹುದು.

"ಪ್ರತಿನಿತ್ಯ ಗುಡ್ಡದ ಮಲ್ಲಯ್ಯನ ಪೂಜೆಗೆ ಹೋಗುವುದು ಅತ್ತಿಗೆಯ ನಿತ್ಯ ನಿಯಮ. ಅದೇ ಪ್ರಾರಂಭವಾಗಿರುವ ವರ್ಷಾಋತುವಿನ ಕಾಲ. ಪೂಜೆಗೆಂದು ಹೊರಟು ನಿಲ್ಲುವ ಸಮಯದಲ್ಲಿ ಭಯಂಕರ ಗುಡುಗ, ಸಿಡಿಲುಗಳಿಂದೊಡಗೂಡಿದ ಮಳೆಯ ಸೌಂದರ್ಯದ ಭವ್ಯ ದೃಶ್ಯವನ್ನು ನೋಡುತ್ತ ಮೈ ಮರೆತು ಬಾಗಿಲಲ್ಲಿ ನಿಂತಾಗ, (ಪತಿಯ ಸಹೋದರಿ) ಏಕೆ ಅತ್ತಿಗೆ, ಮಲ್ಲಯ್ಯನ ಪೂಜೆಗೆ ಹೋಗಲಿಲಲ್ವೇ? ಎಂದು ಛೇಡಿಸಿದ ಸಂದರ್ಭದಲ್ಲಿ "ನನ್ನ ಪೂಜೆಯನ್ನೇನು ಕೇಳುವೆ, ಹೊರಗೆ ನೋಡು, ಮಲ್ಲಯ್ಯನ ಪೂಜೆ ಎಷ್ಟೊಂದು ವಿಜೃಂಭಣೆಯಿಂದ ನಡೆದಿದೆ" ಎಂದು ತಟ್ಟನೆ ತ್ರಿಪದಿಯಲ್ಲಿ ಉತ್ತರ ಹೇಳಿರುವದು ಎಷ್ಟೊಂದು ಮನೋಜ್ಞವಾಗಿದೆ :

ಆಕಾಶದಡಿವ್ಯಾಗ ಧೂಪದ ಹೊಗೆ ಎದ್ದು
ಆಯ್ತು ಮಲ್ಲಯ್ಯನ ಶಿವಪೂಜೆ ಆಗಾಗ
ಆಕಾಶದ ಘಂಟಿ ಘಳಿಲೆಂದ ||

ಹೀಗೆ ಜನಪದ ಸಾಹಿತ್ಯ-ಸಂಗೀತಗಳು "ತ್ರಿಪದಿ"ಯ ಮೂರು ಸಾಲುಗಳ ಮುಪ್ಪುರಿಯಲ್ಲಿ ಮೆರಗು ಪಡೆದಿವೆ. ಮೂರರ ಸಂಖ್ಯೆಯು ಜೀವನದ ಪ್ರತಿಸ್ತರದಲ್ಲಿಯೂ ತನ್ನ ಪ್ರಭಾವವನ್ನು ಬೀರಿದೆ. ಮನುಕುಲವನ್ನುದ್ದೇಶಿಸಿ ಆಡುಭಾಷೆಯ ಪ್ರಕಾರ "ಜೀವನವು ಮೂರು ದಿನದ" ಸಂತೆ ಎಂದು ಹೇಳುವ ಅನುಭಾವಿಗಳ ಮಾತಿನಲ್ಲಿ ಮೂರರ ಮಹತಿಯನ್ನು ಕಂಡುಕೊಳ್ಳಬಹುದಾಗಿದೆ.

ತ್ರಿಕರಣ ಸಂಗಮ ಸಂಗೀತ:

ಈ ಮೊದಲು ಹೇಳಿದಂತೆ ಸಂಗೀತವು ಜೀವನದ ನಿತ್ಯ ಅವಿಭಾಜ್ಯ ಅಂಗವಾಗಿದ್ದು, ಮೂರರ ಸಂಖ್ಯೆಯ ಮಹತಿಯಿಂದ ಹೊರತಾಗಿಲ್ಲ. ಸಂಗೀತ, ಮೂರು ಕಲೆಗಳ ಸಂಗಮವಾಗಿದೆ. "ಗಾಯನಂ ವಾದನಂ ನರ್ತನಂ ತ್ರಯಂ

ಸಂಗೀತಮುಚ್ಯತೆ'' ಅಂದರೆ ಗಾಯನ, ವಾದನ ಹಾಗೂ ನೃತ್ಯ- ಈ ಮೂರು ಕಲೆಗಳ ಸುಂದರ ಸಮನ್ವಯ ಸ್ವರೂಪವೇ ''ಸಂಗೀತ''ವೆಂದು ''ಸಂಗೀತ ರತ್ನಾಕರ ''ಗ್ರಂಥ ಕರ್ತೃ ಶಾರ್ಙ್ಗದೇವ ಹೇಳಿದ್ದಾನೆ. ಸಂಗೀತದಲ್ಲಿಯ ರಾಗ-ರಾಗಿಣಿಗಳನ್ನು ಸ್ಥೂಲವಾಗಿ ಪ್ರಾಚೀನ, ಮಧ್ಯ ಹಾಗೂ ಆಧುನಿಕ ಕಾಲದ ರಾಗಗಳೆಂದು ವಿಂಗಡಿಸಿರುವುದು ಕಂಡುಬರುತ್ತದೆ.

ಸಂಗೀತವು ಪರಿವರ್ತನಶೀಲ ಕಲೆಯಾಗಿದ್ದು, ಮಧ್ಯಕಾಲೀನ ರಾಗ-ರಾಗಿಣಿಗಳು ಪ್ರಾಚೀನಕಾಲದ ರಾಗ-ರಾಗಿಣಿಗಳಿಂದ, ಆಧುನಿಕ ಕಾಲದ ರಾಗ-ರಾಗಿಣಿಗಳು ಮಧ್ಯಕಾಲೀನ ರಾಗ-ರಾಗಿಣಿಗಳಿಂದ ಭಿನ್ನವಾಗಿವೆ. ವೈವಿಧ್ಯತೆಯ ದೃಷ್ಟಿಯಿಂದ ಅವುಗಳನ್ನು ಶುದ್ಧ, ಛಾಯಾಲಗ ಮತ್ತು ಸಂಕೀರ್ಣ ಎಂಬ ಮೂರು ಜಾತಿಗಳಲ್ಲಿ ವಿಂಗಡಿಸಲಾಗಿದೆ. ರಾಗದ ಪರಿಶುದ್ಧ ಸ್ವರೂಪವನ್ನು ತೋರಿಸುವುದು ''ಶುದ್ಧರಾಗ, ಆ ರಾಗದ ಸಮೀಪವರ್ತಿ ರಾಗ-ರಾಗಿಣಿಯ ಛಾಯೆಯನ್ನು ತೋರಿಸುವುದು 'ಛಾಯಾಲಗ' ಹಾಗೂ ಒಂದಕ್ಕಿಂತ ಹೆಚ್ಚು ರಾಗಗಳ ಸುಂದರ ಸಮನ್ವಯ ಸ್ವರೂಪವನ್ನು ತೋರಿಸುವ ರಾಗ 'ಸಂಕೀರ್ಣ'ರಾಗ ಎಂದು ಹೆಸರಿಸಲಾಗಿದೆ.

ಧ್ವನಿಯು ಸಂಗೀತಕ್ಕೆ ಮೂಲ ದ್ರವ್ಯ. ಈ ಧ್ವನಿಯಿಂದ ನಾದ, ಶೃತಿ, ಸ್ವರ ಇವು ಪ್ರಮುಖವಾಗಿ ದೊರೆಯುತ್ತವೆ. ಸ್ವರದಲ್ಲಿ ಶುದ್ಧ, ಕೋಮಲ ಹಾಗೂ ತೀವ್ರ ಎಂಬ ಮೂರು ಪ್ರಭೇದಗಳನ್ನು ಕಾಣಬಹುದು. ಸಂಗೀತೋಪಯೋಗಿಯಾದ ನಾದಕ್ಕೆ ಮೂಲವಾಗಿ ಉಂಚಾನೀಚಾಪನ (Pitch), ಛೋಟಾ ಬಡಾಪನ (Magnitude) ಮತ್ತು ಜಾತಿ ಅಥವಾ ಗುಣ (Timber) ಎಂಬ ಮುಖ್ಯವಾದ ಮೂರು ಸ್ಥಿತಿಗಳನ್ನು ನಾವು ಗುರುತಿಸಬಹುದಾಗಿದೆ. ನಾದದಿಂದ ಸ್ವರ, ಸ್ವರಗಳಿಂದ ರಾಗಗಳು ಉತ್ಪನ್ನವಾಗಿದ್ದು, ಈ ರಾಗಗಳನ್ನು ಪ್ರಸ್ತುತಪಡಿಸುವಲ್ಲಿ ಮೂರು ಸ್ಥಾನಮಾನಗಳನ್ನು ನೋಡಬಹುದು. ರಾಗಗಳ ಸ್ವಭಾವ, ಗುಣಧರ್ಮ ಹಾಗೂ ಅವುಗಳ ರಸಭಾವಗಳಿಗೆ ಅನುಗುಣವಾಗಿ ಅವುಗಳನ್ನು ಮಂದ್ರ, ಮಧ್ಯ ಹಾಗೂ ತಾರ ಸ್ಥಾಯಿಗಳಲ್ಲಿ ಪ್ರಸ್ತುತಪಡಿಸುತ್ತೇವೆ. ಇದರಲ್ಲಿ ಪೂರ್ವಾಂಗ, ಉತ್ತರಾಂಗ ಹಾಗೂ ಸಮಪ್ರಕೃತಿ ಎಂಬ ಮೂರು ಅಂಗಗಳು ಮಹತ್ವದ ಪಾತ್ರ ನಿರ್ವಹಿಸುತ್ತವೆ. ಈ ಮೂರು ಸ್ಥಾನಗಳನ್ನು ಮಂದ್ರಸಪ್ತಕ, ಮಧ್ಯಸಪ್ತಕ, ತಾರಸಪ್ತಕಗಳೆಂದು ಪುರಾತನ ಸಂಗೀತಶಾಸ್ತ್ರಜ್ಞರು ಹೇಳಿದ್ದಾರೆ.

ರಸಭಾವಾಭಿವ್ಯಕ್ತಿಯೇ ಸಂಗೀತದ ಮೂಲ ಉದ್ದೇಶವಾಗಿದ್ದು, ರಸೋತ್ಪತ್ತಿಯ ದೃಷ್ಟಿಯಿಂದ ಹಾಗೂ ಸ್ವರ (ಶುದ್ಧ, ಕೋಮಲ ತೀವ್ರ) ಸಮಯದ ದೃಷ್ಟಿಯಿಂದ ಪಂ. ಭಾತಖಾಂಡೆಯವರು ಪ್ರಚಲಿತ ಹಿಂದೂಸ್ತಾನಿ ರಾಗಗಳನ್ನು ಮೂರು ವಿಭಾಗಗಳಲ್ಲಿ ವಿಂಗಡಿಸಿದ್ದಾರೆ :

೧. ಶುದ್ಧರಿಷಭ, ಶುದ್ಧಗಾಂಧಾರ ಮತ್ತು ಶುದ್ಧ ನಿಷಾದ ಸ್ವರಪ್ರಧಾನವಾದ ರಾಗಗಳು.

೨. ಕೋಮಲ ರಿಷಭ, ಶುದ್ಧಗಾಂಧಾರ ಮತ್ತು ಕೋಮಧೈವತ ಸ್ವರಪ್ರಧಾನವಾದ ರಾಗಗಳು.

೩. ಕೋಮಲ ಗಾಂಧಾರ, ಕೋಮಲ ನಿಷಾದ ಸ್ವರಪ್ರಧಾನವಾದ ರಾಗಗಳು.

ಸಮಯದ ದೃಷ್ಟಿಯಿಂದ ದಿನದ ಮೂರು ಹೊತ್ತುಗಳಿಗೂ ವಾತ, ಪಿತ್ಥ ಮತ್ತು ಕಫ ಈ ಮೂರು ಮನುಷ್ಯನ ಪ್ರಕೃತಿ ಗುಣಧರ್ಮಕ್ಕೆ ಅನುಗುಣವಾಗಿ ಇಂಥ ರಾಗವನ್ನು ಇಂಥ ಸಮಯಕ್ಕೇನೇ ಹಾಡಬೇಕೆಂಬ ನಿಯಮವನ್ನು ಅಳವಡಿಸಿಕೊಳ್ಳಲಾಗಿದೆ. ಇದರಿಂದ ನಿಸರ್ಗಕ್ಕೂ ಮನುಷ್ಯನ ಸ್ವಭಾವಕ್ಕೂ ರಾಗದಲ್ಲಿಯ ಶುದ್ಧ ಕೋಮಲ, ತೀವ್ರ ಸ್ವರಗಳಿಗೂ ರಸಭಾವದ ದೃಷ್ಟಿಯಿಂದ ಎಷ್ಟೊಂದು ನಿಕಟವಾದ ಸಂಬಂಧವಿದೆ ಎಂಬುದನ್ನು ನೋಡಬಹುದು. ಸಂಗೀತದಲ್ಲಿಯ ಸ್ವರದ ಶುದ್ಧ, ಕೋಮಲ, ತೀವ್ರ ಪ್ರಭೇದಗಳು ಮಾನಸಿಕ ಶಾಂತ, ಕೋಮಲ, ತೀವ್ರತ ಮೂರು ಭಾವನೆಗಳು ಆಗಿರುತ್ತವೆ.

ರಸೋತ್ಪತ್ತಿಯ ದೃಷ್ಟಿಯಿಂದ ಸ್ವರಗಳ ಜೋತೆಗೆ "ಲಯ (ತಾಲ)ವೂ ಬಹು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಈ ಲಯಕ್ಕೆ ಮೂರು ಸ್ಥಾನಮಾನಗಳು: ವಿಲಂಬಿತ, ಮಧ್ಯ ಹಾಗೂ ಧೃತ್ ಎಂದು. ಸಂಗೀತದ ಭಾವರಸ ಗತಿ ಗಮನಗಳು ಪ್ರವಹಿಸುವದು ಮೂರು ಸ್ಥಾನಗಳಲ್ಲಿ ಮಾತ್ರ. ನಾಲ್ಕನೆಯ ಸ್ಥಾನಕ್ಕೆ ಅಲ್ಲಿ ಅವಕಾಶವಿಲ್ಲ.

ಪೂರ್ವಾಪರ ಸಂಗೀತದಲ್ಲಿ ರಾಗರಾಗಿಣಿಗಳ ಸ್ಥಾನ ಮಾನವನ್ನು ಗ್ರಾಮ ಮೂರ್ಛನೆಗಳು ಹೊಂದಿದ್ದವು. ಪುರಾತನ ಕಾಲದಲ್ಲಿ ಸಂಗೀತಶಾಸ್ತ್ರಜ್ಞರು ಈ ಗ್ರಾಮಗಳನ್ನು ಷಡ್ಜಗ್ರಾಮ, ಗಾಂಧಾರ ಗ್ರಾಮ ಮತ್ತು ನಿಷಾದ ಗ್ರಾಮಗಳೆಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ. "ಪಾರಿಜಾತ" ಗ್ರಂಥ ಕರ್ತೃ ಅಹೋಬಲ ಪಂಡಿತನ ಅಭಿಪ್ರಾಯದಲ್ಲಿ ಷಡ್ಜಗ್ರಾಮ, ಮಧ್ಯಮಗ್ರಾಮ ಮತ್ತು ಗಾಂಧಾರ ಗ್ರಾಮಗಳು ಪ್ರಮುಖವಾದವುಗಳು. ಆದರೆ ಗಾಂಧಾರ ಗ್ರಾಮವು ಗಂಧರ್ವರಿಗೆ ಮಾತ್ರ ಸೀಮಿತವಾದದ್ದೆಂದು ರೂಢಿಯಲ್ಲಿ ಬಂದುದರಿಂದ ಅದರ ಸ್ಥಾನವನ್ನು ನಿಷಾದ ಗ್ರಾಮವು ಅಲಂಕರಿಸಿದೆ. ಪ್ರಚಾರದಲ್ಲಿದ್ದುವು ಮೂರು ಗ್ರಾಮಗಳು ಮಾತ್ರ ("ಸಂಗೀತ ವಿಶಾರದಾ" ಪಂ. ಲಕ್ಷ್ಮೀನಾರಾಯಣ ಗರ್ಗ: ಪುಟ ೧೧೩).

ಗ್ರಾಮ ಮೂರ್ಛನೆಗಳಲ್ಲಾಗಲಿ, ರಾಗ-ರಾಗಿಣಿಗಳಲ್ಲಾಗಲಿ, ಪ್ರಮುಖವಾಗಿ ಮೂರು ಅಂಗಗಳಿದ್ದು ಅವುಗಳನ್ನು ಗ್ರಹ, ಅಂಶ ಮತ್ತು ನ್ಯಾಸಸ್ವರಗಳೆಂದು ಕರೆಯುತ್ತಾರೆ. ರಾಗದ ಆಲಾಪನೆಯ ಹಂತದಲ್ಲಾಗಲಿ, ಬೋಲ್‌ತಾನ, ತಾನಗಳಲ್ಲಾಗಲಿ ಈ ಮೂರು ಸಂಗತಿಗಳು ಅತ್ಯಂತ ಮಹತ್ವದ ಸಂಗತಿಗಳಾಗಿದ್ದು ರಾಗದ ಶುದ್ಧ ಸ್ವರೂಪವನ್ನು ಕಾಪಾಡಿಕೊಂಡು ಬರುವಲ್ಲಿ ಸಹಾಯಕಾರಿಯಾಗಿವೆ.

೧. ಗೀತೆಯು ಆಲಾಪ ಬೊಲಾತಾನ ಮುಂತಾದ ಸಂಗತಿಗಳು ಯಾವ ಸ್ವರದಿಂದ ಪ್ರಾರಂಭಗೊಳ್ಳುವವೋ ಆ ಸ್ವರಕ್ಕೆ ಗ್ರಹಸ್ವರವೆಂದೂ,

೨. ಅಸ್ವರ ಸಂಗತಿಗಳು ಅಂತ್ಯಗೊಳ್ಳುವ ಸ್ವರಕ್ಕೆ ನ್ಯಾಸಸ್ವರವೆಂದೂ ಹಾಗೂ

೩. ರಾಗದಲ್ಲಿ ಮೇಲಿಂದ ಮೇಲೆ ಪ್ರಯೋಗಿಸುವ ಮಹತ್ವದ ಸ್ವರಕ್ಕೆ "ಅಂಶ"ವೆಂದೂ ಗುರುತಿಸಲಾಗಿದೆ.

ಆದರೆ ಆಧುನಿಕ ಕಾಲದಲ್ಲಿ ಗ್ರಹ ಹಾಗೂ ನ್ಯಾಸಸ್ವರ ಸಂಗತಿಗಳನ್ನು ಅಲಕ್ಷಿಸಿ, ಕೇವಲ 'ಅಂಶ' ಸ್ವರವನ್ನು 'ವಾದಿ' ಸ್ವರ ಸ್ಥಾನದಲ್ಲಿರಿಸಲಾಗಿದೆ.

ರಾಗದ ಜಾತಿಯನ್ನು ಕುರಿತು ವಿವೇಚಿಸುವಾಗ ಪ್ರಮುಖವಾಗಿ ಮೂರು ಜಾತಿಗಳ ರಾಗಗಳು ದೊರೆಯುತ್ತವೆ:

೧. ಔಡವ ೨. ಷಾಡವ್ ೩. ಸಂಪೂರ್ಣ.

ಯಾವ ರಾಗದ ಆರೋಹ-ಅವರೋಹಗಳಲ್ಲಿ ಕೇವಲ ೫ ಸ್ವರಗಳಿರುತ್ತವೆಯೋ ಆ ರಾಗವು ಔಡವ ಜಾತಿಗೆ ಸೇರಿದ ರಾಗವಾಗಿರುತ್ತದೆ. ೬ ಸ್ವರಗಳಿದ್ದ ರಾಗಕ್ಕೆ ಷಾಡವ ಜಾತಿಯ ರಾಗವೆಂದೂ. ೭ ಸ್ವರಗಳಿದ್ದ ರಾಗವು ಸಂಪೂರ್ಣ ಜಾತಿಗೆ ಸೇರಿದ ರಾಗವಾಗಿರುತ್ತದೆ.

ಮೇಲ್ಕಾಣಿಸಿದ ಮೂರು ಜಾತಿಗಳ ಸಮ್ಮಿಶ್ರದಿಂದ ಸಂಗೀತದಲ್ಲಿ ಒಟ್ಟು ೯ ಜಾತಿಗಳು ಲಭ್ಯವಾಗುತ್ತವೆ. ಆದರೆ ಈ ೯ ಜಾತಿಗಳಿಗೆ ಮೇಲಿನ ಮೂರು ಜಾತಿಗಳೇ ಮೂಲವಾಗಿರುತ್ತವೆ.

ಗ್ರಾಮರಾಗಗಳಿಂದ ಉತ್ಪನ್ನವಾದ 'ಗೇಯ'ರಚನೆಗಳಿಗೆ ಅಂತರ್ಗತವಾಗಿ ಭಾಷಾರಾಗಗಳೂ ಬರುತ್ತವೆ. ಭಾಷಾ ವಿಭಾಷಾ ಮತ್ತು ಅಂತರ್‌ಭಾಷಾ ರಚನೆಗಳು. ರಾಗಗಳಂತೆಯೇ ವಿಶಿಷ್ಟವಾದ 'ಗೇಯ' ರಚನೆಗಳಾಗಿದ್ದು. ಪ್ರಾಚೀನ "ಗೀತೆ" ಅಥವಾ ಗಾಯನ ವಿಧಿಯ ಪ್ರಕಾರಗಳಾಗಿವೆ. ಈ ಭಾಷಾ. ವಿಭಾಷಾ ಮತ್ತು ಅಂತರ್‌ಭಾಷಾ 'ಗೀತೆ' ಪ್ರಕಾರಗಳು ಗಂಧರ್ವಗೀತೆಯ ಅಂತರ್ಗತವಾಗಿದ್ದು ಅಪ್ರಚಲಿತವಾಗಿವೆ*

ಸಂಗೀತ. ಮೂಲತಃ ಕಲೆಯಾಗಿದ್ದು ಜ್ಞಾನದ ಶಾಖೋಪಶಾಖೆಗಳಲ್ಲಿ ಅದು ಒಂದು ಮಹತ್ವದ ಶಾಖೆಯಾಗಿದೆ. ಈ ಸಂಗೀತವು ಜ್ಞಾನದ ನಿಕಟವಾದ ರಹಸ್ಯವನ್ನು ಅರಿತು ಪರಿಶ್ರಮ ಪಡುತ್ತ ದೈವೀ ಸಾಕ್ಷಾತ್ಕಾರಕ್ಕೆ ಅತ್ಯಂತ ಸುಲಭವಾದ ಮಾರ್ಗಕ್ಕೆ "ಸಹಜಮಾರ್ಗ "ವೆಂದು ಗುರುತಿಸಲ್ಪಟ್ಟಿದೆ. ಸಂಗೀತವು 'ರಾಜಯೋಗ'ದ ಒಂದು ಮುಖವೆಂದು ಹೇಳಲಾಗುತ್ತದೆ. ಭರತಖಂಡದಲ್ಲಿ ಭಕ್ತಿಪಂಥವು ಬೆಳೆದು ಸಂಗೀತವ ಮೂಲಕ ಶಿವಸಾಕ್ಷಾತ್ಕಾರಕ್ಕೆ ಸರಳ ಹಾಗೂ ಸಹಜ ಮಾರ್ಗವನ್ನು ಹಾಕಿಕೊಟ್ಟಿದೆ. ಸಂಗೀತದ ನಿತ್ಯಸಾಧನೆಯಿಂದ ಪ್ರಮುಖ ಮೂರು ಪ್ರಕ್ರಿಯೆಗಳಾದ ರೇಚಕ. ಪೂರಕ ಹಾಗೂ ಕುಂಭಕ ಕ್ರಿಯೆಗಳು ಅವ್ಯಾಹತವಾಗಿ ನಡೆಮ. ಈ ಮೂರರಲ್ಲಿ ಯಾವುದಾದರೊಂದು ಕ್ರಿಯೆ ಲುಪ್ತವಾದರೆ. ಅಲ್ಲಿ ಸಂಗೀತವೂ ಇಲ್ಲ. ಯೋಗವೂ ಇಲ್ಲ.

ಸಂಗೀತವಲ್ಲಿಯಲ್ಲದೆ ಮಾನವ ಹಾಗೂ ವಿಶ್ವ ಜೀವನದಲ್ಲಿ ಮೂರರ ಸಂಖ್ಯೆಯು ಅತ್ಯಂತ ಮಹತ್ವದ ಸ್ಥಾನಮಾನವನ್ನು ಹೊಂದಿದೆ. ಪರಿಪೂರ್ಣ ಸಾರ್ಥಕ ಜೀವನದ ಬಗೆಗೆ ವರಕವಿ ಡಾ. ದ.ರಾ. ಬೇಂದ್ರೆಯವರು "ರಸವೆ ಜನನ. ವಿರಸ ಮರಣ. ಸಮರಸವೇ ಜೀವನ " ಎಂದು ಹೇಳಿ. ಸಂತೃಪ್ತಿಯ ಜೀವನದ ಗುಟ್ಟನ್ನು ವಿವರಿಸಿದ್ದಾರೆ.

---

* ಸಂಗೀತಶಾಸ್ತ್ರದರ್ಪಣ -ಭಾಗ-೧: ಪ್ರೊ. ಎ.ಮ. ಪಾಟೀಲ ಪುಟ ೧೧೯.
ಕವಿವಿ ಪ್ರಕಟನೆ ೧೯೭೪

ಸತ್ಯವಾದುದೆಲ್ಲವೂ ಶಿವ(ಮಂಗಲ)ಮಯ. ಶಿವಮಯವಾದುದೆಲ್ಲವೂ ಸುಂದರಮಯ. ಈ ಮೂರು ಸಂಗತಿಗಳಿಂದ ವಿಶ್ವಜೀವನವೇ ಸಾರ್ಥಕವಾಗುತ್ತದೆ ಎಂಬ ದಿವ್ಯ ಸಂದೇಶವನ್ನು ವೇದ - ಉಪನಿಷತ್ತುಗಳು ಈ ಮೂರೇ ಶಬ್ದಗಳಲ್ಲಿ ಬಿಂಬಿಸಿವೆ.

ಧಾರವಾಡದ ಜಿನಾಲಯ : ಶಾಸನಗಳ ಶೋಧ -ಒಂದು ಟಿಪ್ಪಣಿ

—ಎಚ್. ಆರ್. ರಘುನಾಥ ಭಟ್

ಧಾರವಾಡ ನಗರದ ಹೊಸಯಲ್ಲಾಪುರದ ಶುಕ್ರವಾರ ಪೇಟೆಯಲ್ಲಿರುವ ಬಸ್ತಿ ಓಣಿಯಲ್ಲೊಂದು ಜಿನಾಲಯತ್ತು ಎಂಬುದು ಹಲವರ ಗಮನಕ್ಕೆ ಬಂದಂತಿಲ್ಲ. ಅದನ್ನೀಗ ಜೀರ್ಣೋದ್ಧಾರ ಮಾಡಿದ್ದಲ್ಲದೆ. 'ಬಸ್ತಿ ಸಂಕೀರ್ಣ' ಸಮಾಜದ ಉಪಯುಕ್ತ ಸಂಸ್ಥೆಯಾಗಿ ಪ್ರಗತಿ ಹೊಂದುತ್ತಿರುವುದರಿಂದ ಜನಮನವನ್ನು ಸೆಳೆಯುತ್ತಿದೆ. ಧಾರವಾಡ ಜಿಲ್ಲೆಯ ಹಳೆಯ ಮತ್ತು ಪರಿಷ್ಕೃತ ಗೆಝೆಟಿಯರ್‌ಗಳಲ್ಲಿ ಜೈನ ಬಸ್ತಿ ಇತ್ತೆಂಬುದರ ಬಗೆಗೆ ಉಲ್ಲೇಖ ಮಾತ್ರ ಇದೆ. ಹಳೆ ಸಿಟಿ ಸರ್ವೆ ರಿಕಾರ್ಡ್ಸ್ ಪ್ರಕಾರ ಶಂಬವನಾಥ ಜೈನಬಸದಿ ಅದಾಗಿತ್ತೆಂದು ಹೇಳಲಾಗಿದೆ. ಅನಂತರದಲ್ಲಿ ಅಲ್ಲೊಂದು ಪಾರ್ಶ್ವನಾಥನ ವಿಗ್ರಹವು ಭಗ್ನವಾಗಿ ಹೋದಾಗ ಅದನ್ನು ಬಸ್ತಿ ಪ್ರಾಂಗಣದಲ್ಲಿದ್ದ ಹಳೆ ಬಾವಿಯಲ್ಲಿ ವಿಸರ್ಜಿಸಲಾಯಿತಂತೆ. ೧೯೭೨-೭೩ರ ಸುಮಾರಿಗೆ ಬಸ್ತಿ ಮತ್ತೆ ಜೀರ್ಣವಾಗಿದ್ದು. ಜೈನ ಸಮಾಜದವರು ಅದನ್ನು ಪುನಃ ಜೀರ್ಣೋದ್ಧಾರ ಮಾಡಿದರು. ಆ ಸಮಯದಲ್ಲಿ ಪ್ರಾಚೀನ ಬಸದಿಯ ಕೆಲ ಭಾಗಗಳನ್ನು ತೆಗೆದು ಇಟ್ಟಿದ್ದಾರೆ. ಅವುಗಳಲ್ಲಿ ಬಸ್ತಿಯ ಗರ್ಭ ಗುಡಿಯ ಮೇಲ್ಹಾವಣಿ ಕಲ್ಲು ಬಹುದಳದ ಕಮಲ ವಿನ್ಯಾಸವನ್ನು ಹೊಂದಿದೆ. ಉಳಿದ ಮೂಲೆ ಕಲ್ಲುಗಳು ಹಾಗೇಬಿದ್ದಿವೆ. ಹಳೇ ಬಸ್ತಿ ಕೆಡುವುತ್ತಿದ್ದಾಗ ತೀರ್ಥಂಕರನ ಶಿಲಾಶಿಲ್ಪವು ಪತ್ತೆಯಾಗಿತ್ತು.ಅವನ್ನೀಗ ಅರ್ಚಕರ ಮನೆಯಲ್ಲಿಡಲಾಗಿದೆ. ಅದೇ ಸಮಯದಲ್ಲಿ ಸಿಕ್ಕ ಪಾಣೀಪೀಠವೊಂದರ ಮೇಲೆ ಇದ್ದ ಸುಣ್ಣದ ಲೇಪವನ್ನು ಈಚೆಗೆ ಕೆರೆಸಿ ನೋಡಿದಾಗ ಅದರ ಮೇಲೆ ಎರಡು ಸಾಲಿನ ಶಾಸನವು ಶೋಧವಾಯಿತು. ಆ ಶಾಸನದ ಪ್ರಕಾರ"ಶ್ರೀಮತ್ ವೃಕ್ಷಮೂಲ ಗಣದ ಅಭಿನಂದನ ಸಿದ್ಧಾಂತ ದೇವರ ಶಿಷ್ಯೆಯರಾದ ಬೆಳ್ವೂರದ ಹೇಮವತಿ ಕಂತಿಯರು ಚಂದ್ರನಾಥ ಬಸದಿಯ ಮಾಡಿಸಿದರು. ಅವರ ಗುಡ್ಡ (ಶಿಷ್ಯ) ಸಕಳೆಯ ನಂದಿಯಣ್ಣನು ಆ ಬಸದಿಯ ಪಡಿಸಾಲವನ್ನು ಮಾಡಿದನು".

ಈ ಶಾಸನದ ಲಿಪಿ. ಭಾಷಾಶೈಲಿ ಮುಂತಾದವನ್ನು ಅನುಲಕ್ಷಿಸಿದರೆ ಇದು ಹನ್ನೆರಡು – ಹದಿಮೂರನೆಯ ಶತಮಾನದ್ದೆಂದು ಹೇಳಬಹುದು. ಈ ಕಾಲಕ್ಕೆ ಸೇರಬಹುದಾದ ಚಿಕ್ಕತೀರ್ಥಂಕರ ಪ್ರತಿಮೆ. ಕಲಶಭಾಗಗಳೂ ಬಸ್ತಿಯ ಆವರಣದಲ್ಲಿ ನೋಡಲು ಸಿಗುತ್ತವೆ. ಧಾರವಾಡ ಮರ್ಗದ ಪ್ರವೇಶದಲ್ಲಿ ಕೂಡ ಈಚೆಗೆ ಜಿನಬಿಂಬವು ಸಿಕ್ಕಿದ್ದು ಅದನ್ನು ಶಾಲೆಯ ಆವರಣದಲ್ಲಿಡಲಾಗಿದೆ. ಇವೆಲ್ಲಕ್ಕಿಂತ ಮುಖ್ಯವಾದ

ಜಿನಶಾಸನದ ಭಾಗವೊಂದು ನಮಗೆ ಈಚೆಗೆ ಲಭ್ಯವಾಯಿತು. ಆಕಸ್ಮಾತ್ತಾಗಿ ನೋಡಿದ ಬಿ.ಇ. ವಿದ್ಯಾರ್ಥಿ ಎಲ್.ಆರ್. ದೇಶಪಾಂಡೆ ನಮಗೆ ತಿಳಿಸಿದ. ಕೂಡಲೇ ಆ ಸ್ಥಳಕ್ಕೆ ನಾವು ಹೋಗಿ ನೋಡಲಾಗಿ ಕಲ್ಯಾಣ ಚಾಳುಕ್ಯರ ಕಾಲದ ಒಂದು ದೀರ್ಘ ಜಿನಶಾಸನದ ತುಂಡುಕಲ್ಲು ಆದಾಗಿತ್ತು. ನಮಗಾದ ಖುಶಿ ಹಾಗೂ ದುಃಖ ಅಷ್ಟಿಷ್ಟಲ್ಲ. ಖುಷಿ – ಯಾಕೆಂದರೆ ಜಿನಶಾಸನ ಬಸ್ತಿ ಆವರಣದ ಬಳಿ ಸಿಕ್ಕಿತಲ್ಲ ಎಂಬುದಕ್ಕಾಗಿ. ದುಃಖ – ಕಳೆದ ೧೭-೧೮ ವರ್ಷಗಳಿಂದ ಒಂದೇ ಸಮನೆ ಬಟ್ಟೆ ಒಗೆಸಿಕೊಳ್ಳುತ್ತ ಮಲಧಾರಿಯಾಗಿ ಆ ಶಾಸನ ಕಲ್ಲು ಇನ್ನೂ ಅಲ್ಲೇ ಕೊಳೆಯುತ್ತಿದೆಯಲ್ಲ ಎಂಬುದಕ್ಕಾಗಿ. ಅದನ್ನು ಶುದ್ಧೀಕರಿಸಿ. ಪಡಿಯಚ್ಚು ತೆಗೆದು ಅಭ್ಯಸಿಸಿದೆವು. ಶಾಸನದ ಮುಖ್ಯಭಾಗ ತ್ರುಟಿತವಾಗಿ ಹೋಗಿದೆ ನಿಜ. ಸಾಕಷ್ಟು ದೀರ್ಘವಾಗಿದ್ದಿರಬಹುದಾದ ಈ ಶಾಸನದ ಕೇವಲ ೧೩ ಸಾಲುಗಳು ಈಗ ಉಳಿದಿವೆ. ಇದರಲ್ಲಿ ಮೂಲತಃ ಶಾಪಾಶಯಭಾಗ ಉಳಿದಿದೆ ಇದರ ಪ್ರಕಾರ ಈ ಶಾಸನವನ್ನು, ಧರ್ಮವನ್ನು ಹಾಳು ಮಾಡಿದವರು ಋಷಿ. ಗೋವು. ಸ್ತ್ರೀ. ಬಾಳಬ್ರಹ್ಮ ವಧೆಗೈದ ಪಾತಕರಾಗುತ್ತಾರೆ. ಪಂಚಪರಮೇಷ್ಠಿಗಳ ಆಜ್ಞೆಯನ್ನು ಉಲ್ಲಂಘನೆ ಮಾಡಿದ ಪಾಪಿಗಳಾಗುತ್ತಾರೆ ಎಂದು ಆ ಪಂಚಪರಮೇಷ್ಠಿಗಳ ಆಣೆ ಮಾಡಿ ಹೇಳಲಾಗಿದ್ದರೂ ಅದರ ಶಾಪ ತಟ್ಟಿದಂತಿಲ್ಲ. ಈ ಶಾಸನ ನಿಲ್ಕೆ ಅಪಿಚಳಂ ಇವು ನಿಲ್ವನ್ನೆಗಂ ಶೇಷ. ತಾರಾಗಣ. ದಿವಿಜಗಣಾವಾಸಮಾ ಚಂದ್ರ ತಾರಂ– ಎಂದು ವೃತ್ತದಲ್ಲಿ ಘೋಷಿಸಿದ್ದರೂ ಅದು ಫಲಿಸಿದಂತಿಲ್ಲ! ಶಾಸನದ ಹತ್ತನೆಯ ಸಾಲಿಂದೀಚೆಗೆ ಧರ್ಮ ಪ್ರಕಣ್ಣನ ಪದುಪನಿಟ್ಟು ಕೋದಂಡರಾಮಂ ನಿರುತಂ ತಾ ಬರ್ಮಕೊಟ್ಟಂ ಕಟಿಯತೇವರ . . . ಇತ್ಯಾದಿ ಮುಂದೆ ಅಳಿಸಿ ಹೋಗಿದೆ. ವೃತ್ತಿಭಾಗದಲ್ಲಿ ಕೊಟ್ಟ ಪರಮಾರ್ಥಂ ನೂರಮತ್ತರ ಪೊಲನ ನಿಟಿಕೆಯಿರ್ಪತ್ತು ಗೇಹಾಳಿಯುಂ ವಿಸ್ತರಿಸಿದ . . . ಇದಕ್ಕೆ ಅರುವಣ ಗದ್ಯಾಣ . . . ಎಂಬ ಭಾಗ ಉಳಿದಿದೆ. ಕೊನೆಗೆ ಶ್ರೀವಸುದೇವ ಸ್ವಾಮಿಗಳ ಗುಡ್ಡ ಕೋದಂಡರಾಮ ಎಂದು ಉಲ್ಲೇಖಿತವಾಗಿದೆ. ಇದರಲ್ಲಿರುವ ಪಂಚಪರಮೇಷ್ಠಿ. ಕಾರೆಯಗಣ. ಅರುವಣ. ಗದ್ಯಾಣ ಮುಂತಾದ ಪಾರಿಭಾಷಿಕಪದಗಳು ಮಹತ್ವಪೂರ್ಣವಾಗಿವೆ. ಹಾಗೆಯೇ ಶ್ರೀವಸುದೇವಸ್ವಾಮಿ ಮತ್ತು ಅವರ ಗುಡ್ಡ ಕೋದಂಡರಾಮ ನಮ್ಮ ಗಮನ ಸೆಳೆಯುತ್ತಾರೆ.

ಇವನ್ನೆಲ್ಲ ಒಟ್ಟಾರೆ ಒಂದೆಡೆ ಇಟ್ಟು ವಿಶ್ಲೇಷಿಸಿದರೆ. ಧಾರವಾಡದಲ್ಲಿ ೧೧-೧೨ನೆಯ ಶತಮಾನದ ಹೊತ್ತಿಗೆ ಜಿನಾಲಯವೊಂದು ಇತ್ತು. ಹಲವು ದಾನಪತ್ರಗಳಿಂದ ಮೆರೆದಿತ್ತು. ಖ್ಯಾತ ಜಿನಮುನಿಗಳಿಂದ ಶೋಭಿಸುತ್ತಿತ್ತು. ಕಾಲಕ್ರಮೇಣ ಭಗ್ನವಾಗಿ. ಜೀರ್ಣವಾಗಿ ಹೋಗಿತ್ತು. ಈಚೆಗೆ ಪುನಃ ಜೀರ್ಣೋದ್ಧಾರಗೊಂಡು ಮತ್ತೆ ತಲೆಯೆತ್ತಿದೆ. ಶಿಲಾಕಟ್ಟಡದ ಬದಲು ಕಾಂಕ್ರೀಟ್ ಕಟ್ಟಡವಾಯಿತು. ಇದರ ಮುಂದುಗಡೆಯಲ್ಲಿ ಮಾನಸ್ತಂಭವೊಂದು ಇನ್ನೂ ಪೂರ್ಣವಾಗಬೇಕಾಗಿದೆ. ಜಿನಾಲಯ ಸಂಕೀರ್ಣವು ಬರಬರುತ್ತ ಹೆಚ್ಚು ಉಪಯುಕ್ತವಾಗಿ ಜನಮನವನ್ನು ಆಕರ್ಷಿಸತೊಡಗಿದೆ. ಧಾರವಾಡನಗರದ ಸಾಂಸ್ಕೃತಿಕ ಬದುಕಿಗೆ. ವೈವಿಧ್ಯವನ್ನು. ಇನ್ನೊಂದು ಆಯಾಮವನ್ನು ಸೇರಿಸತೊಡಗಿದೆ. ಅಂತೆಯೇ ಈ ಪ್ರಾಚ್ಯಾವಶೇಷಗಳನ್ನು ಹಾಗೂ ಶಾಸನಗಳನ್ನು ಸಂರಕ್ಷಣೆ ಮಾಡುವುದು ಅಗತ್ಯವಾಗಿ ಆಗಬೇಕಾದ ಕೆಲಸ.

ಈಚಿಗೆ ಶೋಧವಾದ ತ್ರುಟಿತ ಶಾಸನಗಳು

I

೧. . . ಮಾಚಾರ್ಯ್ಯ ಪರಂಪರೆಯ . . . ಶ್ರೀ ಮ . . .

೨. . . ಮಾಡಿಸದೀನಾತಂ ರಿಷಿ ಗೋ ಸ್ತ್ರೀ ಬಾಳಬ್ರಹ್ಮವಧೆಗೆಯ್ದ ಪಾತಕಮನೆಯ್ದು

೩. . . (ಕಾರೆ)ಯಗಣದ ಸ್ಥಾನಂಗಳನಾಳ್ವ ಮಠಪರೊಳ್ ರಿಷಿಯಾನು ಮಜ್ಜಿಯಾನು ಭೂಮಿ

೪. . . . ಯ ತನದಿ ನಿಜೆದು ಕೊಣ್ಡು ಸತ್ತಾತನ ಸಾವು. ಪನ್ನಿಸತ್ತುದು ನಾಯಿಸತ್ತುದು

೫. . . . ಳಿಯಟ್ಟಿ ಬಾರತುಪೇಕ್ಷೆಗೆಯ್ದರ್ಪ್ಪವರ್ಗ್ಗಳ್ ಪ್ನ್ಚಪರಮೇಷ್ಟಿಗಳಾಜ್ಞಾಲುಂಘನಂಗೆಯ್ದ . . .

೬. . . .ಳಂ ತತಂ ಬರಿಸಿದಾಚಾರ್ಯ್ಯರಿಗೆ ಪಂಚಪರಮೇಷ್ಟಿಗಳಾಣೆ ||ವೃತ್ತ||

೭. . . ರಾನ್ವಯಂ ಕಾರೆಯಗಣ ಮತುಳಂ ಮಕ್ತಿ ನಂ ಪಾಪಿಗಳ್ ದುರ್ಮ್ಮತಿಗಳ್ ದುಷ್ಟರ್ವ್ವೇಕ . .

೮. ಆ ಗಿಂತೀದೊರ್ಪ್ಪಿದ ಮೇಕ ಸ್ಥಿತಿಸನ್ದೀಶಾಸನಂ ನಿಲ್ಕವಿಚಳಮಿವು ನಿಲ್ವಂನೆಗಂ ಶೇಷ . .

೯. ತಾರಾಗಣ ದಿವಿಜಗಣಾವಾಸ ಮಾಚನ್ನ ತಾರಂ*

೧೦. . ಧಮ್ಮಪ್ರಕಣ್ಣನ ಪದುಪನಿಟ್ಟ ಕೋದಣ್ಡರಾಮಂ ನಿರುತಂತಾ ಬದ್ದುರ್ಕೊಟ್ಟ ಕಚಿಯತೇವರ . . .

೧೧. (ಕೊಟ್ಟ) ಪರಮಾರ್ತ್ಥಂ ನೂಱುಮತ್ತರ್ಪ್ಪೊಲನ ನಿಱಿಕೆಯಿರ್ಪ್ಪತ್ತು ಗೇಹಾಳಿಯಂ ವಿಸ್ತ(ರಿ) . . .

೧೨. . . ಗೋಳ್ವಂ ಶ್ರೀಮಾಚನ್ನತಾರಂ| ಇದಕ್ಕಱುವಣಂ ಗದ್ಯಾ(ಣ) . . .

೧೩. . . ತಕಂ|| ಶ್ರೀವಸುದೇವ ಸ್ವಾಮಿಗಳ ಗುಡ್ಡ ಕೋದಣ್ಡ(ರಾಮ). . .

II

೧. ಶ್ರೀಮತ್ . . . (ವೃಕ್ಷ) ಮೂಲಗಣದಬಿನಂದನ ಸಿದ್ಧಾನ್ತದೇವರ ಸಿಸ್ಯರಪ್ಪ ಬೆಳ್ವೂರದ ಹೇಮವತಿಗಂತಿಯರು ಚಂದ್ರ . . .

೨. (ನಾಥ ಬಸದಿ)ಯ ಮಾಡಿಸವವರ ಗುಡ್ಡ ಸಕಳಿಯ ನಂದಿಯಣ . . ಬಸದಿಯ ಪಡಿಸಾಲಂ ಮಾಡಿದ.

ಆಯ್ದ ಗ್ರಂಥಾಧಾರ

೧. ಧಾರವಾಡ ಜಿಲ್ಲಾ ಗೆಝೆಟಿಯರ್ (ಪರಿಷ್ಕೃತ). ಧಾರವಾಡ. ೧೯೫೯

೨. ಎಂ.ಎಂ. ಕಲುಬುರ್ಗಿ (ಸಂ) ಧಾರವಾಡ ಜಿಲ್ಲೆಯ ಶಾಸನಸೂಚಿ. ಧಾರವಾಡ. ೧೯೭೫

೩. ಎಂ.ಎಂ. ಕಲಬುರ್ಗಿ (ಸಂ). ಧಾರವಾಡ ತಾಲೂಕಿನ ಶಾಸನಗಳು ಧಾರವಾಡ. ೧೯೭೮

೪. ಕರ್ನಾಟಕ ಭಾರತಿ. ಸಂ ೧-೧. (೧೯೬೮)

೫. ಪ್ರಸ್ತುತ ಶಾಸನ ಶಿಲೆಗಳನ್ನು ಜಿನಾಲಯದ ಆವರಣದಲ್ಲೀಗ ತಂದಿಟ್ಟು ಸಂರಕ್ಷಿಸಲಾಗಿದೆ. ಈ ದಿಶೆಯಲ್ಲಿ ಸಹಕರಿಸಿದ ಶ್ರೀ ಎಂ.ಡಿ. ಪತ್ರಾವಳಿಯವರಿಗೂ ಅವರ ಗೆಳೆಯರ ಕೂಟಕ್ಕೂ ನಮ್ಮ ಕೃತಜ್ಞತೆಗಳು. ಈ ಶಾಸನಗಳನ್ನು ಅರ್ಥೈಸುವಲ್ಲಿ ಸಲಹೆಗಳನ್ನು ನೀಡಿದ ಪ್ರೊ|| ಶ್ರೀನಿವಾಸ ರಿತ್ತಿಯವರಿಗೆ ಕೃತಜ್ಞತೆಗಳು.

ವಿನಾಯಕರ ನವ್ಯಕಾವ್ಯ ಪ್ರಯೋಗಗಳು

— ವ್ಹಿ.ಜಿ. ಪೂಜಾರ

*ಹೊಸಗನ್ನಡ ಕಾವ್ಯದ ಶ್ರೀಮಂತಿಕೆಗೆ. ವೈವಿಧ್ಯತೆಗೆ ಕಾರಣರಾದವರಲ್ಲಿ ವಿನಾಯಕ ಅವರ ಹೆಸರು ಎದ್ದುಕಾಣುವಂಥದು. ನವೋದಯ - ನವ್ಯ ಕಾವ್ಯ ಸಂದರ್ಭಗಳಲ್ಲಿ ರಚಿಸಿದ ಅವರ ಕಾವ್ಯಗಳು ವಸ್ತು. ಭಾಷೆ ಹಾಗೂ ಛಂದಸ್ಸಿನ ದೃಷ್ಟಿಯಿಂದ ಮಹತ್ವದ ಪ್ರಯೋಗಗಳಾಗಿವೆ. ಕನಸಿಗರು. ಪಯಣಿಗರು. ಚಿಂತನಶೀಲರು. ದಾರ್ಶನಿಕರು. ಸೌಂದರ್ಯಪ್ರಿಯರು ಹಾಗೂ ಭಾರತೀಯ ಸಂಸ್ಕೃತಿಯ ಆರಾಧಕರೂ ಆದ ವಿನಾಯಕ ಅವರು ಕನ್ನಡ ಕಾವ್ಯಕ್ಷಿತಿಜವನ್ನು ಎಲ್ಲ ದೃಷ್ಟಿಗಳಿಂದ ವಿಸ್ತರಿಸಿದರು; ಅಂತಾರಾಷ್ಟ್ರೀಯ ಮಟ್ಟಕ್ಕೆ ಅದನ್ನು ಎತ್ತರಿಸಿದರು. ೧೯೪೦ರಷ್ಟು ಹಿಂದೆಯೇ "ಸಮುದ್ರಗೀತಗಳು" ಎಂಬ ವಿನೂತನ ವಸ್ತುವನ್ನೊಳಗೊಂಡ ಕವನ ಸಂಕಲನವನ್ನು ಪ್ರಕಟಿಸುವುದರ ಮೂಲಕ ವಿನಾಯಕರು ತಮ್ಮದೇ ಆದ ನವ್ಯಕಾವ್ಯ ಮಾರ್ಗದಲ್ಲಿ ಹೊಸ ಹೆಜ್ಜೆಗಳನ್ನಿರಿಸಿದರು. ನವ್ಯ. ನವ್ಯತೆ ಎಂದರೇನು? ಎಂದು ಗೊತ್ತಿರದ ಸಮಯದಲ್ಲಿ ಅದರ ಅರ್ಥ. ಸ್ವರೂಪ ಹಾಗೂ ಲಕ್ಷಣಗಳನ್ನು ಹೇಳಿ ಕನ್ನಡಕ್ಕೆ ನವ್ಯಕಾವ್ಯದ ಅಗತ್ಯವಿದೆಯೆಂದು ಸಾರಿದರು. ಹಾಗೆ ನೋಡಿದರೆ ಕನ್ನಡ ಕಾವ್ಯ ನಿಂತ ನೀರೇನೂ ಅಲ್ಲ. ವಸ್ತು. ಭಾಷೆ ಹಾಗೂ ಛಂದಸ್ಸುಗಳ ದೃಷ್ಟಿಯಿಂದ ಆಯಾ ಕಾಲಘಟ್ಟಗಳಲ್ಲಿ ಅದು ನವೀನ ರೂಪ ಪಡೆಯುತ್ತ ಬಂದಿದೆ. ಅಂದಂದಿಗೆ ಅದು ನವ್ಯವಾಗಿಯೇ ಕಂಡಿದೆ. ಆದರೆ ಹೊಸಗನ್ನಡ ಕಾವ್ಯ ಸಂದರ್ಭದಲ್ಲಿ ನವ್ಯ ಕಾವ್ಯವನ್ನು ನಾವಿಂದು ವಿಶೇಷಾರ್ಥದಲ್ಲಿ ಬಳಸುವೆವು. ಇದು ಕನ್ನಡದಲ್ಲಿ ಆಂಗ್ಲ ಕಾವ್ಯ. 'progressive movement'ಗಳ ಪ್ರಭಾವದಿಂದ ಬಂದುದಾಗಿದ್ದು. ರಚನಾ ವಿಧಾನ ಹಾಗೂ ಛಂದಸ್ಸಿನ ದೃಷ್ಟಿಯಿಂದ ನಮ್ಮ ಹಿಂದಿನ ಕಾವ್ಯಕ್ಕಿಂತ ಭಿನ್ನವಾದುದಾಗಿದೆ.

ನವ್ಯಕಾವ್ಯ ಪ್ರಯೋಗಗಳನ್ನು ಕನ್ನಡದಲ್ಲಿ ಮೊದಲು ಮಾಡಿದವರೆಂದರೆ ವಿನಾಯಕ ಅವರೇ. ಈ ವರೆಗೆ ಅವರು "ಸಮುದ್ರಗೀತಗಳು ", "ಓಂಕಾರ", "ನವ್ಯಕವಿತೆಗಳು", "ಉಗಮ", "ದ್ಯಾವಾ-ಪೃಥಿವೀ", "ಊರ್ಣನಾಭ", "ಕಾಶ್ಮೀರ", "ಇಂದಿಲ್ಲ ನಾಳೆ ", "ಸಿಮ್ಲಾದಲ್ಲಿಯ ಉಳಿದ ಕವಿತೆಗಳು", "ಐದು ನೀಳ್ಗವನಗಳು" ಹಾಗೂ "ಸಸ್ಯಸೃಷ್ಟಿ" ಎಂಬ ಹನ್ನೊಂದು ನವ್ಯಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಐವತ್ತು ವರ್ಷಗಳ ಹಿಂದೆಯೇ. ಸಾಂಪ್ರದಾಯಿಕ ಛಂದೋರೂಪಗಳಲ್ಲಿ ಬಹು

---

* ...ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ದಿ: ೧೬-೩-೧೯೯೨ ರಂದು ನಡೆಸಿದ 'ವಿನಾಯಕ ವಾಙ್ಮಯ ಗೋಷ್ಠಿ'ಯಲ್ಲಿ ಮಂಡಿಸಿದ ಪ್ರಬಂಧ.

ಸಂಖ್ಯೆಯ ಕವಿಗಳು ಕಾವ್ಯ ಹೊಸೆಯುತ್ತಿದ್ದ ಕಾಲದಲ್ಲಿಯೇ. ವಿನಾಯಕ ಅವರ ನವ್ಯ ಕಾವ್ಯೋದ್ಯೋಗ ಪ್ರಾರಂಭಗೊಂಡಿದ್ದು. ಅವರ ಅನೇಕ ಕವಿತೆಗಳು ವಿಸ್ಮಯಕರ ಪ್ರಯೋಗಗಳಾಗಿವೆ. ಅವರು ನವ್ಯಕಾವ್ಯ ಹೇಗೆ ಇರಬೇಕು ಎಂದು ಹೇಳುತ್ತ "ಬಳಕೆಯ ಮಾತು. ಛಂದಸ್ಸಿನಲ್ಲಿಯ ಪ್ರಯೋಗ ಪ್ರತಿಮಾ ಪ್ರಧಾನತೆ. ವಾಸ್ತವಿಕ ಚಿತ್ರಸೃಷ್ಟಿ. ಪಾರಿಭಾಷಿಕ ಶೈಲಿ . . ವಸ್ತುವಿನ ಆಯ್ಕೆಯಲ್ಲಿನ ಸ್ವಾತಂತ್ರ್ಯ. ಬುದ್ಧಿಪ್ರಧಾನತೆ ಅಲ್ಲದೆ ನವ್ಯಕಾವ್ಯದಲ್ಲಿ ಈ ವ್ಯಕ್ತ್ಯತೀತ ಮೌಲ್ಯಗಳಿಗೆ ಪ್ರಧಾನತೆಯುಂಟಾಗುತ್ತದೆಂದು ತೋರುತ್ತದೆ."[1] ಎಂದು ಆ ಕಾವ್ಯಸ್ವರೂಪವನ್ನು ವಿವರಿಸಿದ್ದಾರೆ. ಅವರ ಹೇಳಿಕೆಗೆ ಅನುಗುಣವಾಗಿ ಅವರ ನವ್ಯಕಾವ್ಯಪ್ರಯೋಗಗಳಿದ್ದುದನ್ನು ಕಾಣಬಹುದು. ಅವರ "ಸಮುದ್ರ ಗೀತಗಳು", "ದ್ಯಾವಾ ಪೃಥಿವೀ", "ನವ್ಯ ಕವಿತೆಗಳು", "ಇಂದಲ್ಲ ನಾಳೆ" ಹಾಗೂ ಇನ್ನಿತರ ನವ್ಯಕವನ ಸಂಕಲನಗಳು ವಸ್ತು ಹಾಗೂ ಛಂದಸ್ಸಿನ ದೃಷ್ಟಿಯಿಂದ ಹೇಗೆ ವಿನೂತನವಾಗಿವೆ ಎಂಬುದನ್ನಿಲ್ಲಿ ಗುರುತಿಸಲು ಯತ್ನಿಸಿದೆ.

ವಿನಾಯಕ ಅವರು ೧೯೩೬ರಲ್ಲಿ ಉನ್ನತ ವ್ಯಾಸಂಗಕ್ಕೆಂದು ಇಂಗ್ಲೆಂಡಿಗೆ ಹಡಗಿನಲ್ಲಿ ಹೋಗಿದ್ದರು. ಪ್ರಯಾಣದ ಮೂರು ವಾರಗಳ ಕಾಲದಲ್ಲಿ ಅವರು ಸಮುದ್ರವನ್ನು ಕಂಡ ರೀತಿ. ವಿಸ್ಮಯ ಹಾಗೂ ವೈವಿಧ್ಯಮಯ ಅನುಭವಗಳನ್ನು ಕಾವ್ಯವಾಗಿಸಿದರು. ಇವೇ 'ಸಮುದ್ರಗೀತಗಳು' ಸಂಕಲನದಲ್ಲಿವೆ. ವಸ್ತು ಹಾಗೂ ಛಂದಸ್ಸಿನ ದೃಷ್ಟಿಯಿಂದ ಆಗ ಕನ್ನಡಕ್ಕೆ ಇವು ನವೀನ ಪ್ರಯೋಗಗಳೆನ್ನಿಸಿದುವು. ಇವರಿಗಿಂತ ಮೊದಲು ರತ್ನಾಕರವರ್ಣಿ ಹಾಗೂ ಇನ್ನಿತರ ಕವಿಗಳು ಸಮುದ್ರವನ್ನು ವರ್ಣಿಸಿದ್ದರು. ಆದರೆ ವಿನಾಯಕರಷ್ಟು ಸಮುದ್ರದ ವೈಭವ. ಶಕ್ತಿ. ಅಗಾಧತೆ. ರುದ್ರ ಗಂಭೀರತೆ ವಿಸ್ತಾರಗಳನ್ನು ಕಾವ್ಯದಲ್ಲಿ ತಂದಿರಲಿಲ್ಲ. ಜಲತತ್ವದ ಅಗಾಧತೆಗೆ ಮಾರು ಹೋಗಿ ಸಮುದ್ರವನ್ನು ರಾಜನೆಂದು ಕರೆದಿದ್ದಾರೆ. ಕಡಲು. ಕಡಲು ತೀರ. ಹಡಗ. ಬ್ರಿಟನ್ನಿನ ದ್ವೀಪದಲ್ಲಿ ಹಾಗೂ ಆತ್ಮವೃತ್ತ – ಎಂಬೈದು ಭಾಗಗಳಲ್ಲಿ ಇಲ್ಲಿನ ಕವನಗಳು ಹರಡಿವೆ. 'ಕಡಲು' ಭಾಗದಲ್ಲಿನ ಕವಿತೆಗಳನ್ನು ಕಂಡು ಡಾ. ಜಿ.ಎಸ್. ಶಿವರುದ್ರಪ್ಪನವರು 'ಈ ಕಡಲು ಬೆಳಗಿನಲ್ಲಿ ಬೈಗಿನಲ್ಲಿ ನಡು ಹಗಲಲ್ಲಿ. ನಡುರಾತ್ರಿಯಲ್ಲಿ. ಕಗ್ಗತ್ತಲಲ್ಲಿ. ಬೆಳದಿಂಗಳಲ್ಲಿ ಕಾಣಿಸಿದ ರೀತಿಗಳನ್ನು ವರ್ಣಿಸುವ ಅನುಭವ ಇಷ್ಟೊಂದು ವೈವಿಧ್ಯಮಯವಾಗಿ. ವಾಸ್ತವವಾಗಿ. ಜೀವಂತವಾಗಿ ಕನ್ನಡ ಕಾವ್ಯದಲ್ಲಿ ಅಭಿವ್ಯಕ್ತವಾಗಿದ್ದು ಇದೇ ಮೊದಲು"[2] ಎಂದು ಅಭಿಪ್ರಾಯ ಪಟ್ಟುದರಲ್ಲಿ ಅತಿಶಯೋಕ್ತಿಯೇನಿಲ್ಲ. 'ಕಡಲ ತೀರ' ಭಾಗದ ಕವಿತೆಗಳಲ್ಲಿ ಏಡನ್. ಆಫ್ರಿಕಾ. ಸುಯೋಜ. ಸ್ಟ್ರಾಂಬೋಲಿ. ಕೋರ್ಸಿಕಾ. ನೇಪಲ್ ಮುಂತಾದ ಸ್ಥಳಗಳ ವೈಶಿಷ್ಟ್ಯಗಳನ್ನು. ಆ ಭೂಮಿಯ ಐತಿಹಾಸಿಕ ಹಿನ್ನೆಲೆಯನ್ನು ವರ್ಣಿಸಿದ್ದಾರೆ. ಆಫ್ರಿಕಾ ಜನರ ಮೇಲೆ ಬಿಳಿಯರು ನಡೆಸುವ ದಬ್ಬಾಳಿಕೆ ಶೋಷಣೆಯನ್ನು ಹೀಗಳೆದು. ಆ ಜನರ ದುಃಸ್ಥಿತಿಗೆ ಮರುಕ ಪಟ್ಟಿದ್ದಾರೆ.:

"ಅಬಸೀನಿಯದ ಕೊಲೆ ನಿಗರ್ರಿಗಳ ದಾಸ್ಯ ಸುಮಾಲಿಗಳ ಕೊರಗಲು
ಕಪ್ಪು ಹಚ್ಚುವ ಕೃತಿಗಳಿವು – ರಕ್ತವರ್ಣದವು

---

೧. ಗೋಕಾಕ ವಿ.ಕೃ.: ನವ್ಯತೆ. ಪು: ೪೩-೪೪

೨. ಶಿವರುದ್ರಪ್ಪ ಜಿ.ಎಸ್:'ನವೋದಯ'. ಪುಟ: ೨೦೭

ಆಫ್ರಿಕ ಖಂಡದ ಜನರ ಮೈಯಲ್ಲಿಲ್ಲ ಮಾಂಸ ಖಂಡ
ಗುಲಾಮರ ಲೋಕವದು – ಮಾನವ ಮೆಟ್ಟಿದ ಪಾತಾಳವದು''[೩]

ಇಲ್ಲಿನ ರಾಜಕೀಯ ಪ್ರಜ್ಞೆ, ವಿಶ್ವಮಾನವತೆ, ಜಗತ್ತಿನ ಜನಾಂಗಗಳ ಪರಿಚಯ ಕನ್ನಡ ಕಾವ್ಯಕ್ಕಾದದ್ದು ಹೊಸತಾಗಿದೆ.

ಹಡಗ ಕವಿಗೆ ಪರ್ವತದಂತೆ, ನಿಶಾಚರದಂತೆ, ಶೂರ್ಪನಖಿಯ ಬಂಧುವಿನಂತೆ, ಒಂದು ವಿಶಿಷ್ಟ ಪ್ರಾಣಿಯಂತೆ ಹಾಗೂ ರಾಕ್ಷಸ ಪ್ರವೃತ್ತಿಯ ಪ್ರತೀಕವಾಗಿಯೂ ಕಂಡಿದೆ:

''ಹೇಗೆ ಕಣ್ಣು ಬಿಡುತಿದೆ ನೋಡು
ಒಕ್ಕಣ್ಣ ರಾಕ್ಷಸನಂತೆ
ಹೇಗೆ ಒದ್ದಾಡುತಿದೆ ನೋಡು, ಚಿಗುರೆಯ ಮೆದ್ದ ಹೆಬ್ಬಾವಿನಂತೆ''[೪]

ಹಡಗ ಇಲ್ಲಿ ವಕ್ರತೆಗೆ, ವಿಕೃತಿಗೆ ಸಂಕೇತವಾಗಿದೆ. ಯಂತ್ರಯುಗದ ಪರಿಣಾಮವನ್ನು ಇಲ್ಲಿ ಕವಿ ಹಾರ್ದಿಕವಾಗಿ ಸ್ವೀಕರಿಸಿದ್ದಾರೆ. '' ಬ್ರಿಟನ್ನಿನ ದ್ವೀಪದಲ್ಲಿ''ನ ಕವಿತೆಗಳಲ್ಲಿ ವಿನಾಯಕರು ಬ್ರಿಟನ್ನಿನ ನಿಸರ್ಗ ಸೌಂದರ್ಯಕ್ಕೆ ವಿಲಾಸ ಜೀವನಕ್ಕೆ ಮಾರು ಹೋದರೂ ಭಾರತೀಯತೆಯನ್ನೂ ದೇಶಭಕ್ತಿಯನ್ನೂ ಬಿಟ್ಟುಕೊಟ್ಟಿಲ್ಲ. ಆ ದೇಶವನ್ನು ಹಾಡಿಹೊಗಳಲು ಒಲ್ಲದೆ ''ನನ್ನ ನಾಡಿನ ಹಾಡಿಗೆ ಮುಡಿಪಿರಲಿ ನನ್ನ ಜೀವ''[೫] ಎನ್ನುವುದರ ಮೂಲಕ ತಾಯ್ನಾಡಿನ ಬಗೆಗೆ ಇಟ್ಟುಕೊಂಡ ಪ್ರೀತಿ ಅಭಿಮಾನವನ್ನು ಹೇಳಿಕೊಂಡಿದ್ದಾರೆ. ' ಆತ್ಮವೃತ್ತ'ದಲ್ಲಿ ವ್ಯಕ್ತಿಗತ ಗೀತೆಗಳಿದ್ದು, ವಿದೇಶದಲ್ಲಿದ್ದಾಗ ಅವರು ಪಟ್ಟ ಪಾಡು, ಆಸೆ-ನಿರಾಸೆ, ಅಪಜಯ, ದೈವದ ಆಟ ಇವೆಲ್ಲ ಚಿತ್ರಣಗೊಂಡಿವೆ.

'ಸಮುದ್ರ ಗೀತಗಳು' ಹೀಗೆ ಹೊಸ ವಸ್ತುವನ್ನು ಕನ್ನಡಕ್ಕೆ ತಂದಂತೆ ಛಂದಸ್ಸಿನ ದೃಷ್ಟಿಯಿಂದಲೂ ಹೊಸ ಮಾರ್ಗ ತೋರಿದೆ. ಈ ಕವಿತೆಗಳಲ್ಲಿನ ಮುಕ್ತ ಛಂದಸ್ಸು ಆಗಿನ ಕಾಲಕ್ಕೆ ಹೊಸದು ಎಂದಷ್ಟೇ ಕಾಣಿಸದೆ ಕ್ರಾಂತಿಕಾರಿಯಾಗಿಯೂ ಪರಿಣಮಿಸಿತು. ಸಮುದ್ರದ ಸ್ವಚ್ಛಂದತೆ, ಸ್ವಾತಂತ್ರ್ಯ, ಆಳ ತನ್ನ ಕಾವ್ಯಕ್ಕೂ ಒದಗಲಿ ಎಂದು ಆಶಿಸಿದ್ದಾರೆ. ಛಂದಸ್ಸು ಕಾವ್ಯಕ್ಕೆ ಕಟ್ಟಳೆಯಾಗಬಾರದು. ಭಾವನೆಗಳ ಅಭಿವ್ಯಕ್ತಿ ಮುಕ್ತವಾದ ರೀತಿಯಲ್ಲಿ ಆಗಬೇಕು ಅಂದಾಗ ನಮ್ಮ ಕಾವ್ಯ ಕ್ಷೇತ್ರದಲ್ಲಿ ನಾವು ಏನನ್ನಾದರೂ ಹೊಸದನ್ನು ಮಾಡಲು ಆಗುತ್ತದೆ ಎಂಬ ಭಾವನೆ ಅವರ ಪ್ರಯೋಗಗಳ ಹಿಂದಿರುವುದನ್ನು ಕಾಣುವೆವು. ''ಪ್ರತಿಜ್ಞೆ'' ಎಂಬ ಕವನದಲ್ಲಿ ಅವರು

ಸ್ವಚ್ಛಂದ ಛಂದದಲ್ಲಿ
ಜಲಕ್ರೀಡಾ ವೃತ್ತದಲ್ಲಿ
ಅನುದಿನವು ತೆರೆಗಳು ಹಿಡಿವ ತಾಳ ವಲಯದಲ್ಲಿ

---

೩. 'ಸಮುದ್ರಗೀತಗಳು' 'ಆಫ್ರಿಕ ಕವನ'

೪. 'ಸಮುದ್ರಗೀತಗಳು' 'ನೌಕಾ-ರಾವಣ' ಕವನ

೫. 'ಸಮುದ್ರಗೀತಗಳು' 'ಕಮ್ಮರ್ ದಿನ್ನೆಯಿಂದ' ಕವನ

ಗೀತವನೊರೆದೆನೆಂದು ಗೀಳಂ ಮಾಡಬೇಡ।
ಸಮುದ್ರವ ಸೆರೆ ಹಿಡಿದವರುಂಟೆ?
ಕೊಡದಿರು ಶರಧಿಗೆ ಷಟ್ಪದಿಯ ರೂಪವ"[೬] ಎಂದಿದ್ದಾರೆ.

ಕಾವ್ಯ ಮುಕ್ತವಾಗಿರಬೇಕು ಎಂಬ ಆಶಯ ಬೆಳೆಯಲಿರುವ ಹೊಸಗನ್ನಡ ಕಾವ್ಯಕ್ಕೆ ಆಗ ಮಾರ್ಗದರ್ಶಿಯಾಯಿತು. ಕಾವ್ಯದಲ್ಲಿ ಸಮುದ್ರದ ಸ್ವಾತಂತ್ರ್ಯ ಉಕ್ಕಬೇಕು. ಚಿಮ್ಮಬೇಕು. ಹಳೆಯದೆಲ್ಲ ಜಲಸಮಾಧಿ ಹೊಂದಿ ಹೊಸದು ಹುಟ್ಟಬೇಕೆನ್ನುವ ಉತ್ಸಾಹ ಅವರಿಗೆ ಸಮುದ್ರವನ್ನು ಕಂಡಾಗ ಉಂಟಾಯ್ತು:

"ಬೇಡಯ್ಯ ಬಂಧುಗಳ ಬಂದಿವಾಸ
ಬರೆದದ್ದೇ ಬಂಧುರವಾಗಬಹುದು
ಸಾಕಯ್ಯ ವೃತ್ತಗಳಾವರ್ತ
ನಿನ್ನ ಮಣಿತವಿರಲಿ ಸಮುದ್ರದ ಕುಣಿತದಂತೆ"[೭]

ಸಮುದ್ರ ಲಯಕ್ಕೆ ಉಚಿತವಾದ ಲಯ ತನ್ನ ಕವಿತೆಯಲ್ಲಿರಲಿ ಎಂಬುದೇ ಕವಿಯ ಆಶಯವಾಗಿದೆ. ಆಂಗ್ಲಕವಿತೆ Free verse ಹಾಗೂ ವಚನಗಳ ಪ್ರಭಾವ ಅವರ ಕವಿತೆಗಳ ಮೇಲಾದುದನ್ನೂ ಗುರುತಿಸಬಹುದು. ಅವರೇ ಒಂದೆಡೆ ಹೇಳಿದಂತೆ "ಸಮುದ್ರಗೀತಗಳ ಸ್ವಚ್ಛಂದ ಛಂದವು ಮಾತ್ರಾಗಣಗಳ ಛಂದೋಪ್ರಕಾರಗಳ ಗರ್ಭವನ್ನು ಸೀಳಿ ಬಂತು. ನಿಸರ್ಗದ ದೃಷ್ಟಿಯಿಂದಾಗಲಿ, ಸಾಮಾಜಿಕ ದೃಷ್ಟಿಯಿಂದಾಗಲಿ ಅಲ್ಲಿಯ ಕಾವ್ಯವಸ್ತು ನವೋನವವಾಯಿತು. ಶೈಲಿಗೊಂದು ತೀವ್ರತೆ ಬಂತು".[೮] ಆಡುನುಡಿಯ ಸೊಗಸು. ಗದ್ಯಲಯದಿಂದ ಪದ್ಯಲಯವಾಗಿಸಿ ಭಾಷೆಯನ್ನು ಜೀವಂತವಾಗಿಡುವುದು. ಆಡುಮಾತಿನ ಲಯಗಳನ್ನು ಬಳಸಿ ಕಾವ್ಯಕ್ಕೆ ನಾವೀನ್ಯತೆಯನ್ನುಂಟು ಮಾಡುವುದು. ಇವನೆಲ್ಲ ವಿನಾಯಕರು ಅಂದು ತಮ್ಮ ಪ್ರಯೋಗಗಳಲ್ಲಿ ಮಾಡಿದ್ದು ಒಂದು ವೈಶಿಷ್ಟ್ಯವಾಗಿದೆ. ಆಡುಮಾತಿನ ಲಯಕ್ಕೆ ಉದಾಹರಣೆಯೊಂದನ್ನಿಲ್ಲಿ ನೋಡಬಹುದು.

"ಇಲ್ಲಿ ಸಾಮ್ರಾಜ್ಯವಿತ್ತು ಸಕಲ ಸಂಪತ್ತಿತ್ತು
ಕುಬೇರನ ಖಜಾನೆಯಿತ್ತು, ಇಂದು ಭಾರತೀಯರಿಗೆ ತಿನ್ನಲು ಕೂಳಿಲ್ಲ
ಕುಡಿಯಲು ನೀರಿಲ್ಲ, ಇದೊಂದು ಪರಮ ವಿಚಿತ್ರ"[೯]

ಕೋಲುಪದದ ಧಾಟಿಯನ್ನೂ ತಮ್ಮ ಒಂದು ಪದ್ಯಕ್ಕೆ ಬಳಸಿದುದನ್ನಿಲ್ಲಿ ಕಾಣಬಹುದು

"ಇಡಿಕೆಮ್ಮೆಂಬೂರಿಗೆ ಹೆಸರ್ಹ್ಯಾಂಗ ಬಂತು?
ಚಾಡಿಯ ಲಿಪಿಗಲ್ಲ ಕೇಳಣ್ಣ ಕೋಲ

---

೬. 'ಸಮುದ್ರಗೀತಗಳು' 'ಪ್ರತಿಜ್ಞೆ' ಕವನ

೭. 'ಸಮುದ್ರಗೀತಗಳು' 'ಪ್ರತಿಜ್ಞೆ' ಕವನ

೮. ಉಧೃತ-ಪನ್ನೆ 'ವಿನಾಯಕ ಮಹಾದರ್ಶನ'. ಪುಟ-೭೬

೯. 'ಸಮುದ್ರಗೀತಗಳು' 'ವಿಚಿತ್ರ' -ಕವನ

ಮಲ್ನಾಡದಡವಿಯ ಮಧ್ಯದಿ ನಿಂತು
ಘಟ್ಟದ ಕೆಳಗೂ ಮೆರೆದೂರ ಕೋಲ"[೧೦]

"ದ್ಯಾವಾ-ಪೃಥವೀ" ಒಂದು ಪುಟ್ಟ ಖಂಡಕಾವ್ಯ. ಇದರಲ್ಲಿ 'ನೀರದ', 'ಇಳಾಗೀತ' ಎಂಬೆರಡು ಭಾಗಗಳಿವೆ. ಭೂಮಿಯ ಮೇಲೆ ನಿಂತು ಆಕಾಶದತ್ತ ಹರಿಸಿದ ನೋಟದ ವರ್ಣನೆ 'ನೀರದ'ದಲ್ಲಿ ಬಂದರೆ. ಮುಗಿಲಿನಿಂದ ನೆಲದತ್ತ ಹರಿಸಿದ ನೋಟ 'ಇಳಾಗೀತ'ದಲ್ಲಿದೆ. ಆಕಾಶ-ಭೂಮಿ ಇವುಗಳ ಭೂಮದರ್ಶನ ಇಲ್ಲಿ ಮಹೋನ್ನತವಾದ ರೀತಿಯಲ್ಲಿ ಬಂದಿದೆ.

'ನೀರದ'ದಲ್ಲಿ ಹತ್ತು ಎಸಳುಗಳಿವೆ. ಇಲ್ಲಿ ಮೋಡಗಳ ನಾಡಿನ ದರ್ಶನ ವರ್ಣನೆ ಇದೆ. ಮೋಡ ಕವಿಗೆ ಕುರುಬನ ಬಳಿ ಉಣ್ಣೆಯ ಕುರಿ ಹಿಂಡಿನಂತೆ ವರಾಹ. ಏಡಿ, ಘಟಸರ್ಪ. ಶೃಗಾಲ. ತಿಮಿಂಗಲ. ಕೊಳ್ಳಿದೆವ್ವ ಹಾಗೂ ಮಲೆನಾಡಿನಲ್ಲಿ ಸಂಚರಿಸುವ ಮದದಾನೆಗಳಂತೆ ಕಂಡಿದೆ. ಬಾನಿನಲ್ಲಿ ಮಿಂಚು. ಸಿಡಿಲು ಗುಡುಗಿದಾಗ ಮೇಘದ ನಾಡು ಅಣುಸ್ಫೋಟದ ಪ್ರಯೋಗಶಾಲೆಯಾಗಿಯೂ ಕಂಡಿದೆ. ಇಲ್ಲಿ ಅದ್ಭುತವಾದ ಕಲ್ಪಕತೆ. ಚಿಂತನಶೀಲತೆ ಹೊರಹೊಮ್ಮಿದೆ. ಮೋಡಗಳಿಗೆ ವಿಧವಿಧವ ಪ್ರತಿಮೆಗಳನ್ನು ಕಲ್ಪಿಸಿದ್ದು ಇಲ್ಲಿನ ಹೊಸತನವಾಗಿದೆ.

ಮೋಡವೂ ಒಂದು ಜೀವಿ. ಚೈತ್ಯಶಕ್ತಿ ಎನ್ನುತ್ತ ಕವಿ ಅದು ನಾರದನಂತೆ ಸ್ವರ್ಗ ಸಂಚಾರಿ ಭೂವಿಹಾರಿಯಾಗಿ ದಿವ್ಯ ಸಂದೇಶ ಒಯ್ಯುತ್ತದೆ. ಎನ್ನುತ್ತಾರೆ ಕವಿ. ಮಾನವನಲ್ಲಿರುವ ದಿವ್ಯಶಕ್ತಿಯೇ ಇದು ಎನ್ನುವಲ್ಲಿ ಕವಿಯ ದಾರ್ಶನಿಕತೆ ವ್ಯಕ್ತವಾಗಿದೆ. ಕಡಲಿನ ನೀರು ಉಗಿಯಾಗಿ ಮೋಡವಾಗಿ ಮಳೆ ಸುರಿಸಿ ಮತ್ತೆ ಭೂಮಿಗೆ ಬರುವ ಹಾಗೆ ಮಾನವನಲ್ಲಿರುವ ಚಿತ್‌ಶಕ್ತಿಯೇ ವಿಕಾಸಗೊಂಡು ದೇವನಾಗುವ ಪರಿಯನ್ನು ಇಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾರೆ. ಮುಂದುವರಿದು

'ಇದೇ ನೀರದ ನಾರದ ಸೂತ್ರ
ಊರ್ಧ್ವತೆ. ಚಲನ. ಧಾರಣ ಅವತರಣ"॥ ಎನ್ನುವರು.

'ಇಳಾಗೀತ'ದಲ್ಲಿ ಹನ್ನೊಂದು ಎಸಳುಗಳಿವೆ. ವಿನಾಯಕರು ಬೆಳಗಾವಿಯಿಂದ ದಿಲ್ಲಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದಾಗ ಅವರು ಭೂಮಿಯತ್ತ ಹರಿಸಿದ ನೋಟ ಇಲ್ಲಿದೆ. ಪ್ರಕೃತಿ ವರ್ಣನೆ. ವಾಸ್ತವ ಸಂಗತಿಗಳ ವಿವರಣೆ ಇಲ್ಲಿ ಪ್ರಾಮಾಣಿಕವಾಗಿ ವ್ಯಕ್ತಗೊಂಡಿದೆ. ಭೂಮಿಯ ಹುಟ್ಟು. ವಿಕಾಸ. ರೂಪ ಬದಲಾವಣೆ ಅದರ ಇಂದಿನ ಸ್ಥಿತಿ-ಗತಿ ಮುಂದಿನ ಭವಿಷ್ಯ ಮಣ್ಣಿನ ಮಹತ್ತ ಮುಂತಾದ ವಿಷಯಗಳ ಸಮಗ್ರ ಚಿತ್ರಣ ಇಲ್ಲಿದೆ. ಮೊದಲ ಎಸಳಿನಲ್ಲಿ ಭೂದೇವಿಯ ಚೆಲುವಿನ ವರ್ಣನೆಯಿದೆ. ಆಕೆಗೆ ಕವಿ ಕೊಟ್ಟ 'ಮಂಜಿನ ಮುಸುಕಿನ ಪೃಥ್ವೀವಧು'ವಿನ ಪ್ರತಿಮೆ ಔಚಿತ್ಯಪೂರ್ಣವಾಗಿದೆ.

---

೧೦. 'ಸಮುದ್ರಗೀತಗಳು' –ಇಡಿಕಮ್‌ಜಾತ್ರೆ ಕವನ

"ಬಂದಳಿದೋಪೃಥ್ವಿ ಮಂಜಿನ ಮುಸುಕಿನಲ್ಲಿ
ಎತ್ತಿದಳು ಜವನಿಕೆಯ. ರವಿ ಬರಲು ಮಂಜುಗಳ ಮಂದಸ್ಮಿತೆ
ರವಿಯು ಬಿಜಯಂಗೈಯ್ಯಲೆಂದವಳು ನಸುಕಿನಲ್ಲಿ
ತವಕಿಸಿದವಳವನ ಬರವಿಂಗಾಗಿ ಚಿರವಿಸ್ಮಿತೆ"[೧೨]

ಈ ವಧುವಿನ ಉಡಿಗೆ ತೊಡಿಗೆಗಳ ಚಿತ್ರಣ ಹೀಗಿದೆ:

"ಇಳೆಯ ಇಳಕಲ್ಲು ಸೀರೆ
ಕಸೂತಿಯ ಬೆಡಗು ಬೇರೆ
ಹೊನ್ನುಡು ಪನ್ನುಟ್ಟು ನೀರೆ
ಏನವಳ ಬಿತ್ತರದ ಚೆಲುವು
ಮುಪ್ಪಿರದ ಒಲವು
ಇದು ಹವಳ
ಇದು ನಿವಳ."[೧೩]

ಭೂಮಿಯು ದಶಾವತಾರಗಳಲ್ಲಿ ತಾಳುತ್ತ ಬಂದ ವಿಧವನ್ನು ವರ್ಣಿಸುತ್ತ ಕವಿ ಇದರ ಮೇಲೆ ರಾಮ, ಕೃಷ್ಣ, ಬುದ್ಧ, ವಾಮನ, ನರಸಿಂಹ ಮುಂತಾದವರು ಅವತರಿಸಿ ಮನುಕುಲವನ್ನು ಉದ್ಧರಿಸಿದರೆನ್ನುವರು. ಆದರೆ ಈಗ ಅದು ಅಧಃಪತನ ಹೊಂದಿದೆಯೆನ್ನುವರು. ವೈಜ್ಞಾನಿಕ ಅಭಿವೃದ್ಧಿ ಯಂತ್ರಯುಗದ ಪರಿಣಾಮವಾಗಿ ಭೂಮಿಯ ಸ್ಥಿತಿ ವಿಷಮಿಸಿದೆ. ಇಂದು ನಾವು ಎಷ್ಟೇ ನಾಗರಿಕರಾಗಿದ್ದರೂ ನಮ್ಮದು ಅಬ್ಬರದ ಹೊಯ್ದಾಟ, ಕೇವಲ ರಬ್ಬರಿನ ಆಟ ಎನ್ನುವರು.

ರಬ್ಬರು ಗಾಲಿಯ ಮೇಲೆ ನಿತ್ಯ ಭ್ರಮಣ
ರಬ್ಬರು ಸಂಸಾರದ ಸ್ಫೋಟ
. . . .
ಇಂದಿನ ನಾಗರಿಕತೆಯಬ್ಬರ. ಹೊಯ್ದಾಟ
ಬರಿ ರಬ್ಬರಿನಾಟ"[೧೪]

ನಾವಿಂದು ಎಲ್ಲದಕ್ಕೂ ಬಳಸುವ ರಬ್ಬರಿನ ಸಾಂಕೇತಿಕತೆಯನ್ನು ಕವಿ ಇಲ್ಲಿ ಅರ್ಥಪೂರ್ಣವಾಗಿ ತಂದಿದ್ದಾನೆ. ವಸ್ತುವಿನ ದೃಷ್ಟಿಯಿಂದ ಇದು ವಿನೂತನವಾಗಿದ್ದು, ಹೊಸ ಹೊಸ ಸಂವೇದನೆಗಳು ಕನ್ನಡ ಕಾವ್ಯಕ್ಕೆ ಕಾಲಿರಿಸಿದುದಕ್ಕೆ ಉಜ್ವಲ ಉದಾಹರಣೆಯಾಗಿದೆ. ಕಲಿಯುಗದ ಇಂದಿನ ಪೂಜಾವಿಧಾನವನ್ನು ಕವಿ ಹೀಗೆ ವರ್ಣಿಸಿದ್ದಾನೆ:

---

೧೧. "ದ್ಯಾವಾ-ಪೃಥವೀ"– "ನೀರದ" – ೪

೧೨. "ದ್ಯಾವಾ-ಪೃಥವೀ"– "ಇಳಾಗೀತ" – ೩

೧೩. "ದ್ಯಾವಾ-ಪೃಥವೀ"– "ಇಳಾಗೀತ" – ೩

೧೪. "ದ್ಯಾವಾ-ಪೃಥವೀ"– "ಇಳಾಗೀತ" – ೮

"ಪೆಟ್ರೋಲಿನದೇ ಪ್ರಸಾದ ತೀರ್ಥ
ಕಲ್ಲಿದ್ದಲಿ ಲೋಬಾನ
ಮಿಂಚಿನ ಪಂಚಾರತಿ, ಅಣುವಾಯುದ್ಧ
ಗ್ರಾಮೋಫೋನಿನ ಗಾನ
ವೈಜ್ಞಾನಿಕ ಸೂತ್ರಗಳೇ ಮಂತ್ರ
ವ್ಯಾಪಕವಿದು ತಂತ್ರ
ಇಂದಿನ ಕಲಿಯುಗಕೀ ಗುರುವು
ಶುದ್ಧ ತಿರುವು-ಮುರುವು"[೧೫]

ವಿಜ್ಞಾನದ ಪ್ರಭಾವ ಇಂದಿನ ಸಮಾಜದ ಮೇಲೆ ಎಷ್ಟಾಗಿದೆಯೆಂಬುದನ್ನು ಕವಿ ಇಲ್ಲಿ ವಿಡಂಬಿಸಿದ ರೀತಿ ಸ್ವಾರಸ್ಯಯುತವೂ.ನವೀನವೂ ಆಗಿದೆ. ಕವಿ ಅಂತಿಮವಾಗಿ ಎಲ್ಲದಕ್ಕೂ ಈ ಮಣ್ಣೇ ಆಧಾರ. ಎಲ್ಲವೂ ಅದರಲ್ಲೇ ಅಡಗಿದೆ. ಅದೇ ಎಲ್ಲರಿಗೂ ನೆಲೆ, ಆಶ್ರಯವೆನ್ನುತ್ತ 'ಮರ್ತ್ಯದಲ್ಲಿ ನಿಂತು ಗೆಲ್ಲು, ಮರ್ತ್ಯವೇ ಒರೆಗಲ್ಲು, ನೆಲವೇ ಆಧಾರಾ ನೆಲವೇ ಆ-ಧಾರಾ"[೧೬] ಎಂದು ತಾವು ಕಂಡುಕೊಂಡ ದರ್ಶನವನ್ನು ಉಸುರಿದ್ದಾರೆ. ಇಲ್ಲಿ ಇವರ ಮೇಲೆ ಬಸವಣ್ಣನವರ ಪ್ರಭಾವವಾದುದನ್ನು ಗುರುತಿಸಬಹುದು.

ಅರವಿಂದರ ಪೂರ್ಣಯೋಗ, ಅಧ್ಯಾತ್ಮ, ದೈವೀಶಕ್ತಿಯ ಪ್ರಭಾವ, ಪ್ರೇರಣೆಗಳ ಕಾರಣವಾಗಿ ವಿನಾಯಕರ ದೃಷ್ಟಿ ಅಂತರ್ಮುಖವಾದುದನ್ನಿಲ್ಲಿ ಗುರುತಿಸಬಹುದು. ಡಿ. ಆರ್. ನಾಗರಾಜ ಅವರು "ವಿನಾಯಕರ ದ್ಯಾವಾ-ಪೃಥವೀ ದರ್ಶನದಲ್ಲಿ ಇಳಿಯು ದೈವಿಕತೆಯೆ ಮುಖ್ಯವಾದದ್ದು. ಹೀಗಾಗಿ ಭೌತವಾದೀ ಚಿಂತನೆ ಮತ್ತು ಧಾರ್ಮಿಕ ಮಾನವತಾವಾದಿ ಚಿಂತನೆಗಳು ಒತ್ತು ಹಾಕುವ ಭೂಮಿಯ ಬದುಕಿನಲ್ಲಿಯ ಹಿಂಸೆ ವಿನಾಯಕರಿಗೆ ಗೌಣವಾಗಿ ಕಾಣುತ್ತದೆ. ದಿವ್ಯ ವಿಕಾಸವೇ ಭೂಮಿಯ ಬದುಕಿನ ಮುಖ್ಯ ಆಶಯ".[೧೭] ಈ ಅಭಿಪ್ರಾಯ ಇಲ್ಲಿ ಸರಿ ಎನಿಸಿದೆ. ಆದರೆ ಅವರ ಉಳಿದ ಕವಿತೆಗಳಿಗೆ ಇದು ಅನ್ವಯಿಸದು. "ಭೋಂಕಾರ" "ಉಗಮ" ಸಂಕಲನಗಳಲ್ಲಿ ಇಳೆಯ ಬದುಕಿನ ದಾರುಣಚಿತ್ರ, ಶೋಷಣೆಯ ವಿರುದ್ಧ ಎತ್ತಿದ ಅವರ ಧ್ವನಿ ಮಾರ್ಮಿಕವಾಗಿ ವ್ಯಕ್ತಗೊಂಡಿದೆ.

೧೯೫೦ರಿಂದ ೬೫ರ ಕಾಲಾವಧಿಯನ್ನು ವಿನಾಯಕರ ನವ್ಯಕಾವ್ಯಪ್ರಯೋಗಗಳ ಪರಿಣತಿಯ ಕಾಲವೆನ್ನಬಹುದು. ಅವರು ಮುಂಬೈನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡಕಾವ್ಯ ಇನ್ನು ಮುಂದೆ ಹಿಡಿಯಬೇಕಾದ ಮಾರ್ಗ ಹೇಗಿರಬೇಕೆಂಬುದನ್ನು ಸೂಚಿಸುತ್ತ, ನವ್ಯಕಾವ್ಯದ ಬಗ್ಗೆ ಮೌಲಿಕವಾದ ಮಾತುಗಳನ್ನು ಹೇಳಿದರು. ಅನಂತರ ಅವರು "ನವ್ಯಕವನಗಳು" ಎಂಬ ಕವನ ಸಂಕಲನವನ್ನು

---

೧೫. "ದ್ಯಾವಾ-ಪೃಥವೀ"– "ಇಳಾಗೀತ" – ೮

೧೬. "ದ್ಯಾವಾ-ಪೃಥವೀ"– "ಇಳಾಗೀತ" – ೧೧

೧೭. ನಾಗರಾಜ ಡಿ.ಆರ್.: "ಶಕ್ತಿ ಶಾರದೆಯ ಮೇಳ", ಪುಟ: ೧೫೯

ಪ್ರಕಟಿಸಿದರು. ಇದರಲ್ಲಿ ಹದಿನೇಳು ಕವನಗಳಿವೆ. "ಹೆಮ್ಮೂಗು" ಎಂಬ ಪುಟ್ಟ ಕವನದಲ್ಲಿ ಮೂಗು ಅನುಭವಿಸಿದ ಅನುಭವವನ್ನು ಕವಿ ಇಲ್ಲಿ ವಿನೋದಪೂರ್ಣವಾಗಿ ಹಿಡಿದಿಟ್ಟಿದ್ದಾರೆ.

ಗಮಗಮಿಸುವ ಎಲ್ಲ ವಾಸನೆಗಳನನುಭವಿಸಿ
ನಾನು ಜೀವನ್ಮೃತನಾಗಿದ್ದೆ.
ನೀನು ತುಂಬಿದ ತಂಬಾಕು ಪುಡಿಯಿಂದ
ಚೇತರಿಸಿಕೊಂಡೆ"[೧೮]

ರೇಡಿಯೋಗೆ ಸೊಸೆ ಎಂದು ಸಂಬೋಧಿಸಿ, ನೀನು ವಿಶ್ವಸ್ನೇಹ ಬಂಧನವನ್ನು ಬೆಸೆಯಬೇಕಲ್ಲದೆ ಅಪಪ್ರಚಾರ, ಅಪಸ್ವರ ಎತ್ತಬೇಡವೆಂದು "ರೇಡಿಯೋ" ಕವನದಲ್ಲಿ ಹೇಳಿದ್ದಾರೆ. ಇಲ್ಲಿನ ರಚನಾ ತಂತ್ರ, ಬಳಕೆಯ ಮಾತುಗಳು ಜಂಗು ಹತ್ತಿದ ಬುದ್ಧಿಗೆ ಸಾಣೆ ಹಿಡಿಯುವಂಥವಾಗಿವೆ. ಹೊಸಯುಗದ ಸಂವೇದನೆಗಳಿಗೆ ಕವಿಯು ಸ್ಪಂದಿಸಿದುದರ ಪರಿಣಾಮವಾಗಿ ಇಂಥವು ರೂಪುಗೊಂಡಿವೆ. ಇಂಥಲ್ಲಿ ಅವರ ಪ್ರಯೋಗಗಳು ಸಾರ್ಥಕವಾಗಿವೆ. ಗುರುವಾರ ಮಾಡುವ ಗುರುಭಜನೆ, ಶುಕ್ರವಾರಕೆ ಪೂಜೆ, ಶನಿವಾರ ಉಪವಾಸವೆಂದು ಸೋಗು ಹಾಕಿ ಅನ್ಯರನ್ನು ಶೋಷಿಸಿ, ಹಿಂಸಿಸಿ ಅಜ್ಞಾನದಲ್ಲಿ ಇರಿಸಿ ತಾವು ಹೊಟ್ಟೆ ಹೊರೆದುಕೊಳ್ಳುವ ಡಾಂಭಿಕರನ್ನು "ತೋಳಪ್ಪ" ಎಂಬ ಕವನದಲ್ಲಿ ನಿರ್ದಾಕ್ಷಿಣ್ಯವಾಗಿ ವಿಡಂಬಿಸಿದ್ದಾರೆ. ಮೂಢನಂಬಿಕೆ, ಅಂಧಸಂಪ್ರದಾಯಗಳನ್ನು ಜನ ಬಿಡಬೇಕೆಂದು ಕವಿ ಇಲ್ಲಿ ಸೂಚ್ಯವಾಗಿ ಹೇಳಿದ್ದಾರೆ.

ಇದೇ ಆಶಯ ಅವರ 'ಉಗಮ' ಸಂಕಲನದ ಕವಿತೆಗಳಲ್ಲೂ ವ್ಯಕ್ತಗೊಂಡಿದೆ. ಇಲ್ಲಿ ದೀನದಲಿತ ಕಾರ್ಮಿಕರ ದಾರುಣವಾದ ಬದುಕಿಗೆ ಸ್ಪಂದಿಸಿದ್ದಾರೆ. ಅವರ ವಿಧವಿಧದ ವೇದನೆಗಳಿಗೆ ನಾಲಿಗೆಯಾಗಿ ಧ್ವನಿಯೊದಗಿಸಿದ್ದಾರೆ. 'ಮೊಲೆಗೂಸಿನ ತಾಯಿ' ಎಂಬ ಕವನದಲ್ಲಿ ಹಾಲಿಲ್ಲದ ಮೊಲೆಯನ್ನು ಚೀಪುವ ಮಗುವಿನ ಚಿತ್ರಣ ಕರುಳಿರಿಯುವಂಥದು. ಆ ಭಿಕ್ಷುಕಿಯ ಬಗ್ಗೆ ಮರುಕಪಟ್ಟು ಆಕೆಯೇ ದೇವರೆನ್ನುವರು. ಇಲ್ಲಿ ಮಾರ್ಕ್ಸನ ಸಮತಾವಾದದ ಪ್ರಭಾವ ಅವರ ಮೇಲಾದುದು ಸ್ಪಷ್ಟ. ಇಲ್ಲದ ದೇವರಿಗಾಗಿ ಬಡವರು ಭಕ್ತಿ ಸಲ್ಲಿಸಿದರೆ ಅವರಿಗೆ ಮೋಕ್ಷವಿಲ್ಲ, ಹಿಡಿ ಅನ್ನವೂ ದೊರಕದು ಎನ್ನುವ ಕವಿವಾಣಿ ಅತ್ಯಂತ ವಿಚಾರಪರಿಪ್ಲುತವಾಗಿದೆ. ಕವಿ ಬಡವರಿಗೆ ಎದ್ದೇಳಿ ಕ್ರಾಂತಿ ಮಾಡಿ, ನಿಮಗೆ ಉಳಿದಿರುವ ದಾರಿ ಇದೊಂದೇ ಎನ್ನುವರು:

"ಉಧೋ ಉಧೋ ಏಳಿರಿನ್ನು
ಇಗೋ ಇಗೋ ಎದ್ದೆವೆನ್ನು
ಎಲ್ಲೂ ಇಲ್ಲ ದೇವರು
ನಾವೆ ನಮ್ಮ ದೇವರು
ಬಿನ್ನವಿಸಲು ಕೊಡುವದಿಲ್ಲ

---

೧೮. "ನವ್ಯಕವನಗಳು"– "ಹೆಮ್ಮೂಗು" – ಕವನ

ಗರ್ಜಿಸ್ತೆ ಕೊಡದಿರುವುದಿಲ್ಲ
ಹಣ ಕಾಸೆಳೆ ಬೈಲಿಗೆ
ಕೈಯ ಹಚ್ಚು ಥೈಲಿಗೆ
ಹಣದ ಮೇಲೆ ನಿಂತ ಕಲೆ
ಮರೆ ಮೋಸದಿ ಒಗೆದ ಬಲೆ
ಊದು ಕಹಳೆ, ಹೊಡೆ ನಗಾರಿ
ನಾಳೆ ಬಾಳ್ವೆಯೆಂದು ಸಾರಿ"[೧೯]

ಕವಿ ಇಲ್ಲಿ ಆವೇಶಭರಿತರಾಗಿ ಕ್ರಾಂತಿಗೀತೆ ಹಾಡಿದ್ದಾರೆ. ದೀನದಲಿತರ ಪರವಾಗಿ ಧ್ವನಿ ಎತ್ತಿದ್ದಾರೆ. ಇಲ್ಲಿನ ಭಾಷಾ ಪ್ರಯೋಗ ವಿನೂತನವಾಗಿದೆ.

ವಿನಾಯಕರು ಅಮೇರಿಕೆಯಲ್ಲಿ ನಾಲ್ಕು ತಿಂಗಳು ವಾಸಮಾಡಿದಾಗ ಆವರಿಗಾದ ಅನುಭವಗಳನ್ನು 'ಇಂದಿಲ್ಲ ನಾಳೆ' ಕವನ ಸಂಕಲನದಲ್ಲಿ ಓಡಿದಿಟ್ಟದ್ದಾರೆ. ಅಲ್ಲಿನ ಜನರ ಜೀವನ ವಿಧಾನ, ರೀತಿ-ನೀತಿ, ನಾಗರಿಕತೆ, ವೈಜ್ಞಾನಿಕತೆ, ಅಲ್ಲಿನ ನಾನಾ ದೃಶ್ಯಗಳು- ಈ ಕಾವ್ಯಕ್ಕೆ ವಸ್ತುವಾಗಿವೆ. ವೈಜ್ಞಾನಿಕ ಪ್ರಗತಿ ಅಲ್ಲಿ ಸಾಕಷ್ಟಾಗಿದ್ದರೂ ಅಲ್ಲಿನ ಜನರಿಗೆ ತೃಪ್ತಿಯಿಲ್ಲ. ಅವರಲ್ಲಿ ಏನೋ ಕೊರಗು ಇದೆ ಎಂಬುದನ್ನು ಗುರುತಿಸಿದ್ದಾರೆ. ಪಡುವಣ ಮೂಡಣಗಳ ಮನೋವೃತ್ತಿಯನ್ನು ಈ ರೀತಿ ಎತ್ತಿಹೇಳಿದ್ದಾರೆ. "ಪೌರುಷವೇ ಆನಂದವೆಂದು ಪಡುವಣ ಸಾಧಿಸುತ್ತಿದೆ. ಆ ಪೌರುಷೇಯತ್ವಕ್ಕೆ ಶರಣಾಗುವುದೇ ಬಾಳಿನ ಸಾರ್ಥಕತೆಯೆಂದು ಮೂಡಣವು ನಂಬುತ್ತದೆ ".[೨೦] ಹೀಗೆ ಇವೆರಡೂ ಸಂಸ್ಕೃತಿಗಳನ್ನು ತೌಲನಿಕವಾಗಿ ಹೇಳಿದ್ದು ಈ ಕಾವ್ಯದ ವೈಶಿಷ್ಟ್ಯವಾಗಿದೆ.

ವಿನಾಯಕರು ನವ್ಯಕಾವ್ಯದಲ್ಲಿ ಪ್ರಯೋಗಿಸಿದ ಸ್ವಚ್ಛಂದ ಛಂದವನ್ನು, ಗದ್ಯ-ಪದ್ಯ ಮಿಶ್ರಿತ ಕಾವ್ಯಗಳನ್ನು, ಕಾವ್ಯ ಪ್ರಬಂಧಗಳನ್ನು ಕಂಡು ಕೆಲವು ವಿಮರ್ಶಕರು 'ಈಗ ಗೋಕಾಕರ ಕಾವ್ಯದ ಪಾಕವೇ ಕೆಟ್ಟಿದೆ. ಶೈಲಿ ಸಡಿಲಾಗಿದೆ. ರೆಟರಿಕ್ ತುಂಬಿಕೊಂಡಿದೆ' ಎಂದು ಟೀಕಿಸಿದ್ದುಂಟು. ಇದಕ್ಕೆ ಅವರು 'ಕಾವ್ಯಕ್ಕೆ ಶಾಸ್ತ್ರದ ಜೋಡಣೆ ಇರುವುದರಿಂದ ಇವು ಒಂದು ಬಗೆಯ ನವೀನ ಪ್ರಯೋಗಗಳಾಗಿವೆ'ಯೆಂದು ತಮ್ಮ 'ನವ್ಯಕಾವ್ಯ' ಬಾಗ-೧ರ ಮುನ್ನುಡಿಯಲ್ಲಿ ಸಮರ್ಥಿಸಿಕೊಂಡಿದ್ದಾರೆ. ಹೊಸ ಹೊಸ ವಿಷಯಗಳನ್ನು ಕನ್ನಡಕ್ಕೆ ಪರಿಚಯಿಸುವಾಗ ಇಂಥ ಕ್ರಮ ಅನಿವಾರ್ಯವೇನೋ ಮತ್ತು ಕಾವ್ಯವನ್ನು ಒಂದು ಸಿದ್ಧವಾದ ಚೌಕಟ್ಟಿನಲ್ಲಿ ಕೂಡ್ರಿಸುವುದು ಅವರ ಜಾಯಮಾನಕ್ಕೆ ಒಗ್ಗುವಂಥದಲ್ಲ. ಕೆ.ಡಿ. ಕುರ್ತಕೋಟಿಯವರು ಇವರ ಪ್ರಯೋಗಗಳನ್ನು ಕಂಡು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ: "ವಿನಾಯಕರ ಕಾವ್ಯಪ್ರಯೋಗಗಳು ಮುಂದಿನ ತಲೆಮಾರಿನವರಿಗೆ ಮಹತ್ವದ್ದೆನ್ನಿಸಲಿಕ್ಕಿಲ್ಲ. ಇದಕ್ಕೆ ಕಾರಣವೆಂದರೆ ವಿನಾಯಕರು ಸಂಪ್ರದಾಯ ನಿರ್ಮಾಣದಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳಲಿಲ್ಲ. ಅವರ ಪ್ರಯೋಗಗಳು

---

೧೯. "ಭೋಂಕಾರ"- ಕ್ರಾಂತಿದರ್ಶಿ ಕವನ
೨೦. "ಇಂದಿಲ್ಲ ನಾಳೆ" - 'ಮೂಡಣ-ಪಡುವಣ' ಕವನ

ಸಂಪ್ರದಾಯದ ವಿರುದ್ಧವಾಗಿ ನಡೆದ ಪ್ರತಿಕ್ರಿಯೆಗಳಲ್ಲ".[೨೧] ಯಾವುದೇ ಪ್ರಯೋಗ ಮಹತ್ವದ್ದೆನ್ನಿಸಬೇಕಾದರೆ ಅದು ಸಂಪ್ರದಾಯವನ್ನು ಪ್ರತಿಭಟಿಸಿ ಬೆಳೆಯಬೇಕೆಂದೇನೂ ಇಲ್ಲ. ಮತ್ತು ಸಂಪ್ರದಾಯಗಳೆಲ್ಲ ಸತ್ವವಿಲ್ಲದಂಥವು ಎಂದು ತಿಳಿಯುವುದೂ ಸರಿಯಲ್ಲ. ಪ್ರತಿಭಟನೆಯಿಂದ ಹಾಗೂ ಸಂಪ್ರದಾಯಗಳಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುವುದರಿಂದ ಎಲ್ಲಾ ಒಳ್ಳೆಯದೇ ಹುಟ್ಟಿ ಬರುತ್ತದೆನ್ನುವುದೂ ಒಪ್ಪುವಂಥದಲ್ಲ. ಇಂದಿನ ಪೀಳಿಗೆಗೆ ಅವರ ಪ್ರಯೋಗಗಳು ಮಹತ್ವದ್ದೆನ್ನಿಸುತ್ತವೆ ಎನ್ನಿಸುವುದಿಲ್ಲ ಎಂಬುದನ್ನೆಲ್ಲ ಮೊದಲೇ ಹೇಳುವುದು ಇಲ್ಲಿ ಪ್ರಸ್ತುತವಲ್ಲ. ಈಗಲೂ ಸಹ ವಿನಾಯಕರ ಅನೇಕ ನವ್ಯಕಾವ್ಯ ಪ್ರಯೋಗಗಳು ನವೀನವಾದುವು ಎನ್ನಿಸುತ್ತಿವೆ. ವಿನಾಯಕರು ತಮ್ಮ "ಇಂದಿಲ್ಲ ನಾಳೆ" ಕಾವ್ಯ ಹೊಸಬಗೆಯ ಚಂಪೂ ಎಂದು ಕರೆದುಕೊಂಡಿದ್ದಾರೆ. ಗದ್ಯ-ಪದ್ಯ ಬಂದ ಮಾತ್ರಕ್ಕೆ ಇದನ್ನೂ ಚಂಪೂಕೃತಿ ಎನ್ನುವುದು ಸಮಂಜಸವೆನ್ನಿಸದು. ಇಲ್ಲಿ ಬಂದ ಗದ್ಯ-ಪದ್ಯ ಸ್ವತಂತ್ರವಾದಂಥವು. ಇವನ್ನು ಪ್ರತ್ಯೇಕಿಸಿ ಪ್ರಕಟಿಸಿದರೂ ಅರ್ಥಸ್ಫೂರ್ತಿಗೇನೂ ಬಾಧೆ ಬರದು. ಆದರೆ ನಮ್ಮ ಹಿಂದಿನ ಚಂಪೂ ಕೃತಿಗಳು ಹೀಗಲ್ಲ. ಅವುಗಳಲ್ಲಿನ ಕಥೆ ಪರಸ್ಪರ ಸಂಬಂಧಿಯೂ ಅವಲಂಬಿಯೂ ಆಗಿದೆ. ಅವುಗಳಲ್ಲಿನ ಗದ್ಯ-ಪದ್ಯವನ್ನು ಬೇರ್ಪಡಿಸಲು ಬಾರದು. ಆದ್ದರಿಂದ ಇವು ಹೊಸ ಬಗೆಯ ಗದ್ಯ-ಪದ್ಯಗಳ ಪ್ರಯೋಗಗಳಾಗಿವೆಯೆನ್ನಬಹುದು.

ಚಿಂತನ ಪರತೆ, ಅಧ್ಯಾತ್ಮ, ಬೌದ್ಧಿಕತೆ ಹಾಗೂ ದಾರ್ಶನಿಕತೆ ವಿನಾಯಕರ ಕಾವ್ಯದ ಜೀವಾಳವಾದರೂ ಅವರ ಕಾವ್ಯ ಜಟಿಲವವಾಗಿಲ್ಲ. ಹೊಸ ಹೊಸ ವಿಷಯಗಳನ್ನು ಆಕರ್ಷಕವಾಗಿ ಪರಿಚಯಿಸುವಲ್ಲಿ ಇವು ಯಶಸ್ವಿಯಾಗಿವೆಯೆಂದೇ ಹೇಳಬೇಕು. ಪುರಾಣ, ಇತಿಹಾಸ, ಪ್ರವಾಸಾನುಭವ, ಸೌಂದರ್ಯೋಪಾಸನೆ, ಆತ್ಮ ನಿರೀಕ್ಷಣೆ ಇತ್ಯಾದಿಗಳಲ್ಲದೆ ವೈಜ್ಞಾನಿಕ ಪ್ರಜ್ಞೆ ಅಂತಾರಾಷ್ಟ್ರೀಯ ನೋಟಗಳು ಇಲ್ಲಿ ಸಶಕ್ತವಾಗಿ ಅಭಿವ್ಯಕ್ತಿ ಪಡೆದಿವೆ. ಯಂತ್ರಯುಗದ ಅನೇಕ ವಿಸ್ಮಯಗಳೂ ಕಾವ್ಯರೂಪ ಪಡೆದಿವೆ. ನಿಜಕ್ಕೂ ಅವರ ನವ್ಯಕಾವ್ಯ ಪ್ರಯೋಗಗಳು ವಸ್ತು ವೈವಿಧ್ಯತೆಯನ್ನು ಹೊಂದಿ ಕನ್ನಡ ಕಾವ್ಯಕ್ಕೆ ಹೊಸದಿಕ್ಕನ್ನು ತೋರಿಸಿದುವು. ಇವುಗಳಲ್ಲಿ ಸಂಪ್ರದಾಯದ ವಿರುದ್ಧ ಬಂಡೆದ್ದು ಕ್ರಾಂತಿ ಮಾಡುವ ಹುಮ್ಮಸ್ಸಾಗಲೀ ಪ್ರಚಾರವಾಗಲೀ ಇಲ್ಲ. ಇದು ಅವರ ಪ್ರಯೋಗಗಳ ಶ್ರೇಷ್ಠತೆಯನ್ನು, ಪರಿಣತಿಯನ್ನು ಎತ್ತಿ ತೋರಿಸುತ್ತದೆ. ಜೊತೆಗೆ ಅವರ ಕಾವ್ಯಜೀವನದ ಆರೋಗ್ಯಕರ ಬೆಳವಣಿಗೆಯನ್ನೂ ಇದು ಸೂಚಿಸುತ್ತದೆ.

ಈ ಮೇಲ್ಕೆ ವಿವೇಚಿಸಲಾದ ವಿನಾಯಕರ ನವ್ಯಕಾವ್ಯ ಪ್ರಯೋಗಗಳ ವೈಶಿಷ್ಟ್ಯಗಳನ್ನು ಈ ರೀತಿ ಸಂಗ್ರಹಿಸಬಹುದು:

೧. ಸಂಪ್ರದಾಯವನ್ನು ಪ್ರತಿಭಟಿಸುವ ಪ್ರತಿಕ್ರಿಯೆಗಳಾಗದೆ, ಸಂಪ್ರದಾಯ ನಿರ್ಮಾಣದಲ್ಲಿ ಶ್ರದ್ಧೆಯನ್ನು ಉಳಿಸಿಕೊಂಡು ಬೆಳೆದು ಬಂದಂಥವು.

೨. ರಮ್ಯ-ನವ್ಯ, ನವ್ಯ-ರಮ್ಯ ಪಂಥಗಳ ಗುಣಗಳನ್ನು ಸಮ್ಮಿಶ್ರವಾಗಿ ಉಳ್ಳಂಥವು.

೨೧. ಕುರ್ತಕೋಟಿ ಕೆ.ಡಿ. "ಯುಗಧರ್ಮ ಹಾಗೂ ಸಾಹಿತ್ಯದರ್ಶನ" ಪುಟ. ೬೦

೩. ಸ್ವಚ್ಛಂದ ಛಂದ ಇವುಗಳಿಗೆ ವಾಹಕವಾದರೂ, ಹನ್ನೆರಡನೇ ಶತಮಾನದ ಶರಣರ ವಚನಗಳ ಪ್ರಭಾವವೂ ಇವುಗಳ ಮೇಲಾದುದನ್ನು ಕಾಣಬಹುದು.

೪. ಸ್ವಚ್ಛಂದ ಲಯ, ಗದ್ಯ-ಪದ್ಯಗಳ ಸಮ್ಮಿಶ್ರರೂಪ, ಆಡುನುಡಿ, ನಾಟಕೀಯ ರೂಪದ ಸಂಭಾಷಣಾಶೈಲಿ, ಜಾನಪದ ಲಯ, ಲಾವಣಿ ಬಂಧಗಳ ಬಳಕೆ ಸರಳ ರಗಳೆ ಮಾದರಿ ಈ ಮುಂತಾದ ರೂಪ, ತಂತ್ರಗಳನೊಳಗೊಂಡಿವೆ.

೫. ವಿನಾಯಕರು ಈ ಪ್ರಯೋಗಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಹಿಡಿದಿಟ್ಟರೂ ವಿಶ್ವದ ನಾನಾ ವಿಷಯಗಳಿಗಾಗಿ ಭಾರತದಾಚೆ ಕೈ ಚಾಚಿರುವುದನ್ನೂ ಕಾಣುವೆವು.

೬. ನೆಲ-ಜಲ-ಆಕಾಶ ಮಾರ್ಗವಾಗಿ ಅವರು ಪ್ರಯಾಣ ಬೆಳೆಸಿದಾಗ ಉಂಟಾದ ಅನುಭವಗಳ ಕಥನಗಳೇ ಈ ಪ್ರಯೋಗಗಳು.

ಸಹಾಯಕ ಗ್ರಂಥಗಳು

೧. "ನವ್ಯತೆ": ಡಾ. ವಿ.ಕೃ. ಗೋಕಾಕ

೨. "ನವ್ಯಕಾವ್ಯ" ಭಾಗ-೧.೨ : ಡಾ. ವಿ.ಕೃ. ಗೋಕಾಕ

೩. "ಹೊಸಕಾವ್ಯ ಹೊಸ ದಿಕ್ಕು": ಡಾ. ಬುದ್ದಣ್ಣ ಹಿಂಗಮಿರೆ

೪. "ಯುಗಧರ್ಮ ಹಾಗೂ ಸಾಹಿತ್ಯದರ್ಶನ":ಕೆ.ಡಿ. ಕುರ್ತಕೋಟಿ

೫. "ಶಕ್ತಿ ಶಾರದೆಯ ಮೇಳ":ಡಿ.ಆರ್. ನಾಗರಾಜ

೬. "ವಿನಾಯಕ ಮಹಾದರ್ಶನ": ಎನ್ಕೆ

೭. "ನವೋದಯ":ಜಿ.ಎಸ್. ಶಿವರುದ್ರಪ್ಪ

೮. "ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು" (ಸಂ): ಜಿ.ಎಸ್. ಶಿವರುದ್ರಪ್ಪ

೯. "ಆವಿಷ್ಕರಣ' (ಸಂ): ಚಿ.ನ. ಮಂಗಳಾ

೧೦. "ಹೊಸಗನ್ನಡ ಸಾಹಿತ್ಯ": ಎಲ್.ಎಸ್. ಶೇಷಗಿರಿರಾವ್.

ಒರೆಗಲ್ಲು

ಅಟ್ಟಕ್ಕೆ ಹಾರದ ಬಡ್ಡಿ ಬೆಟ್ಟಕ್ಕೆ ಹಾರ್‍ಯಾಳೆ: ಒಂದು ಟಿಪ್ಪಣಿ

ವಿಮರ್ಶೆ : ಈ ಗಾದೆಯಲ್ಲಿ 'ಅಸಂಭಾವ್ಯ' ದೋಷವಿದೆ. ಬಡ್ಡಿಯೆಂದರೆ ದೂಷಿತಸ್ತ್ರೀ! ಈ ಶಬ್ದದ ಮೂಲ – ಬೊಡ್ಡಿ! ಕಾಲ ಕಲುಷಿತವಾಗಿಲ್ಲದ ಕೆಲವೊಂದು ಗ್ರಾಮಗಳಲ್ಲಿನ ಗ್ರಾಮ್ಯ. ಗಾವಿಲ. ಹಳ್ಳಿಗರು ಉದಾಹಣೆಗೆ ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ಒಳನಾಡಿನ 'ಆದಿ ಕರ್ನಾಟಕ' ಹಳೆಯ ತಲೆಮಾರಿನ ಜನ! ಇಂದಿಗೂ ಬೈಗುಳ ಪ್ರಯೋಗದಲ್ಲಿ ಬೊಡ್ಡಿ. ಬೊಡ್ಡಿಮಗ ಇತ್ಯಾದಿಯಾಗಿ ಬಳಸುತ್ತಿದ್ದಾರೆ. ಬೊಡ್ಡಿಪದವು ಪೊಡ್ಡಿಯಿಂದ ವಿಕೃತವಾಗಿದೆ. ಪಕಾರಕ್ಕೆ ಬಕಾರಾದೇಶವಾಗಿದೆ! ಪೊಡ್ಡಿ ಪಾತ್ರಿಗಳು ಪ್ರಾಚೀನ ದೇವಾಲಯ ಶಾಸನಗಳಲ್ಲಿ ಕನ್ನಡ ಭಾಷೆಯಲ್ಲಿ ವಿಶೇಷವಾಗಿ ರಂಗಭೋಗ ಸಂಬಂಧದಲ್ಲಿ ಪ್ರಸ್ತಾಪಿತರಾಗಿದ್ದಾರೆ. ದೇವಾದಾಯದಲ್ಲಿ ಪೊಡ್ಡಿ-ದೇಗುಲದ 'ಸೂಳೆ'ಯರಿಗೂ. ಪಾತ್ರಿ-ನಟಿಯರಿಗೂ ಪಾಲು ಇರುತ್ತಿತ್ತು!

'ಅಟ್ಟ' ಶಬ್ದದ ಮೂಲ ವಿಚಾರಣೀಯ. "ಆಕಾಶವನಡರುವಂಗೆ ಅಟ್ಟಗೋಲ ಹಂಗೇಕೆ?" ಗಾದೆಯೂ ಶಿವಶರಣ ವಚನಗಳಲ್ಲಿ ಬಳಕೆಯಾಗಿದ್ದು ಆಕಾಶದಲ್ಲಿ ಹಾರುವ ಖೇಚರ-ಹಕ್ಕಿಗೆ ಅಟ್ಟಗೋಲು-ಏಣಿಯ ಅಗತ್ಯವಿಲ್ಲ ಎಂದೆನ್ನುತ್ತದೆ. ಏಣಿಯು ಏಣುಗಳುಳ್ಳ ಹೆಬ್ಬಿದರು! ಕವೆಗಳನ್ನು ಕೊಂಚ ಏಣುಳಿಸಿ ಸವರಿ ಇಂದಿಗೂ ಮೈಸೂರು ಜಿಲ್ಲೆ ಹೆಗ್ಗಡ ದೇವನಕೋಟೆ ಕಾಡು ಹೊಲಗಳಲ್ಲಿ ಮರದ ಮೇಲೆ ನಿರ್ಮಿಸಿದ ಅಟ್ಟಣಿಕೆ. ಕಾವಲು ಗುಡಿಸಲುಗಳನ್ನು ಏರಿ ತಲುಪಲು ಬೇಸಾಯಿಗಳು ಬಳಸುತ್ತಾರೆ. ಆನೆಗಳ ಬೀಡಾದ ಆ ನಾಡಿನ ಕಾಡಿನೊಳಗಣ ಹೊಲಗಳ ಕಾವಲಿಗೆ ಆ ಬಗೆಯ ಅಟ್ಟಗೋಲು ಅನಿವಾರ್ಯ! ಆದುದರಿಂದ ಅಟ್ಟವು ದೇಶ್ಯ ಶಬ್ದವೆ! ಅದರ ಅರ್ಥ ಮೇಲು ಮಾಳಿಗೆ! ಮಾಳಿಗೆ-ಮಾಡುಗೆಯ್ ಇಂದ ಹುಟ್ಟಿದೆ! ಬೆಟ್ಟ-ಬೆಟ್ಟು ಅಪ್ರಸಿದ್ಧವಲ್ಲದ ದೇಶ್ಯಶಬ್ದ. ಅದರ ಅರ್ಥ ಲಂಘಿಸು! ಅಟ್ಟ- ಬೆಟ್ಟ-ಬಡ್ಡಿಗಳೆಂಬ ನಾಮಧಾತು. ಹಾರು ಎಂಬ ಕ್ರಿಯಾಧಾತುಗಳ ಜಿಜ್ಞಾಸೆಯಾದ ಮೇಲೆ ಪ್ರಯೋಗಸಿದ್ಧಿಯನ್ನು ನೋಡೋಣ! ಯಾರೂ 'ಅಟ್ಟದಿಂದ' (ಬೆಟ್ಟದಿಂದ) ತೃತೀಯಾ ಪ್ರಯೋಗದಲ್ಲಿ ಹಾರಬಹುದಲ್ಲದೆ. ಚತುರ್ಥೀ ಪ್ರಯೋಗದಲ್ಲಿ 'ಅಟ್ಟ'ಕ್ಕೆ (ಬೆಟ್ಟಕ್ಕೂ) ಹಾರಲಾರರು! ಈ ಹಿನ್ನೆಲೆಯಲ್ಲಿ ಈ ಗಾದೆಯಲ್ಲಿ ಏನೋ ಅಪಪಾಠ ದೋಷವಿದೆ! ಸೂಕ್ಷ್ಮಾವಲೋಕನ ಸಿದ್ಧಿಯಿಂದ 'ಅಟ್ಟಕ್ಕೆ ಹಾರದ' 'ಗುಣ' ಖಂಡವಾಕ್ಯದ ಶುಚಿಪಾಠ 'ಅಟ್ಟಿಕ್ಕಲಾರದವ್ಳ 'ಬೆಟ್ಟಕ್ಕೆ ಹಾರಾಳೆ?' 'ಪ್ರಶ್ನೆ' ಖಂಡವಾಕ್ಯದ ಶುಚಿಪಾಠ ' ಬೆಟ್ಟಿಕ್ಕಲಾರಳೆ?'ಯೂ ಆಗಿರುವುದು ವೇದ್ಯವಾದೀತು! ಆಆ ಖಂಡವಾಕ್ಯಗಳ ಪದಚ್ಛೇದ ಅನುಕ್ರಮವಾಗಿ 'ಅಟ್ಟು-ಇಕ್ಕಲ್-ಆರದ' ಎಂದೂ 'ಬೆಟ್ಟು-ಇಕ್ಕಲ್-ಆರಳೆ?' ಎಂದೂ ಇರುತ್ತವೆ! 'ಅಟ್ಟು-ಅಡಿಗೆ ಗೆಯ್ದು. ಇಕ್ಕಲ್-ಬಡಿಸಲು. ಆರದ-ಸಮರ್ಥಳಲ್ಲದ' ಎಂದೂ ಬೆಟ್ಟು-ಬೆಟ್ಟನ್ನು. ಇಕ್ಕಲ್-ಊಡಲು. ಆರಳೆ? – ಸಮರ್ಥಳಲ್ಲವೆ? ಎಂದೂ

ಪ್ರತಿಪದಾರ್ಥ! ಬೆಟ್ಟು ಇಕ್ಕಲು ಎಂಬಲ್ಲಿ ' ಬೆಟ್ಟನ್ನು ಊರಲು' ಎಂದು ವಾಚ್ಯಾರ್ಥವೂ 'ಬೆಟ್ಟನ್ನು ಅಕ್ಷೇಪಾರ್ಥದಲ್ಲಿ ಪ್ರದರ್ಶಿಸಲು' ಎಂದು ವ್ಯಂಗ್ಯಾರ್ಥವೂ ಇವೆ!

ಔಚಿತ್ಯ : ಪರಿಷ್ಕೃತ ಸಂಪಾದಿತ ಪಾಠಗಾಹೆ 'ಅಟ್ಟಕ್ಕಲಾರದ ಪೊಡ್ಡಿ ಬೆಟ್ಟಕ್ಕ ಆರಳೆ?' ರೂಪಜೀವಿ ಸೂಳೆಯ ದಿವಾಮೈಥುನ ನಿಷೇಧ ಮರ್ಯಾದೆಯಿದ್ದ ಕಾಲದಲ್ಲಿ ರಾತ್ರಿಜೀವಿ! ಆಕೆಗೆ ಹಗಲೂ ನಿದ್ರಾದಿ ವಿಶ್ರಾಂತಿ ಇಲ್ಲ. ಆ ಕಾರಣ ಅಡುಗೆಗಾಗಿ ಸೂಳೆಯರು ಬೋನಗಿತ್ತಿಯರನ್ನು ನೇಮಿಸಿಕೊಂಡು ಹಗಲಲ್ಲಿ 'ರಂಗಭೋಗ'ದಲ್ಲಿಯೂ ರಾತ್ರಿಯಲ್ಲಿ 'ಅಂಗಭೋಗ'ದಲ್ಲಿಯೂ ಸದಾ ಶೋಷಿತೆಯರಾಗಿರುತ್ತಿದ್ದರು! ಸೂಳೆಗೆ ಪಾಕವ್ಯವಹಾರ ಜ್ಞಾನವಿಲ್ಲದಿದ್ದರೂ ರುಚಿವ್ಯವಹಾರ ಜ್ಞಾನಕ್ಕೆ ಕೊರತೆ ಇಲ್ಲ! ರುಚಿ ಶುಚಿ ದೃಢ ಪೌಷ್ಟಿಕ ಆಹಾರವಿಲ್ಲದೆ ಆಕೆ ತನ್ನ ದೇಹವನ್ನೂ ರೂಪವನ್ನೂ ತನ್ನ ಆಜೀವಿಕೆಯ ಏಕಮಾತ್ರ 'ಮೂಲ' ಸಾಧನವನ್ನು ಕಾಪಾಡಲಾರಳು! ಆ ಕಾರಣ ಸೂಳೆ ಸದಾ ಬೋನಗಿತ್ತಿ ಅಡುಗೆಯ ದಾಸಿಗೆ ಕಟಪಟೆಗೈದು ಆಕ್ಷೇಪಿಸುತ್ತಿದ್ದಳು. ಅಡುಗೆಯಲ್ಲಿನ ರೂಪ – ರುಚಿ – ತೃಪ್ತಿಗಳ ಬಗೆಗೆ ಸೂಳೆಯ ಕಟು ವಿಮರ್ಶೆಯನ್ನು ತಾಳಲಾರದ ಎದುರಾಗಿ ಹೇಳಲಾರದ ಬೋನಗಿತ್ತಿ-ಅಡುಗೆದಾಸಿ ಮರೆಯಲ್ಲಿ ಸೂಳೆಯನ್ನು ಬಯ್ದು ಮಾನಸಿಕ ಸಂತೃಪ್ತಿ ಸಮಾಧಾನಗೊಳ್ಳುತ್ತಿದ್ದಳು. "ಅಟ್ಟು ಇಕ್ಕಲ್ ಅರದ ಪೊಡ್ಡಿ ಬೆಟ್ಟು ಇಕ್ಕಲ್ ಆರಳೆ" ಎಂದು ವ್ಯಂಗ್ಯ ಗೈಯ್ಯುತ್ತಿದ್ದಳು! ಈ ಗಾಥಾಸೂತ್ರ ಗಾಹೆ ಗಾದೆಯೇ "ಅಟ್ಟಕ್ಕಲಾರದ ಬೊಡ್ಡಿ ಬೆಟ್ಟಕ್ಕಲಾರಳೆ?" ಆಗಿ ಮತ್ತೆ ಪಾಠಕೆಟ್ಟು "ಅಟ್ಟಕ್ಕೆ ಹಾರದ ಬಡ್ಡಿ ಬೆಟ್ಟಕ್ಕೆ ಹಾರಾಳೆ?" ಆಗಿ ಹೋಗಿದೆ!

ಮಥಿತಾರ್ಥವೆಂದರೆ ಕಾರ್ಯಕರಣವಾದರೂ ಕಟುವಿಮರ್ಶೆ ಸುಲಭ ಎಂಬಲ್ಲಿ ಈ ಗಾದೆ ಪ್ರಯೋಗದಲ್ಲಿದ್ದುದ್ದು ಈಗ ಇಷ್ಟನ್ನೂ ಮಾಡಲಾರದವ ಅಷ್ಟೆಲ್ಲವನ್ನು ಮಾಡಲು ಶಕ್ಯವೇ ಎಂಬ ಸಾಮರ್ಥ್ಯ ಗಾತ್ರಪಾತ್ರ ಜಿಜ್ಞಾಸೆಯಲ್ಲಿ ಬಳಕೆಗೊಳ್ಳುತ್ತಿದೆ! ದೇವದಾಸಿ ' ಪೊಡ್ಡಿ' ಎಂಬ ವಿಶಾಲಾರ್ಥದಲ್ಲಿಯೇ ಈ ಲೇಖನದಲ್ಲಿ 'ಸೂಳೆ' ಶಬ್ದ ವ್ಯವಹೃತವಾಗಿದೆ! ಸೂಳೆಗೂ ಪೊಡ್ಡಿಗೂ ಬಹಳ ಅರ್ಥ ಸೂಕ್ಷ್ಮವ್ಯತ್ಯಾಸವುಂಟು!

– ಪಿ.ಎಂ.ಗಿರಿರಾಜು

ಎರಡನೆಯ ಅರಿಕೇಸರಿಯ 'ಚಾಗದ ಕಂಬ' ಶಾಸನ :
ಬರೆದವನು "ಶ್ರೀ ಪಂಪ್ಪಂ"

ಈ ಶಾಸನವನ್ನು ಬರೆದವನು 'ಪಂಪ'ನೆನ್ನುವಾಗ 'ಶ್ರೀ ಪಂಮ್ಪಂಬರೆದೊಂ' ಎಂದು ಸರಿಯಾಗಿ ಓದಲೇಬೇಕಾಗಿದೆ. ಇದು ಹತ್ತನೆಯ ಶತಮಾನದ ಕನ್ನಡದ ರೂಪ. ಆದುದರಿಂದ ಹೀಗೆ –

ಇವರ ಮೊದಲ ಭಾಗದಲ್ಲಿ ಯುದ್ಧಮಲ್ಲ-ನರಸಿಂಹ ಮತ್ತು ಎರಡನೇ ಅರಿಕೇಸರಿ – ಅವರ ಪರವಾದ 'ಚಾಗದ' ಒಕ್ಕಣೆಯಾಗಿದೆ. ಇದೊಂದು ವಿಶಿಷ್ಟ ದಾನಶಾಸನವಾಗಿದೆ. ವಾಸ್ತವವಾಗಿ ಎರಡನೆಯ ಅರಿಕೇಸರಿಯು ಪೌದನಪುರದಲ್ಲಿ



'ಶ್ರೀ ಪಂಮ್ಮಂ ಬರೆದೊಂ'

ಬಾಗದ ಕಂಬದ ಶಾಸನ ಕ್ರಿ.ಶ. ೯೪೬ (ಮ)

ಪಟ್ಟಾಭಿಷಿಕ್ತನಾಗಿ ತನ್ನ ಹಿರಿಯರ ರಾಜ್ಯವನ್ನು ಆಳುತ್ತಿದ್ದವನು ಸಾಮಂತಾಧಿಪತಿಯೂ ಹೌದು.

ಇವನ ಆಳ್ವಿಕೆಗೆ ಕರೀಂನಗರ ಜಿಲ್ಲೆಯು (ಆಂಧ್ರಪ್ರದೇಶ) ಸೇರಿದ್ದಿತು ಎಂಬುದನ್ನು ಈತನಿಗೆ ಸಂಬಂಧಿಸಿದ ಉಳಿದ ಶಾಸನಗಳಿಂದಲೂ ಅವು ಸಧ್ಯಕ್ಕೆ ಕರೀನಗರ ಜಿಲ್ಲೆಯಲ್ಲಿ ಕಂಡುಬಂದಿವೆ ಎಂಬುದರಿಂದಲೂ ಗುರುತಿಸಬಹುದು. ಅಂತೆಯೇ ರಾಷ್ಟ್ರಕೂಟ ಮೂರನೇ ಕೃಷ್ಣನ ಅಧೀನ ರಾಜನೂ ಆಪ್ತನೂ ಆಗಿದ್ದವನೆಂದು ಅರಿಕೇಸರಿಯನ್ನು ಗುರುತಿಸಬಹುದು.

ತಾನೇ ಅಧೀನರಾಜನಾದುದರಿಂದ 'ಪಂಪ'ನಿಗೆ 'ಕವಿಚಕ್ರವರ್ತಿ' ಎಂಬ ಬಿರುದನ್ನು ಕೊಡಲು ಸಮರ್ಥನಾಗಲಿಲ್ಲ ಎಂಬುದು ವಿದ್ವಾಂಸರ ಮತವಾಗಿದೆ. ಆದರೂ 'ಪಂಪ'ನ ಕಾವ್ಯಕ್ಕೆ ರನ್ನ-ಜನ್ನ ಮೊದಲಾದವರು ತಲೆಬಾಗಿರುತ್ತಾರೆ. ಮತ್ತು ಹೊಗಳಿ ಗೌರವಿಸಿದ್ದಾರೆ. ಅಲ್ಲದೆ ನಾಗಚಂದ್ರನಿಗೆ 'ಅಭಿನವಪಂಪ' ಎಂಬ ಬಿರುದು ಸಂದಿರುವುದರಿಂದ ಪಂಪನ ಹಿರಿಮೆಯು ಸ್ಪಷ್ಟವೂ ಆದುದಾಗಿದೆ.

ಪಂಪನು ತನ್ನ ಆಶ್ರಯದಾತನಾಗಿದ್ದ ಎರಡನೇ ಅರಿಕೇಸರಿಯ ವಂಶಾವಳಿಯನ್ನು ಹಿರಿಮೆ ಗರಿಮೆಗಳನ್ನು ಹೊಗಳಿ ಗುಡ್ಡೆ ಹಾಕಿದ್ದಾನೆ. ಈ ಬಾಗದ ಕಂಭದ ಶಾಸನದ ವೇಳೆಗಾಗಲೇ ಎರಡನೇ ಅರಿಕೇಸರಿಯು 'ಗುಣಾರ್ಣವ'ನೂ 'ಪ್ರಿಯಗಳ್ಳಂ'ನೂ ಆಗಿದ್ದನೆಂಬುದನ್ನು ಈ ಶಾಸನವು ಹೇಳುತ್ತದೆ. ಇವರ ಕಾಲದ ಒಕ್ಕಣೆಯು ಶಾಸನದಲ್ಲಿ ಖಚಿತವಾಗಿದೆ. ಅದು ಕ್ರಿ.ಶ.೯೪೬ ಎಂದು ವಿದ್ವಾಂಸರೆಲ್ಲರೂ ಒಪ್ಪಿದ್ದಾರೆಯಷ್ಟೆ. ಇವೆರಡೂ ಬಿರುದುಗಳು ಸೇರಿರುವುದನ್ನು ವೇಮುಲವಾಡದ ಶಾಸನವು ಹೇಳುತ್ತದೆ. ಇದು ಕಂಬ ಶಾಸನವೇ ಆಗಿದೆ. ಇದನ್ನು ಎರಡನೇ ಅರಿಕೇಸರಿಯು 'ಲೆಂಬುಳವಾಟಕ'ದಲ್ಲಿ ತನ್ನ ಹಿರಿಯರು ಕಟ್ಟಿಸಿದ್ದು ದೇಗುಲಗಳನ್ನು ರಕ್ಷಿಸುವುದಕ್ಕೆನ್ನುವಂತೆ ನಿಜಿಸಿದ್ದಾನೆ. ಆದರೆ ಇವರಲ್ಲಿ ಪಂಪನ ಹೆಸರಾಗಲಿ ಪಂಪ ಭಾರತದ ಪದ್ಯ-ಭಾಗಗಳಾಗಲಿ ಇಲ್ಲ. ಈ ಶಾಸನವು ಸಂಸ್ಕೃತದಲ್ಲಿದ್ದರೂ ೭೧ ರಿಂದ ೮೫ ರವರೆಗೆ ಕನ್ನಡ ವಾಕ್ಯರಚನೆಯಿದ್ದು ಕೊನೆಯ ಕ್ರಿಯಾಪದ ಭಾಗದಲ್ಲಿ ಸಮಸ್ತ ಶಾಸ್ತ್ರಿಪಾರಗಂ ಶ್ರೀಮತ್ಸಂಧಿವಿಗ್ರಹಿ ಗುಣಾಯಶೇನ . . . ಎಂದು ಕಂಡುಬರುವ ಜಾಣತನವಿದೆ.

ಮತ್ತೊಂದು ಅಂಶವೆಂದರೆ ಇದರ ಲಿಪಿಯೂ ಪ್ರಾದೇಶಿಕ ಸಾಮಾನ್ಯ ಲಿಪಿಯಾಗಿದೆ. ಇದು ಕನ್ನಡ-ತೆಲಗು-ಸಂಸ್ಕೃತ ಮೂರಕ್ಕೂ ಒಂದೇ ಲಿಪಿಯಾಗಿದೆ. ಇದರ ಜೊತೆಗೆ ನಾವು ಜಿನವಲ್ಲಭನ ಕುರಿಕ್ಯಾಲಂ ಶಾಸನವೂ ಹೀಗೆಯೇ ಇರುವುದನ್ನು ಗಮನಿಸಬಹುದು. ಆದುದರಿಂದ ಈ ಶಾಸನವನ್ನು ಪಂಪನ ಪೂರ್ವಶಾಸನವೆಂದು ಪರಿಗಣಿಸಬೇಕಾದೀತು. ಏಕೆಂದರೆ ಗುಣಾರ್ಣವಂ ಮತ್ತು ಪ್ರಿಯಗಳ್ಳಂ – ಈ ಹೊಗಳಿಕೆಗಳು ಪಂಪನದೆನ್ನುವ "ಬಾಗದಕಂಬ"ದಲ್ಲೂ ಆತನ ವಿಕ್ರಮಾರ್ಜುನವಿಜಯಂ ಕಾವ್ಯ ಪ್ರವೇಶದಲ್ಲೂ ಕಾಣಬಹುದಾಗಿದೆ.

ಪಂಪನು 'ವಿಕ್ರಮಾರ್ಜುನ ವಿಜಯಂ' ಕಾವ್ಯದಲ್ಲಿ 'ಚಾಗದಕಂಬಮಂ ನಿಱಿಸಿ'ದ ನಾಯಕನೆಂದೇ ಹೇಳಿದ್ದಾನೆ. ಆದುದರಿಂದ ಈ ಶಾಸನದ ಮಹತ್ವವು ವಿಕ್ರಮಾರ್ಜುನ ವಿಜಯಂ ಕಾವ್ಯದ ೧೪ನೇ ಆಶ್ವಾಸನದ ಪದ್ಯಗಳಿಂದಲೂ ಖಚಿತವಾಗುತ್ತದೆ.

ಎರಡನೇ ಅರಿಕೇಸರಿಯು ತನ್ನ ರಾಜಧಾನಿಯಾದ ಪೌದನದಲ್ಲಿ (ಬೋಧನ) ಪಟ್ಟಾಭಿಷಿಕ್ತನಾದ ಗುರುತಾಗಿ 'ಗೋದಾನ ಭೂದಾನ ಸುವರ್ಣ ದಾನಗಳನ್ನು ಯಥೇಚ್ಛವಾಗಿ ಮಾಡಿದ ಮೇಲೆ – ಈ 'ಚಾಗದ ಕಂಬ'ವನ್ನು ನಿಱಿಸಿರುವುದು ಮಹತ್ವದ ವಿಷಯವೂ ಆಗಿದೆ. ಆದುದರಿಂದ ಒಂದು ಐತಿಹಾಸಿಕ ದಾಖಲೆಯಾಗಿ ಈ ಶಾಸನವು ಅಧೀನರಾಜನಾಗಿದ್ದು ರಾಷ್ಟ್ರಕೂಟ ಚಕ್ರವರ್ತಿ ಮೂರನೇ ಕೃಷ್ಣನ ಉತ್ತರಭಾರತದ ದಂಡಯಾತ್ರೆಯಲ್ಲಿ ಪ್ರಧಾನ ಪಾತ್ರಧಾರಿಯೂ ಆಗಿದ್ದವನು ಇಂಥ ಬಲಗೈ ನೆರವನ್ನು ಮಧ್ಯಪ್ರದೇಶದ ಜುರಾ – ಕನ್ನಡ ಶಾಸನವು ಸಾರಿ ಹೇಳುತ್ತದೆ.

ಆದುದರಿಂದ ಎರಡನೆಯ ಅರಿಕೇಸರಿಯು ತನ್ನ ಪಟ್ಟಾಭಿಷೇಕದ ಸಂದರ್ಭದಲ್ಲಿ 'ಚಾಗದಕಂಬ'ದ ಶಾಸನ ಮಾಡಿಸಿದ್ದಿರಬೇಕು. ಇದು ಒಂದು ಸಂಪ್ರದಾಯವಾಗಿದ್ದಲ್ಲಿ ಇನ್ನು ಕೆಲವು (ಎರಡಾದರೂ) ಶಾಸನಗಳು ದೊರಕಬಹುದಾಗಿದೆ. ಪಂಪನು ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಬದ್ದೆಗ ಮೊದಲಾದವರನ್ನು ಹೊಗಳಿರುವ ರೀತಿಯಿಂದ ಇಂಥ ಅನುಮಾನಕ್ಕೆ ಅವಕಾಶವಿದೆ.

ಇಂಥ ಸಂಪ್ರದಾಯವು ಮುಂದೆ ಕಲ್ಯಾಣಿ ಚಾಲುಕ್ಯರ ಸಂಪ್ರದಾಯದಲ್ಲಿ ಸೇರಿರಬಹುದಾಗಿ – ಅವರು 'ಚಾಗದ ಕಂಬ' ಎಂಬುದನ್ನು ಬೇರೆಯಾಗಿಯೇ ಕರೆದಿರಬಹುದು. ಭೂಲೋಕಮಲ್ಲ ಸೋಮೇಶ್ವರ III (A.D. 1125) – ಈತನು ತನ್ನ ಕೊಲನುಪಾಕದ ಶಾಸನದಲ್ಲಿ ಕೀರ್ತ್ತಿ ಸ್ತಂಭ – ಜಯಸ್ತಂಭ – ಮಾನ ಸ್ತಂಭ – ಎಂಬ ಮೂರೂ ಹೆಮ್ಮೆಗಳನ್ನು ಒಂದೇ ಶಾಸನದಲ್ಲಿ ಹೊಗಳಿಸಿಕೊಂಡಿದ್ದಾನೆ. ಇದು ಎರಡನೆಯ ಅರಿಕೇಸರಿಯ ಲೆಂಬುಳವಾಟಕದ ದಾನಶಾಸನದಂತೆಯೇ ಇರುವುದನ್ನು ಮರೆಯುವಂತಿಲ್ಲ.

ಉಪಸಂಹಾರ : ಒಟ್ಟಿನಲ್ಲಿ ಪಂಪನು ಕನ್ನಡದಲ್ಲಿ 'ಕಾಳಿದಾಸ'ನೆನ್ನುವಂತೆ ಹೆಸರಾಂತವನೂ ಆಗಿದ್ದ 'ಮಹಾಕವಿ'ಯೂ ಶಾಸನಕವಿಯೂ ಆಗಿದ್ದುದಕ್ಕೆ 'ಶ್ರೀಪಂಮ್ಪಂ ಬರೆದೊಂ' ಎಂಬುದು ಆತನ ಕೈ ಬರೆಹವಷ್ಟೇ – ಒಂದು ದಾಖಲೆಯಾಗಿರುತ್ತದೆ.

– ಕ.ವೆಂ.ರಾಜಗೋಪಾಲ

ಎರಡು ಹೊಸ ವಚನಗಳು

ವಚನ, ಸ್ವರ ವಚನಗಳು ಸ್ಥಲಕಟ್ಟಿನ ಕೃತಿಗಳಲ್ಲಿ, ಕಾವ್ಯಗಳಲ್ಲಿ, ಶಾಸ್ತ್ರಗ್ರಂಥಗಳಲ್ಲಿ ಎಡೆಪಡೆದಿರುವಂತೆ ಬಿಡಿಗರಿಗಳಲ್ಲಿಯೂ ಬರೆಯಲ್ಪಟ್ಟಿರುವುದು ಕಂಡುಬರುತ್ತದೆ. ಒಂದು ಕೃತಿ ಪ್ರತಿ ಮಾಡುತ್ತಿದ್ದಾಗ ಅದು ಮುಗಿದು, ಗರಿಯಲ್ಲಿ ಸ್ವಲ್ಪ ಸ್ಥಳ ಉಳಿದರೆ ಅಲ್ಲಿ ಒಂದೋ ಎರಡೋ ವಚನವನ್ನೋ ಇಲ್ಲವೆ ಸ್ವರವಚನವನ್ನೋ

ಬರೆದಿರುವ ಉದಾಹರಣೆಗಳು ಹೇರಳವಾಗಿ ದೊರೆಯುತ್ತವೆ. ಹೀಗಾಗಿ ಯಾವುದೇ ಹಸ್ತಪ್ರತಿಯನ್ನು ತೆಗೆದು ನೋಡಿದರೂ ಇಂಥ ಬಿಡಿ ರಚನೆಗಳು ಕಣ್ಣಿಗೆ ಬೀಳುವುದು ಸಹಜವಾಗಿದೆ. ಅವುಗಳಲ್ಲಿ ಕೆಲವು ಈಗಾಗಲೇ ಬೆಳಕಿಗೆ ಬಂದುವಾಗಿದ್ದರೆ, ಮತ್ತೆ ಕೆಲವು ನೂತನವಾದುವಾಗಿರುತ್ತವೆ. ಅಂಥ ನೂತನ ರಚನೆಗಳ ವರ್ಗಕ್ಕೆ ಸೇರುತ್ತವೆ. ಪ್ರಸ್ತುತ ಎರಡು ವಚನಗಳು.

ಮೊದಲ ವಚನ ಮೋಳಿಗೆ ಮಹಾದೇವಿಯದು. ಇದು ಸೋಸಲೆ ರೇವಣಾರಾಧ್ಯನ ಪರಮುಕ್ತಿ ಪ್ರಕಾಶಿಕೆ [೧] (ಇದಕ್ಕೆ 'ಶಿವಜ್ಞಾನ ಪ್ರಕಾಶಿಕೆ' ಎಂಬ ಇನ್ನೊಂದು ಹೆಸರೂ ಉಂಟು) ಎಂಬ ಕೃತಿಯಲ್ಲಿ ದೊರೆತಿದೆ. ಈ ಕೃತಿಯ ವೈಶಿಷ್ಟ್ಯವೆಂದರೆ ಒಂದೊಂದು ಸಂಸ್ಕೃತಶ್ಲೋಕಕ್ಕೆ ಕರಸ್ಥಲದ ವೀರಣ್ಣೊಡೆಯನ 'ಮಾಯಾಭ್ರಾಂತಿ ನಿರಸನ'[೨] ಎಂಬ ಕೃತಿಯ ಒಂದೊಂದು ಷಟ್ಪದಿಗಳನ್ನು ಜೋಡಿಸಿ ಸಂಯೋಜಿಸಿರುವುದು. ಹಾಗೆ ಜೋಡಿಸುವಲ್ಲಿ ೪೮ನೆಯ ಷಟ್ಪದಿಯ ತಲೆಯ ಮೇಲೆ ಸಂಸ್ಕೃತ ಶ್ಲೋಕಕ್ಕೆ ಬದಲಾಗಿ ಈ ವಚನವನ್ನು ಸಾಕ್ಷಿಯ ರೀತಿಯಲ್ಲಿ 'ವಚನ ಸಾರೇ' ಎಂಬ ತಲೆಬರಹದ ಅಡಿಯಲ್ಲಿ ಜೋಡಿಸಲಾಗಿದೆ. ವಚನವನ್ನು ಇಲ್ಲಿ ಪ್ರಮಾಣಗ್ರಂಥದಂತೆ ಬಳಸಿಕೊಂಡಿರುವುದು ಒಂದು ವಿಶೇಷ. ಈ ವಚನ ಸಾರವನ್ನೇ ಅದರ ಅಡಿಯ ಷಟ್ಪದಿ ಅಳವಡಿಸಿಕೊಂಡಿದೆ. ಅದು ಹೀಗಿದೆ:

ಷಡುಚಕ್ರವೆಂದೆನುತವಜೊಳು
ಷಡುವರ್ಣವೆನುತವಜಸ್ಥಾನದಿ
ನುಡಿದು ಲಕ್ಕಜಂ ದೇವತೆಗಳೆಂದೆನುವ ಜಡಮನದಿ।
ಕೆಡದು ಭ್ರಮೆಯಿಂದಖಿಳ ಬೆಡಗಳಿ
ದೆಡೆಯ ನೋಡದೆ ನಿತ್ಯ ಮುಕ್ತಿಯ
ಪಡೆಯಲರಿಯದೆ ಜಡರು ಹೊದಕುಳಿಗೊಳುತಿಹರು ಪುಸಿಯಿಂ॥೪೮॥

ದೇವನೊಬ್ಬನೆಂದು ನಂಬದೆ ಹಲವು ದೇವರನ್ನು ನಂಬಿ ಹೊಲಬುಗೆಟ್ಟು ಹೋಗುವ ಮಾನವರ ಅಜ್ಞಾನವನ್ನು ಈ ಪದ್ಯದಲ್ಲಿ ಟೀಕಿಸಲಾಗಿದೆ.[೩] ಈ ಕೃತಿ ಕನ್ನಡ ಅಧ್ಯಯನಪೀಠದ ತಾಳೆಪ್ರತಿ ೫೮೭ (ಗರಿ. ೧೧೭)ರಲ್ಲಿ ದೊರೆತಿದೆ.

ಎರಡನೆಯದು ಉರಿಲಿಂಗ ಪೆದ್ದಿಯ ವಚನ. ಇದು ಅದೇ ಸೋಸಲೇ ರೇವಣಾರಾಧ್ಯರ 'ಪರಮಾತ್ಮ ಪ್ರಕಾಶಿಕೆ' ಎಂಬ ಕೃತಿ ಮುಗಿದು, 'ನಿಜದೀಪ್ತಿಪ್ರಕಾಶಿಕೆ' ಎಂಬ ಇನ್ನೊಂದು ಕೃತಿ ಆರಂಭವಾಗುವಲ್ಲಿ ಮಧ್ಯ ಉಳಿದ ಖಾಲಿಗರಿಯಲ್ಲಿ ಬರೆಯಲಾದ ಬಿಡಿ ವಚನವಾಗಿದೆ. ಇದರಲ್ಲಿ ಪಂಚಾಕ್ಷರಿ ಮಂತ್ರದ ಮಹಿಮೆಯನ್ನು ಹೇಳಲಾಗಿದೆ. ಅದೇ ೫೮೭ನೆಯ ತಾಳೆಗರಿಕಟ್ಟಿನ ೯೨ನೆಯ ಗರಿ ಬೆನ್ನುಪುಟದ ಕೊನೆಯಲ್ಲಿ ಇದನ್ನು ಬರೆಯಲಾಗಿದೆ.

ಎರಡೂ ವಚನಗಳನ್ನು ಕೆಳಗೆ ಪರಿಷ್ಕರಿಸಿಕೊಡಲಾಗಿದೆ.

---

೧. ಇದು ಇಲ್ಲಿಯವರೆಗೆ ಬೆಳಕಿಗೆ ಬಾರದ ಹೊಸಕೃತಿಯಾಗಿದೆ.

೨. ಹಾಗೆಯೇ ಇದೂ ಈಗ್ಗತಾನೆ ಪತ್ತೆಯಾದ ನೂತನ ಕೃತಿಯಾಗಿದೆ.

೩. ವಚನದಲ್ಲಿಯೂ ಇದೇ ಭಾವವಿರುವುದನ್ನು ಗಮನಿಸಿ.

೧

ಮೋಳಿಗೆ ಮಹಾದೇವಿಯ ವಚನ

ಆಱುದೇವರ ನಿಮ್ಮ ಎದೆಯಲ್ಲಿ ಇಱಿ[ದು]ಕೊಳ್ಳಿ.
ಮೂಱು ದೇವರ ನಿಮ್ಮ ಮೂಗಿನಲ್ಲಿ ಮುಱಿ[ದು]ಕೊಳ್ಳಿ
ಗುರು ತೋಱಿದ್ದು ಒಂದೇ ದೇವರು ಸಾಕು.
ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ*

೨

ಉರಿಲಿಂಗ ಪೆದ್ದಿಯ ವಚನ

ಪ್ರಣವವೆಂಬ ವೃಕ್ಷದೊಳಗೆ
ಋಗ್ವೇದ ಯಜುರ್ವೇದ ಸಾಮವೇದ ಅಥರ್ವಣವೇದ
ಎಂಬ ನಾಲ್ಕು ಶಾಖೆಗಳು
ಅನಂತವೈವೇದಂಗಳೆಂಬ ಉಪಶಾಖೆಗಳು
ಶಾಸ್ತ್ರಗಳೆಂಬ ಅಂಕುರ ಪಲ್ಲವಿ.
ಪುರಾಣಂಗಳೆಂಬ ಪುಷ್ಪ. ಆಗಮಗಳೆಂಬ ಕಾಯಿ ಬಲಿದು
ಶ್ರೀ ಪಂಚಾಕ್ಷರಿಯೆಂಬ ಮಧುರ⌈ಫಲ⌉ಗಳನು
ಅನಂತಕಾಲ ಭೋಗಿಸಲು
ಮತ್ತಂ ಜಿಹ್ವೆಯೊಳಗೆ ಬಂದಿರಲು
ಭೋಗಿಸಿ ಸುಖಿಸುವರಿಲ್ಲದೆ
ಇತರ ವಿದ್ಯಂಗಳೆಂಬ ⌈ಸಸಿ⌉ಯ ಸಲಹುಲುಂಟೆ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ?

– ವೀರಣ್ಣ ರಾಜೂರ

---

* ಈ ವಚನದಲ್ಲಿ ಅಂಕಿತದೊಳಗಿನ 'ಎನ್ನಯ್ಯ ಪ್ರಿಯ' ಎಂಬ ವಿಶೇಷಣ ಇಲ್ಲವಾಗಿದೆ.

೧–೧ ಫಾಲ್ಗುಣ (ಮೂ) ೨–೨ ಶಶಿ (ಮೂ)

ಪ್ರಸ್ತುತ

ಈಗ 'ಕರ್ನಾಟಕ ಭಾರತಿ'ಗೆ ೨೫ ವರುಷಗಳು. ಹೀಗಾಗಿ ಇದು 'ಕರ್ನಾಟಕ ಭಾರತಿಯ 'ರಜತೋತ್ಸವ ವರ್ಷ.' ಇಂಥ ಶುಭಸಂದರ್ಭದಲ್ಲಿ 'ಕರ್ನಾಟಕ ಭಾರತಿ'ಯ ಈ ಸಂಚಿಕೆಯನ್ನು ಸಹೃದಯರಿಗೆ ಸಾದರ ಪಡಿಸಲು ತುಂಬ ಸಂತೋಷವೆನಿಸುತ್ತದೆ. ಈ ಸಂಚಿಕೆಯಲ್ಲಿ ಮೌಲಿಕ ಹಾಗೂ ವೈವಿಧ್ಯಪೂರ್ಣ ಲೇಖನಗಳನ್ನು ಸಮಾವೇಶಗೊಳಿಸಲಾಗಿದೆ.

ಶ್ರದ್ಧಾಂಜಲಿ :

ಡಾ.ರಂ.ಶ್ರೀ. ಮುಗಳಿ ಅವರು ನಾಡಿನ ಹಿರಿಯ ಸಾಹಿತ್ಯ ಚೇತನ. ಡಾ. ಮುಗಳಿ ಅವರು ೨೦.೨.೯೩ರಂದು ನಿಧನ ಹೊಂದಿದರು. ಇದರಿಂದ ಕನ್ನಡ ಸಾರಸ್ವತ ಪ್ರಪಂಚಕ್ಕೆ ಅಪಾರ ನಷ್ಟ ಉಂಟಾಗಿದೆ. ಇವರು ಕನ್ನಡ ನಾಡು – ನುಡಿಗಾಗಿ ಸರ್ವಸಮರ್ಪಣ ಭಾವದಿಂದ ದುಡಿದಿದ್ದಾರೆ. ಮುಗಳಿ ಅವರ ವಿದ್ವತ್ತು, ಅಧ್ಯಯನಶೀಲತೆ, ಸರಳತೆ, ಸಜ್ಜನಿಕೆಗಳು ಅನುಕರಣೀಯವೆನಿಸಿವೆ. ಸಾಹಿತ್ಯ ಚರಿತ್ರೆಕಾರ, ಕವಿ, ವಿಮರ್ಶಕ, ನಾಟಕಕಾರ, ಅನುವಾದಕ ಹಾಗೂ ಸಂಶೋಧಕರಾಗಿ ಅವರು ಕನ್ನಡ ಸಾಹಿತ್ಯಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅನುಪಮವಾದುದಾಗಿದೆ. ತಮ್ಮ ಬದುಕಿನುದ್ದಕ್ಕೂ ಬರವಣಿಗೆಯನ್ನು ಒಂದು ವ್ರತವಾಗಿ ಆಚರಿಸಿ ಸಾಹಿತ್ಯ ತಪಸ್ವಿಯೆನಿಸಿದ್ದಾರೆ. ಸಾಹಿತ್ಯಕ್ಷೇತ್ರಕ್ಕೆ ಶೈಕ್ಷಣಿಕ ಶಿಸ್ತನ್ನು ರೂಪಿಸಿಕೊಟ್ಟ ಶ್ರೇಯಸ್ಸು ಶ್ರೀ ಮುಗಳಿ ಅವರಿಗೆ ಸಲ್ಲುತ್ತದೆ. ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಇತರ ಹಲವಾರು ಪುರಸ್ಕಾರಗಳು ಅವರ ವಿದ್ವತ್ತಿಗೆ ಸಂದ ಗೌರವಗಳಾಗಿವೆ. ಬಹುಭಾಷಾ ಬಲ್ಲಿದರೂ, ಬಹುಮುಖ ಪ್ರತಿಭೆಯುಳ್ಳವರೂ ಆದ ಶ್ರೀ ಮುಗಳಿ ಅವರದು ಕ್ರಿಯಾಶೀಲ ವಿದ್ವತ್ತು, ವೈವಿಧ್ಯಮಯ ವ್ಯಕ್ತಿತ್ವ. ಮುಗಳಿ ಅವರು ಕನ್ನಡ ಸಾಹಿತ್ಯಕ್ಕೆ ನೀಡಿದ ಕೃತಿಗಳು ಮೌಲಿಕವಾದವುಗಳಾಗಿರುತ್ತವೆ. ತಮ್ಮ ಕೃತಿಗಳ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಆದರ್ಶ ಹಾಗೂ ಜನಪ್ರಿಯ ಪ್ರಾಧ್ಯಾಪಕರಾದ ಇವರು ಕರ್ನಾಟಕ – ಮಹಾರಾಷ್ಟ್ರಗಳಲ್ಲಿ ಅಪಾರ ಸಂಖ್ಯೆಯ ಶಿಷ್ಯರನ್ನು ಹೊಂದಿದ್ದಾರೆ. ಇಂಥ ಮಹಾ ಚೇತನವೆನಿಸಿದ ಡಾ.ರಂ. ಶ್ರೀ. ಮುಗಳಿ ಅವರ ಆತ್ಮಕ್ಕೆ 'ಭಾರತಿ' ಚಿರಶಾಂತಿಯನ್ನು ಕೋರುತ್ತ, ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತದೆ.

ಅಖಿಲ ಕರ್ನಾಟಕ ಜನಪದ ಸಮ್ಮೇಲನ :

ಅಖಿಲ ಕರ್ನಾಟಕ ಜನಪದ ಸಮ್ಮೇಳಗಳನ್ನು ಅವ್ಯಾಹತವಾಗಿ ಜರುಗಿಸಿದ ಕೀರ್ತಿ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠಕ್ಕೆ ಸಲ್ಲುತ್ತದೆ. ಪ್ರತಿವರುಷ ನಾಡಿನ ವಿವಿಧ ಪ್ರದೇಶಗಳಲ್ಲಿ ಈ ಸಮ್ಮೇಲನವನ್ನು ನಡೆಸುವದರ ಮೂಲಕ ಜನಪದ ಸಾಹಿತ್ಯ – ಸಂಸ್ಕೃತಿಗಳ ಪ್ರಸಾರಕಾರ್ಯವನ್ನು ನೆರವೇರಿಸಲಾಗಿದೆ. ಈ ಸಮ್ಮೇಲನಗಳಲ್ಲಿ ಮಂಡಿಸಿದ ಪ್ರಬಂಧಗಳು "ಜನಪದ ಸಾಹಿತ್ಯದರ್ಶನ" ಹೆಸರಿನಿಂದ ಗ್ರಂಥರೂಪದಲ್ಲಿ ಪ್ರಕಟಗೊಂಡಿರುತ್ತವೆ. ಈ ಉಪಕ್ರಮದಿಂದ ಜನಪದ ಸಮ್ಮೇಳನಗಳು ಅರ್ಥಪೂರ್ಣವೆನಿಸಿವೆ. ಜನಪದ ಕ್ಷೇತ್ರದಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನ ಕಾರ್ಯ ಕೈಗೊಳ್ಳುವವರಿಗೆ ಇವು ಉಪಯುಕ್ತ ಆಕರಗ್ರಂಥಗಳಾಗಿ ಪರಿಣಮಿಸಿವೆ.

೧೮. ೧೯ ಮಾರ್ಚ ೯೩ರಂದು ಧಾರವಾಡದಲ್ಲಿ ಜರುಗಿದ ಇಪ್ಪತ್ತನೆಯ ಅಖಿಲ ಕರ್ನಾಟಕ ಜನಪದ ಸಮ್ಮೇಲನ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದ್ದಿತು. "ಜನಪದ ಆಹಾರ – ಪಾನೀಯಗಳು" – ಇದು ಈ ಸಮ್ಮೇಲನದ ವಿಷಯ. ನಾಡಿನ ಖ್ಯಾತ ಜನಪದ ಸಂಶೋಧಕರಾದ ಡಾ. ಬಿ.ಎ. ವಿವೇಕ ರೈ ಅವರು ಸಮ್ಮೇಳನದ ಸರ್ವಾಧ್ಯಕ್ಷರು. ಸಾಹಿತ್ಯ – ಸಂಸ್ಕೃತಿಗಳ ಆರಾಧಕರೂ ಕರ್ನಾಟಕ ವಿಶ್ವವಿದ್ಯಾಲಯದ ಜನಪ್ರಿಯ ಕುಲಪತಿಗಳೂ ಆದ ಡಾ. ಎಸ್. ರಾಮೇಗೌಡ ಅವರು ಸಮ್ಮೇಳನದ ಉದ್ಘಾಟಕರು.

ಈ ಸಮ್ಮೇಲನದ ಅಂಗವಾಗಿ ಹಮ್ಮಿಕೊಂಡ ಮೂರು ಗೋಷ್ಠಿಗಳಲ್ಲಿ ಉತ್ತರ ಕರ್ನಾಟಕದ ಆಹಾರ ವೈಶಿಷ್ಟ್ಯಗಳು (ಡಾ.ಬಿ.ಬಿ. ಬಿರಾದಾರ), ಮಲೆನಾಡು ಕರ್ನಾಟಕದ ಆಹಾರ ವೈಶಿಷ್ಟ್ಯಗಳು (ಡಾ. ಶ್ರೀಕಂಠ ಕೂಡಿಗೆ), ಕರಾವಳಿ ಕರ್ನಾಟಕದ ಆಹಾರ ವೈಶಿಷ್ಟ್ಯಗಳು (ಡಾ.ಸೈಯದ್ ಜಮೀರುಲ್ಲಾ ಷರೀಫ್), ದಕ್ಷಿಣ ಕರ್ನಾಟಕದ ಆಹಾರ ವೈಶಿಷ್ಟ್ಯಗಳು (ಡಾ. ಹಿ.ಶಿ. ರಾಮಚಂದ್ರೇಗೌಡ), ಉತ್ತರ ಕರ್ನಾಟಕದ ಅಡುಗೆ (ಡಾ. (ಶ್ರೀಮತಿ) ಎಸ್.ಎಲ್. ಸಣ್ಣೆಲ್ಲಪ್ಪನವರ.) ಮಲೆನಾಡು ಕರ್ನಾಟಕದ ಅಡುಗೆ (ಡಾ.ಶಿವಕುಮಾರ ಚಲ್ಯ) ಕರಾವಳಿ ಕರ್ನಾಟಕದ ಅಡುಗೆ (ಡಾ.ತಾಳ್ತಜೆ ವಸಂತಕುಮಾರ), ಉತ್ತರ ಕರ್ನಾಟಕದ ತಿಂಡಿ-ತಿನಸು-ಪಾನೀಯಗಳು (ಡಾ. (ಶ್ರೀಮತಿ) ಮಧು ವೆಂಕಾರೆಡ್ಡಿ), ಮಲೆನಾಡು ಕರ್ನಾಟಕದ ತಿಂಡಿ-ತಿನಸು-ಪಾನೀಯಗಳು (ಶ್ರೀಮತಿ ಎಸ್.ಬಿ. ರವಿಕಲಾ), ಕರಾವಳಿ ಕರ್ನಾಟಕದ ತಿಂಡಿ-ತಿನಸು-ಪಾನೀಯಗಳು (ಶ್ರೀಮತಿ ಗಾಯತ್ರಿ ನಾವಡ) – ಈ ವಿಷಯಗಳನ್ನು ಕುರಿತು ವಿದ್ವತ್‌ಪೂರ್ಣ ಪ್ರಬಂಧಗಳನ್ನು ಸಾದರಪಡಿಸಲಾಯಿತು.

ಡಾ॥ ಆರ್. ಪನ್ನೀರಸೆಲ್ವಂ ಅವರು ಅಧ್ಯಕ್ಷತೆ ವಹಿಸಿದ್ದ "ಜನಪದ ರಂಗದರ್ಶನ" ಕಾರ್ಯಕ್ರಮವನ್ನು ಡಾ. ರಾಜೂರ ಉದ್ಘಾಟಿಸಿದರು. ಡಾ. ಬಿ.ಆರ್ ಹಿರೇಮಠ ಅವರು ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಈ ರಂಗದರ್ಶನದಲ್ಲಿ ವಿವಿಧ ಜನಪದ ಕಲಾಮೇಳದವರು ಭಾಗವಹಿಸಿದ್ದರು.

ಡಾ॥ ಕೆ. ಗೌಡರೆಡ್ಡಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಬಹಿರಂಗ ಅಧಿವೇಶನ ಹಾಗೂ ಸಮಾರೋಪ ಸಮಾರಂಭಕ್ಕೆ ಡಾ॥ ಎಸ್.ಎಂ. ವೃಷಭೇಂದ್ರಸ್ವಾಮಿ ಅವರು ಮಾನ್ಯ ಅತಿಥಿಗಳಾಗಿ ಆಗಮಿಸಿದ್ದರು.

ಈ ಎರಡೂ ದಿವಸ ವಿಶ್ವವಿದ್ಯಾನಿಲಯದ ಆವರಣದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದಿತು. ಈ ಸಮ್ಮೇಲನದ ಸಂಯೋಜನೆ ಹಾಗೂ ಯಶಸ್ಸಿಗೆ ಕಾರಣರಾದ ಅಧ್ಯಕ್ಷ ಡಾ. ಬುದ್ದಣ್ಣ ಹಿಂಗಮಿರೆ, ಕಾರ್ಯಾಧ್ಯಕ್ಷ ಡಾ. ಎಚ್.ಎಮ್. ಮಹೇಶ್ವರಯ್ಯ, ಕಾರ್ಯದರ್ಶಿ ಡಾ. ಬಿ.ವಿ. ಯಕ್ಕುಂಡಿಮಠ, ಆರ್.ಎಸ್. ಹಿರೇಮಠ ಹಾಗೂ ಸಲಹಾ ಸಮಿತಿ ಸದಸ್ಯರು ಅಭಿನಂದನೆಗೆ ಪಾತ್ರರಾಗಿದ್ದಾರೆ.

●

ಲೇಖಕರ ಪರಿಚಯ

ಡಾ. ಚಿ. ರಾಮಸ್ವಾಮಿ
ರೀಡರ್, ಕನ್ನಡ ವಿಭಾಗ,
ಮರೀನಾ ಯುನಿವರ್ಸಿಟಿ ಆ್ಯನೆಕ್ಸ್,
ಮದ್ರಾಸ ವಿಶ್ವವಿದ್ಯಾಲಯ, ಮದ್ರಾಸ

ಶ್ರೀ ಎಸ್. ಉಮಾಪತಿ
ನಂ. ಸಿ.೩, ವಿದ್ಯಾನಗರ,
ದಾವಣಗೆರೆ

ಶ್ರೀ ಕೆಳದಿ ಗುಂಡಾ ಜೋಯಿಸ
ಕೆಳದಿ ವಸ್ತುಸಂಗ್ರಹಾಲಯ ಕೆಳದಿ,
ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

ಡಾ. ಎಂ.ಎಂ. ಕಲಬುರ್ಗಿ
ಕನ್ನಡ ಪ್ರಾಧ್ಯಾಪಕರು,
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಸ್.ಬಿ. ಪಾಟೀಲ
ವೈದ್ಯಶಾಸ್ತ್ರ ಪ್ರಾಧ್ಯಾಪಕರು
ಬಿ.ಎಲ್.ಡಿ.ಇ. ಸಂಸ್ಥೆಯ
ವೈದ್ಯಕೀಯ ಮಹಾವಿದ್ಯಾಲಯ, ವಿಜಾಪುರ

ಡಾ. ಬುದ್ದಣ್ಣ ಹಿಂಗಮಿರೆ
ರೀಡರ್ ಹಾಗೂ ಅಧ್ಯಕ್ಷರು,
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಬಿ.ಆರ್. ಹಿರೇಮಠ
ರೀಡರ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಶ್ರೀ ಎಂ.ಮುನಿಸ್ವಾಮಯ್ಯ
ಶ್ರೀ ಎಸ್.ಕೆ. ಭಟ್ ಭೂ ವಿಜ್ಞಾನಿ
ಗಣಿ ಮತ್ತು ಭೂವಿಜ್ಞಾನ ಇಲಾಖೆ
ಜಿಲ್ಲಾ ಪರಿಷತ್ತು, ಧಾರವಾಡ

ಡಾ. ಎ. ಮುರಿಗೆಪ್ಪ
ಭಾಷಾವಿಜ್ಞಾನ ರೀಡರ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀ ಎಂ.ಜಿ. ವಾರಿ
ಕನ್ನಡ ಅಧ್ಯಾಪಕರು
ಶ್ರೀ ವೀರಪುಲಿಕೇಶಿ ಕಲಾ ಮಹಾವಿದ್ಯಾಲಯ
ಬದಾಮಿ (ವಿಜಾಪುರ ಜಿಲ್ಲೆ)

ಡಾ. ಬಸವರಾಜ ನಾಯ್ಕರ
ರೀಡರ್, ಇಂಗ್ಲೀಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಶ್ರೀಮತಿ ಹನುಮಾಕ್ಷಿ ಗೋಗಿ
ಸಹಾಯಕ ನಿಬಂಧಕರು
ಸಹಕಾರಿಸಂಘಗಳ ಇಲಾಖೆ, ಹಾವೇರಿ

ಶ್ರೀ ಅನಂತ ಬುರ್ಲಿ
ಬಾಗಲಕೋಟ

ಡಾ. ಮಲ್ಲಿಕಾ ಘಂಟಿ
ಉಪನ್ಯಾಸಕಿ, ಕನ್ನಡ ವಿಭಾಗ
ಗುಲಬುರ್ಗಾ ವಿಶ್ವವಿದ್ಯಾಲಯ, ಗುಲಬುರ್ಗಾ

ಶ್ರೀ ಎನ್.ಆರ್. ಬಾಳಿಕಾಯಿ
ಪ್ರಾಚಾರ್ಯರು
ಶ್ರೀ ಜಗದ್ಗುರು ಮುರುಘರಾಜೇಂದ್ರ
ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರ-೫೮೧ ೧೧೫

ಡಾ. ಮೀರಾ ಶಿವಶಂಕರ ಗುಂಡಿ
ಸಂಗೀತ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಎಚ್.ಆರ್. ರಘುನಾಥ ಭಟ್
ರೀಡರ್,
ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ವ್ಹಿ.ಜಿ. ಪೂಜಾರ
ರೀಡರ್, ಕನ್ನಡ ಅಧ್ಯಯನಸಂಸ್ಥೆ
ಗುಲಬುರ್ಗಾ ವಿಶ್ವವಿದ್ಯಾಲಯ, ಗುಲಬುರ್ಗಾ

ಶ್ರೀ ಪಿ.ಎಂ. ಗಿರಿರಾಜು
ಸಂಸ್ಥಾಪಕ ಸಂಪಾದಕ 'ಶರಣಸಂತಾನ' ಸಂಶೋಧನ ತ್ರೈಮಾಸಿಕ
೪೪೭, ಸಂತೇಪೇಟೆ, ಮೈಸೂರು-೫೭೦ ೦೨೪

ಶ್ರೀ ಕ. ವೆಂ. ರಾಜಗೋಪಾಲ
ಎಂ.ಆಯ್.ಜಿ-೪೧. ೮೦ ಅಡಿ ರಸ್ತೆ
ಕೆಂಗೇರಿ ಉಪನಗರ ೨ನೆಯ ಹಂತ
ಬೆಂಗಳೂರು-೫೬೦ ೦೬೦

ಡಾ. ವೀರಣ್ಣ ರಾಜೂರ
ರೀಡರ್, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ